ಬುಧವಾರ, ಮಾರ್ಚ್ 13, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 73 | ಪುಟ 18

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕೃತಕ ಬುದ್ಧಿಮತ್ತೆಯು ದಕ್ಷವಾಗಿ ಕಾರ್ಯನಿರ್ವಹಿಸುವಂತೆ ಮಾಡಬಲ್ಲವು ನ್ಯೂರಲ್ ನೆಟ್‌ವರ್ಕ್‌ಗಳು



ಆಳ-ಅಗಲ
ಆಂಧ್ರ ರಾಜಕೀಯ ಲೆಕ್ಕಾಚಾರ ಬದಲು

‘ಕೈ’ ತೆಕ್ಕೆಗೆ ಬಿಜೆಪಿ, ಜೆಡಿಎಸ್ ನಾಯಕರು 6

ಸಿಎಎ ಅನುಷ್ಠಾನ ತಡೆ ಕೋರಿ ಅರ್ಜಿ 10

ಸೆನ್ಸೆಕ್ಸ್ 73,667 | ನಿಫ್ಟಿ 22,335 | ₹/$ 82.80

ಹೈಕೋರ್ಟ್ ವಿಭಾಗೀಯ ಪೀಠ ನೀಡಿದ್ದ ಆದೇಶ ಅಮಾನ್ಯಗೊಳಿಸಿದ ‘ಸುಪ್ರೀಂ’

ಬೋರ್ಡ್ ಪರೀಕ್ಷೆ ರದ್ದು

ಪ್ರಜಾವಾಣಿ ವಾರ್ತೆ



ನವದೆಹಲಿ: ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳ 5, 8, 9 ಹಾಗೂ 11ನೇ ತರಗತಿಗಳಿಗೆ ರಾಜ್ಯಮಟ್ಟದ ಬೋರ್ಡ್ ಪರೀಕ್ಷೆ ನಡೆಸಲು ಅನುಮತಿಸಿ ಹೈಕೋರ್ಟ್‌ನ ವಿಭಾಗೀಯ ಪೀಠ ನೀಡಿದ್ದ ಮಧ್ಯಂತರ ಆದೇಶವನ್ನು ಸುಪ್ರೀಂ ಕೋರ್ಟ್ ಮಂಗಳವಾರ ರದ್ದುಪಡಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹೊರಡಿಸಿದ್ದ ಆದೇಶ ರದ್ದುಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ಮಧ್ಯಂತರ ತಡೆ ನೀಡಿತ್ತು.

7ನೇ ಪುಟ ನೋಡಿ

ಕೋರ್ಟ್ ಮೊರೆಹೋದ ಖಾಸಗಿ ಶಿಕ್ಷಣ ಸಂಸ್ಥೆಗಳ ಧೋರಣೆ ಸರಿಯಲ್ಲ. ಮಂಗಳವಾರ ಪರೀಕ್ಷೆ ಬರೆದು ಮನೆಗೆ ಹೋದ ವಿದ್ಯಾರ್ಥಿಗಳಿಗೆ ಬುಧವಾರ ಪರೀಕ್ಷೆ ನಡೆಯುವುದಿಲ್ಲ ಎಂದು ಹೇಗೆ ಹೇಳಬೇಕು?
ದೀಪಾ ಮಲ್ಲಿಕಾರ್ಜುನ್, ಶಿಕ್ಷಕಿ

ಸರ್ಕಾರ, ಖಾಸಗಿ ಶಾಲಾ ಆಡಳಿತ ಮಂಡಳಿ ನಡುವಿನ ತಿಕ್ಕಾಟಕ್ಕೆ ಶಾಲಾ ಮಕ್ಕಳು ಹಾಗೂ ಶಿಕ್ಷಕರು ಸಂತ್ರಸ್ತರಾಗಿದ್ದಾರೆ. ಎಲ್ಲ ಸಿದ್ಧತೆ, ಸಮಯ ವ್ಯರ್ಥವಾಗಿದೆ
ಬಿ.ಸಿದ್ದಬಸಪ್ಪ, ಅಧ್ಯಕ್ಷ, ಪ್ರೌಢಶಾಲಾ ಸಹಶಿಕ್ಷಕರ ಸಂಘ

ಪರೀಕ್ಷೆಯ ದಿಢೀರ್ ಮುಂದೂಡಿಕೆ ಪುಟ್ಟ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಅವರು ಖಿನ್ನತೆಗೂ ಒಳಗಾಗಬಹುದು. ಸರ್ಕಾರ ಮೊದಲೇ ಯೋಚಿಸಬೇಕಿತ್ತು
ಸಂಧ್ಯಾ ಕಾವೇರಿ
ಮಕ್ಕಳ ಸಮಾಲೋಚಕಿ, ಮಾನಸ ವಿದ್ಯಾಸಂಸ್ಥೆ

ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಇದೇ ಮಾರ್ಚ್ 13ರಿಂದ 16ವರೆಗೆ ನಡೆಯಬೇಕಿದ್ದ 5, 8 ಹಾಗೂ 9ನೇ ತಗರಗತಿ ಬೋರ್ಡ್ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಹೈಕೋರ್ಟ್ ವಿಭಾಗೀಯ ಪೀಠ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿರುವ ಕಾರಣ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಹಾಗೂ ಶಾಲಾ ಶಿಕ್ಷಣ ಇಲಾಖೆ ಜಂಟಿಯಾಗಿ ಮಾಹಿತಿ ನೀಡಿವೆ.

2023–24ನೇ ಸಾಲಿನ 5, 8 ಹಾಗೂ 9ನೇ ತರಗತಿ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಗಳು (ಸಂಕಲನಾತ್ಮಕ ಮೌಲ್ಯಾಂಕನ/ಎಸ್‌ಎ–2) ಮಾರ್ಚ್ 11ರಿಂದ ಆರಂಭವಾಗಿದ್ದವು. ಈಗಾಗಲೇ ಎರಡು ವಿಷಯಗಳ ಪರೀಕ್ಷೆಗಳು ಮುಗಿದಿವೆ. 5ನೇ ತರಗತಿಗೆ ಮಾರ್ಚ್ 14ರವರೆಗೆ, 8 ಹಾಗೂ 9ನೇ ತರಗತಿಗೆ ಮಾರ್ಚ್16ರವರೆಗೆ ಪರೀಕ್ಷೆಗಳನ್ನು ನಡೆಸಬೇಕಿದೆ.



ಪ್ರತಿಭಟನೆ ಕುಡಿಯುವ ನೀರು ಪೂರೈಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಆಯೋಗಕ್ಕೆ ವಿವರ ಸಲ್ಲಿಸಿದ ಎಸ್‌ಬಿಐ

ಪ್ರಜಾವಾಣಿ ವಾರ್ತೆ

ಚುನಾವಣಾ ಬಾಂಡ್

ನವದೆಹಲಿ: ಸುಪ್ರೀಂ ಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮಂಗಳವಾರ ನಿಗದಿತ ಗಡುವಿನೊಳಗೆ ಚುನಾವಣಾ ಬಾಂಡ್ ಕುರಿತ ವಿವರಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದೆ.

‘ಚುನಾವಣಾ ಬಾಂಡ್ ವಿವರಗಳನ್ನು ಮಾರ್ಚ್ 12ರಂದು ಕಚೇರಿ ಅವಧಿಯೊಳಗೆ ಆಯೋಗಕ್ಕೆ ಸಲ್ಲಿಸಬೇಕು’ ಎಂದು ಸುಪ್ರೀಂ ಕೋರ್ಟ್ ಸೋಮವಾರ ತಾಕೀತು ಮಾಡಿತ್ತು. ಗಡುವು ವಿಸ್ತರಣೆ ಕೋರಿ ಎಸ್‌ಬಿಐ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿತ್ತು.

11ನೇ ಪುಟ ನೋಡಿ

ವಾಹನಗಳಿಗೆ ಬೆಂಕಿ: 81 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಹಾವೇರಿ: ಮೆಣಸಿನಕಾಯಿ ದರ ಕುಸಿತ ವಿರೋಧಿಸಿ ಬ್ಯಾಡಗಿ ಎಪಿಎಂಸಿ ಆವರಣದಲ್ಲಿ ಸೋಮವಾರ ವಾಹನಗಳಿಗೆ ಬೆಂಕಿ ಹಚ್ಚಿದ ಘಟನೆಗೆ ಸಂಬಂಧಿಸಿದಂತೆ ನಾಲ್ಕು ಎಫ್‌ಐಆರ್ ದಾಖಲಾಗಿವೆ. 81 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿ ಮತ್ತು ವಿಡಿಯೊ ಪರಿಶೀಲಿಸಿದಾಗ, ಪ್ರತಿಭಟನೆಯಲ್ಲಿ ಆಂಧ್ರಪ್ರದೇಶ, ತೆಲಂಗಾಣ ಹಾಗೂ ಬಳ್ಳಾರಿ ಭಾಗದ ಮೆಣಸಿನಕಾಯಿ ಬೆಳೆಗಾರರೇ ಹೆಚ್ಚು ಪಾಲ್ಗೊಂಡಿರುವುದು ಗೊತ್ತಾಗಿದೆ. ಬಂಧಿತರಲ್ಲಿ ಬಹುತೇಕರು ತೆಲುಗು ಭಾಷೆ ಮಾತನಾಡುತ್ತಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಪ್ರತಿಭಟನಕಾರರು ಎಪಿಎಂಸಿ ಕಚೇರಿಯತ್ತ ಪೆಟ್ರೋಲ್ ತುಂಬಿದ ಬಾಟಲಿ ಮತ್ತು ಲೈಟರ್ ಹಿಡಿದು ಬಂದಿದ್ದರು. ಇದು ಪೂರ್ವ ನಿಯೋಜಿತ ಕೃತ್ಯ’ ಎಂದು ವರ್ತಕರು ದೂರಿದ್ದಾರೆ.

₹4 ಕೋಟಿ ನಷ್ಟ: ‘ಎಪಿಎಂಸಿ ಕಚೇರಿಯ ಕಂಪ್ಯೂಟರ್, ದಾಖಲಾತಿ, ಜೆರಾಕ್ಸ್ ಯಂತ್ರ, ಪ್ರಿಂಟರ್, ಪೀಠೋಪಕರಣ ಧ್ವಂಸಗೊಳಿಸಲಾಗಿದೆ. ಎಪಿಎಂಸಿಗೆ ಸಂಬಂಧಪಟ್ಟ 3 ಕಾರು, 1 ಜೀಪು, ಸ್ವಚ್ಛತಾ ವಾಹನ, ಸಿಬ್ಬಂದಿಯ 2 ಕಾರು ಮತ್ತು 4 ಬೈಕ್‌ಗಳಿಗೆ ಬೆಂಕಿ ಹಚ್ಚಲಾಗಿದೆ. ₹2 ಕೋಟಿ ನಷ್ಟವಾಗಿದೆ’ ಎಂದು ಬ್ಯಾಡಗಿ ಎಪಿಎಂಸಿ ಸಹಾಯಕ ಕಾರ್ಯದರ್ಶಿ ಬಿ.ಎಸ್. ಗೌಡರ ದೂರು ನೀಡಿದ್ದಾರೆ.

‘ಜಲವಾಹನಕ್ಕೆ ಬೆಂಕಿ ಹಚ್ಚಿದ ಪರಿಣಾಮ ₹50 ಲಕ್ಷ ನಷ್ಟವಾಗಿದೆ’ ಎಂದು ಬ್ಯಾಡಗಿಯ ಪ್ರಭಾರ ಅಗ್ನಿಶಾಮಕ ಠಾಣಾಧಿಕಾರಿ ಎಸ್.ಎಂ.ಕುಮಾರಸ್ವಾಮಿ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಒಟ್ಟಾರೆ ಘಟನೆಯಿಂದ ₹4 ಕೋಟಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.

11ನೇ ಪುಟ ನೋಡಿ

ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ 3.75 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆಯನ್ನು ಜ. 1ರಿಂದ ಪೂರ್ವಾನ್ವಯ ಆಗುವಂತೆ ಶೇಕಡ 3.75ರಷ್ಟು ಹೆಚ್ಚಳ ಮಾಡಿ ಹಣಕಾಸು ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ಮೂಲ ವೇತನದ ಶೇ 38.75 ರಷ್ಟಿದ್ದ ತುಟ್ಟಿಭತ್ಯೆಯನ್ನು ಶೇ 42.5ಕ್ಕೆ ಹೆಚ್ಚಳ ಮಾಡಲಾಗಿದೆ. ನಿವೃತ್ತ ನೌಕರರು, ಕುಟುಂಬ ಪಿಂಚಣಿ ಪಡೆಯುತ್ತಿರುವವರಿಗೂ ಈ ಹೆಚ್ಚಳ ಅನ್ವಯವಾಗಲಿದೆ. ವಿಶ್ವವಿದ್ಯಾಲಯ ಅನುದಾನ ಆಯೋಗ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ, ಭಾರತೀಯ ಕೃಷಿ ಸಂಶೋಧನಾ ಮಂಡಳಿ, ನ್ಯಾಯಾಂಗ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿಗಳ ಪೂರ್ಣಾವಧಿ ನೌಕರರಿಗೂ ತುಟ್ಟಿಭತ್ಯೆ ಹೆಚ್ಚಳವಾಗಲಿದೆ. ತುಟ್ಟಿ ಭತ್ಯೆಯ ಬಾಕಿ ಮೊತ್ತವನ್ನು ಮಾರ್ಚ್ ವೇತನ ಬಟವಾಡೆಯ ನಂತರವೇ ಪಾವತಿ ಮಾಡಲಾಗುತ್ತದೆ. ತುಟ್ಟಿಭತ್ಯೆ ಏರಿಕೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ₹1,792.91 ಕೋಟಿ ಹೊರೆಯಾಗಲಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಈಜಿಪುರ : ಬಿಬಿಎಂಪಿ ಯೋಜನೆ ವಿಭಾಗದ ಅಧಿಕಾರಿಗಳಿಂದ ವಿಳಂಬ

ಮೇಲ್ಸೇತುವೆ: ಭೂಸ್ವಾಧೀನ ತೊಡಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ವರ್ಷ ಸ್ಥಗಿತವಾಗಿದ್ದು, ನಾಲ್ಕು ತಿಂಗಳ ಹಿಂದೆ ಪುನರ್ ಕಾಮಗಾರಿ ಆರಂಭಿಸಿರುವ ಈಜಿಪುರ ಎಲಿವೇಟೆಡ್ ಕಾರಿಡಾರ್ ಯೋಜನೆಗೆ ಭೂಸ್ವಾಧೀನ ತೊಡಕಾಗಿದೆ.

ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಸೆಂಟ್ ಜಾನ್ಸ್ ಆಸ್ಪತ್ರೆ ಸೇರಿದಂತೆ ಭೂಮಿ ಕಳೆದುಕೊಳ್ಳುವವರೊಂದಿಗೆ ಬಿಬಿಎಂಪಿ ಅಧಿಕಾರಿಗಳು ಮಾತುಕತೆ ನಡೆಸಿದ್ದಾರೆ. ಭೂಮಿ ನೀಡಲು ಒಪ್ಪಿದ್ದು, ಪರ್ಯಾಯ ಭೂಮಿ ಅಥವಾ ಟಿಡಿಆರ್ ನೀಡಬೇಕೆಂದು ಕೇಳಿದ್ದಾರೆ. ಆದರೆ, ಬಿಬಿಎಂಪಿ ಯೋಜನೆ ವಿಭಾಗದ ಅಧಿಕಾರಿಗಳ ವಿಳಂಬದಿಂದ ಭೂಸ್ವಾಧೀನ ಪ್ರಕ್ರಿಯೆಗೆ ವೇಗ ದೊರೆತಿಲ್ಲ.

ಈಜಿಪುರ ಮೇಲ್ಸೇತುವೆ ರ‍್ಯಾಂಪ್ ಪ್ರದೇಶದಲ್ಲಿ ಭೂಸ್ವಾಧೀನವಾಗಬೇಕಿದೆ. ಈ ಬಗ್ಗೆ ನವೆಂಬರ್‌ನಿಂದ ಅಧಿಕಾರಿಗಳು ಮಾತುಕತೆ ನಡೆಸಿದ್ದರೂ ಪ್ರತಿಫಲ ಸಿಕ್ಕಿರಲಿಲ್ಲ. ಸಚಿವ ರಾಮಲಿಂಗಾರೆಡ್ಡಿ ಅವರು ಆಸಕ್ತಿ ವಹಿಸಿ ಸಭೆ ಕರೆದು ಚರ್ಚೆ ನಡೆಸಿದರು. ಎಲ್ಲರೂ ಭೂಮಿ ನೀಡಲು ಸಮ್ಮತಿಸಿದ್ದಾರೆ. ಟಿಡಿಆರ್ ಬದಲು 'ಪರ್ಯಾಯ ಭೂಮಿ' ನೀಡಿ ಎಂದು ಸೆಂಟ್ ಜಾನ್ಸ್ ಆಸ್ಪತ್ರೆಯವರು ಸೇರಿದಂತೆ ಕೆಲವರು ಕೇಳಿಕೊಂಡಿದ್ದಾರೆ. ಈ ಬಗ್ಗೆ, ಬಿಬಿಎಂಪಿ ಅಧಿಕಾರಿಗಳು ಒಂದು ತಿಂಗಳಿಂದ ನಿರ್ಧಾರ ಕೈಗೊಂಡಿಲ್ಲ. ಹೀಗಾಗಿ, ಮೇಲ್ಸೇತುವೆ ಕಾಮಗಾರಿ ನಿಧಾನಗತಿಯಲ್ಲಿದೆ. ಈ ಬಗ್ಗೆ ಯೋಜನೆ ವಿಭಾಗದ ಎಂಜಿನಿಯರ್‌ಗಳು ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

2017ರಲ್ಲಿ ರೂಪುಗೊಂಡಿದ್ದ ಈಜಿಪುರ ಎಲಿವೇಟೆಡ್ ಕಾರಿಡಾರ್ ಯೋಜನೆಯ ಕಾಮಗಾರಿ 2021ರಲ್ಲಿ ಗುತ್ತಿಗೆ ರದ್ದಾಗಿದ್ದರಿಂದ ಸ್ಥಗಿತಗೊಂಡಿತ್ತು. ಮೂರು ಬಾರಿ ಟೆಂಡರ್ ಕರೆದರೂ ಒಬ್ಬರಿಗಿಂತ ಹೆಚ್ಚು ಗುತ್ತಿಗೆದಾರರು ಭಾಗವಹಿಸಿರಲಿಲ್ಲ. ಅಂತಿಮವಾಗಿ, ಕಾಮಗಾರಿ ಪುನರಾರಂಭದ ಟೆಂಡರ್‌ಗೆ ಸಚಿವ ಸಂಪುಟ 2023ರ ಸೆಪ್ಟೆಂಬರ್ 7ರಂದು ಅನುಮೋದನೆ ನೀಡಿತ್ತು. ₹176.11 ಕೋಟಿಗೆ ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಯೊಂದಿಗೆ 'ಟರ್ನ್ ಕೀ ಬೇಸಿಸ್'ನಲ್ಲಿ ಗುತ್ತಿಗೆ ಒಪ್ಪಂದಕ್ಕೆ ಬಿಬಿಎಂಪಿ ನವೆಂಬರ್ 17ರಂದು ಕಾರ್ಯಾದೇಶ ನೀಡಿತ್ತು.

ಶೇ 75ರಷ್ಟು ಪಾವತಿ: ನವೆಂಬರ್‌ನಲ್ಲಿ ಕಾರ್ಯಾದೇಶ ನೀಡಲಾಗಿದ್ದರೂ, ಗುತ್ತಿಗೆದಾರರಿಗೆ ಮುಂಗಡ ಹಣವನ್ನು (ಮೊಬಿಲೈಸೇಷನ್ ಫಂಡ್) ಬಿಬಿಎಂಪಿ ಬಿಡುಗಡೆ ಮಾಡಿರಲಿಲ್ಲ. ಹೀಗಾಗಿ, ಮರ ಕಡಿಯುವುದು ಸೇರಿದಂತೆ ಪಿಲ್ಲರ್‌ಗಳನ್ನು ಅಳವಡಿಸುವ ಮೂಲ ಕಾಮಗಾರಿಗಳು ನಡೆಯುತ್ತಿದ್ದವು.

ಮಾರ್ಚ್ 2 ಎರಡನೇ ವಾರದಲ್ಲಿ ₹8.80 ಕೋಟಿಯ ಮುಂಗಡ ಹಣದಲ್ಲಿ ಶೇ 75ರಷ್ಟು ಬಿಬಿಎಂಪಿ ಬಿಡುಗಡೆ ಮಾಡಿದೆ. 'ಕಾಮಗಾರಿ ಮುಗಿದಿರುವ ಬಿಲ್‌ಗಳಿಗೆ ಶೇ 75ರಷ್ಟು ಬಿಲ್ ಪಾವತಿಸಿ' ಎಂಬ ಸರ್ಕಾರದ ಆದೇಶವಿದೆ. ಅದನ್ನು ಮುಂಗಡ ನಿಧಿಗೂ ಬಿಬಿಎಂಪಿ ಅಳವಡಿಸಿಕೊಂಡಿರುವುದು, ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬಕ್ಕೆ ಪ್ರಮುಖ ಕಾರಣವಾಗಿದೆ. 'ಮುಂಗಡ ಹಣ ಪಾವತಿಸಿಲ್ಲದಿದ್ದರೂ ನಾಲ್ಕು ತಿಂಗಳಿಂದ ಕೆಲಸ ಮಾಡುತ್ತಿದ್ದೇವೆ. ಒಂದು ಕಡೆ ರ‍್ಯಾಂಪ್ ಕೆಲಸವನ್ನೂ ನಡೆಸುತ್ತಿದ್ದೇವೆ. ಭೂಸ್ವಾಧೀನವಾದರೆ ಕೆಲಸವನ್ನು ವೇಗಗೊಳಿಸಬಹುದು' ಎಂದು ಗುತ್ತಿಗೆದಾರರು ತಿಳಿಸಿದರು.



ಈಜಿಪುರ ಮೇಲ್ಸೇತುವೆ ಯೋಜನೆಯಲ್ಲಿ ಪಿಲ್ಲರ್ ಅಳವಡಿಸುವ ಕಾಮಗಾರಿ ನಡೆಯುತ್ತಿದೆ

'ಶೀಘ್ರವೇ ಕಾಮಗಾರಿ ಚುರುಕು'

'ಭೂಮಿಯನ್ನು ನೀಡಲು ಸ್ಥಳೀಯರು ಒಪ್ಪಿದ್ದಾರೆ. ನಾನೇ ಖುದ್ದು ಅವರೊಂದಿಗೆ ಮಾತುಕತೆ ನಡೆಸಿದ್ದೇನೆ. ಯೋಜನೆ ಶೀಘ್ರ ಮುಗಿಯಬೇಕು ಎಂಬ ಆಶಯ ಅವರಲ್ಲೂ ಇದೆ. ಕೆಲವರು ಪರ್ಯಾಯ ಭೂಮಿ ಕೇಳಿದ್ದಾರೆ. ಅದರ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಶೀಘ್ರ ಕ್ರಮ ಕೈಗೊಂಡರೆ ಭೂ ಸ್ವಾಧೀನ ಪ್ರಕ್ರಿಯೆಗೆ ಅಡಚಣೆ ಇರುವುದಿಲ್ಲ. ಭೂಸ್ವಾಧೀನ ಪೂರ್ಣಗೊಂಡ ಕೂಡಲೇ, ಈಜಿಪುರ ಮೇಲ್ಸೇತುವೆ ಕಾಮಗಾರಿ ವೇಗ ಪಡೆದುಕೊಳ್ಳಲಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಮುಖಂಡನ ಬಂಧನ

ಬೆಳಗಾವಿ: ಗಡಿಯಲ್ಲಿ ಭಾಷಾ ವಿವಾದ ಹುಟ್ಟುಹಾಕುವ ಆರೋಪದಡಿ ಮಹಾರಾಷ್ಟ್ರ ಏಕೀಕರಣ ಸಮಿತಿ ಮುಖಂಡ ಶುಭಂ ಶೆಳಕೆ ಅವರನ್ನು ಮಾಳಮಾರುತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಂಗಳವಾರ ಆಯೋಜಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಸಾಧಕಿಯರಾದ ರುಮಾನ ಕೌಸರ್ (ಕೋಲಾರ), ಸರಸ್ವತಿ (ಬೀದರ್), ಎಸ್‌.ಸಿಂಧು (ಶಿವಮೊಗ್ಗ), ಎಂ.ಶಾರದಾ (ದಕ್ಷಿಣ ಕನ್ನಡ), ವೀಣಾ ಉಮೇಶ್ ಕಿಡದಾಳ (ಬೆಳಗಾವಿ), ಸವಿತಾ ಎಂ.ಕುಲಕರ್ಣಿ (ಧಾರವಾಡ) ಕಾವೇರಿ ಶಿವಶಂಕರಯ್ಯ ಹಿರೇಮಠ, ಸಾಯೀಶ್ವರಿ ಗಂಗಾರಾಮ ಕೊಡಚ ವಾಡಕರ ಅವರಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಉದಯ್ ಕುಮಾರ್ ಶೆಟ್ಟಿ, ಪದ್ಮಾವತಿ, ಲಕ್ಷ್ಮೀ ಹೆಬ್ಬಾಳ್ಕರ್, ನಾಗಲಕ್ಷ್ಮಿ ಚೌಧರಿ, ಬಿ.ಎಚ್‌.ನಿಶ್ಚಲ್ ಉಪಸ್ಥಿತರಿದ್ದರು. –ಪ್ರಜಾವಾಣಿ ಚಿತ್ರ

ಸಂಪುಟದಲ್ಲೇ ಇಲ್ಲ ಮಹಿಳಾ ಪ್ರಾತಿನಿಧ್ಯ: ಲಕ್ಷ್ಮೀ ಹೆಬ್ಬಾಳ್ಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಸಂಪುಟದಲ್ಲೇ ಸೂಕ್ತ ಮಹಿಳಾ ಪ್ರಾತಿನಿಧ್ಯ ಇಲ್ಲ. ಈ ಸರ್ಕಾರದಲ್ಲಿ ನಾನೊಬ್ಬಳೇ ಮಹಿಳಾ ಮಂತ್ರಿ. ಅದೂ ಅರ್ಹತೆಗಾಗಿ ಅಲ್ಲ, ಮಹಿಳಾ ಕೋಟಾದ ಫಲ. ಸರ್ಕಾರಿ ಉದ್ಯೋಗ ಸೇರಿದಂತೆ ಎಲ್ಲೆಡೆಯೂ ಅವಕಾಶಗಳು ಕಡಿಮೆ ಇವೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬೇಸರ ವ್ಯಕ್ತಪಡಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಂಗಳವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಸಾಧನೆ ಮಾಡಿದ್ದರೂ, ಪುರುಷರಿಗೆ ಸಮಾನವಾದ ಅವಕಾಶಗಳು ಇಂದಿಗೂ ಸಿಗುತ್ತಿಲ್ಲ. ಸಮಾನ ಅವಕಾಶಗಳು ದೊರೆತಾಗ ಮಾತ್ರ ಸಾಧನೆ ಸಾರ್ಥಕವಾಗುತ್ತದೆ. ಕೌಟುಂಬಿಕ ಚೌಕಟ್ಟಿನೊಳಗೇ ಇದ್ದುಕೊಂಡು, ಸೀಮಿತ ಅವಕಾಶ ಬಳಸಿಕೊಂಡು ಭಾರತದ ಮಹಿಳೆಯರು ಮಾಡುತ್ತಿರುವ ಸಾಧನೆಗೆ ವಿಶ್ವವೇ ಬೆರಗಾಗಿದೆ. ಕೂಲಿ ಕಾರ್ಮಿಕರಾಗಿ, ಗಗನಯಾನಿಯಾಗಿ ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡಿ ತೋರಿಸಿದ್ದಾರೆ' ಎಂದರು.

ಗಾಂಧೀಜಿ ಮಹಾತ್ಮರಾಗಲು, ನೆಹರೂ ದೇಶವನ್ನು ಯಶಸ್ವಿಯಾಗಿ ಮುನ್ನಡೆಸಲು ಅವರ ಪತ್ನಿಯರ ತ್ಯಾಗ, ಪರಿಶ್ರಮವೂ ಇದೆ. ಬಹುತೇಕ ಪುರುಷ ಸಾಧಕರ ಹಿಂದೆಯೂ ಅವರ ಕುಟುಂಬದ ಮಹಿಳೆಯರ ಪಾತ್ರ ಇರುತ್ತದೆ ಎಂದು ಹೇಳಿದರು.

ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ 20 ಸಾಧಕಿಯರು ಹಾಗೂ ಆರು ಸಂಸ್ಥೆಗಳಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, ಏಳು ಸ್ತ್ರೀಶಕ್ತಿ ಗುಂಪುಗಳು, ಮೂರು ಸ್ತ್ರೀಶಕ್ತಿ ಒಕ್ಕೂಟಗಳಿಗೆ ಯಶೋದಮ್ಮ ದಾಸಪ್ಪ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಪ್ರಕಾಶ್, ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪದ್ಮಾವತಿ, ವ್ಯವಸ್ಥಾಪಕ ನಿರ್ದೇಶಕಿ ಎಚ್‌. ಪುಷ್ಪಲತಾ, ಬಾಲಭವನದ ಕಾರ್ಯದರ್ಶಿ ನಿಶ್ಚಲ್, ಕಾಂಗ್ರೆಸ್ ಮುಖಂಡ ಉದಯ್ ಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

ಅಚ್ಚರಿ ಅಭ್ಯರ್ಥಿಗಳು ಕಣಕ್ಕೆ: ಅಶೋಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಕರ್ನಾಟಕದ ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಒಂದೆರಡು ದಿನಗಳಲ್ಲಿ ಪ್ರಕಟವಾಗಲಿದ್ದು, ಅಚ್ಚರಿಯ ಅಭ್ಯರ್ಥಿಗಳು ಇರಲಿದ್ದಾರೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸುಳಿವು ನೀಡಿದರು.

ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯಲ್ಲಿ ಭಾಗಿಯಾಗಲು ನವದೆಹಲಿಗೆ ಬಂದಿರುವ ಅವರು ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿ, 'ಚುನಾವಣಾ ಸಮಿತಿ ಸಭೆಯಲ್ಲಿ 28 ಕ್ಷೇತ್ರಗಳ ಬಗ್ಗೆಯೂ ಚರ್ಚೆಯಾಗಿದೆ. ಕೇಂದ್ರ ನಾಯಕರು ನಮ್ಮ ಅಭಿಪ್ರಾಯಗಳನ್ನು ಪಡೆದಿದ್ದಾರೆ. ನಾಲ್ಕು ಗೋಡೆಗಳ ನಡುವೆ ನಡೆದ ಚರ್ಚೆಯನ್ನು ಬಹಿರಂಗಗೊಳಿಸಲು ಸಾಧ್ಯವಿಲ್ಲ. ಪಕ್ಷದ ವರಿಷ್ಠರ ತೀರ್ಮಾನವೇ ಅಂತಿಮ' ಎಂದರು.

'ಕೆಲವು ಸಂಸದರು ಈಗಾಗಲೇ ನಿವೃತ್ತಿ ಪ್ರಕಟಿಸಿದ್ದಾರೆ. ಸಹಜವಾಗಿ ಹೊಸ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಸಂಸದರಾದ ಅನಂತಕುಮಾರ್ ಹೆಗಡೆ, ಪ್ರತಾಪಸಿಂಹ ಅವರ ಬಗ್ಗೆಯೂ ಚರ್ಚೆಯಾಗಿದೆ. ಪ್ರತಾಪಸಿಂಹ ವಿಶ್ವಾಸ ಕಳೆದುಕೊಳ್ಳುವುದು ಬೇಡ. ಅಭ್ಯರ್ಥಿಗಳು ಯಾರು ಎಂಬುದು ಇನ್ನೂ ಅಂತಿಮವಾಗಿ' ಎಂದು ಅವರು ಹೇಳಿದರು.

ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬಿಜೆಪಿ ಅಭ್ಯರ್ಥಿಯಾಗಿ ಮೈಸೂರಿನಿಂದ ಸ್ಪರ್ಧಿಸುವ ಕುರಿತು, ಈ ವಿಷಯ ನನಗೆ ಗೊತ್ತಿಲ್ಲ. ನಾನು ಅವರನ್ನು ಸಂಪರ್ಕಿಸಿಲ್ಲ. ಇತರ ನಾಯಕರು ಸಂಪರ್ಕಿಸಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ' ಎಂದರು.

ಕನ್ನಡ ನಾಮಫಲಕ ನಾಳೆಯಿಂದ ಕ್ರಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶೇ 60ರಷ್ಟು ಕನ್ನಡ ಬಳಸುವ ಗಡುವು ಇಂದು ಕೊನೆ
- ಪರವಾನಗಿ ಅಮಾನತು, ಮಳಿಗೆಗೆ ಮಾ. 14ರಿಂದ ಬೀಗ

ಬೆಂಗಳೂರು: ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸುವ ಗಡುವು ಬುಧವಾರ ಮುಗಿಯಲಿದ್ದು, ಗುರುವಾರದಿಂದ ಕ್ರಮಕೈಗೊಳ್ಳಲು ಬಿಬಿಎಂಪಿ ನಿರ್ಧರಿಸಿದೆ.

ಫೆಬ್ರುವರಿ 28ರಂದು ಹೊರಡಿಸಿದ್ದ ಸುತ್ತೋಲೆಯಂತೆಯೇ ಶೇ 60ರಷ್ಟು ಕನ್ನಡ ಬಳಸದ ವಾಣಿಜ್ಯ ಮಳಿಗೆಗಳ 'ವ್ಯಾಪಾರ ಪರವಾನಗಿ' ಅಮಾನತು ಮಾಡಿ, ಮಾರ್ಚ್ 14ರಿಂದ ಬೀಗ ಹಾಕಲಾಗುತ್ತದೆ. ಸರ್ಕಾರ, ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ ಮತ್ತು ಮಂಜೂರಾತಿಯೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ವಾಣಿಜ್ಯ ಕೈಗಾರಿಕೆ ಮತ್ತು ವ್ಯವಹಾರ ಉದ್ಯಮಗಳು, ಟ್ರಸ್ಟ್‌ಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಹೋಟೆಲ್‌ಗಳ ನಾಮಫಲಕಗಳಲ್ಲಿ ಕನ್ನಡವನ್ನು ಶೇ 60ರಷ್ಟು ಪ್ರದರ್ಶಿಸಬೇಕು ಎಂದು ವಿಶೇಷ ರಾಜ್ಯ ಪತ್ರದಲ್ಲಿ ಸೂಚಿಸಲಾಗಿತ್ತು.

ವಾಣಿಜ್ಯ ಮಳಿಗೆಗಳು ಫೆಬ್ರುವರಿ 28ರೊಳಗೆ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಅಳವಡಿಸಿಕೊಳ್ಳಲು ಸೂಚಿಸಿ, 55,187 ಮಳಿಗೆಗಳಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಫೆಬ್ರುವರಿ 28ರ ವೇಳೆಗೆ 52,134 ವಾಣಿಜ್ಯ ಉದ್ದಿಮೆಗಳು ಸೂಚನೆಯನ್ನು ಪಾಲಿಸಿದ್ದವು. ಉಳಿದ 3,044 ವಾಣಿಜ್ಯ ಉದ್ದಿಮೆಗಳು ಯಾವುದೇ ಬದಲಾವಣೆ ಮಾಡಿ-ಕೊಂಡಿರಲಿಲ್ಲ. ನಂತರ ಮಳಿಗೆ ಗಳ ಮಾಲೀಕರ ಮನವಿ ಮೇರೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗಡುವನ್ನು ಎರಡು ವಾರ ವಿಸ್ತರಿಸಿದ್ದರು.

'ಮಾ.12ರಂತೆ 55,187 ಮಳಿಗೆ ಗಳಲ್ಲಿ 1,116 ಮಳಿಗೆಗಳು ನಾಮಫಲಕ ಗಳಲ್ಲಿ ಶೇ 60ರಷ್ಟು ಕನ್ನಡ ಪ್ರದರ್ಶಿಸಿಲ್ಲ. ಮಾರ್ಚ್ 14ರಿಂದ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಜಾಮೀನು ತಿರಸ್ಕೃತವಾಗಿದ್ದರೂ ಕೋರ್ಟ್ ದಿಕ್ಕು ತಪ್ಪಿಸಿದ ಆರೋಪ

ಕಾನ್‌ಸ್ಟೆಬಲ್‌ಗೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ ಆರೋಪದಲ್ಲಿ ಜಾಮೀನು ತಿರಸ್ಕೃತವಾದರೂ ಅದನ್ನು ಕೋರ್ಟ್ ಗಮನಕ್ಕೆ ತಾರದೆ ಕೋರ್ಟ್ ಕಣ್ಣಿಗೆ ಮಣ್ಣೆರಚಿ ಸ್ವತಂತ್ರವಾಗಿದ್ದ ಮಹದೇವಪುರ ಠಾಣೆಯ ಪೊಲೀಸ್ ಕಾನ್‌ಸ್ಟೆಬಲ್ ಫಕೀರಪ್ಪ ಹಟ್ಟಿಗೆ ಹೈಕೋರ್ಟ್ ₹1 ಲಕ್ಷ ದಂಡ ವಿಧಿಸಿದೆ.

ಈ ಸಂಬಂಧ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಫಕೀರಪ್ಪ ಅವರನ್ನು ವಶಕ್ಕೆ ಪಡೆಯುವಂತೆ ಡಿಸಿಪಿಗೆ ಆದೇಶಿಸಿದೆ.

'ಆರೋಪಿಯು ಎರಡು ವಾರಗಳಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ₹1 ಲಕ್ಷ ದಂಡ ಪಾವತಿಸಬೇಕು. ಒಂದು ವೇಳೆ ದಂಡ ಪಾವತಿಸದೇ ಇದ್ದರೆ ರಿಜಿಸ್ಟ್ರಾರ್ ಜನರಲ್ ಕಾನೂನು ಪ್ರಕಾರ ಕ್ರಮ ಜರುಗಿಸಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

'ಆರೋಪಿ ಸಂತ್ರಸ್ತೆಯನ್ನು ಬೆದರಿಸಿ ಅತ್ಯಾಚಾರ ಎಸಗಿದ್ದಾರೆ. ನ್ಯಾಯಾಲಯದ ಆದೇಶವನ್ನೂ ಪಾಲಿಸಿಲ್ಲ. ವಾಸ್ತವ ಸಂಗತಿಗಳನ್ನು ಬಹು ಜಾಣ್ಮೆಯಿಂದ ಮುಚ್ಚಿಟ್ಟು ನ್ಯಾಯಾಲಯಗಳ ಹಾದಿ ತಪ್ಪಿಸಿದ್ದಾರೆ. ಇದು ಕಾನೂನಿನ ಸ್ಪಷ್ಟ ದುರುಪಯೋಗ. ಹಾಗಾಗಿ, ಆರೋಪಿ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಸಂತ್ರಸ್ತೆಯ ಪರ ಡಿ.ಮೋಹನ ಕುಮಾರ್ ಹಾಗೂ ಕೆ.ರಾಘವೇಂದ್ರ ಗೌಡ ವಾದ ಮಂಡಿಸಿದ್ದರು.

ಪ್ರಕರಣವೇನು?: ಬೈಲಹೊಂಗಲ ತಾಲ್ಲೂಕಿನ ನೇಗಿನಹಾಳದ ಫಕೀರಪ್ಪ ಅವರು, ಮನೆ ಖಾಲಿ ಮಾಡಿಸುವ ವಿಚಾರದಲ್ಲಿ ಠಾಣೆಗೆ ಬಂದಿದ್ದ ಸಂತ್ರಸ್ತೆಯ ಪರಿಚಯ ಸಂಪಾದಿಸಿ ಆಕೆಯನ್ನು ವಿವಾಹವಾಗುವುದಾಗಿ ನಂಬಿಸಿದ್ದಾರೆ ಮತ್ತು 2019ರಿಂದ 2022ರ ಮಧ್ಯದ ಅವಧಿಯಲ್ಲಿ ಹಲವು ಬಾರಿ ಅತ್ಯಾಚಾರ ಎಸಗಿದ್ದಾರೆ' ಎಂಬುದು ಆರೋಪ.

ಈ ಸಂಬಂಧದ ಪ್ರಕರಣದಲ್ಲಿ ಆರೋಪಿಯು ಸೆಷನ್ಸ್ ಕೋರ್ಟ್‌ನಿಂದ ನಿರೀಕ್ಷಣಾ ಜಾಮೀನು ಪಡೆದಿದ್ದರು. ಈ ಜಾಮೀನನ್ನು ಹೈಕೋರ್ಟ್ ರದ್ದುಪಡಿಸಿತ್ತು. ಆದರೆ, 'ಜಾಮೀನು ರದ್ದಾದ ವಿಚಾರವನ್ನು ಫಕೀರಪ್ಪ ಸೆಷನ್ಸ್ ಕೋರ್ಟ್ ಗಮನಕ್ಕೆ ತಾರದೆ ಹಲವು ಸುತ್ತಿನ ವ್ಯಾಜ್ಯಗಳ ಮುಖೇನ ಸ್ವತಂತ್ರವಾಗಿ ತಿರುಗುತ್ತಿದ್ದಾರೆ' ಎಂದು ಆಕ್ಷೇಪಿಸಿ ದೂರುದಾರಳೂ ಆದ ಸಂತ್ರಸ್ತೆಯು ಹೈಕೋರ್ಟ್ ಮೆಟ್ಟಿಲೇರಿದ್ದರು.

ಶಾಮನೂರು, ಮಲ್ಲಿಕಾರ್ಜುನ್‌ಗೆ ನೋಟಿಸ್

ಬೆಂಗಳೂರು: ಸರ್ಕಾರದ ಅನುದಾನದಲ್ಲಿ ನಿರ್ಮಿಸಲಾದ ಸರ್ಕಾರಿ ಕಟ್ಟಡ ಹಾಗೂ ಇನ್ನಿತರ ಸ್ಥಳಗಳಿಗೆ ಜೀವಂತ ರಾಜಕಾರಣಿಗಳ ಹೆಸರು ಇರಿಸುವುದನ್ನು ಆಕ್ಷೇಪಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ದಾವಣಗೆರೆ ಹೊಂಡದ ರಸ್ತೆ ನಿವಾಸಿ ವಕೀಲ ಎ.ಸಿ. ರಾಘವೇಂದ್ರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ವಿನೋದ್ ಕುಮಾರ್, 'ದಾವಣಗೆರೆ ನಗರದ ವಿವಿಧೆಡೆ ಸರ್ಕಾರದ ಅನುದಾನದಲ್ಲಿ ನಿರ್ಮಿಸಲಾದ ಅನೇಕ ಕಟ್ಟಡಗಳು, ಪಾರ್ಕ್, ಬಸ್ ನಿಲ್ದಾಣ, ರಸ್ತೆಗಳಿಗೆ ಶಾಮನೂರು ಶಿವಶಂಕರಪ್ಪ ಹಾಗೂ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರ ಹೆಸರುಗಳನ್ನು ಇರಿಸಲಾಗಿದ್ದು ಇದನ್ನು ತೆರವುಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿದರು.

ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ದಾವಣಗೆರೆ ಜಿಲ್ಲಾಧಿಕಾರಿ, ಮಹಾನಗರ ಪಾಲಿಕೆ ಆಯುಕ್ತ, ಜಿಲ್ಲಾ ಪಂಚಾಯ್ತಿ ಸಿಇಒ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಸಂಕ್ಷಿಪ್ತ ಸುದ್ದಿ

ಹಳಿ ಮೇಲೆ ಯುವಕ: 27 ನಿಮಿಷ ಮೆಟ್ರೊ ಸ್ಥಗಿತ

ಬೆಂಗಳೂರು: ಜ್ಞಾನಭಾರತಿ ನಿಲ್ದಾಣದಿಂದ ಪಟ್ಟಣಗೆರೆ ನಿಲ್ದಾಣ ನಡುವಿನ ಹಳಿ ಮೇಲೆ ಯುವಕನೊಬ್ಬ ಓಡಾಡಿದ್ದರಿಂದ, ಈ ಮಾರ್ಗದಲ್ಲಿ 27 ನಿಮಿಷ ಮೆಟ್ರೊ ರೈಲು ಸಂಚಾರ ಸ್ಥಗಿತಗೊಂಡಿತ್ತು.

ಮಂಗಳವಾರ ನಡೆದಿರುವ ಈ ಘಟನೆಯಿಂದ ಪ್ರಯಾಣಿಕರ ಸಂಚಾರಕ್ಕೆ ತೊಂದರೆ ಉಂಟಾಯಿತು. ಹಳಿ ಮೇಲೆ ಓಡಾಡಿದ್ದ ಯುವಕನನ್ನು ಮೆಟ್ರೊ ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದು ಪೊಲೀಸರಿಗೆ ಒಪ್ಪಿಸಿದ್ದಾರೆ. ಆತನ ಹೆಸರು ಹಾಗೂ ಹಿನ್ನೆಲೆ ಸದ್ಯಕ್ಕೆ ಗೊತ್ತಾಗಿಲ್ಲ.

'ಮಧ್ಯಾಹ್ನ 3 ಗಂಟೆ ಸುಮಾರಿಗೆ ಯುವಕನೊಬ್ಬ, ವಿದ್ಯುತ್ ಹರಿಯುತ್ತಿದ್ದ ಹಳಿ ಪಕ್ಕವೇ ನಡೆದುಕೊಂಡು ಹೊರಟಿದ್ದ. ಅದನ್ನು ನೋಡಿದ್ದ ಸಿಬ್ಬಂದಿ, ಕೂಡಲೇ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರು. ಇದರಿಂದಾಗಿ ಮೈಸೂರು ರಸ್ತೆಯಿಂದ ಚಲಘಟ್ಟ ನಿಲ್ದಾಣವರೆಗಿನ ಮೆಟ್ರೊ ಸಂಚಾರ ಸ್ಥಗಿತಗೊಂಡಿತ್ತು' ಎಂದು ಮೆಟ್ರೊ ಮೂಲಗಳು ಹೇಳಿವೆ.

'ಹಳಿಗೆ ಇಳಿದಿದ್ದ ಸಿಬ್ಬಂದಿ, ಯುವಕನನ್ನು ಬೆನ್ನಟ್ಟಿ ಹಿಡಿದಿದ್ದರು. ಮಧ್ಯಾಹ್ನ 3.27 ಗಂಟೆ ನಂತರ ವಿದ್ಯುತ್ ಸಂಪರ್ಕ ಪುನಃ ನೀಡಲಾಯಿತು. ನಂತರವೇ, ರೈಲುಗಳ ಸಂಚಾರ ಆರಂಭವಾಯಿತು. ಯುವಕನ ಕೃತ್ಯದಿಂದ ನಷ್ಟವಾಗಿದೆ. ಯುವಕನ ಉದ್ದೇಶವೇನು? ಇದು ಆಕಸ್ಮಿಕವೋ ಅಥವಾ ಬೇರೆ ಏನಾದರೂ ಕಾರಣವಿದೆಯಾ? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಮೂಲಗಳು ತಿಳಿಸಿವೆ.

ಸಿದ್ದಲಿಂಗಯ್ಯ, ಪ್ರವೀಣ್ ದತ್‌ಗೆ 'ಕಸಾಪ ದತ್ತಿ ಪ್ರಶಸ್ತಿ'



ಜಿ.ಎಸ್. ಸಿದ್ದಲಿಂಗಯ್ಯ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ'ಗೆ ಸಾಹಿತಿ ಜಿ.ಎಸ್. ಸಿದ್ದಲಿಂಗಯ್ಯ ಹಾಗೂ ಸಂಗೀತ ನಿರ್ದೇಶಕ ಪ್ರವೀಣ್ ದತ್ ಸ್ಟೀಫನ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ. ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಈ ಪ್ರಶಸ್ತಿಯನ್ನು ಪ್ರತಿ ವರ್ಷ ಕನ್ನಡ ಕ್ರೈಸ್ತ ಸಾಧಕರೊಬ್ಬರು ಹಾಗೂ ಕನ್ನಡ ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಇರುವ ಒಬ್ಬರಿಗೆ ನೀಡಲಾಗುತ್ತಿದೆ.

ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ 16ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಅಯೋಜಿಸಲಾಗಿದೆ. ಎಸ್.ಎಂ.ಎಂ.ಐ ಧಾರ್ಮಿಕ ಸಭೆಯ ಕರ್ನಾಟಕ ಪ್ರಾಂತ್ಯಾಧಿಕಾರಿ ಜೆಸ್ಸಿ ಮರ್ಲಿನ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪರಿಷತ್ತಿನ ಅಧ್ಯಕ್ಷರಾದ ಮಹೇಶ ಜೋಶಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕಸಾಪ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್. ಶ್ರೀಧರ ಮೂರ್ತಿ ತಿಳಿಸಿದ್ದಾರೆ.

ಖಾಲಿ ಕೊಡ ಹಿಡಿದು ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಾಜಧಾನಿಯ ಜನರಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸುವಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಖಾಲಿ ಕೊಡ ಹಿಡಿದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಬಿಜೆಪಿಯ ಬೆಂಗಳೂರು ಉತ್ತರ, ದಕ್ಷಿಣ ಮತ್ತು ಕೇಂದ್ರ ಜಿಲ್ಲಾ ಘಟಕಗಳು ಪ್ರತಿಭಟನೆಯ ನೇತೃತ್ವ ವಹಿಸಿದ್ದವು. ಮಹಿಳೆಯರು ಖಾಲಿ ಕೊಡ ಹಿಡಿದು ಪ್ರತಿಭಟಿಸಿದರೆ, ಪುರುಷರು ಖಾಲಿ ಬ್ಯಾರೆಲ್‌ಗಳನ್ನು ಹಿಡಿದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೆಲವರು ಬ್ಯಾರೆಲ್‌ಗಳನ್ನು ಹಿಡಿದು ಕುದುರೆ ಗಾಡಿಯಲ್ಲಿ ಪ್ರತಿಭಟನಾ ಸ್ಥಳಕ್ಕೆ ಬಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮುಖವಾಡಗಳನ್ನು ತೊಟ್ಟ ಕೆಲವು ಪ್ರತಿಭಟನಾಕಾರರು, ಇಬ್ಬರ ವಿರುದ್ಧವೂ ಘೋಷಣೆಗಳನ್ನು ಕೂಗಿದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಮಾತನಾಡಿ, 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಕರ್ನಾಟಕದ ಜನರಿಗೆ ಕುಡಿಯುವ ನೀರು ಕೊಡಲು ವಿಫಲವಾಗಿದೆ. ಜನರಿಗೆ ಮದ್ಯ ಕುಡಿಸುವುದಕ್ಕೆ ಹೆಚ್ಚಿನ ಆಸಕ್ತಿ ಹೊಂದಿದೆ. ಹೀಗಾಗಿ ಮದ್ಯ ಮಾರಾಟದ ಗುರಿಯನ್ನು ಹೆಚ್ಚಳ ಮಾಡುತ್ತಿದೆ' ಎಂದು ಟೀಕಿಸಿದರು.

ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ಶಾಸಕ ರವಿ ಸುಬ್ರಹ್ಮಣ್ಯ, ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಕೆ. ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ರಾಜ್ಯ ಘಟಕದ ಮುಖ್ಯ ವಕ್ತಾರ ಅಶ್ವತ್ಥ್ ನಾರಾಯಣ ಗೌಡ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಮೇಕೆದಾಟು ಅಣೆಕಟ್ಟೆಗೆ ಅನುಮತಿ ದೊರೆತರೆ ಮತದಾನ'

ಬೆಂಗಳೂರು: 'ಮೇಕೆದಾಟು ಅಣೆಕಟ್ಟು ಕಟ್ಟಲು ಅನುಮತಿ ದೊರೆತರೆ ಮಾತ್ರ ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಮತ ಚಲಾಯಿಸಲಾಗುವುದು' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಮನಗರ ಜಿಲ್ಲಾ ಶಾಖೆಯ ಕನಕಪುರ ಘಟಕ ಎಚ್ಚರಿಕೆ ನೀಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಘಟಕದ ಅಧ್ಯಕ್ಷ ಮಂಜೇಗೌಡ, 'ಮೇಕೆದಾಟು ಅಣೆಕಟ್ಟನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಈಗ ಸುಮ್ಮನಾಗಿದೆ. ಇದರಿಂದ ನೀರಿನ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದೆ. ನಮಗೆ ನಿಮ್ಮ ಯಾವುದೇ 'ಗ್ಯಾರಂಟಿ'ಗಳು ಬೇಕಿಲ್ಲ. ಬದಲಾಗಿ ನೀರನ್ನು ಒದಗಿಸಿ' ಎಂದು ಆಗ್ರಹಿಸಿದರು.

'ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಅಧಿಕಾರಕ್ಕೆ ಬರುವ ಮೊದಲು ಮೇಕೆದಾಟು ಪಾದಯಾತ್ರೆ ನಡೆಸಿದರು. ಆ ವೇಳೆ ಅಧಿಕಾರಕ್ಕೆ ಬಂದರೆ ಅಣೆಕಟ್ಟನ್ನು ಕಟ್ಟುತ್ತೇವೆ ಎಂದು ಭರವಸೆ ನೀಡಿದರು. ಆದರೆ, ಅಧಿಕಾರಕ್ಕೆ ಬರುತ್ತಿದ್ದಂತೆ ನೀಡಿದ್ದ ಭರವಸೆಯನ್ನು ಮರೆತಿದ್ದಾರೆ. ಈಗ ಬೆಂಗಳೂರು ಸೇರಿ ವಿವಿಧೆಡೆ ನೀರಿನ ಸಮಸ್ಯೆ ಉಲ್ಬಣಿಸಿದೆ. ಇನ್ನಾದರೂ ಎಚ್ಚೆತ್ತುಕೊಂಡು ಅಣೆಕಟ್ಟನ್ನು ನಿರ್ಮಿಸಬೇಕು' ಎಂದು ಒತ್ತಾಯಿಸಿದರು.


ಪೆರಿಫೆರಲ್ ವರ್ತುಲ ರಸ್ತೆ ಮಾರ್ಗಸೂಚಿ ದರ ಆದೇಶ ಹಿಂದಕ್ಕೆ

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆಯ ಮಾರ್ಗಸೂಚಿ ದರ ಕಡಿಮೆ ಮಾಡಿಲ್ಲ. ಆದರೆ, ಸರ್ಕಾರ ಹೊರಡಿಸಿದ್ದ ಆದೇಶ ಹಿಂಪಡೆದ ಕಾರಣ ಹಿಂದಿನ ಮಾರ್ಗಸೂಚಿ ದರವೇ ಅಲ್ಲಿಗೆ ಅನ್ವಯವಾಗಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಯಾವುದೇ ಯೋಜನೆಗಳಿಗೆ ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಯ ಅಧಿಸೂಚನೆ ಹೊರಡಿಸಿದ ನಂತರ ಆ ಪ್ರದೇಶಗಳಲ್ಲಿನ ಸ್ವತ್ತುಗಳ ಮಾರ್ಗಸೂಚಿ ದರ ಹೆಚ್ಚಳ ಮಾಡುವ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ರಾಜ್ಯದ ಇತರೆ ಸ್ವತ್ತುಗಳಿಗೆ ಅನ್ವಯಿಸುವ ಮಾರ್ಗಸೂಚಿ ದರಗಳು ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿರುವ ಪ್ರದೇಶಕ್ಕೆ ಅನ್ವಯವಾಗದು. ಮುಂದೆ ಜಿಲ್ಲಾಧಿಕಾರಿಗಳೇ ಮಾರ್ಗಸೂಚಿ ದರ ನಿಗದಿ ಮಾಡುವರು ಎಂದು ವಿವರಿಸಿದರು.

ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮ ಸಾಧ್ಯತೆ • ಕೈಗಾರಿಕೋದ್ಯಮಿಗಳು– ಕಾರ್ಮಿಕರಿಗೆ ಆತಂಕ

ಕೈಗಾರಿಕಾ ಪ್ರದೇಶಗಳಲ್ಲಿ ಜಲಸಂಕಟ



ಪೀಣ್ಯದ ಕೈಗಾರಿಕೆಯೊಂದಕ್ಕೆ ಟ್ಯಾಂಕರ್‌ನಲ್ಲಿ ನೀರು ಪೂರೈಸಲಾಗುತ್ತಿದೆ.



ಪೀಣ್ಯಾ ಕೈಗಾರಿಕೆ ಪ್ರದೇಶದಲ್ಲಿ ನೀರನ್ನು ತುಂಬಿಡಲು ಡ್ರಮ್ ಗಳನ್ನು ಇಟ್ಟಿರುವುದು
ಪ್ರಜಾವಾಣಿ ಚಿತ್ರಗಳು / ಪ್ರಶಾಂತ್ ಎಚ್.ಜಿ.

• ಆದಿತ್ಯ ಕೆ.ಎ.

ಬೆಂಗಳೂರು: 'ದಕ್ಷಿಣ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡ ಕೈಗಾರಿಕಾ ಪ್ರದೇಶ' ಎಂಬ ಹೆಗ್ಗಳಿಕೆ ಪಡೆದಿರುವ ನಗರದ ಪೀಣ್ಯದ ಕೈಗಾರಿಕಾ ಪ್ರದೇಶದಲ್ಲೀಗ 'ಜಲಸಂಕಟ' ಆರಂಭವಾಗಿದೆ.

ಕೆಲವು ಸೌಲಭ್ಯಗಳ ಕೊರತೆಯಿಂದ ಎದುಸಿರು ಬಿಡುತ್ತಿದ್ದ, 16 ಸಾವಿರ ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕೆಗಳನ್ನು ಹೊಂದಿರುವ ಪ್ರದೇಶದಲ್ಲಿ ನೀರಿನ ಸಮಸ್ಯೆಯೂ ಜೊತೆಯಾಗಿ ಇನ್ನೊಂದು ಸಂಕಷ್ಟ ತಂದೊಡ್ಡಿದೆ. ಇದರಿಂದ ಉತ್ಪಾದನೆ ಮೇಲೆ ಪೆಟ್ಟು ಬಿದ್ದಿದೆ.

ಕುಸಿದ ನೀರಿನಮಟ್ಟ: ಕೈಗಾರಿಕೆ ಪ್ರದೇಶಗಳಲ್ಲಿರುವ ಕೊಳವೆಬಾವಿಗಳಲ್ಲಿ ನೀರಿನಮಟ್ಟ ಕುಸಿದಿದ್ದು, ಮಾಲೀಕರು ಕೈಗಾರಿಕೆ ನಡೆಸಲು ಟ್ಯಾಂಕರ್ ನೀರಿನ ಮೊರೆ ಹೋಗುವ ಸ್ಥಿತಿ ನಿರ್ಮಾಣವಾಗಿದೆ. ಕಾವೇರಿ ನೀರು ಪೂರೈಕೆಯಲ್ಲೂ ವ್ಯತ್ಯಯವಾಗಿದೆ. ಪೀಣ್ಯ 1ನೇ ಹಂತ, 2ನೇ ಹಂತದ ಮುಖ್ಯರಸ್ತೆಯ ಅಲ್ಲಲ್ಲಿ ಟ್ಯಾಂಕರ್‌ಗಳ ದರ್ಶನವಾಗುತ್ತಿದೆ; ಈ ಟ್ಯಾಂಕರ್‌ಗಳ ಓಡಾಟವೇ ನೀರಿನ ಕೊರತೆಯ ತೀವ್ರತೆಯನ್ನು ಬಿಂಬಿಸುತ್ತಿದೆ.

ಎಂಜಿನಿಯರಿಂಗ್ ವರ್ಕ್ಸ್, ಔಷಧಗಳ ತಯಾರಿಕಾ ಫ್ಯಾಕ್ಟರಿ, ಆಟೊಮೊಬೈಲ್ ಬಿಡಿಭಾಗ, ಪೌಡರ್ ಕೋಟಿಂಗ್, ಪ್ಯಾಕೇಜಿಂಗ್ ಇಂಡಸ್ಟ್ರಿ, ಫ್ಯಾಬ್ರಿಕೇಷನ್, ಎಲೆಕ್ಟ್ರೊ ಪ್ಲೇಟಿಂಗ್, ಸಿಎನ್‌ಸಿ ಮಷಿನ್ ಜಾಬ್ ವರ್ಕ್, ವಿದ್ಯುತ್ ಪರಿವರ್ತಕಗಳ ಬಿಡಿಭಾಗಗಳ ತಯಾರಿಕಾ ಘಟಕಗಳು ಈ ಪ್ರದೇಶದಲ್ಲಿವೆ. ಕೆಲವು ಕೈಗಾರಿಕೆಗಳ ಯಂತ್ರಗಳ ಕೆಲಸಕ್ಕೆ(ಕೂಲಿಂಗ್) ಅಗತ್ಯವಿರುವಷ್ಟು ನೀರು ಬೇಕು. ಆದರೆ, ಹತ್ತು ದಿನಗಳಿಂದ ಆ ಪ್ರಮಾಣದಲ್ಲಿ ನೀರು ಲಭಿಸದೇ ಸಂಕಷ್ಟ ಎದುರಾಗಿದೆ ಎಂದು ಉದ್ಯಮಿಗಳು ಅಳಲು ತೋಡಿಕೊಳ್ಳುತ್ತಾರೆ. ನೀರಿಲ್ಲದಿದ್ದರೆ ಕೈಗಾರಿಕೆ ನಡೆಸುವುದು ಕಷ್ಟ ಎನ್ನುತ್ತಾರೆ ಅವರು.

ಯಾವುದೇ ಕಾರ್ಖಾನೆಯಲ್ಲಿ 100ಕ್ಕಿಂತ ಹೆಚ್ಚಿನ ಕಾರ್ಮಿಕರು ಕೆಲಸ ಮಾಡುತ್ತಿದ್ದರೆ, ಎಸ್‌ಟಿಪಿ (ತ್ಯಾಜ್ಯ ನೀರು ಸಂಸ್ಕರಣಾ ಘಟಕ) ಅಳವಡಿಸಿಕೊಳ್ಳಬೇಕು ಎಂದು ಸರ್ಕಾರದ ನಿಯಮವಿದೆ. ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿ ಶೇ 98ರಷ್ಟು ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕೆಗಳಿವೆ. ಶೇ 2ರಷ್ಟು ಮಾತ್ರ ಬೃಹತ್ ಕೈಗಾರಿಕೆಗಳಿವೆ. ಬಹುತೇಕ ಸಣ್ಣ ಕೈಗಾರಿಕೆಗಳಲ್ಲಿ ಎಸ್‌ಟಿಪಿ ಇಲ್ಲ. ಇದರಿಂದಲೂ ನೀರಿನ ಸಮಸ್ಯೆ ಎದುರಾಗಿದೆ. ಸಣ್ಣ ಕೈಗಾರಿಕೆಗಳು ಬಳಸಿದ ನೀರು ಒಳಚರಂಡಿ ಸೇರುತ್ತಿದೆ. ಬೃಹತ್ ಕೈಗಾರಿಕೆಗಳು ಮಾತ್ರ ಎಸ್‌ಟಿಪಿ ಅಳವಡಿಕೆ ಮಾಡಿಕೊಂಡಿದ್ದು ಸಂಸ್ಕರಿಸಿದ ನೀರನ್ನು ಮರು ಬಳಕೆ ಮಾಡುತ್ತಿವೆ. ಶೇ 98ರಷ್ಟು ಕೈಗಾರಿಕೆಗಳಿಗೆ ನೀರಿನ ಅಗತ್ಯವಿದೆ ಎಂದು ಕೈಗಾರಿಕೋದ್ಯಮಿಯೊಬ್ಬರು ಹೇಳಿದರು.

ಕುಡಿಯುವ ನೀರು ಖರೀದಿ: ಕೈಗಾರಿಕಾ ಪ್ರದೇಶದಲ್ಲಿ ಅಡ್ಡಾಡಿದರೆ ಕೈಗಾರಿಕೋದ್ಯಮಿಗಳ ಮೊಗದಲ್ಲಿ ಸಂಕಟದ ಛಾಯೆ ಕಾಣಿಸುತ್ತದೆ. ಕಾರ್ಮಿಕರು, ಭದ್ರತಾ ಸಿಬ್ಬಂದಿ, ವಾಹನ ಚಾಲಕರೂ ನೀರಿನ ಸಮಸ್ಯೆಗಳ ಬಗ್ಗೆ ಹೇಳುತ್ತಾರೆ.

ಕೈಗಾರಿಕೆ ಪ್ರದೇಶದಲ್ಲಿ ಮಾತಿಗೆ ಸಿಕ್ಕಿದ ಕಾರ್ಮಿಕ ರಂಜನ್ ಅವರು, 'ಫೆಬ್ರುವರಿ ಅಂತ್ಯದವರೆಗೂ ನೀರಿಗೆ ಅಷ್ಟು ಸಮಸ್ಯೆ ಇರಲಿಲ್ಲ. ಈಗ ಸಮಸ್ಯೆ ನಿಧಾನವಾಗಿ ಕಾಣಿಸಿಕೊಳ್ಳುತ್ತಿದೆ. ಬಹುತೇಕರು ಕೈಗಾರಿಕೆಗಳ ಎದುರು ಪುಟ್ಟ ಉದ್ಯಾನ ಮಾಡಿದ್ದಾರೆ. ಅಲ್ಲಿ ಗಿಡಗಳಿಗೆ ಹಾಕಲು ನೀರಿಲ್ಲ. ಒಂದು ವಾರದಿಂದ ನೀರು ಉಣಿಸುತ್ತಿಲ್ಲ. ಗಿಡಗಳು ಬಾಡಿವೆ' ಎಂದು ಉದ್ಯಾನ ತೋರಿಸಿದರು.

'ಸಾವಿರಾರು ಕಾರ್ಮಿಕರು ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ. ಅವರಿಗೆ ಕುಡಿಯಲು ಕ್ಯಾನ್‌ಗಳಲ್ಲಿ ನೀರನ್ನು ಹಾಕಿಸಿಕೊಳ್ಳಲಾಗುತ್ತಿದೆ. ಕೊಳವೆಬಾವಿಗಳು ಬತ್ತಲು ಆರಂಭಿಸಿವೆ. ಇದರಿಂದ ಸಮಸ್ಯೆ ಬಿಗಡಾಯಿಸಿದೆ' ಎಂದು ಪೀಣ್ಯ ಕೈಗಾರಿಕೆ ಸಂಘದ ಅಧ್ಯಕ್ಷ ಎಚ್.ಎಂ.ಆರೀಫ್ ಹೇಳಿದರು.

ಇನ್ನು ಅಲ್ಲಲ್ಲಿ ಕಾರ್ಮಿಕರ ಹೊಟ್ಟೆ ತುಂಬಿಸಲು ಕೈಗಾರಿಕಾ ಪ್ರದೇಶದ ವ್ಯಾಪ್ತಿಯಲ್ಲಿ ಸಣ್ಣ ಹೋಟೆಲ್‌ಗಳಿವೆ. ಅವುಗಳಿಗೂ ನೀರಿನ ಬರ ಎದುರಾಗಿದೆ. ಕ್ಯಾಂಟೀನ್ ಮಾಲೀಕರು ಟ್ಯಾಂಕರ್ ನೀರಿನ ಮೊರೆ ಹೋಗಿದ್ದಾರೆ. ಜನವರಿ–ಫೆಬ್ರುವರಿ ಕೊನೆಯಲ್ಲಿದ್ದ ದರಕ್ಕೆ ಹೋಲಿಸಿದರೆ ಈಗ ಟ್ಯಾಂಕರ್ ನೀರಿನ ದರ ದುಪ್ಪಟ್ಟಾಗಿದೆ. ಇದರಿಂದ ಹೋಟೆಲ್ ನಡೆಸುವುದು ಕಷ್ಟವಾಗಿದೆ ಎನ್ನುತ್ತಾರೆ ಅವರು.

ಕೈಗಾರಿಕಾ ಪ್ರದೇಶದ ಅಂಕಿಅಂಶಗಳು

- **12 ಲಕ್ಷ** — ಪೀಣ್ಯ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿರುವ ಒಟ್ಟು ಕಾರ್ಮಿಕರು
- **4 ಲಕ್ಷ** — ಮಹಿಳಾ ಕಾರ್ಮಿಕರ ಸಂಖ್ಯೆ
- **45 ಚದರ ಕಿಲೊ ಮೀಟರ್** — ಪೀಣ್ಯ ಕೈಗಾರಿಕಾ ಪ್ರದೇಶದ ವಿಸ್ತೀರ್ಣ
- **441 ಎಂಎಲ್‌ಡಿ** — ಕೈಗಾರಿಕೆ ಪ್ರದೇಶದ ನೀರಿನ ಬೇಡಿಕೆ

ಜಲ ಜಂಜಾಟ

ಸಂಸ್ಕರಿಸಿದ ನೀರನ್ನು ಕೊಟ್ಟರೆ ಸಾಕು...

ನಮಗೆ ಕಾವೇರಿ ನೀರನ್ನೇ ಕೊಡಿ ಎಂದು ಕೇಳುತ್ತಿಲ್ಲ. ಸಂಸ್ಕರಿಸಿದ ನೀರನ್ನಾದರೂ ಕೊಡಿ. ಅದರೆ, ಸಂಸ್ಕರಿಸಿದ ನೀರನ್ನು ಹರಿಸಲು ಪೈಪ್‌ಲೈನ್ ವ್ಯವಸ್ಥೆಯೇ ಆಗಿಲ್ಲ. ಈ ತಿಂಗಳು ಟ್ಯಾಂಕರ್ ನೀರನ್ನು ಖರೀದಿಸಿ ಕೈಗಾರಿಕೆ ನಡೆಸುತ್ತಿದ್ದೇವೆ. ಆದರೆ, ಏಪ್ರಿಲ್ ಹಾಗೂ ಮೇ ತಿಂಗಳ ಬಗ್ಗೆ ಯೋಚಿಸಿದರೆ ಆತಂಕ ಹುಟ್ಟಿಸುತ್ತದೆ. ಮುಂದಿನ ಎರಡು ತಿಂಗಳಲ್ಲಿ ಟ್ಯಾಂಕರ್ ಮಾಲೀಕರಿಗೆ ನೀರು ಲಭಿಸದಿದ್ದರೆ ನಮ್ಮ ಪಾಡೇನು? ನಾನಾ ಕಾರಣಕ್ಕೆ ಕೆಲವು ಕೈಗಾರಿಕೆಗಳು ಬಾಗಿಲು ಮುಚ್ಚಿವೆ. ಈಗ ನೀರು ಕೊಡದಿದ್ದರೆ ನೀರನ್ನೇ ಅವಲಂಬಿಸಿರುವ ಕೈಗಾರಿಕೆಗಳನ್ನು ಬಂದ್ ಮಾಡುವ ಸ್ಥಿತಿ ಬರಲಿದೆ ಎಂದು ಸಂಘದ ಸದಸ್ಯರು ಆತಂಕ ವ್ಯಕ್ತಪಡಿಸಿದರು.



ಸದ್ಯದಲ್ಲೇ ಸಂಘದ ಆಡಳಿತ ಮಂಡಳಿ ಸದಸ್ಯರ ಜೊತೆಗೆ ಜಲಮಂಡಳಿ ಅಧಿಕಾರಿಗಳನ್ನು ಭೇಟಿ ಮಾಡಿ ರಿಯಾಯಿತಿ ದರದಲ್ಲಿ ಕೈಗಾರಿಕೆಗಳಿಗೆ ಟ್ಯಾಂಕರ್‌ನಲ್ಲಿ ನೀರು ಪೂರೈಸುವಂತೆ ಮನವಿ ಮಾಡುತ್ತೇವೆ.

ಎಚ್.ಎಂ.ಆರೀಫ್, ಅಧ್ಯಕ್ಷ, ಪೀಣ್ಯ ಕೈಗಾರಿಕಾ ಸಂಘ

ಕಾರ್ಮಿಕರು ಏನು ಹೇಳುತ್ತಾರೆ?



ಕೈಗಾರಿಕೆಗಳಿಗೆ ನೀರು ನೀಡಿದರೆ ಕೈಗಾರಿಕೆಗಳ ಅವಲಂಬಿತ ಕಾರ್ಮಿಕರ ಬದುಕೂ ಉಳಿಯಲಿದೆ.

ಸುಜಾತಾ, ಕಾರ್ಮಿಕ ಮಹಿಳೆ



ರಾಜ್ಯದಲ್ಲಿನ ಬರದ ಕಾರಣದಿಂದ ಪೀಣ್ಯ ಪ್ರದೇಶಕ್ಕೆ ಕೆಲಸ ಹುಡುಕಿಕೊಂಡು ಬರುವ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಇಲ್ಲಿಯೂ ನೀರಿನ ವ್ಯವಸ್ಥೆ ಸರಿಯಿಲ್ಲದೇ ಕಾರ್ಮಿಕರು ಪರಿತಪಿಸುತ್ತಿದ್ದಾರೆ.

ಸುಜಿತಾ ರಾವ್, ಆರ್‌ಕೆ ಎಂಜಿನಿಯರ್ ವರ್ಕ್ಸ್

ರೈಲ್ವೆ, ಎಚ್‌ಎಎಲ್, ಡಿಫೆನ್ಸ್, ನಿಮ್ಹಾನ್ಸ್, ವಿಕ್ಟೋರಿಯಾ ಆಸ್ಪತ್ರೆಗೆ ಸಂಸ್ಕರಿಸಿದ ನೀರು ಬಳಸಲು ಸೂಚನೆ

ಬಲ್ಕ್ ಬಳಕೆದಾರರಿಗೆ ಶೇ 20ರಷ್ಟು ನೀರು ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರಿನ ಸಂಪರ್ಕ ಪಡೆದಿರುವವರಿಗೆ (ಬಲ್ಕ್ ಬಳಕೆದಾರರು) ಕಾವೇರಿ ನೀರಿನ ಸರಬರಾಜಿನಲ್ಲಿ ಶೇ 20ರಷ್ಟು ಕಡಿತ ಮಾಡಲು ನಿರ್ಧರಿಸಲಾಗಿದೆ.

ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್ ಪ್ರಸಾತ್ ಮನೋಹರ್ ಅವರು ಹೆಚ್ಚಿನ ಪ್ರಮಾಣದಲ್ಲಿ ನೀರು ಬಳಸುವಂತಹ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಮಂಗಳವಾರ ಚರ್ಚೆ ನಡೆಸಿದ ಬಳಿಕ ಈ ತೀರ್ಮಾನವನ್ನು ತಿಳಿಸಿದರು.

ರೈಲ್ವೆ, ಎಚ್‌ಎಎಲ್, ವಾಯುಪಡೆ, ಡಿಫೆನ್ಸ್, ಸಿಆರ್‌ಪಿಎಫ್, ಬಯೋಕಾನ್, ನಿಮ್ಹಾನ್ಸ್, ವಿಕ್ಟೋರಿಯಾ ಆಸ್ಪತ್ರೆ ಸೇರಿದಂತೆ ಹೆಚ್ಚು ನೀರು ಬಳಸುವಂತಹ ಸಂಸ್ಥೆಗಳು ತಮ್ಮ ಕ್ಯಾಂಪಸ್‌ನಲ್ಲಿ ನೀರಿನ ಪ್ರಾಮುಖ್ಯ, ನೀರಿನ ಉಳಿತಾಯ ಕುರಿತು ಅರಿವು ಮೂಡಿಸಬೇಕು ಎಂದು ಸೂಚಿಸಿದರು.

'ನಗರದಲ್ಲಿ ನೀರಿನ ಸಮಸ್ಯೆ ಎದುರಾಗಿದ್ದು, 1.40 ಕೋಟಿ ಜನಸಂಖ್ಯೆಗೆ ಕುಡಿಯುವ ನೀರು ಒದಗಿಸುವುದು ಸವಾಲಾಗಿದೆ. ಹೀಗಾಗಿ ಈ ರೀತಿಯ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

ನಗರದಲ್ಲಿ ಮೂರು ಲಕ್ಷ ಬಲ್ಕ್ ಬಳಕೆದಾರರಿದ್ದು, ಶೇ 95ರಿಂದ 100ರಷ್ಟು ಕಾವೇರಿ ನೀರನ್ನು ಜಲಮಂಡಳಿ ವತಿಯಿಂದ ಪೂರೈಸಲಾಗುತ್ತಿದೆ. ಮಾರ್ಚ್ 15ರಿಂದ 31ರವರೆಗೆ ಶೇ 10 ಹಾಗೂ ಏಪ್ರಿಲ್ 1ರಿಂದ ಶೇ 20ರಷ್ಟನ್ನು ಕಡಿತಗೊಳಿಸಲಾಗುತ್ತದೆ. ಈ ಕಡಿತಗೊಳಿಸುವ ನೀರನ್ನು ಕೊಳೆಗೇರಿ, ಜನನಿಬಿಡ ಪ್ರದೇಶಗಳಿಗೆ ಸರಬರಾಜು ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು. 'ಕಾವೇರಿ-5ನೇ ಹಂತದ ಯೋಜನೆಯಿಂದ ಮೇ 15ರೊಳಗೆ ನೀರು ಸರಬರಾಜು ಆಗಲಿದೆ. ಅಲ್ಲಿಯವರೆಗೆ ನಮ್ಮೊಂದಿಗೆ ಸಹಕರಿಸಿ. ಕುಡಿಯಲು ಹೊರತುಪಡಿಸಿದಂತೆ ಇತರೆ ಉದ್ದೇಶಗಳಿಗೆ ಸಂಸ್ಕರಿಸಿದ ನೀರನ್ನು ಬಳಸಿ' ಎಂದು ಹೆಚ್ಚು ನೀರು ಬಳಸುವ ಗ್ರಾಹಕರಿಗೆ ಮನವಿ ಮಾಡಿದರು.

ಕೊಳವೆಬಾವಿ ಕೊರೆಯುವುದಕ್ಕೆ ಅನುಮತಿ ನೀಡಬೇಕೆಂದು ಕೆಲವರು ಕೋರಿದರು. ಅರ್ಜಿ ಸಲ್ಲಿಸಿದ ಕೂಡಲೇ ಅನುಮತಿ ನೀಡಲಾಗುವುದು ಎಂದು ಅಧ್ಯಕ್ಷರು ಭರವಸೆ ನೀಡಿದರು.



ನೀರಿನ ಸಂಪರ್ಕ ಹೊಂದಿರುವ ಬಲ್ಕ್ ಬಳಕೆಗಾರರೊಂದಿಗೆ ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಮಾತುಕತೆ ನಡೆಸಿದರು

ಕಟ್ಟಡ ನಿರ್ಮಾಣ ಭಾಗದ ಕೊಳವೆಬಾವಿ ಜಲಮಂಡಳಿ ಸುಪರ್ದಿಗೆ

ನಗರದಲ್ಲಿ 20 ಸಾವಿರ ಚದರ ಅಡಿ ಮೇಲ್ಪಟ್ಟು ಕಟ್ಟಡ ನಿರ್ಮಿಸುತ್ತಿರುವ ಕಟ್ಟಡ ಮಾಲೀಕರು, ಗುತ್ತಿಗೆದಾರರೊಂದಿಗೆ ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಸಭೆ ನಡೆಸಿ, ನಿರ್ಮಾಣಕ್ಕೆ ಕಡ್ಡಾಯವಾಗಿ ಸಂಸ್ಕರಿಸಿದ ನೀರು ಬಳಸಲು ಸೂಚನೆ ನೀಡಿದರು.

'ಪಾಶ್ಚಿಮಾತ್ಯ ದೇಶಗಳಲ್ಲಿ ಶುದ್ಧೀಕರಿಸಿದ ಪರಿಸರ ಸ್ನೇಹಿ ನೀರನ್ನು ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಬಳಸುತ್ತಿದ್ದು, ನಮ್ಮಲ್ಲಿಯೂ ಇದನ್ನು ಬಳಸುವುದು ಒಳ್ಳೆಯದು' ಎಂದು ಹೇಳಿದರು. ಸಂಸ್ಕರಿಸಿದ ನೀರು ಬಳಕೆಗೆ ಒಪ್ಪಿಗೆ ಸೂಚಿಸಿದ ಕಟ್ಟಡಗಳ ಮಾಲೀಕರು, ಕಟ್ಟಡ ನಿರ್ಮಾಣ ಪ್ರದೇಶದಲ್ಲಿರುವ ಕೊಳವೆಬಾವಿಗಳನ್ನು ಜಲಮಂಡಳಿ ಸುಪರ್ದಿಗೆ ನೀಡಲೂ ಸಮ್ಮತಿಸಿದರು.

ಈಜುಕೊಳಕ್ಕೆ ಕುಡಿಯುವ ನೀರು ನಿಷೇಧ

ನಗರದಲ್ಲಿರುವ ಈಜುಕೊಳಗಳಿಗೆ ಕುಡಿಯುವ ನೀರು ಬಳಸುವುದನ್ನು ನಿಷೇಧಿಸಿ ಜಲಮಂಡಳಿ ಆದೇಶ ಹೊರಡಿಸಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ– 1964ರ ಕಲಂ 33 ಮತ್ತು 34ರಂತೆ ಆದೇಶ ಹೊರಡಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿದರೆ, ಕಾಯ್ದೆಯ ಕಲಂ 109ರಂತೆ ₹5 ಸಾವಿರ ದಂಡ ವಿಧಿಸಲಾಗುವುದು. ಉಲ್ಲಂಘನೆ ಮರುಕಳಿಸಿದ್ದಲ್ಲಿ ಮತ್ತೆ ₹5 ಸಾವಿರ ದಂಡದ ಜೊತೆಗೆ ಹೆಚ್ಚುವರಿಯಾಗಿ ಪ್ರತಿದಿನ ₹500 ದಂಡ ವಿಧಿಸಲಾಗುತ್ತದೆ. ಈಜುಕೊಳದ ಮಾಲೀಕರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗುತ್ತದೆ. ಈಜುಕೊಳಗಳಲ್ಲಿ ಕುಡಿಯುವ ನೀರು ಬಳಸುವುದನ್ನು ನಾಗರಿಕರು ಕಂಡರೆ 1916ಗೆ ಕರೆ ಮಾಡಿ, ಮಾಹಿತಿ ನೀಡಬಹುದು ಎಂದು ಜಲಮಂಡಳಿ ಅಧ್ಯಕ್ಷರು ಆದೇಶದಲ್ಲಿ ತಿಳಿಸಿದ್ದಾರೆ.

ಜಾಗೃತ ಕರ್ನಾಟಕ ಸಂಘಟನೆಯಿಂದ 'ಕರ್ನಾಟಕ ಪಣ-ನಾಡ ಅರಿವು' ಕಾರ್ಯಕ್ರಮ

'ಅನಂತಕುಮಾರ್ ಹೆಗಡೆ ರಕ್ತದಲ್ಲಿಯೇ ದ್ವೇಷ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸದ ಅನಂತಕುಮಾರ ಹೆಗಡೆ ಮಾತ್ರವಲ್ಲ, ಆರ್‌ಎಸ್‌ಎಸ್ ವ್ಯಕ್ತಿಗಳ ರಕ್ತದಲ್ಲಿಯೇ ಬಿ.ಆರ್.ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧಿ ಬಗೆಗಿನ ದ್ವೇಷ ಅಂತರ್ಗತವಾಗಿದೆ' ಎಂದು ಸಾಮಾಜಿಕ ಕಾರ್ಯಕರ್ತ ಸುಧೀರ್ ಕುಮಾರ್ ಮುರೊಳ್ಳಿ ಹೇಳಿದರು.

ನಗರದಲ್ಲಿ ಮಂಗಳವಾರ ಜಾಗೃತ ಕರ್ನಾಟಕ ಸಂಘಟನೆ ಹಮ್ಮಿಕೊಂಡಿದ್ದ 'ಕರ್ನಾಟಕ ಪಣ-ನಾಡ ಅರಿವು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಆರಂಭದಲ್ಲಿ ನಾವೆಲ್ಲರೂ ಆರ್‌ಎಸ್‌ಎಸ್‌ನ ಕಾಲಾಳುಗಳಾಗಿದ್ದೆವು. ಮೆದುಳಿನ ಭಾಗವಾಗಿ ಎಂ.ಜಿ ಹೆಗಡೆ, ಲಕ್ಷ್ಮೀಶ ಗಬ್ಬಲಡ್ಕ ಅವರು ಕೆಲಸ ಮಾಡಿದ್ದರು. ಆದರೆ, ಆರ್‌ಎಸ್‌ಎಸ್ ನಮ್ಮ ನೆಲದ ಸಂಸ್ಕೃತಿಯನ್ನು ಬಿಂಬಿಸುವುದಿಲ್ಲ. ನಮ್ಮ ಧರ್ಮದ ವಕ್ತಾರರು, ಧರ್ಮ ರಕ್ಷಕರು ಅವರಲ್ಲ ಎಂಬುದು ತಿಳಿದು ಅಲ್ಲಿಂದ ಹೊರಬಂದೆವು' ಎಂದರು.

'ನಾವು ಭಾರತೀಯರು. ಪ್ರಪಂಚದ ಎಲ್ಲರನ್ನೂ ಸ್ವೀಕರಿಸಿದ್ದೇವೆ. ಇಲ್ಲಿನ ಶ್ರಮಿಕರು, ಮಹಿಳೆಯರು, ರೈತರು ನಮ್ಮ ಪಾಲಿನ ಭಾರತಾಂಬೆ ಆಗಿದ್ದಾರೆ. ಇವರ್‍ಯಾರೂ ಆರ್‌ಎಸ್‌ಎಸ್‌ನವರಿಗೆ ಬೇಕಿಲ್ಲ. ಕೇವಲ ಭಾರತಾಂಬೆಯ ಫೋಟೊ ತೋರಿಸುವುದು ಮಾತ್ರ ಆರ್‌ಎಸ್‌ಎಸ್‌ನ ದೇಶಭಕ್ತಿ' ಎಂದು ಟೀಕಿಸಿದರು.

ಕಾಂಗ್ರೆಸ್ ಮುಖಂಡ ನಿಕೇತ್ ರಾಜ್ ಮೌರ್ಯ ಮಾತನಾಡಿ, 'ಆಧ್ಯಾತ್ಮಿಕ ಅರಿವು ಇದ್ದವರು ಮಾತ್ರ ಆರ್‌ಎಸ್‌ಎಸ್‌ನಿಂದ ಹೊರಬರಲು ಸಾಧ್ಯ' ಎಂದು ಹೇಳಿದರು.

ಹೋರಾಟಗಾರ ಎಂ.ಜಿ.ಹೆಗಡೆ ಮಾತನಾಡಿ, 'ಆರ್‌ಎಸ್‌ಎಸ್ ವೇದ ಮತ್ತು ಉಪನಿಷತ್ತನ್ನು ಹೇಳುವುದಿಲ್ಲ. ಏಕೆಂದರೆ ಅದರಲ್ಲಿ ಬರೆದಿರುವುದು ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ವಿರುದ್ಧವಾಗಿದೆ' ಎಂದು ಪ್ರತಿಪಾದಿಸಿದರು.

ಹೋರಾಟಗಾರ ಲಕ್ಷ್ಮೀಶ ಗಬ್ಬಲಡ್ಕ ಮಾತನಾಡಿ, 'ನಮ್ಮೊಳಗಿನ ಬೆಂಕಿ ಕಡಿಮೆಯಾಗಿ ತಂಪು ಬಂದ ಕಾರಣ ನಾವು ಆರ್‌ಎಸ್‌ಎಸ್‌ನಿಂದ ಹೊರಗೆ ಬಂದಿದ್ದೇವೆ. ಆರ್‌ಎಸ್‌ಎಸ್‌ನಲ್ಲಿ ಆಟ, ಹಾಡು, ಚಾರಣ, ಬೆಳದಿಂಗಳ ಊಟ, ಕಥೆ ಹೆಸರಿನಲ್ಲಿ ಒಟ್ಟು ಸೇರಿಸಿ, ಒಂದು ಸಿದ್ಧಾಂತ ತುಂಬಿಸುವ ಕೆಲಸ ಶುರು ಆಗುತ್ತದೆ. ಅಲ್ಲಿ ಯೋಜಿತ ಕಾರ್ಯಪದ್ಧತಿ ಇದೆ. ಪೊಲೀಸ್, ನ್ಯಾಯಾಂಗದವರೆಗೂ ಇದು ಹಬ್ಬಿದೆ' ಎಂದು ವಿಷಾದ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ 'ಕರ್ನಾಟಕ ಪಣ' ಪ್ರತಿಜ್ಞೆ ಮಾಡಲಾಯಿತು. ಎಲ್.ಎನ್. ಮುಕುಂದ ರಾಜ್, ಹನುಮೇಗೌಡ, ಜಾಗೃತ ಕರ್ನಾಟಕ ರಾಜಶೇಖರ್ ಅಕ್ಕಿ, ಎಚ್.ವಿ.ವಾಸು, ಹೇಮಾ ವೆಂಕಟ್, ರಮೇಶ್ ಬೆಲ್ಲಂಕೊಂಡ, ಬಿ.ಸಿ ಬಸವರಾಜು ಉಪಸ್ಥಿತರಿದ್ದರು.



ಸಂವಿಧಾನ ಬದಲಾವಣೆ ವಿಚಾರವಾಗಿ ಸಂಸದ ಅನಂತಕುಮಾರ್ ಹೆಗಡೆ ನೀಡಿದ ಹೇಳಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು

ಹೆಗಡೆ ಹೇಳಿಕೆ ಖಂಡಿಸಿ ಪ್ರತಿಭಟನೆ

ಬೆಂಗಳೂರು: ಸಂವಿಧಾನ ಬದಲಾವಣೆ ವಿಚಾರವಾಗಿ ಸಂಸದ ಅನಂತಕುಮಾರ್ ಹೆಗಡೆ ನೀಡಿದ ಹೇಳಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಭವನದ ಮುಂಭಾಗದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ ನೂರಾರು ಕಾರ್ಯಕರ್ತರು, ಹೆಗಡೆ ಬಂಧನಕ್ಕೆ ಆಗ್ರಹಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. 'ದೇಶದ್ರೋಹಿ ಬಿಜೆಪಿ', 'ಸಂವಿಧಾನ ವಿರೋಧಿ ಬಿಜೆಪಿ' ಎಂದು ಧಿಕ್ಕಾರ ಕೂಗಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಮಾತನಾಡಿ, 'ಅನಂತಕುಮಾರ್ ಹೆಗಡೆ ಪ್ರತಿಬಾರಿಯೂ ಈ ರೀತಿ ಹೇಳಿಕೆ ಕೊಟ್ಟು ಗದ್ದಲ ಎಬ್ಬಿಸುತ್ತಾರೆ. ಚುನಾಯಿತ ಪ್ರತಿನಿಧಿಯಾಗಿ ಸಂಸತ್‌ನಲ್ಲಿ ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡಿರುವ ಅವರಿಗೆ ಸಂವಿಧಾನದ ಬಗ್ಗೆ ಮಾತನಾಡಲು ನೈತಿಕ ಹಕ್ಕು ಇಲ್ಲ' ಎಂದರು.

'ರಾಜಕೀಯವಾಗಿ ತಮ್ಮ ಪಕ್ಷದ ಒಬ್ಬ ನಾಯಕ ಮಾತನಾಡುತ್ತಿದ್ದರೆ ಬಿಜೆಪಿ ನಾಯಕರು ಸುಮ್ಮನೆ ಕುಳಿತಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು, ರಾಜ್ಯ ಘಟಕದ ಅಧ್ಯಕ್ಷರು ಈ ಬಗ್ಗೆ ಗಮನಹರಿಸಬೇಕು. ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತೇನೆಂದು ಪ್ರಮಾಣ ವಚನ ಸ್ವೀಕರಿಸಿರುವ ಹೆಗಡೆ, ಅದನ್ನು ಮರೆತಿರುವುದು ಶೋಭೆ ತರುವಂಥದ್ದಲ್ಲ' ಎಂದರು.

'ಅನಂತಕುಮಾರ್ ಹೆಗಡೆ ಮೇಲೆ ಕ್ರಮ ತೆಗೆದುಕೊಳ್ಳಲು ಬಿಜೆಪಿ ನಾಯಕರು ಹಿಂದೇಟು ಹಾಕಿದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ' ಎಂದೂ ಮುನಿಯಪ್ಪ ಎಚ್ಚರಿಕೆ ನೀಡಿದರು.

ಪಹಣಿಗಳನ್ನು ವಾರಸುದಾರರರಿಗೆ ಮರಳಿಸುವ ಕೆಲಸ ಮಾಡಲಿರುವ ಸರ್ಕಾರ

ಪೌತಿ ಪಹಣಿಗೆ ‘ಅದಾಲತ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೃತರ ಹೆಸರಿನಲ್ಲೇ (ಪೌತಿ) ಉಳಿದಿರುವ ಪಹಣಿಗಳನ್ನು (ಆರ್‌ಟಿಸಿ) ವಾರಸುದಾರರ ಹೆಸರಿಗೆ ವರ್ಗಾಯಿಸಲು ಶೀಘ್ರವೇ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದರು.

ವಿಕಾಸಸೌಧದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ನೋಂದಣಿ ಸಮಯದಲ್ಲಿನ ಅಕ್ರಮಗಳಿಗೆ ಕಡಿವಾಣ ಹಾಕಲು ಹಾಗೂ ಸರ್ಕಾರದ ಸೌಲಭ್ಯಗಳನ್ನು ರೈತರಿಗೆ ನೇರವಾಗಿ ತಲುಪಿಸಲು ಪಹಣಿಗಳೊಂದಿಗೆ ಆಧಾರ್ ಜೋಡಣೆ ಕಾರ್ಯ (ನನ್ನ ಆಸ್ತಿ ಅಭಿಯಾನ) ಆರಂಭಿಸಲಾಗಿದೆ. ಪ್ರಾಯೋಗಿಕವಾಗಿ ಸಂಗ್ರಹಿಸಿದ 19 ಲಕ್ಷ ಪಹಣಿಗಳಲ್ಲಿ 6 ಲಕ್ಷ ಪಹಣಿಗಳು ಮೃತರ ಹೆಸರಿನಲ್ಲೇ ಇರುವುದು ಗಮನಕ್ಕೆ ಬಂದಿದೆ. ರಾಜ್ಯದಲ್ಲಿನ 1.87 ಕೋಟಿ ಪಹಣಿ


ಕೃಷ್ಣ ಬೈರೇಗೌಡ

ಸಂಗ್ರಹಿಸಿದರೆ ಪೌತಿ ಪಹಣಿಗಳ ಸಂಖ್ಯೆಯ ನಿಖರ ಮಾಹಿತಿ ದೊರಕುತ್ತದೆ. ಮೃತರ ಹೆಸರಿನಲ್ಲಿ ಪಹಣಿ ಇದ್ದರೆ ದುರ್ಬಳಕೆಯಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ, ಲೋಕ್ ಅದಾಲತ್ ಮೂಲಕ ಇಂತಹ ಪಹಣಿಗಳನ್ನು ಅದರ ವಾರಸುದಾರರಿಗೆ ವರ್ಗಾಯಿಸುವ ಕೆಲಸವನ್ನು ಸರ್ಕಾರ ಮಾಡಲಿದೆ ಎಂದು ವಿವರ ನೀಡಿದರು.

ಆಸ್ತಿಗಳ ನೋಂದಣಿ ಸಮಯದಲ್ಲೂ ಆಧಾರ್ ಕಡ್ಡಾಯ ಮಾಡಲಾಗಿದೆ. ನೋಂದಣಿಯಾದ ತಕ್ಷಣವೇ ಆ ಆಸ್ತಿಗೆ ಆಧಾರ್ ಜೋಡಣೆಯಾಗಲಿದೆ. ಇದರಿಂದ ಆಸ್ತಿಗಳ ಕಬಳಿಕೆ, ವಂಚನೆ ತಪ್ಪಲಿದೆ. ಲೋಕಸಭಾ ಚುನಾವಣೆ ಘೋಷಣೆಯಾದರೂ ಆಧಾರ್ ಜೋಡಣೆ ಕಾರ್ಯ ನಡೆಯಲಿದೆ. ಗ್ರಾಮಾಧಿಕಾರಿಗಳು ಮನೆಮನೆಗೆ ತೆರಳಿ ಪಹಣಿ ಮತ್ತು ಆಧಾರ್ ಜೋಡಣೆ ಕಾರ್ಯ ಮಾಡುತ್ತಾರೆ. ಸಾರ್ವಜನಿಕರು ಸಮೀಪದ ಕಂದಾಯ ಕಚೇರಿಗೆ ತೆರಳಿ ಜೋಡಣೆ ಮಾಡಿಸಬಹುದು ಎಂದು ಹೇಳಿದರು.

ಪಹಣಿ ವಿವರ ಸ್ವಯಂಚಾಲಿತ ನಮೂದು

ಪಹಣಿಗಳಲ್ಲಿ ಆಗಾಗ ನಮೂದಾಗುವ ವಿವರಗಳಿಗೆ ಇನ್ನು ಮುಂದೆ ಸಂಬಂಧಿಸಿದ ಅಧಿಕಾರಿಗಳ ದೃಢೀಕರಣ ಅಗತ್ಯವಿಲ್ಲ. ಬ್ಯಾಂಕ್, ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ದಾಖಲೆ ಸಿದ್ಧವಾಗುತ್ತಿದ್ದಂತೆಯೇ ಪಹಣಿಯ ಇ–ಕಡತದಲ್ಲಿ ಕಾಣಿಸಿಕೊಳ್ಳಲಿದೆ.

ಬ್ಯಾಂಕ್ ಸಾಲ, ಸಾಲ ತೀರುವಳಿ, ಆಸ್ತಿ ವಿಭಾಗ, ಅಡಮಾನ, ಕಂದಾಯ ನ್ಯಾಯಾಲಯದ ಆದೇಶ ಮತ್ತಿತರ ಪ್ರಕ್ರಿಯೆಗಳು ನಡೆದಾಗ, ಸಣ್ಣಪುಟ್ಟ ಬದಲಾವಣೆಗಳಾದಾಗ ಅದರ ವಿವರಗಳನ್ನು ಪಹಣಿಯಲ್ಲಿ ದಾಖಲಿಸಲಾಗುತ್ತದೆ. ಹೀಗೆ ದಾಖಲಾಗುವ ಮೊದಲು ಕಂದಾಯ ನಿರೀಕ್ಷಕರ ದೃಢೀಕರಣ ಬೇಕಿತ್ತು. ಇದು ವಿಳಂಬ ಹಾಗೂ ಅನಗತ್ಯ ಅಲೆದಾಟಕ್ಕೆ ದಾರಿಯಾಗಿತ್ತು. ಸ್ವಯಂಚಾಲಿತ ವಿಧಾನದಲ್ಲಿ ಯಾರ ದೃಢೀಕರಣವೂ ಇಲ್ಲದೆ ಸಹಜವಾಗಿ ವಿವರಗಳು ದಾಖಲಾಗಲಿವೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಆರು ತಿಂಗಳಲ್ಲಿ 14.21 ಲಕ್ಷ ವಿವರಗಳು ನಮೂದಾಗಿವೆ. ಅವುಗಳಲ್ಲಿ ಶೇ 72ರಷ್ಟು ಯಾವುದೇ ಸಮಸ್ಯೆ ಇಲ್ಲದ ವಿವರಗಳಾಗಿವೆ. ಆಸ್ತಿ ಮಾರಾಟ, ದಾನಪತ್ರ, ಮರಣೋತ್ತರ ಪತ್ರ, ಕೋರ್ಟ್ ಆದೇಶಗಳು, ಮಾರಾಟ ಒಪ್ಪಂದ ಮತ್ತಿತರ ವಿಷಯಗಳಲ್ಲಿ ಜಮೀನಿನ ಮೂಲ ಮಾಲೀಕರಿಗೆ ಆಗುವ ಅನ್ಯಾಯ, ಮೋಸ ತಪ್ಪಿಸಲು ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ. ಇಂತಹ ಶೇ 28 ಅಂಶಗಳನ್ನು ಸ್ವಯಂಚಾಲಿತ ವಿಧಾನದಿಂದ ಹೊರಗಿಡಲಾಗಿದೆ ಎಂದರು.

ಧನಸಹಾಯ: ಮೊದಲ ಕಂತು ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2023–24ನೇ ಸಾಲಿಗೆ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ಮೊದಲ ಕಂತಿನ ಧನಸಹಾಯ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ, ಸಾಮಾನ್ಯ ವರ್ಗದಲ್ಲಿ ಬೆಂಗಳೂರು, ಮೈಸೂರು, ಕಲಬುರಗಿ ಹಾಗೂ ಬೆಳಗಾವಿ ವಿಭಾಗವಾರು ಸಂಘ–ಸಂಸ್ಥೆಗಳ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ.

ಇದೇ ಮೊದಲ ಬಾರಿ ಕಂತುವಾರು ಅನುದಾನ ಮಂಜೂರು ಮಾಡಲಾಗಿದೆ. ಜಿಲ್ಲಾ ಸಮಿತಿ ಶಿಫಾರಸು ಮಾಡಿದ ಅನುದಾನದಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯ ಅಡಿ ಆಯ್ಕೆಯಾದ ಸಂಘ–ಸಂಸ್ಥೆಗಳಿಗೆ ಮೊದಲ ಕಂತಿನಲ್ಲಿ ಶೇ 31ರಷ್ಟು, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಆಯ್ಕೆಯಾದ ಸಂಘ–ಸಂಸ್ಥೆಗಳಿಗೆ ಮೊದಲ ಕಂತಿನಲ್ಲಿ ಶೇ 33ರಷ್ಟು, ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದ ಸಂಘ–ಸಂಸ್ಥೆಗಳಿಗೆ ಮೊದಲ ಕಂತಿನಲ್ಲಿ ಶೇ 40ರಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ.

ಪರಿಶಿಷ್ಟ ಜಾತಿ ಉಪಯೋಜನೆಯ ಅಡಿಯಲ್ಲಿ ಬೆಂಗಳೂರು ವಿಭಾಗದ ಅಡಿ 230 ಸಂಘ–ಸಂಸ್ಥೆಗಳಿಗೆ ಜಿಲ್ಲಾ ಸಮಿತಿ ಶಿಫಾರಸು ಮಾಡಿದ ₹3.13 ಕೋಟಿಯಲ್ಲಿ ₹97.10 ಲಕ್ಷ ಮಂಜೂರು ಮಾಡಲಾಗಿದೆ.

ಮೈಸೂರು ವಿಭಾಗದ ಅಡಿ 60 ಸಂಘ–ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ₹1.35 ಕೋಟಿಯಲ್ಲಿ ₹41.85 ಲಕ್ಷ, ಕಲಬುರಗಿ ವಿಭಾಗದ ಅಡಿ 186 ಸಂಘ–ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ₹3.35 ಕೋಟಿಯಲ್ಲಿ ₹1.03 ಕೋಟಿ, ಬೆಳಗಾವಿ ವಿಭಾಗದ ಅಡಿ 43 ಸಂಘ–ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ₹1.03 ಕೋಟಿಯಲ್ಲಿ ₹31.93 ಲಕ್ಷ ಮಂಜೂರು ಮಾಡಲಾಗಿದೆ.

ಪರಿಶಿಷ್ಟ ಪಂಗಡ ಉಪಯೋಜನೆಯ ಅಡಿ ಬೆಂಗಳೂರು ವಿಭಾಗದಡಿ 42 ಸಂಘ–ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ₹59.50 ಲಕ್ಷದಲ್ಲಿ ₹19.63 ಲಕ್ಷ, ಮೈಸೂರು ವಿಭಾಗದ ಅಡಿ ಎಂಟು ಸಂಘ–ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ₹ 24.50 ಲಕ್ಷದಲ್ಲಿ ₹ 8.08 ಲಕ್ಷ, ಕಲಬುರಗಿ ವಿಭಾಗದಿಂದ 19 ಸಂಘ–ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ₹43.50 ಲಕ್ಷದಲ್ಲಿ ₹14.35 ಲಕ್ಷ, ಬೆಳಗಾವಿ ವಿಭಾಗದಿಂದ 28 ಸಂಘ–ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ₹77.50 ಲಕ್ಷದಲ್ಲಿ ₹25.57 ಲಕ್ಷ ಮೊತ್ತವನ್ನು ಇಲಾಖೆಯು ಮಂಜೂರು ಮಾಡಿದೆ.

ಸಾಧಕಿಯರಿಗೆ ರಾಜಲಕ್ಷ್ಮಿ ಬರಗೂರು ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿ ಮಂಗಳವಾರ ಬರಗೂರು ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಮಾಜಿಕ ಹೋರಾಟಗಾರ್ತಿ ಕೆ.ನೀಲಾ ಹಾಗೂ ಅಲೆಮಾರಿ ಜನಾಂಗದ ಹೋರಾಟಗಾರ್ತಿ ರಾಮಕ್ಕ ಅವರಿಗೆ ರಾಜಲಕ್ಷ್ಮಿ ಬರಗೂರು ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ‘ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆ.ನೀಲಾ ಅವರು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ನಿರ್ಲಕ್ಷ್ಯಕ್ಕೆ ಒಳಗಾದವರಲ್ಲಿ ಜಾಗೃತಿ ಮೂಡಿಸುವುದು ಕಷ್ಟದ ಕೆಲಸ. ಆದರೆ, ಯಾವುದಕ್ಕೂ ಜಗ್ಗದೆ ನೀಲಾ ಸಾಮಾಜಿಕ ಪರಿವರ್ತನೆ ತರುತ್ತಿದ್ದಾರೆ’ ಎಂದು ಹೇಳಿದರು.

‘ನೀಲಾ ಅವರ ಹೋರಾಟಗಳು ಎಲ್ಲರಿಗೂ ಸ್ಫೂರ್ತಿ ಹಾಗೂ ಪ್ರೇರಣೆ’ ಎಂದು ಬಣ್ಣಿಸಿದರು.

‘ಅಲೆಮಾರಿ ಸಮುದಾಯದ ಮಕ್ಕಳಿಗೆ ಸರಿಯಾದ ಶಿಕ್ಷಣ ಲಭಿಸುತ್ತಿಲ್ಲ. ರಾಮಕ್ಕ ಅವರು ಅಲೆಮಾರಿ ಮಕ್ಕಳಿಗಾಗಿಯೇ ಟೆಂಟ್‌ಶಾಲೆ ತೆರೆದು, ಶಿಕ್ಷಣ ಕೊಡಿಸುವ ಮೂಲಕ ಪರಿವರ್ತನೆ ತರುತ್ತಿದ್ದಾರೆ’ ಎಂದು ಹೇಳಿದರು.

‘ಮಹಿಳೆಗೆ ಸಮಾಜದಲ್ಲಿ ಅನೇಕ ಸವಾಲು ಎದುರಾಗುತ್ತಿವೆ. ಅವುಗಳನ್ನು ಮೆಟ್ಟಿನಿಂತು ಸಾಧನೆ ಮಾಡುತ್ತಿದ್ದಾಳೆ. ಈ ಸಾಧನೆಯಿಂದ ನೆಮ್ಮದಿಯೂ ದೊರೆಯುತ್ತಿದೆ. ಪುರುಷನ ಸಾಧನೆಯ ಹಿಂದೆ ಮಹಿಳೆಯೊಬ್ಬಳು ಸಾಕಷ್ಟು ಪರಿಶ್ರಮ ಹಾಕುತ್ತಿದ್ದಾಳೆ’ ಎಂದು ಹೇಳಿದರು.

ಪ್ರತಿಷ್ಠಾನದ ಅಧ್ಯಕ್ಷ ರಾಜಪ್ಪ ದಳವಾಯಿ, ವಕೀಲ ಸಿ.ಎಚ್. ಹನುಮಂತರಾಯ, ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀನಿವಾಸ್ ಹಾಜರಿದ್ದರು.


ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆ.ನೀಲಾ ಮತ್ತು ರಾಮಕ್ಕ ಅವರಿಗೆ ‘ರಾಜಲಕ್ಷ್ಮಿ ಬರಗೂರು’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಸುಂದರ್ ರಾಜ್ ಅರಸ್, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ಆಕಾಂಕ್ಷ್, ಸಾಹಿತಿ ಬರಗೂರು ರಾಮಚಂದ್ರಪ್ಪ, ವಕೀಲ ಸಿ.ಎಚ್. ಹನುಮಂತರಾಯ, ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಶ್ರೀನಿವಾಸ್ ಪಾಲ್ಗೊಂಡಿದ್ದರು. – ಪ್ರಜಾವಾಣಿ ಚಿತ್ರ

ಮಾಡಾಳ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆಗೆ ರಾಸಾಯನಿಕ ತೈಲ ಪೂರೈಸುವ ಗುತ್ತಿಗೆಯ ಕಾರ್ಯಾದೇಶ ನೀಡಲು ಲಂಚಕ್ಕೆ ಬೇಡಿಕೆಯಿಟ್ಟ ಆರೋಪದ ಅಡಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸಿದ ಹೈಕೋರ್ಟ್ ಆದೇಶದ ವಿರುದ್ಧ ಲೋಕಾಯುಕ್ತ ಸಂಸ್ಥೆ ಸಲ್ಲಿಸಿದ ಮೇಲ್ಮನವಿಯ ಸಂಬಂಧ ಚನ್ನಗಿರಿ ಕ್ಷೇತ್ರದ ಮಾಜಿ ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ನೋಟಿಸ್ ಜಾರಿ ಮಾಡಿದೆ.


ಕೆ. ಮಾಡಾಳ್ ವಿರೂಪಾಕ್ಷಪ್ಪ

ನಗರದಲ್ಲಿ ಇಂದು

ಸಂತ ನಿಳೋಬ ಮಹಾರಾಜರವರ ಸಪ್ತಾಹ ಮಹೋತ್ಸವ: ಆಯೋಜನೆ ಹಾಗೂ ಸ್ಥಳ: ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ಸುಬದಾರ್ ಛತ್ರಂ ರಸ್ತೆ ಕ್ರಾಸ್, ಗಾಂಧಿನಗರ, ಬೆಳಿಗ್ಗೆ 5ರಿಂದ

ಅನ್ನಪೂರ್ಣೇಶ್ವರಿ ಅಮ್ಮನವರ ಉತ್ಸವ: ವಿವಿಧ ಪೂಜಾ ಕಾರ್ಯಕ್ರಮ, ಆಯೋಜನೆ: ಅನ್ನಪೂರ್ಣೇಶ್ವರಿ ಸೇವಾ ಸಮಿತಿ, ಸ್ಥಳ: ಅಶ್ವತ್ಥಕಟ್ಟೆ ಸಹಿತಾ ಅನ್ನಪೂರ್ಣೇಶ್ವರಿ ದೇವಸ್ಥಾನ, ಮಕ್ಕಳ ಬಸವಣ್ಣಗುಡಿ ಬೀದಿ, ನಗರ್ತರಪೇಟೆ ಅಡ್ಡ ರಸ್ತೆ, ಬೆಳಿಗ್ಗೆ 8ರಿಂದ

ಸತೀಶ್ ಜಾರಕಿಹೊಳಿ ಅಭಿನಂದನಾ ಸಮಾರಂಭ: ಉದ್ಘಾಟನೆ: ಶಿವರಾಜ್ ಎಸ್. ತಂಗಡಗಿ, ಅಧ್ಯಕ್ಷತೆ: ಎಚ್. ಆಂಜನೇಯ, ಆಶಯ ನುಡಿ: ಯತೀಂದ್ರ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಪಿ.ಎಂ. ನರೇಂದ್ರಸ್ವಾಮಿ, ನಸೀರ್ ಅಹ್ಮದ್, ಕಾಂತ ನಾಯಕ್, ಉಪಸ್ಥಿತಿ: ಸತೀಶ್ ಜಾರಕಿಹೊಳಿ, ಆಯೋಜನೆ: ಕರ್ನಾಟಕ ರಾಜ್ಯ ಎಸ್.ಸಿ., ಎಸ್.ಟಿ. ಗುತ್ತಿಗೆದಾರರ ಸಂಘ, ಸ್ಥಳ: ಎಡಿಎ ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಎದುರು, ಜೆ.ಸಿ. ರಸ್ತೆ, ಬೆಳಿಗ್ಗೆ 10.30


ಸತೀಶ ಜಾರಕಿಹೊಳಿ

ಮಾಸದ ಮಾತು: ‘ಗಂಗ, ಕದಂಬರು ಮತ್ತು ರಾಷ್ಟ್ರಕೂಟರ ಸಾಮ್ರಾಜ್ಯದ ವಿಶೇಷತೆ’ ಬಗ್ಗೆ ಉಪನ್ಯಾಸ: ದೇವರಕೊಂಡಾರೆಡ್ಡಿ, ಮುಖ್ಯ ಅತಿಥಿ: ಎಸ್. ರಾಜುಹಾಸನ್, ಆಯೋಜನೆ ಹಾಗೂ ಸ್ಥಳ: ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಮಧ್ಯಾಹ್ನ 3.30

ಸಾಂಸ್ಕೃತಿಕ ರಂಗೋತ್ಸವ ಪ್ರಯುಕ್ತ ನಾಟಕೋತ್ಸವ: ನಾಟಕ: ‘ವರಭ್ರಷ್ಟ’, ನಿರ್ದೇಶನ: ಡಿ. ವೆಂಕಟರಮಣಯ್ಯ, ಆಯೋಜನೆ: ರಂಗ ಕಳಸ ಕಲಾವಿದರು, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಸಂಜೆ 5.45

ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಿದ ಪೊಲೀಸರು

ಉದ್ಯಮಿ ಹತ್ಯೆ: ಕಾರಿನಲ್ಲಿ ಮೃತದೇಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿ ಕೃಷ್ಣ ಯಾದವ್ (55) ಎಂಬುವವರನ್ನು ಹತ್ಯೆ ಮಾಡಿ ಕಾರಿನಲ್ಲಿ ಮೃತದೇಹ ಇರಿಸಿ ಆರೋಪಿಗಳು ಪರಾರಿಯಾಗಿದ್ದು, ಈ ಬಗ್ಗೆ ಯಲಹಂಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆಂಧ್ರಪ್ರದೇಶದ ಕೃಷ್ಣ, 20 ವರ್ಷಗಳಿಂದ ಮಾರುತಿನಗರದಲ್ಲಿ ನೆಲೆಸಿದ್ದರು. ಬಾಗಲೂರು ವೃತ್ತ ಬಳಿ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ್ದ ಕಾರಿನಲ್ಲಿ ಅವರ ಮೃತದೇಹ ಮಂಗಳವಾರ ಪತ್ತೆಯಾಗಿದೆ. ಮಗ ನೀಡಿರುವ ದೂರು ಆಧರಿಸಿ ಕೊಲೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಹರಿತವಾದ ಆಯುಧದಿಂದ ಇರಿದು ಕೊಲೆ: ‘ಕೆಲಸವಿರುವುದಾಗಿ ಹೇಳಿ ಸೋಮವಾರ ಮನೆಯಿಂದ ಹೊರಗೆ ಬಂದಿದ್ದ ಕೃಷ್ಣ, ರಾತ್ರಿ ವಾಪಸು ಹೋಗಿರಲಿಲ್ಲ. ಬೆಳಿಗ್ಗೆ ಬರಬಹುದೆಂದು ಮನೆಯವರು ಸುಮ್ಮನಾಗಿದ್ದರು. ಆದರೆ, ಬೆಳಿಗ್ಗೆ ಕೃಷ್ಣ ಅವರ ಮೃತದೇಹ ಸಿಕ್ಕಿದೆ’ ಎಂದು ಪೊಲೀಸರು ತಿಳಿಸಿದರು.

‘ಕೃಷ್ಣ ಅವರು ತಮ್ಮ ಕಾರಿನಲ್ಲಿ ಇಬ್ಬರು ವ್ಯಕ್ತಿಗಳ ಜೊತೆ ಹೊರಟಿದ್ದರೆಂದು ಗೊತ್ತಾಗಿದೆ. ಅದೇ ವ್ಯಕ್ತಿಗಳು, ಕೃಷ್ಣ ಅವರನ್ನು ಹರಿತವಾದ ಆಯುಧದಿಂದ ಇರಿದು ಕೊಂದಿದ್ದಾರೆ. ನಂತರ, ಮೃತದೇಹ ಸಮೇತ ಕಾರನ್ನು ಬಾಗಲೂರು ವೃತ್ತದ ಬಳಿ ನಿಲ್ಲಿಸಿ ಪರಾರಿಯಾಗಿರುವ ಮಾಹಿತಿ ಇದೆ. ಮೃತದೇಹದ ಮೇಲಿರುವ ಗಾಯದ ಗುರುತಿನಿಂದ ಇದೊಂದು ಕೊಲೆ ಎಂಬುದು ಗೊತ್ತಾಯಿತು’ ಎಂದು ಹೇಳಿದರು.


ಕೃಷ್ಣ ಯಾದವ್

‘ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಗುರುತಿಸಿಕೊಂಡಿದ್ದ ಕೃಷ್ಣ, ಹಲವು ನಿವೇಶನಗಳನ್ನು ಅಭಿವೃದ್ಧಿಪಡಿಸಿದ್ದರು. ಕೆಲವರ ಜೊತೆ ವೈಷಮ್ಯ ಹೊಂದಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

₹ 44 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ಫೆಬ್ರುವರಿಯಲ್ಲಿ ₹44 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಮೂವರು ವಿದೇಶಿಯರು ಸೇರಿ 6 ಮಂದಿಯನ್ನು ಬಂಧಿಸಿದ್ದಾರೆ.

‘79 ಕೆ.ಜಿ 98 ಗ್ರಾಂ ಗಾಂಜಾ, 2 ಕೆ.ಜಿ 198 ಗ್ರಾಂ ಅಫೀಮು, 1 ಕೆ.ಜಿ 25 ಗ್ರಾಂ ಕೊಕೇನ್, 1 ಕೆ.ಜಿ 814 ಗ್ರಾಂ ಎಂಡಿಎಂಎ, 1273 ಎಕ್ಸ್‌ಟೆಸ್ಸಿ ಮಾತ್ರೆಗಳು ಹಾಗೂ 1 ಎಲ್‌ಎಸ್‌ಡಿ ಕಾಗದ ಚೂರು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಅರೋಪದ ಅಡಿ ಕಾರು ಏಜೆನ್ಸಿಯೊಂದರ ವ್ಯವಸ್ಥಾಪಕನನ್ನು ಬಂಧಿಸಲಾಗಿದೆ. ರಾಜಗೋಪಾಲ ನಗರ ಠಾಣೆ ವ್ಯಾಪ್ತಿಯಲ್ಲಿ ಡೆಲಿವರಿ ಬಾಯ್‌ನನ್ನು ಸೆರೆ ಹಿಡಿಯಲಾಗಿದೆ’ ಎಂದರು.

‘ಮೂವರು ವಿದೇಶಿ ಪ್ರಜೆಗಳು, ವಿದ್ಯಾಭ್ಯಾಸ ಹಾಗೂ ವ್ಯಾಪಾರ ವೀಸಾದಡಿ ನಗರಕ್ಕೆ ಬಂದು ಡ್ರಗ್ಸ್ ಮಾರುತ್ತಿದ್ದರು’ ಎಂದರು.

ನಾಯಿ ಬೊಗಳಿದ್ದಕ್ಕೆ ಲೈಂಗಿಕ ದೌರ್ಜನ್ಯ

ಸಾಕು ನಾಯಿ ಬೊಗಳಿದ್ದ ವಿಚಾರಕ್ಕೆ ಗಲಾಟೆ ಮಾಡಿ ಯುವತಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದ ಅಡಿ ಶಂಕರ್ ಎಂಬುವವರನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿ

‘ಬಿಹಾರದ ಶಂಕರ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಟೈಲ್ಸ್ ಜೋಡಿಸುವ ಕೆಲಸ ಮಾಡುತ್ತಿದ್ದ. ಯುವತಿ ನೀಡಿದ್ದ ದೂರು ಆಧರಿಸಿ ಶಂಕರ್‌ನನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಪೋಷಕರ ಜೊತೆ ಯುವತಿ ವಾಸವಿದ್ದಾರೆ. ಅವರ ಮನೆ ಸಮೀಪದಲ್ಲೇ ಆರೋಪಿ ಶಂಕರ್ ನೆಲೆಸಿದ್ದಾನೆ. ಮಾರ್ಚ್ 7ರಂದು ರಾತ್ರಿ ಶಂಕರ್ ಸ್ನೇಹಿತರ ಜೊತೆ ತನ್ನ ಮನೆಗೆ ಬಂದಿದ್ದ. ಇದೇ ಸಂದರ್ಭದಲ್ಲಿ ಯುವತಿ ಮನೆಯ ಸಾಕು ನಾಯಿ ಬೊಗಳಿತ್ತು’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಸಾಕು ನಾಯಿಗೆ ಹೊಡೆಯಲು ಹೋಗಿದ್ದ ಶಂಕರ್, ಅದನ್ನು ಪ್ರಶ್ನಿಸಿದ್ದ ಯುವತಿಯ ತಂದೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಯತ್ನಿಸಿದ್ದ. ತಂದೆಯ ರಕ್ಷಣೆಗೆ ಹೋಗಿದ್ದ ಯುವತಿಯನ್ನು ಎಳೆದಾಡಿ ದೌರ್ಜನ್ಯ ಎಸಗಿದ್ದನೆಂದು ಗೊತ್ತಾಗಿದೆ’ ಎಂದರು.

‘ವಿದ್ಯಾರ್ಥಿ ಮಾರ್ಷಲ್’: ನಗರದಾದ್ಯಂತ ವಿಸ್ತರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಲೆ-ಕಾಲೇಜು ಬಳಿ ಡ್ರಗ್ಸ್ ಹಾಗೂ ತಂಬಾಕು ಉತ್ಪನ್ನಗಳ ಅಕ್ರಮ ಮಾರಾಟ ತಡೆಯುವ ಉದ್ದೇಶದಿಂದ ಪ್ರಾಯೋಗಿಕವಾಗಿ ರೂಪಿಸಿರುವ ‘ವಿದ್ಯಾರ್ಥಿ ಮಾರ್ಷಲ್’ ಪರಿಕಲ್ಪನೆಯನ್ನು ನಗರದಾದ್ಯಂತ ವಿಸ್ತರಿಸಲಾಗುವುದು’ ಎಂದು ಪೊಲೀಸ್ ಕಮಿಷನರ್ ಬಿ.ದಯಾನಂದ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಗರದ 24 ಕಾಲೇಜುಗಳಲ್ಲಿ ವಿದ್ಯಾರ್ಥಿ ಮಾರ್ಷಲ್‌ಗಳು ಇದ್ದಾರೆ. ಮಾರ್ಚ್ ಅಂತ್ಯಕ್ಕೆ ಎಲ್ಲ ಕಾಲೇಜುಗಳಲ್ಲಿ ವಿದ್ಯಾರ್ಥಿ ಮಾರ್ಷಲ್ ನಿಯೋಜಿಸಲಾಗುವುದು’ ಎಂದರು.

‘ಡ್ರಗ್ಸ್ ಹಾಗೂ ತಂಬಾಕು ಉತ್ಪನ್ನಗಳ ವಿರುದ್ಧ ವಿದ್ಯಾರ್ಥಿ ಮಾರ್ಷಲ್‌ಗಳು, ಶಾಲೆ-ಕಾಲೇಜಿನ ಒಳಗೆ ಜಾಗೃತಿ ಮೂಡಿಸುತ್ತಿದ್ದಾರೆ. ಅಕ್ರಮ ಮಾರಾಟದ ಬಗ್ಗೆಯೂ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದಾರೆ. ಇದರಿಂದ ಡ್ರಗ್ಸ್ ಮಾರಾಟ ತಡೆಯಲು ಸಾಧ್ಯವಾಗಲಿದೆ’ ಎಂದು ಅವರು ಹೇಳಿದರು.

‘ವಿದ್ಯಾರ್ಥಿ ಮಾರ್ಷಲ್‌ಗಳಿಗೆ ಪೊಲೀಸ್ ಇಲಾಖೆಯಿಂದ ಅಗತ್ಯವಿರುವ ಎಲ್ಲ ತರಬೇತಿ ನೀಡಲಾಗುತ್ತಿದೆ. ಪೊಲೀಸರ ಕೆಲಸಕ್ಕೂ ವಿದ್ಯಾರ್ಥಿ ಮಾರ್ಷಲ್‌ಗಳು ನೆರವು ನೀಡಲಿದ್ದಾರೆ’ ಎಂದು ದಯಾನಂದ್ ಅವರು ತಿಳಿಸಿದರು.

ಕಳ್ಳತನ: ಲ್ಯಾಬ್ ಟೆಕ್ನಿಷಿಯನ್ ಬಂಧನ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯ ಕಂಪನಿಯೊಂದರಲ್ಲಿ ನಡೆದಿದ್ದ ಕಳ್ಳತನ ಸಂಬಂಧ ಇಬ್ಬರು ಲ್ಯಾಬ್ ಟೆಕ್ನಿಷಿಯನ್ ಸೇರಿದಂತೆ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಕಂಪನಿಯಲ್ಲಿದ್ದ ಲ್ಯಾಪ್‌ಟಾಪ್ ಹಾಗೂ ಇತರೆ ಸಾಮಗ್ರಿಗಳನ್ನು ಕಳ್ಳತನ ಮಾಡಿದ್ದ ಬಗ್ಗೆ ದೂರು ದಾಖಲಾಗಿತ್ತು. ಕೆಲ ಪುರಾವೆ ಆಧರಿಸಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡರು’ ಎಂದು ಪೊಲೀಸರು ಹೇಳಿದರು.

‘ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಲ್ಯಾಬ್ ಟೆಕ್ನಿಷಿಯನ್‌ಗಳು, ಕಳ್ಳತನಕ್ಕೆ ಸಂಚು ರೂಪಿಸಿದ್ದರು. ಮೂವರು ಆರೋಪಿಗಳ ಸಹಾಯ ಪಡೆದಿದ್ದರು. ಐವರು ಸೇರಿ ಕಂಪನಿಯಲ್ಲಿದ್ದ ಲ್ಯಾಪ್‌ಟಾಪ್ ಹಾಗೂ ಇತರೆ ಸಾಮಗ್ರಿಗಳನ್ನು ಕದ್ದೊಯ್ದಿದ್ದರು. ಇವರಿಂದ ₹ 16 ಲಕ್ಷ ಮೌಲ್ಯದ 29 ಲ್ಯಾಪ್‌ಟಾಪ್ ಹಾಗೂ 59 ಕ್ರೋಮ್ ಬಾಕ್ಸ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

ಜಾತ್ರೆಗಳಲ್ಲಿ ಸರಗಳವು: ಬಂಧನ

ಜಾತ್ರೆಗಳು ಹಾಗೂ ಆಭರಣ ಮಳಿಗೆಯಲ್ಲಿ ಚಿನ್ನದ ಸರ ಕದಿಯುತ್ತಿದ್ದ ಆರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆಭರಣ ಮಳಿಗೆಯೊಂದರಲ್ಲಿ ಚಿನ್ನದ ಸರ ಕಳ್ಳತನವಾಗಿರುವ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡು ಆರೋಪಿಗಳಾದ ಜಯದುಂಬಿ, ಶೌಕತ್, ಚುಮನ್‌ಸಾಬ್, ಮುನ್ನಾ ಸೇರಿದಂತೆ ಆರು ಮಂದಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು, ಚಿತ್ರದುರ್ಗದ ಭರಮಸಾಗರದವರು. ಇವರಿಂದ ₹16 ಲಕ್ಷ ಮೌಲ್ಯದ 383 ಗ್ರಾಂ ತೂಕದ ಚಿನ್ನದ ಸರಗಳನ್ನು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು. ‘ಬನಶಂಕರಿ ಹಾಗೂ ಇತರೆ ಜಾತ್ರೆಗಳಲ್ಲಿ ಓಡಾಡುತ್ತಿದ್ದ ಆರೋಪಿಗಳು, ಮಹಿಳೆಯರ ಚಿನ್ನದ ಸರ ಕದಿಯುತ್ತಿದ್ದರು. ಜಾತ್ರೆಗಳು ಇಲ್ಲದ ಸಂದರ್ಭದಲ್ಲಿ, ಆಭರಣ ಮಳಿಗೆಯಲ್ಲಿ ಕಳ್ಳತನ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಲೈಂಗಿಕ ದೌರ್ಜನ್ಯ: ಸಂತ್ರಸ್ತೆ ಆತ್ಮಹತ್ಯೆ


ಪ್ರಜಾವಾಣಿ ವಾರ್ತೆ

ಬಿಳಿಕೆರೆ (ಮೈಸೂರು ಜಿಲ್ಲೆ): ಲೈಂಗಿಕ ದೌರ್ಜನ್ಯ ಸಂತ್ರಸ್ತೆಯೊಬ್ಬರು ಹೋಬಳಿಯ ಗ್ರಾಮವೊಂದರಲ್ಲಿ ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೇರೊಬ್ಬರೊಂದಿಗೆ ಮದುವೆ ನಿಶ್ಚಯವಾಗಿದ್ದ ಅವರನ್ನು ಮದುವೆಯಾಗುವುದಾಗಿ ನಂಬಿಸಿ ಫೆ.14ರಂದು ಆರೋಪಿ ವೇಣುಗೋಪಾಲ್ (35) ಕೇರಳಕ್ಕೆ ಕರೆದೊಯ್ದು, ಲೈಂಗಿಕ ದೌರ್ಜನ್ಯ ಎಸಗಿದ್ದ. ಬಳಿಕ ನಂಜನಗೂಡು ಬಸ್ ನಿಲ್ದಾಣದಲ್ಲಿ ಬಿಟ್ಟು ಪರಾರಿಯಾಗಿದ್ದ.

ಸಂತ್ರಸ್ತೆಯು ಫೆ.21ರಂದು ದೂರು ನೀಡಿದ್ದರು. ಆರೋಪಿ ಹಾಗೂ ಕೃತ್ಯಕ್ಕೆ ಸಹಕರಿಸಿದ್ದ ಮಹೇಶ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಆರೋಪಿಗಳು ತಲೆಮರೆಸಿಕೊಂಡಿದ್ದರು ಎಂದು ಬಿಳಿಕೆರೆ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತೆಯನ್ನು ಮೈಸೂರಿನ ಮಹಿಳಾ ಸಾಂತ್ವನ ಕೇಂದ್ರವೊಂದರಲ್ಲಿ ಇರಿಸಲಾಗಿತ್ತು. ಯುವತಿಯ ಪೋಷಕರು ಸೋಮವಾರ ಅಲ್ಲಿಂದ ಕರೆದೊಯ್ದಿದ್ದರು. ಮಂಗಳವಾರ ಬೆಳಿಗ್ಗೆ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.





ಕೃತಕ ಬುದ್ಧಿಮತ್ತೆಯ ಬೆನ್ನೆಲುಬು ನ್ಯೂರಲ್ ನೆಟ್‌ವರ್ಕ್

ಗಣೇಶ್ ಭಟ್ ನೆಲಮಾವ್


ಕಳೆದ ಒಂದೆರಡು ವರ್ಷಗಳಲ್ಲಿ ತಂತ್ರಜ್ಞಾನ ವಲಯದಲ್ಲಿ ಅತಿ ಹೆಚ್ಚು ಸದ್ದು ಮಾಡಿದ ವಿಷಯವೆಂದರೆ ಎ.ಐ., ಅರ್ಥಾತ್ 'ಆರ್ಟಿಫಿಷಿಯಲ್ ಇಂಟೆಲಿಜೆನ್ಸ್' ಅಥವಾ 'ಕೃತಕ ಬುದ್ಧಿಮತ್ತೆ'. 'ಓಪನ್ ಎ ಐ ಸಂಸ್ಥೆ' ಚಾಟ್ ಜಿಪಿಟಿಯನ್ನು ಬಿಡುಗಡೆ ಮಾಡಿದ ನಂತರವಂತೂ ಜಗತ್ತಿಗೆ ಎ.ಐ. ಸನ್ನಿ ಹಿಡಿದಂತೆ ಆಗಿದ್ದು ಸುಳ್ಳಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ನ್ಯೂರಲ್ ನೆಟ್‌ವರ್ಕ್ , ಮಷಿನ್ ಲರ್ನಿಂಗ್, ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ (ಐಐಒ) ಮುಂತಾದ ಶಬ್ದಗಳೂ ಸದ್ದು ಮಾಡಿದವು. ಹಾಗಾದರೆ ಇವೆಲ್ಲ ಏನು ಎಂಬ ಪ್ರಶ್ನೆ ನಿಮ್ಮ ಮನಸ್ಸಿನಲ್ಲಿ ಮೂಡಿರಬಹುದು. ಪ್ರಸ್ತುತ ಎಐ ಕ್ಷೇತ್ರದ ಬೆನ್ನೆಲುಬಾಗಿರುವ ನ್ಯೂರಲ್ ನೆಟ್‌ವರ್ಕ್ ಎಂದರೇನು ಎಂಬುದನ್ನು ಅರಿತುಕೊಳ್ಳುವ ಪ್ರಯತ್ನ ಮಾಡೋಣ.

ನಮ್ಮ ಮಿದುಳು ಕೆಲಸ ಮಾಡುವ ರೀತಿಯನ್ನು ಅನುಕರಿಸಿಯೆ ಯಂತ್ರಗಳು ಕಲಿಯುವಂತೆ ಮಾಡುವ ಒಂದು ಪ್ರಯತ್ನವೇ 'ನ್ಯೂರಲ್ ನೆಟ್‌ವರ್ಕ್'. 'ನ್ಯೂರಾನ್' ಅಥವಾ 'ನರಕೋಶ' ಎಂಬುದು ನಮ್ಮ ಮಿದುಳಿನ ಮೂಲಭೂತ ಘಟಕ. ಸಂಕೀರ್ಣವಾಗಿ ಹೆಣೆದುಕೊಂಡಿರುವ ಈ ನರಕೋಶಗಳ ಜಾಲ, ನಾವು ಇಂದ್ರಿಯಗಳ ಮೂಲಕ ಗ್ರಹಿಸುವ ಮಾಹಿತಿಯನ್ನು ಸಂಸ್ಕರಿಸಿ ಪ್ರತಿಕ್ರಿಯೆಯನ್ನು ಕೊಡುತ್ತದೆ. ಇಲ್ಲಿ ಇಂದ್ರಿಯಗಳ ಮೂಲಕ ಬಂದ ಮಾಹಿತಿ 'ಇನ್ಪುಟ್' ಆದರೆ, ಪ್ರತಿಕ್ರಿಯೆ 'ಔಟ್ಪುಟ್' ಆಗಿರುತ್ತದೆ. ಕೃತಕ ನ್ಯೂರಲ್ ನೆಟ್‌ವರ್ಕ್‌ನಲ್ಲಿಯೂ ಇದೇ ವ್ಯವಸ್ಥೆಯನ್ನು ಸ್ಥೂಲವಾಗಿ ಅನುಕರಿಸಲಾಗಿದೆ.

ಪ್ರತಿಯೊಂದು ನ್ಯೂರಲ್ ನೆಟ್‌ವರ್ಕ್‌ನಲ್ಲಿಯೂ 'ಹಂತಗಳು' (Layers) ಇರುತ್ತವೆ (ಚಿತ್ರವನ್ನು ನೋಡಿ). ಮಾಹಿತಿಯನ್ನು ಗ್ರಹಿಸುವುದು ಇನ್ಪುಟ್ ಹಂತವಾದರೆ, ಸಂಸ್ಕರಿಸಿದ ನಂತರ ಮಾಹಿತಿಯನ್ನು ಹಿಂತಿರುಗಿ ಕೊಡುವುದು ಔಟ್ಪುಟ್ ಹಂತ.

> ಮಿದುಳು ಕೆಲಸ ಮಾಡುವ ರೀತಿಯನ್ನು ಅನುಕರಿಸಿಯೆ ಯಂತ್ರಗಳು ಕಲಿಯುವಂತೆ ಮಾಡುವ ಒಂದು ಪ್ರಯತ್ನವೇ 'ನ್ಯೂರಲ್ ನೆಟ್‌ವರ್ಕ್'.

ಇವುಗಳ ನಡುವೆ ಇರುವ ಹಂತಗಳನ್ನು 'ಅದೃಶ್ಯ ಹಂತಗಳು' (Hidden layers) ಎನ್ನಲಾಗುತ್ತದೆ. ಮಾಹಿತಿಯ ಸಂಸ್ಕರಣೆ ನಡೆಯುವುದು ಈ ಅದೃಶ್ಯ ಹಂತಗಳಲ್ಲಿ. ಈ ಹಂತಗಳಲ್ಲಿರುವ ಸಣ್ಣ ಘಟಕಗಳನ್ನು ನ್ಯೂರಾನ್ ಎನ್ನುತ್ತಾರೆ. ಪ್ರತಿಯೊಂದು ನ್ಯೂರಾನ್ ಕೂಡ ಒಂದು ಗಣಿತೀಯ ನಿಯಮವನ್ನು ಪಾಲಿಸುತ್ತದೆ. ಕೊಟ್ಟ ಮಾಹಿತಿಯನ್ನು ಈ ಗಣಿತದ ನಿಯಮದ ಅನುಸಾರವಾಗಿ ನ್ಯೂರಾನ್‌ಗಳು



ಬದಲಿಸುತ್ತವೆ, ಮತ್ತು ಅದರಿಂದ ಸಿಗುವ ಉತ್ತರವನ್ನು ಆಧರಿಸಿ ಕೆಲವು ನ್ಯೂರಾನ್‌ಗಳು ಜಾಗೃತವಾಗುತ್ತದೆ. ಹೀಗೆ ಒಂದು ಹಂತದಲ್ಲಿ ಜಾಗೃತವಾಗುವ ನ್ಯೂರಾನ್‌ಗಳನ್ನು ಆಧರಿಸಿ ಮುಂದಿನ ಹಂತದಲ್ಲಿ ಮತ್ತೆ ಕೆಲವು ನಿರ್ದಿಷ್ಟ ನ್ಯೂರಾನ್‌ಗಳು ಜಾಗೃತವಾಗುತ್ತದೆ. ಹೀಗೆ ಒಂದು ಹಂತದಿಂದ ಮುಂದಿನ ಹಂತಕ್ಕೆ ಸಾಗಿದಂತೆ ಮಾಹಿತಿಯು ಹೆಚ್ಚು ಸ್ಪಷ್ಟವಾಗಿ ಗ್ರಹಿಸಲ್ಪಡುತ್ತದೆ.

ಇದನ್ನು ಒಂದು ಉದಾಹರಣೆಯ ಮೂಲಕ ಅರ್ಥಮಾಡಿಕೊಳ್ಳೋಣ. ನೀವೀಗ, ಸೊನ್ನೆಯಿಂದ ಒಂಬತ್ತರವರೆಗಿನ, ಕೈಬರಹದಲ್ಲಿರುವ ಅಂಕೆಗಳನ್ನು ಗುರುತಿಸುವಂತಹ ಉದ್ದೇಶದಿಂದ ಒಂದು ನ್ಯೂರಲ್ ನೆಟ್‌ವರ್ಕ್ ಅನ್ನು ಸಿದ್ಧಪಡಿಸುತ್ತಿದ್ದೀರಿ ಎಂದು ಭಾವಿಸಿ. ಕೈಬರಹದಲ್ಲಿ '7' ಎಂಬ ಅಂಕೆಯನ್ನು ಇನ್ಪುಟ್ ಆಗಿ ನೀಡಿದಾಗ ಇದರ ಮೊದಲ ಹಂತ ಈ ಅಂಕೆಯ ಪ್ರಾಥಮಿಕ ಲಕ್ಷಣಗಳನ್ನು ಪರಿಶೀಲಿಸುತ್ತದೆ. ಅಂದರೆ ಅಂಕೆಯಲ್ಲಿ ಅಡ್ಡ ಗೆರೆಗಳಿವೆಯೇ? ಲಂಬವಾದ ಗೆರೆಗಳಿವೆಯೇ? ಸುರುಳಿ ಸುತ್ತುವ ವಕ್ರ ರೇಖೆಗಳಿವೆಯೇ? – ಮುಂತಾದ ಅಂಶಗಳನ್ನು ಮೊದಲ ಹಂತದಲ್ಲಿರುವ ನ್ಯೂರಾನ್‌ಗಳು ಪರೀಕ್ಷಿಸುತ್ತವೆ. ಒಂದು ರೀತಿಯಲ್ಲಿ ಸಂಖ್ಯೆಯನ್ನು ಚೂರುಗಳಾಗಿ ಒಡೆದು ಆ ಚೂರುಗಳನ್ನು ಪ್ರತ್ಯೇಕವಾಗಿ ಗುರುತಿಸುವ ಕೆಲಸ. ನಂತರ ಮೊದಲ ಹಂತದ ಮಾಹಿತಿಯನ್ನು ಆಧರಿಸಿ ಎರಡನೆಯ ಹಂತದಲ್ಲಿ ಕೆಲವು ನಿರ್ದಿಷ್ಟ ನ್ಯೂರಾನ್‌ಗಳು ಜಾಗೃತವಾಗುತ್ತವೆ. ಈ ಜಾಗೃತವಾದ ನ್ಯೂರಾನ್‌ಗಳು ಹಿಂದಿನ ಹಂತಕ್ಕಿಂತ ಸ್ವಲ್ಪ ಹೆಚ್ಚು ಸಂಕೀರ್ಣವಾದ ವಿನ್ಯಾಸವನ್ನು ಆಧರಿಸಿರುತ್ತವೆ. ಅಂದರೆ ಹಿಂದಿನ ಹಂತದಿಂದ ದೊರೆತ ಬಿಡಿಯಾದ ಮಾಹಿತಿಗಳನ್ನು ವಿವಿಧ ರೀತಿಯಲ್ಲಿ ಸಂಯೋಜಿಸಿ ದೊರೆಯುವ ವಿನ್ಯಾಸಗಳನ್ನು ಆಧರಿಸಿರುತ್ತವೆ. 7 ಎಂಬ ಸಂಖ್ಯೆಯ ಉದಾಹರಣೆಯಲ್ಲಿ, ಒಂದು ಲಂಬವಾದ ಗೆರೆ ಇರುವ ನ್ಯೂರಾನ್ ಮತ್ತು ಮೇಲ್ಭಾಗದಲ್ಲಿ ಒಂದು ಅಡ್ಡಗೆರೆ ಇರುವ ನ್ಯೂರಾನ್‌ಗಳು ಜಾಗೃತವಾಗುತ್ತವೆ. ಈ ಎರಡನೇ ಹಂತದಲ್ಲಿ ಜಾಗೃತವಾಗಿರುವ ಈ ಎರಡು ನ್ಯೂರಾನ್‌ಗ ಆಧಾರದ ಮೇಲೆ ಕೊನೆಯ, ಅಂದರೆ ಔಟ್ಪುಟ್ ಹಂತವು, ಗುರುತಿಸಲಾಗುವ ಅಂಕೆ ಯಾವ ಅಂಕೆಯಾಗಿರುವ ಸಾಧ್ಯತೆ ಹೆಚ್ಚು ಎಂದು ಅಂದಾಜಿಸುತ್ತದೆ. ಈ ಉದಾಹರಣೆಯಲ್ಲಿ ಒಂದು ಲಂಬವಾದ ಗೆರೆ ಮತ್ತು ಮೇಲ್ಭಾಗದಲ್ಲಿ ಒಂದು ಅಡ್ಡಗೆರೆ ಇರುವುದರಿಂದ ಆ ಸಂಖ್ಯೆಯು 7 ಎಂದು ಗುರುತಿಸಲು ಕಂಪ್ಯೂಟರ್‌ಗೆ ಸಾಧ್ಯವಾಗುತ್ತದೆ. ಅದೇ ರೀತಿ, ಮೇಲ್ಭಾಗದಲ್ಲಿ ಒಂದು ವೃತ್ತಾಕಾರದ ಆಕೃತಿ ಮತ್ತು ಒಂದು ಲಂಬ ಗೆರೆ ಇದ್ದರೆ ಆ ಅಂಕೆಯು 9 ಎಂದು ಗುರುತಿಸುತ್ತದೆ.

ನ್ಯೂರಲ್ ನೆಟ್‌ವರ್ಕ್‌ಗಳ ವಿಶೇಷತೆ ಎಂದರೆ ಅವುಗಳ ಕಲಿಯುವ ಸಾಮರ್ಥ್ಯ. ಹೆಚ್ಚು ಹೆಚ್ಚು ಮಾಹಿತಿಯನ್ನು ನೀಡಿದಷ್ಟೂ ಮಾಹಿತಿಯನ್ನು ಗುರುತಿಸುವ ಅಥವಾ ವಿಶ್ಲೇಷಿಸುವ ಅವುಗಳ ಸಾಮರ್ಥ್ಯವನ್ನು ಹೆಚ್ಚುತ್ತದೆ. ಈ ವೈಶಿಷ್ಟ್ಯವೇ ಕೃತಕ ಬುದ್ಧಿಮತ್ತೆ ಹೆಚ್ಚು ದಕ್ಷವಾಗಿ ಕಾರ್ಯ ನಿರ್ವಹಿಸಲು, ಮನುಷ್ಯರಂತೆ ಕಥೆ-ಕವನಗಳನ್ನು ರಚಿಸಲು, ಕಲೆಯನ್ನು ಸೃಷ್ಟಿಸಲು ಸಾಧ್ಯವಾಗಿಸಿದೆ.



ಮಿದುಳಿನ ಕೋಶದ 3ಡಿ ಪ್ರಿಂಟ್

ನೇಸರ ಕಾಡನಕುಪ್ಪೆ

ಅಲ್ಜೈಮರ್ಸ್, ಪಾರ್ಕಿನ್ಸನ್ಸ್ ಮುಂತಾದ ಕಾಯಿಲೆಗಳಿಂದ ಬಳಲುವ ರೋಗಿಗಳಿಗೆ ವರದಾನವಾಗುವಂತಹ ಮಹತ್ತರವಾದ ಸಂಶೋಧನೆಯನ್ನು ಅಮೆರಿಕದ ವಿಸ್ಕಿನ್ಸನ್ ಮ್ಯಾಡಿಸನ್ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡವು ನಡೆಸಿದೆ. ವಿಶ್ವದಲ್ಲಿ ಪ್ರಪ್ರಥಮವಾಗಿ ಕೃತಕವಾಗಿ ಮಿದುಳಿನ ಕೋಶಗಳನ್ನು 3ಡಿ ಪ್ರಿಂಟ್ ಮಾಡಿ ಯಶಸ್ಸನ್ನೂ ಕಂಡಿದ್ದಾರೆ.

ಈ ಸಂಶೋಧನೆಯನ್ನು 21ನೇ ಶತಮಾನದ ಮಹತ್ತರವಾದ ಸಂಶೋಧನೆಗಳಲ್ಲಿ ಎಂದು ವ್ಯಾಖ್ಯಾನಿಸಲಾಗಿದೆ. ಅಲ್ಜೈಮರ್ಸ್ ಕಾಯಿಲೆಯಿಂದ ಮರೆಗುಳಿತನ ಎದುರಾಗುವುದು, ಪಾರ್ಕಿನ್ಸನ್ಸ್ ಕಾಯಿಲೆಯಿಂದ ನರರೋಗ ಸಂಬಂಧಪಟ್ಟ ತೊಂದರೆಗಳು ಎದುರಾಗುವ ಬಗ್ಗೆ ನಮಗೆ ತಿಳಿದೇ ಇದೆ. ಈ ಸಮಸ್ಯೆಗಳಿಗೆ ವೈದ್ಯಕೀಯವಾಗಿ ಪರಿಹಾರ ಕಂಡುಹಿಡಿಯುವ ಪ್ರಯತ್ನ ಒಂದೆಡೆ ನಡೆಯುತ್ತಿದ್ದರೆ, ಮತ್ತೊಂದರೆ ಜೀವ-ಕಂಪ್ಯೂಟರ್ ವಿಜ್ಞಾನಿಗಳು 3ಡಿ ಪ್ರಿಂಟ್ ಮೂಲಕ ಅಸ್ವಸ್ಥ ಅಥವಾ ನಶಿಸಿದ ಮಿದುಳಿನ ಜೀವಕೋಶಗಳನ್ನು ಏಕೆ ಕೃತಕವಾಗಿ ಮುದ್ರಿಸಬಾರದು ಎಂದು ಯೋಚಿಸಿ ಅದನ್ನು ಸಾಧಿಸಿ ತೋರಿಸಿದ್ದಾರೆ.

ಅಲ್ಜೈಮರ್ಸ್ ಕಾಯಿಲೆಯಲ್ಲಿ ಮಿದುಳಿನ ಜೀವಕೋಶಗಳು ಕುಸಿಯುತ್ತವೆ ಅಥವಾ ನಾಶವಾಗುತ್ತವೆ. ಅದರೊಂದಿಗೆ ಆ ಕುಸಿಯುವ ಜೀವಕೋಶಗಳಲ್ಲಿ ಸಂಗ್ರಹವಾಗಿರುವ ದತ್ತಾಂಶ ಅಥವಾ ಸ್ಮರಣೆಯು ನಾಶವಾಗುತ್ತದೆ. ಇದೇ ಕಾರಣದಿಂದಾಗಿ ಹಳೆಯ ನೆನಪುಗಳು ನಶಿಸಿಹೋಗಿ ಮರೆಗುಳಿತನ ಎದುರಾಗುವುದು. ಸಾಮಾನ್ಯವಾಗಿ ವೃದ್ಧಾಪ್ಯದಲ್ಲಿ ಈ ಸಮಸ್ಯೆ ಹೆಚ್ಚು. ಕೆಲವು ಪ್ರಕರಣಗಳಲ್ಲಿ ಕಿರಿಯ ವಯಸ್ಸಿನಲ್ಲೂ ಈ ಸಮಸ್ಯೆ ಎದುರಾಗಬಹುದು. ವೈದ್ಯಕೀಯವಾಗಿ ಈ ಸಮಸ್ಯೆಗೆ ಪರಿಹಾರವೇ ಇಲ್ಲ ಎಂದು ವ್ಯಾಖ್ಯಾನಿಸಲಾಗಿದೆ. ಮಿದುಳಿನ ಕೋಶಗಳು ಕುಸಿಯುವ ವೇಗ ಹಾಗೂ ಪ್ರಮಾಣವನ್ನು ಕಡಿಮೆ ಮಾಡಬಹುದೇ ಹೊರತು, ಈಗಾಗಲೇ ನಶಿಸಿರುವ ಕೋಶಗಳನ್ನು ವಾಪಸು ತರಲು ಸಾಧ್ಯವೇ ಇಲ್ಲ ಎಂದು ವಿಜ್ಞಾನಿಗಳು ಕೈಚೆಲ್ಲಿದ್ದರು. ಆದರೆ, ಅಮೆರಿಕದ ವಿಸ್ಕಿನ್ಸನ್ ಮ್ಯಾಡಿಸನ್ ವಿಶ್ವವಿದ್ಯಾನಿಲಯದ ಜೀವ-ಕಂಪ್ಯೂಟರ್ ವಿಜ್ಞಾನಿಗಳು ಅದು ಏಕೆ ಅಸಾಧ್ಯ ಎಂದು ಸವಾಲಾಗಿ ಸ್ವೀಕರಿಸಿ, ಕೃತಕವಾಗಿ ಕೋಶಗಳನ್ನು ಮುದ್ರಿಸಿ ಮಿದುಳಿಗೆ ಶಸ್ತ್ರಚಿಕಿತ್ಸೆಯ ಮೂಲಕ ಕೂರಿಸಿದ್ದಾರೆ.

ಅಮೆರಿಕದ ವಿಸ್ಕಿನ್ಸನ್ ಮ್ಯಾಡಿಸನ್ ವಿಶ್ವವಿದ್ಯಾನಿಲಯದ ನರವಿಜ್ಞಾನ ಹಾಗೂ ನರರೋಗ ವಿಭಾಗದ ಪ್ರಾಧ್ಯಾಪಕ ಸು-ಶಾಂಗ್ ಝಾಂಗ್ ಅವರ ಮಾತಿನಲ್ಲೇ ಈ ಸಂಶೋಧನೆಯ ಮಹತ್ವವನ್ನು ತಿಳಿಯಬೇಕು – 'ಜಗತ್ತಿನ ಎಲ್ಲ ಬಗೆಯ ರಾಸಾಯನಿಕ ವಸ್ತುಗಳನ್ನು ಗುರುತಿಸಿ ಅವನ್ನು ಪುನರ್ ಸೃಷ್ಟಿಸಬಹುದಾದ ತಂತ್ರಜ್ಞಾನ ನಮಗೆ ಇಂದು ಲಭ್ಯವಿದೆ. ನಮಗೆ ಬೇಕಿರುವುದು ಕೇವಲ ರಾಸಾಯನಿಕ ಸೂತ್ರವಷ್ಟೇ. ನಾವು ಮಿದುಳುಕೋಶಗಳ ರಾಸಾಯನಿಕ ಸೂತ್ರವನ್ನು ಇಲ್ಲಿ ನಕಲು ಮಾಡಿದ್ದೇವೆ. ಮಿದುಳಿನ ಕೋಶಗಳಂತೆಯೇ ಹೋಲುವ ಕೋಶಗಳನ್ನು 3ಡಿ ಮುದ್ರಣದ ಮೂಲಕ ಮುದ್ರಿಸಿ, ಅವುಗಳ ಮೂಲ ಜಾಗಕ್ಕೆ ಕೂರಿಸಿದ್ದೇವೆ. ಈ ಕೃತಕ ಜೀವಕೋಶಗಳನ್ನು ಮಾನವ ಮಿದುಳು ಸ್ವೀಕರಿಸಿದೆ. ಇದನ್ನು ನಾವು ಯಶಸ್ಸು ಎಂದೇ ವ್ಯಾಖ್ಯಾನಿಸುತ್ತೇವೆ' ಎಂದಿದ್ದಾರೆ.

ನೆನಪುಗಳು ಮರುಕಳಿಸಬಹುದೇ?

ಮಿದುಳಿನ ಕೋಶಗಳನ್ನು ಕೃತಕವಾಗಿ ಮುದ್ರಿಸಿ ಮೂಲಸ್ಥಳದಲ್ಲಿ ಕೂರಿಸಿದರೆ ಕಳೆದುಹೋಗಿರುವ ನೆನಪುಗಳು ಮರುಕಳಿಸಬಹುದೇ ಎಂಬ ಪ್ರಶ್ನೆ ಇವರಿಗೆ ಎದುರಾಗಿದೆ. ಇದಕ್ಕೆ ಈ ವಿಜ್ಞಾನಿ ತಂಡದ ಉತ್ತರ ಸರಳವಾಗಿದೆ. 'ಮಿದುಳು ಕೃಶಗೊಂಡು ನೆನಪುಗಳು ನಶಿಸಿರುತ್ತವೆ ಎಂಬುದು ನಿಜ. ಕೃಶಗೊಂಡ ಮಿದುಳು ಸ್ವಸ್ಥವಾಗಿ ಅದರ ಮೂಲಸ್ಥಿತಿಗೆ ಮರುಕಳಿಸಿದ ಮೇಲೆ ನೆನಪುಗಳು ಬರುವುದಿಲ್ಲ ಎಂದು ಏಕೆ ಅನುಮಾನಿಸಬೇಕು. ಎಲ್ಲ ಸಂಶೋಧನೆಗಳಿಗೂ ಅವುಗಳದೇ ಆದ ಮಿತಿಗಳಿರುತ್ತವೆ. ನಮ್ಮ ಸಂಶೋಧನೆಯ ಮಹತ್ತರವಾದ ಪ್ರಯೋಜನವೆಂದರೆ, ಅದು ಕೇವಲ ನೆನಪುಗಳನ್ನು ಕಾಪಾಡುವುದಲ್ಲ. ಮಿದುಳುಕೋಶಗಳು ಕೃಶಗೊಂಡರೆ ದೇಹದ ಅನೇಕ ಭಾಗಗಳ ಕಾರ್ಯವೈಖರಿಯೂ ಕುಸಿಯುತ್ತದೆ ಎಂಬುದನ್ನು ಮರೆಯಬಾರದು. ನಾವು ಒಮ್ಮೆ ಮಿದುಳನ್ನು ಮರು ಸ್ಥಾಪಿಸಿದ ಮೇಲೆ ದೇಹದ ಕಾರ್ಯರಚನೆಯಂತೂ ಪುನಶ್ಚೇತನಗೊಳ್ಳುತ್ತದೆ. ಇವನ್ನು ನಾವು ಪ್ರಾಯೋಗಿಕವಾಗಿ ಸಾಬೀತು ಮಾಡಿದ್ದೇವೆ' ಎಂದು ಹೇಳಿದ್ದಾರೆ.

ವೈದ್ಯಕೀಯ ನಿಯಮಗಳು ಹಾಗೂ ನೀತಿಗಳ ಅನುಸಾರವಾಗಿ ಈಗ ಪ್ರಾಣಿಗಳ ಮೇಲೆ ಈ ಪ್ರಯೋಗವನ್ನು ಮಾಡಿ ಯಶಸ್ಸು ಕಂಡಿದ್ದೇವೆ. ಮುಂದಿನ ಹಂತಗಳಲ್ಲಿ ಮಾನವ ಪ್ರಯೋಗವೂ ನಡೆಯಲಿದೆ. ಇದರಿಂದ ಅನೇಕ ರೋಗಿಗಳ ಜೀವನವು ಸುಧಾರಿಸಲಿದೆ. ಪಾರ್ಕಿನ್ಸನ್ಸ್ ಮಾದರಿಯ ಕಾಯಿಲೆಗಳು ರೋಗಿಯನ್ನು ಕ್ರೂರವಾಗಿ ನರಳಿಸುತ್ತವೆ. ಇಂತಹ ನರಳಾಟದಿಂದ ಮುಕ್ತಿ ಸಿಗುತ್ತದೆ ಎಂಬುದರಲ್ಲಿ ನಮಗೆ ಯಾವುದೇ ಅನುಮಾನವೂ ಉಳಿದಿಲ್ಲ ಎಂದು ವಿಜ್ಞಾನಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎಲ್ಲೆಲ್ಲಿ ಇದರ ಬಳಕೆ?

ವೈದ್ಯಕೀಯ ರಂಗದಲ್ಲಿ ಇದರ ಬಳಕೆ ಹೆಚ್ಚಾಗಲಿದೆ. ವಿಜ್ಞಾನಿಗಳು ಈ ಸಂಶೋಧನೆಯನ್ನು ಕೇವಲ ಮಿದುಳಿನ ಕೋಶಗಳಿಗೆ ಮಾತ್ರವೇ ಮೀಸಲು ಎಂದು ಕರೆದಿಲ್ಲ. ಬದಲಿಗೆ, ದೇಹದ ಯಾವುದೇ ಅಂಗ ನಷ್ಟವಾದರೂ ಅಲ್ಲಿ ಈ ಸಂಶೋಧನೆಯ ಅಳವಡಿಕೆ ಸಾಧ್ಯ ಎಂದು ಹೇಳಿದ್ದಾರೆ. ರಸ್ತೆ ಅಪಘಾತಗಳಲ್ಲಿ ಅಂಗಾಗಗಳನ್ನು ಕಳೆದುಕೊಳ್ಳುವವರಿಗೆ ಅಂಗಗಳನ್ನು ಯಥಾವತ್ತಾಗಿ 3ಡಿ ತಂತ್ರಜ್ಞಾನದ ಮೂಲಕ ಮುದ್ರಿಸಿ ಸ್ವಸ್ಥ ಹಾಗೂ ಸ್ವಾಭಾವಿಕ ಜೀವನವನ್ನು ಮರುಸ್ಥಾಪಿಸಬಹುದು ಎಂದು ವಿಜ್ಞಾನಿಗಳು ಭರವಸೆ ನೀಡಿದ್ದಾರೆ.

ಈ ತಂತ್ರಜ್ಞಾನವು ಅತಿ ಸಂಕೀರ್ಣವಾಗಿದೆ. ಏಕೆಂದರೆ, ಕೇವಲ ಕೋಶಗಳ 3ಡಿ ಮುದ್ರಣ ಇಲ್ಲಿ ಸಾಲದು. ಮಾಂಸಖಂಡಗಳ ಜತೆಗೆ, ನರಕೋಶಗಳನ್ನೂ ಮುದ್ರಿಸಿ, ಕೃತಕನರವು ಮೂಲ ನರದೊಂದಿಗೆ ಬೆಸೆಯುವಂತೆ ಮಾಡಬೇಕು. ಸಾಮಾನ್ಯವಾಗಿ ಬಾಹ್ಯವಸ್ತುವೊಂದನ್ನು ದೇಹ ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ನಾವು ಸೃಷ್ಟಿಸುವ ಕೋಶವು ಅತ್ಯಂತ ಸ್ವಾಭಾವಿಕವಾಗಿದ್ದರೆ ಮಾತ್ರ ಅದನ್ನು ದೇಹ ಸ್ವೀಕರಿಸುತ್ತದೆ. ಇದರ ಮೂಲಕ ನಮ್ಮ ಸಂಶೋಧನೆಯು ಎಷ್ಟು ನಿಖರವಾಗಿರಬಹುದು ಎಂದು ಊಹಿಸಿ ಎಂದು ವಿಜ್ಞಾನಿಗಳು ವಿವರಿಸಿದ್ದಾರೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

60) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಥೈರಾಕ್ಸಿನ್ ಹಾರ್ಮೋನ್ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ತಪ್ಪಾಗಿರುವ ಹೇಳಿಕೆ ಯಾವುದು? (ಮಾರ್ಚ್ 2020)

ಎ) ಇದು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುತ್ತದೆ.
ಬಿ) ಇದರ ಕೊರತೆಯಿಂದ ಗಳಗಂಡ ರೋಗ ಉಂಟಾಗುತ್ತದೆ.
ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.
ಡಿ) ಆಹಾರದಲ್ಲಿನ ಅಯೋಡಿನ್ ಇದರ ಉತ್ಪಾದನೆಗೆ ಅಗತ್ಯವಾಗಿದೆ.

ಉತ್ತರ:– (ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.

2) ವಿದ್ಯುತ್ ಬಲ್ಬಿನಲ್ಲಿರುವ ತಂತುಗಳಲ್ಲಿ ಬಳಸುವ ಲೋಹ ಯಾವುದು? (ಮಾರ್ಚ್ 2021)

ಎ) ಮ್ಯಾಂಗನೀಸ್ ಬಿ) ಟಂಗಸ್ಟನ್
ಸಿ) ನಿಕ್ಕೆಲ್ ಡಿ) ಕ್ರೋಮಿಯಂ

ಉತ್ತರ:– (ಬಿ) ಟಂಗಸ್ಟನ್

3) ಸೂರ್ಯನ ಅಗಾಧವಾದ ಶಕ್ತಿ ಕಳೆದ .... ವರ್ಷಗಳಿಂದ ಪ್ರಸ್ತುತ ಯಾವ ದರದಲ್ಲಿ ಹೊರಹೊಮ್ಮುತ್ತಿದೆಯೋ ಅದೇ ದರದಲ್ಲಿ ಹೊರಹೊಮ್ಮುತ್ತಿದೆ.

ಎ) 5ಬಿಲಿಯನ್ ಬಿ) 10 ಬಿಲಿಯನ್
ಸಿ) 50 ಬಿಲಿಯನ್ ಡಿ) 1 ಬಿಲಿಯನ್

ಉತ್ತರ:– (ಎ) 5ಬಿಲಿಯನ್

4) ಪತನ ಕಿರಣ, ಪತನ ಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ ಮತ್ತು .... ಈ ಮೂರೂ ಒಂದೇ ಸಮತಲದಲ್ಲಿರುತ್ತದೆ.

ಎ) ಪ್ರತಿಫಲಿತ ಧ್ವನಿ ಬಿ) ಪತನ ಕೋನ
ಸಿ) ಪ್ರತಿಧ್ವನಿತ ಶಬ್ದ ಡಿ) ಪ್ರತಿಫಲಿತ ಕಿರಣ

ಉತ್ತರ:– (ಡಿ) ಪ್ರತಿಫಲಿತ ಕಿರಣ

5) ಶ್ವಾಸನಾಳದ ಮೇಲ್ಭಾಗವು .... ಎಂಬ ಸಣ್ಣ ಕೂದಲಿನಂತಹ ರಚನೆಗಳನ್ನು ಹೊಂದಿದೆ, ಇವು ಉಚ್ಛಾಸದ ಗಾಳಿಯಲ್ಲಿರಬಹುದಾದ ಸೂಕ್ಷ್ಮ ಜೀವಿಗಳು, ಧೂಳು, ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಧೂಮ್ರಪಾನವು ಈ ಕೂದಲನ್ನು ನಾಶ ಮಾಡುತ್ತದೆ

ಎ) ಸಿಲಿಯಾ(Cilia) ಬಿ) ನ್ಯೂಕ್ಲಿಯಸ್
ಸಿ) ಜಾಕ್‌ರಿ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ಸಿಲಿಯಾ(Cilia)

6) ಪೈರೋವೇಟ್‌ನ ವಿಭಜನೆಯಿಂದ ಕಾರ್ಬನ್ ಡೈ-ಆಕ್ಸೈಡ್, ನೀರು, ಮತ್ತು ಶಕ್ತಿಯ ಬಿಡುಗಡೆಯಾಗುವ ಸ್ಥಳ............

ಎ) ಕೋಶದ್ರವ್ಯ
ಬಿ) ಮೈಟೋ ಕಾಂಡ್ರಿಯಾ ಸಿ) ಕ್ಲೋರೋಪ್ಲಾಸ್ಟ್
ಡಿ) ನ್ಯೂಕ್ಲೀಯಸ್

ಉತ್ತರ:– (ಬಿ) ಮೈಟೋ ಕಾಂಡ್ರಿಯಾ

7) ಈ ಕೆಳಗಿನ ಯಾವ ಗುಂಪು ಅಲೋಹವಾಗಿದೆ?

ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್
ಬಿ) ತಾಮ್ರ, ಅಲ್ಯುಮಿನಿಯಂ, ಬ್ರೋಮಿನ್, ಗಂಧಕ
ಸಿ) ಮೆಗ್ನಿಷಿಯಂ, ಸೋಡಿಯಂ, ಗಂಧಕ, ಕಾರ್ಬನ್
ಡಿ) ಸೀಸ, ಸತು, ಗಂಧಕ, ಬ್ರೋಮಿಯಮ್

ಉತ್ತರ:– (ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್

8) ಮಾನವನ ಜಠರವು ....ಉತ್ಪಾದಿಸುತ್ತದೆ. ಹಾಗೂ ಅದೂ ಜೀರ್ಣಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

ಎ) ಆಮ್ಲಜನಕ ಬಿ) ಸಾರಜನಕ
ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಪೊಟಾಷಿಯಂ ಸಲ್ಫೇಟ್

ಉತ್ತರ:– (ಸಿ) ಹೈಡ್ರೋಕ್ಲೋರಿಕ್ ಆಮ್ಲ

61) ಪೀನ ದರ್ಪಣದ ಉಪಯೋಗಗಳನ್ನು ತಿಳಿಸಿ

ಉತ್ತರ:– ಪೀನ ದರ್ಪಣದ ಉಪಯೋಗಗಳು:–
ಪೀನ ದರ್ಪಣಗಳನ್ನು ಸಾಮಾನ್ಯವಾಗಿ, ವಾಹನಗಳಲ್ಲಿ ಹಿನ್ನೋಟ (rear view) ದರ್ಪಣವಾಗಿ ಬಳಸುತ್ತಾರೆ. ಈ ದರ್ಪಣಗಳನ್ನು ವಾಹನದ ಪಾರ್ಶ್ವಗಳಲ್ಲಿ, ವಾಹನ ಚಾಲಕನು ಹಿಂಬದಿಯಲ್ಲಿ ಬರುತ್ತಿರುವ ವಾಹನಗಳನ್ನು ವೀಕ್ಷಿಸಿ ಸುರಕ್ಷಿತ ಚಾಲನೆಗೆ ಅನುಕೂಲವಾಗುವಂತೆ ಜೋಡಿಸಿರುತ್ತಾರೆ. ಯಾವಾಗಲೂ ಚಿಕ್ಕದಾದ ಮತ್ತು ನೇರ ಪ್ರತಿಬಿಂಬಗಳನ್ನೇ ಉಂಟುಮಾಡುವ ಪೀನ ದರ್ಪಣಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾರೆ ಏಕೆಂದರೆ ಹೊರ ಅಂಚಿನ ಕಡೆಗೆ ವಕ್ರತೆಯನ್ನು ಹೊಂದಿರುವುದರಿಂದ ಇವುಗಳ ದೃಷ್ಟಿ ಕ್ಷೇತ್ರವು ಬಹಳ ಅಧಿಕವಾಗಿರುತ್ತದೆ. ಹೀಗೆ ಸಮತಲ ದರ್ಪಣಕ್ಕೆ ಹೋಲಿಸಿದರೆ ಪೀನ ದರ್ಪಣಗಳು ಚಾಲಕರಿಗೆ ಅವರ ಹಿಂಭಾಗದ ಹೆಚ್ಚಿನ ಕ್ಷೇತ್ರವನ್ನು ವೀಕ್ಷಿಸಲು ಸಹಾಯಕವಾಗಿವೆ.

62) ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯದ ಕುರಿತು ಬರೆಯಿರಿ

ಉತ್ತರ:– ಕಣ್ಣಿನ ಮಸೂರವು ತಂತುಗಳು, ಜೆಲ್ಲಿಯಂತಹ ವಸ್ತುಗಳಿಂದ ಕೂಡಿದೆ. ಇದರ ವಕ್ರತೆಯನ್ನು ಸಿಲಿಯರಿ ಸ್ನಾಯುಗಳಿಂದ ಸ್ವಲ್ಪಮಟ್ಟಿಗೆ ಮಾರ್ಪಡಿಸಬಹುದು. ಕಣ್ಣಿನ ಮಸೂರದ ವಕ್ರತೆಯ ಬದಲಾವಣೆಯಿಂದ ಅದರ ಸಂಗಮದೂರವನ್ನು ಬದಲಾಯಿಸಬಹುದು. ಸ್ನಾಯುಗಳು ವಿಶ್ರಾಂತಗೊಂಡಾಗ ಮಸೂರವು ತೆಳ್ಳಗಾಗುತ್ತದೆ ಮತ್ತು ಸಂಗಮ ದೂರ ಹೆಚ್ಚಾಗುತ್ತದೆ. ಇದರಿಂದ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಹುದು. ನೀವು ಕಣ್ಣಿನ ಸಮೀಪವಿರುವ ವಸ್ತುಗಳನ್ನು ನೋಡುವಾಗ ಕಣ್ಣಿನ ಸಿಲಿಯರಿ ಸ್ನಾಯುಗಳು ಕುಗ್ಗುತ್ತವೆ. ಇದರಿಂದ ಕಣ್ಣಿನ ಮಸೂರದ ವಕ್ರತೆ ಹೆಚ್ಚಾಗುತ್ತದೆ. ಆಗ ಕಣ್ಣಿನ ಮಸೂರವು ದಪ್ಪವಾಗುತ್ತದೆ. ಇದರ ಪರಿಣಾಮವಾಗಿ ಕಣ್ಣಿನ ಸಂಗಮ ದೂರ ಕಡಿಮೆಯಾಗುತ್ತದೆ ಮತ್ತು ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಕಣ್ಣಿನ ಮಸೂರದ ಸಂಗಮ ದೂರವನ್ನು ಹೊಂದಾಣಿಕೆ ಮಾಡುವ ಕಣ್ಣಿನ ಮಸೂರದ ಸಾಮರ್ಥ್ಯವನ್ನು ಕಣ್ಣಿನ ಹೊಂದಾಣಿಕೆ ಎನ್ನುತ್ತೇವೆ. ಆದರೂ ಸಹ ಕಣ್ಣಿನ ಮಸೂರದ ಸಂಗಮ ದೂರವನ್ನು ಒಂದು ಕನಿಷ್ಟ ಮಿತಿಗಿಂತ ಕಡಿಮೆ ಮಾಡಲು ಸಾಧ್ಯವಿಲ್ಲ. ಮುದ್ರಿತವಾದ ಒಂದು ಪುಟವನ್ನು ಕಣ್ಣಿಗೆ ತುಂಬಾ ಹತ್ತಿರ ಹಿಡಿದುಕೊಂಡು ಓದಲು ಪ್ರಯತ್ನಿಸಿದರೆ ಮಸುಕಾಗಿರುವ ಬಿಂಬವನ್ನು ನೋಡಬಹುದು ಅಥವಾ ಕಣ್ಣಿಗೆ ಹೆಚ್ಚು ದಣಿವಾಗಬಹುದು

ಒಂದು ವಸ್ತುವನ್ನು ಆರಾಮವಾಗಿ ಮತ್ತು ಅತ್ಯಂತ ಸ್ಪಷ್ಟವಾಗಿ ವೀಕ್ಷಿಸಲು ಅದನ್ನು ಕಣ್ಣಿನಿಂದ 25 ಸೆಂ.ಮೀ. ಅಂತರದಲ್ಲಿಡಬೇಕು. ಕಣ್ಣಿಗೆ ವಸ್ತುವು ಸ್ಪಷ್ಟವಾಗಿ ಹಾಗೂ ಒತ್ತಡರಹಿತವಾಗಿ ಕಾಣುವ ಕನಿಷ್ಟ ದೂರವನ್ನು ಸ್ಪಷ್ಟ ದೃಷ್ಟಿಯ ಕನಿಷ್ಟ ದೂರ ಎನ್ನುತ್ತೇವೆ. ಇದನ್ನು ಕಣ್ಣಿನ ಸಮೀಪ ಬಿಂದು ಎಂದೂ ಸಹ ಕರೆಯುತ್ತೇವೆ. ಸಾಮಾನ್ಯ ದೃಷ್ಟಿ ಹೊಂದಿರುವ ಒಬ್ಬ ಪ್ರೌಢ ವಯಸ್ಕನಿಗೆ ಇದು 25 ಸೆಂ.ಮೀ. ಆಗಿದೆ. ಕಣ್ಣು ಸ್ಪಷ್ಟವಾಗಿ ವೀಕ್ಷಿಸಲು ಸಾಧ್ಯವಾಗುವ ಅತಿ ಗರಿಷ್ಟ ದೂರವನ್ನು ಕಣ್ಣಿನ ಗರಿಷ್ಟ ದೂರ ಬಿಂದು ಎನ್ನುತ್ತೇವೆ. ಇದು ಸಾಮಾನ್ಯ ಕಣ್ಣಿಗೆ ಅನಂತದೂರವಾಗಿದೆ. ಗಮನಿಸಬೇಕಾದ ಅಂಶವೆಂದರೆ ಸಾಮಾನ್ಯ ಕಣ್ಣು 25 ಸೆಂ.ಮೀ. ಮತ್ತು ಅನಂತ ದೂರದ ನಡುವಿನ ವಸ್ತುಗಳನ್ನು ಸ್ಪಷ್ಟವಾಗಿ ನೋಡುತ್ತದೆ. ವಯಸ್ಸಾದವರಿಗೆ ಕೆಲವೊಮ್ಮೆ ಕಣ್ಣಿನ ಸ್ಫಟಿಕ ಮಸೂರವು ಹಾಲಿನಂತೆ ಬೆಳ್ಳಗೆ ಹಾಗೂ ಮೋಡ ಕವಿದಂತಾಗುತ್ತದೆ. ಈ ಸ್ಥಿತಿಯನ್ನು ಕಣ್ಣಿನ ಪೊರೆ (cataract) ಎನ್ನುತ್ತೇವೆ. ಇದು ಭಾಗಶಃ ಅಥವಾ ಪೂರ್ಣ ದೃಷ್ಟಿ ನಷ್ಟ ಉಂಟುಮಾಡುತ್ತದೆ. ಕಣ್ಣಿನಪೊರೆ ಶಸ್ತ್ರಕ್ರಿಯೆಯ ಮೂಲಕ ಕಣ್ಣಿನ ದೃಷ್ಟಿ ಪುನರ್ ಸ್ಥಾಪಿಸಲು ಸಾಧ್ಯವಿದೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET MATHS

MULTIPLE CHOICE QUESTIONS

6) If $A = \begin{bmatrix} \cos\theta & -\sin\theta \\ \sin\theta & \cos\theta \end{bmatrix}$ and $A^T + A = I_2$, then

(A) $\theta = n\pi, n \in Z$ (B) $\theta = (2n+1)\frac{\pi}{2}, n \in Z$

(C) $\theta = 2n\pi \pm \frac{\pi}{3}, n \in Z$ (D) None of these

Ans: (C) $\theta = 2n\pi \pm \frac{\pi}{3}, n \in Z$

Expln: $-A = \begin{bmatrix} \cos\theta & -\sin\theta \\ \sin\theta & \cos\theta \end{bmatrix}, A^T = \begin{bmatrix} \cos\theta & \sin\theta \\ -\sin\theta & \cos\theta \end{bmatrix}$

$A^T + A = \begin{bmatrix} 2\cos\theta & 0 \\ 0 & 2\cos\theta \end{bmatrix} = \begin{bmatrix} 1 & 0 \\ 0 & 1 \end{bmatrix}$ (given)

$\therefore 2\cos\theta = 1 \Rightarrow \cos\theta = \frac{1}{2}$ i.e., $\cos\theta = \cos\frac{\pi}{3}$

$\therefore \theta = 2n\pi \pm \frac{\pi}{3}$.

7) If A and B are two matrices such that AB=A and BA = B, then B^2 is equal to...............

(A) B (B) A
(C) Zero matrix (D) 1

Ans: (A) B

Expln:- Consider BA = B.
$BAB = B^2 \therefore BA = B^2 \Rightarrow B = B^2$

8) Given 5 line segments of lengths 2, 3, 4, 5, 6 units. Then the number of triangles that can be formed by joining these segments is...................

(A) ${}^5C_3 - 3$ (B) ${}^5C_3$
(C) ${}^5C_3 - 1$ (D) ${}^5C_3 - 2$

Ans: (A) ${}^5C_3 - 3$

Expln:-
The line segments 2 and 4 added gives 6 units.
That of 2 and 3 added gives 5 units.
Thus, that of 4 units is not considered,
i.e., there are 3 lines.
The no. of triangles formed is $5C_3 - 3$.

9) How many numbers greater than 10,00,000 be formed from 2, 3, 0, 3, 4, 2, 3?

(A) 420 (B) 360
(C) 400 (D) 300

Ans: (B) 360

Expln:- Any number greater than 10,00,000 will contain all seven digits.

We have to arrange 7 digits out of which 2 occurs twice and 3 occurs thrice. The rest are distinct.

$\therefore$ Number of such arrangements $= \frac{7!}{2! \times 3!}$
$= 420.$

These arrangements will also include those which contain 0 in the first place.

Keeping '0' in first place, remaining 6 digits out of which 2 occurs twice, 3 occurs thrice and rest can be arranged in $\frac{6!}{2! \times 3!} = 60$ ways.

$\therefore$ Required number of arrangements $= 420 - 60$
$= 360.$

10) An urn contains 9 balls, 2 of which are white, 3 blue and 4 black. 3 balls are drawn at random from the urn. The chance that 2 balls will be of the same colour and the third of a different colour is............................

(A) $\frac{45}{84}$ (B) $\frac{55}{84}$

(C) $\frac{35}{84}$ (D) $\frac{25}{84}$

Ans : (B) $\frac{55}{84}$

We can have 2 white and 1 blue or 1 black, 2 blue and 1 white or 1 black and 2 black, 1 white or 1 blue.

The required probability $= \frac{2C_2(3C_1 + 4C_1)}{9C_3} + \frac{3C_2(2C_1 + 4C_1)}{9C_3} + \frac{4C_2(2C_1 + 3C_1)}{9C_3}$

$= \frac{7 + 18 + 30}{84} = \frac{55}{84}.$

11). 6 boys and 6 girls sit in a row at random. The probability that all the girls sit together is

(A) $\frac{1}{432}$ (B) $\frac{12}{431}$

(C) $\frac{1}{132}$ (D) None of these

Ans : (C) $\frac{1}{132}$

Expln:-

Suppose 6 boys are seated as in the figure.

↑ □ ↑ □ ↑ □ ↑ □ ↑ □ ↑ □ ↑
B_1 B_2 B_3 B_4 B_5 B_6

There are 7 places for girls which can be considered as 1 unit.

Total 12 persons are there who can be arranged in 12! Ways.

$\therefore$ Required probability $= \frac{6! \times 7!}{12!}$

$= \frac{6 \times 5 \times 4 \times 3 \times 2 \times 1 \times 7!}{12 \times 11 \times 10 \times 9 \times 8 \times 7!} = \frac{1}{132}.$

12) Three dice are rolled once. The chance of getting a score of 5 is..........................

(A) $\frac{5}{216}$ (B) $\frac{1}{6}$

(C) $\frac{1}{36}$ (D) $\frac{1}{7^2}$

Ans : (C) $\frac{1}{36}$

Expln:- Since three dice are thrown, the total number of points in the sample space S is $6 \times 6 \times 6 = 216$.
E = Event of getting a total of 5.
E= {(1, 1, 3), (1, 3, 1), (3, 1, 1), (1, 2, 2), (2, 1, 2), (2, 2, 1)}

n(E) = 6. $\therefore$ Required probability $= \frac{6}{216} = \frac{1}{36}$.

ತಿರುವನಂತಪುರ– ಕಾಸರಗೋಡು ರೈಲು ಸಂಚಾರ ಸೇವೆ ಮಂಗಳೂರು ಸೆಂಟ್ರಲ್ ನಿಲ್ದಾಣದವರೆಗೆ ವಿಸ್ತರಣೆ

ಕಲಬುರಗಿ–ಬೆಂಗಳೂರು 'ವಂದೇ ಭಾರತ್' ಆರಂಭ

ಪ್ರಜಾವಾಣಿ ವಾರ್ತೆ

ಕಲಬುರಗಿ/ಮಂಗಳೂರು: ಕಲಬುರಗಿ–ಬೆಂಗಳೂರು ಮತ್ತು ಮಂಗಳೂರು ಸೆಂಟ್ರಲ್ ನಿಲ್ದಾಣದವರೆಗೆ ವಿಸ್ತರಣೆಯಾಗಿರುವ ತಿರುವನಂತಪುರ–ಕಾಸರಗೋಡು ವಂದೇಭಾರತ್ ರೈಲು ಸೇವೆಗಳಿಗೆ ಪ್ರಧಾನಿ ನರೇಂದ್ರ ಮೋದಿ, ಮಂಗಳವಾರ ಗುಜರಾತ್‌ನ ಅಹಮದಾಬಾದ್‌ನಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಹಸಿರು ನಿಶಾನೆ ತೋರಿದರು.

ಕಲಬುರಗಿ– ಬೆಂಗಳೂರು ಮಧ್ಯೆ ಈ ರೈಲು ವಾರದಲ್ಲಿ ಆರು ದಿನ ಸಂಚರಿಸಲಿದೆ. ಉದ್ಘಾಟನೆಯ ನಿಮಿತ್ತ ಮಂಗಳವಾರ ಬೆಳಿಗ್ಗೆ 9.40ಕ್ಕೆ ಹೊರಟ ರೈಲಿನಲ್ಲಿ ಆಹ್ವಯಿತ ಮೇರೆಗೆ ವಿದ್ಯಾರ್ಥಿಗಳು, ಪಾಸ್ ಹೊಂದಿದ ಉದ್ಯಮಿಗಳು, ರಾಜಕೀಯ ಮುಖಂಡರು ಪ್ರಯಾಣಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಸದ ಡಾ.ಉಮೇಶ ಜಾಧವ, ಶಾಸಕ ಬಸವರಾಜ ಮತ್ತಿಮಡು ಸೇರಿ ಹಲವರು ಪಾಲ್ಗೊಂಡಿದ್ದರು.



ಕಲಬುರಗಿಯಿಂದ ವಂದೇ ಭಾರತ್ ರೈಲಿನಲ್ಲಿ ಮಕ್ಕಳು ಪ್ರಯಾಣಿಸಿದರು. –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಈ ರೈಲು 8 ಹವಾನಿಯಂತ್ರಿತ ಬೋಗಿಗಳನ್ನು ಹೊಂದಿದೆ. ಸುಮಾರು 500 ಮಂದಿ ಪ್ರಯಾಣಿಸಬಹುದು. ಸ್ವಯಂಚಾಲಿತ ಬಾಗಿಲು, ಜಿಪಿಎಸ್ ಆಧಾರಿತ ಧ್ವನಿ ಮಾಹಿತಿ, ನಿಲ್ದಾಣದ ದೃಶ್ಯ ಮಾಹಿತಿ, ಶೌಚಾಲಯ, ಪ್ರತಿ ಬೋಗಿಯಲ್ಲಿ ಆಹಾರ ಪೂರೈಕೆ ವ್ಯವಸ್ಥೆ ಇದೆ. ಸುಮಾರು 545 ಕಿ.ಮೀ. ದೂರದ ಪ್ರಯಾಣ ದರವನ್ನು ಇನ್ನೂ ಪ್ರಕಟಿಸಿಲ್ಲ.

ಸಮಯ ಮತ್ತು ನಿಲುಗಡೆ: ಕಲಬುರಗಿಯಿಂದ ಬೆಳಿಗ್ಗೆ 5.15ಕ್ಕೆ ಹೊರಡುವ ರೈಲು ವಾಡಿಗೆ 5.40, ರಾಯಚೂರಿಗೆ 6.53, ಮಂತ್ರಾಲಯಂ ರೋಡ್ 7.08, ಗುಂತಕಲ್ 8.25, ಅನಂತಪುರ 9.28, ಧರ್ಮಾವರಂ 10.50, ಯಲಹಂಕ 12.45, ಬೈಯ್ಯಪ್ಪನಹಳ್ಳಿಯ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ಗೆ 2 ಗಂಟೆಗೆ ತಲುಪಲಿದೆ. ಬೈಯ್ಯಪ್ಪನಹಳ್ಳಿಯಿಂದ ಮಧ್ಯಾಹ್ನ 2.40ಕ್ಕೆ ಹೊರಟು ಯಲಹಂಕಕ್ಕೆ 3.08, ಧರ್ಮಾವರಂ ಸಂಜೆ 5.45, ಅನಂತಪುರ, 5.58, ಗುಂತಕಲ್ 7, ಮಂತ್ರಾಲಯಂ ರೋಡ್ ರಾತ್ರಿ 8.15, ರಾಯಚೂರು ರಾತ್ರಿ 8.45, ವಾಡಿ ರಾತ್ರಿ 11.05 ಮತ್ತು ಕಲಬುರಗಿಗೆ ರಾತ್ರಿ 11.30ಕ್ಕೆ ತಲುಪಲಿದೆ.

ಪ್ರತಿಭಟನೆ: ವಂದೇ ಭಾರತ್ ರೈಲು ಯಾದಗಿರಿಯಲ್ಲಿ ನಿಲುಗಡೆಗೆ ಒತ್ತಾಯಿಸಿ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಕಾರ್ಯಕರ್ತರು ಮಂಗಳವಾರ ರೈಲು ನಿಲ್ದಾಣ ಬಳಿ ಪ್ರತಿಭಟಿಸಿದರು.

ಇಂದಿನಿಂದ ಸಂಚಾರ ಆರಂಭ

ಉದ್ಘಾಟನಾ ಸಮಾರಂಭದ ಸಲುವಾಗಿ ವಂದೇ ಭಾರತ್ ಎಕ್ಸ್‌ಪ್ರೆಸ್ ವಿಶೇಷ ರೈಲು ಮಂಗಳೂರು ಸೆಂಟ್ರಲ್ ನಿಲ್ದಾಣದಿಂದ ಬೆಳಿಗ್ಗೆ 9.40ಕ್ಕೆ ಹೊರಟು ಕಾಸರಗೋಡನ್ನು ಬೆಳಿಗ್ಗೆ 10.15ಕ್ಕೆ ತಲುಪಿತು.

ಅಲ್ಲಿಂದ 10.30ಕ್ಕೆ ಹೊರಟ ರೈಲು ಮಂಗಳೂರು ಸೆಂಟ್ರಲ್ ನಿಲ್ದಾಣವನ್ನು ಮಧ್ಯಾಹ್ನದ ವೇಳೆ ತಲುಪಿತು. ರೈಲ್ವೆ ಹೋರಾಟಗಾರರು, ವಿದ್ಯಾರ್ಥಿಗಳು ಈ ವಿಶೇಷ ರೈಲಿನಲ್ಲಿ ಪ್ರಯಾಣ ಬೆಳೆಸಿದರು. ಮಂಗಳೂರು ಸೆಂಟ್ರಲ್– ತಿರುವನಂತಪುರ ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ದೈನಂದಿನ ಸೇವೆ ಬುಧವಾರದಿಂದ (ಮಾ.13) ಆರಂಭವಾಗಲಿದೆ.

ಮಂಗಳೂರು ಸೆಂಟ್ರಲ್ ನಿಲ್ದಾಣದಿಂದ ಬೆಳಿಗ್ಗೆ 6.25ಕ್ಕೆ ಹೊರಟು, ತಿರುವನಂತಪುರವನ್ನು ಮಧ್ಯಾಹ್ನ 3.05ಕ್ಕೆ ತಲುಪಲಿದೆ. ಅಲ್ಲಿಂದ ಸಂಜೆ 4.05ಕ್ಕೆ ಹೊರಟು ರಾತ್ರಿ 12.40ಕ್ಕೆ ಮಂಗಳೂರು ಸೆಂಟ್ರಲ್ ನಿಲ್ದಾಣವನ್ನು ತಲುಪಲಿದೆ.



ಮಂತ್ರಾಲಯದ ಮಠದ ಆವರಣದಲ್ಲಿ ಮಂಗಳವಾರ ರಥೋತ್ಸವ ನಡೆಯಿತು

ಶ್ರೀ ರಾಘವೇಂದ್ರ ಗುರುವೈಭವೋತ್ಸವ

ಪ್ರಜಾವಾಣಿ ವಾರ್ತೆ

ರಾಯಚೂರು: ಶ್ರೀ ರಾಘವೇಂದ್ರ ಗುರುವೈಭವೋತ್ಸವ ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಮಂತ್ರಾಲಯ ಮಠದಲ್ಲಿ ಮಂಗಳವಾರ ಅದ್ದೂರಿಯಾಗಿ ನಡೆಯಿತು.

ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರು ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ಪಾದುಕೆಗಳಿಗೆ ಪಟ್ಟಾಭಿಷೇಕ ನೆರವೇರಿಸಿದರು. ನಂತರ ಪಾದುಕೆಗಳನ್ನು ಸುವರ್ಣ ಸಿಂಹಾಸನದ ಮೇಲೆ ಇರಿಸಲಾಯಿತು. ಅಲ್ಲಿ ಪುಷ್ಪಾಭಿಷೇಕ, ಕನಕಾಭಿಷೇಕ ಮತ್ತು ರತ್ನಾಭಿಷೇಕ ಮಾಡಲಾಯಿತು.

ಈ ಸಂದರ್ಭದಲ್ಲಿ ಮಂತ್ರಾಲಯ ಮತ್ತು ಶಾಖಾ ಮಠಗಳಲ್ಲಿ ಉಚಿತವಾಗಿ ವಿತರಿಸಲಾಗುವ ಶ್ರೀ ಕ್ರೋಧಿ ನಾಮ ಸಂವತ್ಸರ ಪಂಚಾಂಗವನ್ನು ಸ್ವಾಮೀಜಿ ಅವರು ಉದ್ಘಾಟಿಸಿದರು.

ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣ

ಶಂಕಿತನಿಗೆ ಅವಳಿನಗರದಲ್ಲೂ ಶೋಧ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ಶಂಕಿತ ಆರೋಪಿಗಾಗಿ ರಾಷ್ಟ್ರೀಯ ತನಿಖಾ ದಳದ (ಎನ್ಐಎ) ಸಿಬ್ಬಂದಿ ಹುಬ್ಬಳ್ಳಿ–ಧಾರವಾಡದಲ್ಲೂ ಶೋಧ ಕಾರ್ಯ ಕೈಗೊಂಡಿದೆ.

ಶಂಕಿತ ಆರೋಪಿ ಬಳ್ಳಾರಿ, ಕಲಬುರಗಿ, ಹೊಸಪೇಟೆ ಸುತ್ತಾಡಿದ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಎನ್ಐಎ ಸಿಬ್ಬಂದಿ ಅಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಿದ್ದು ಶಂಕಿತ ಓಡಾಡಿದ ಸ್ಥಳಗಳನ್ನು ಗುರುತಿಸಿ, ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಿದ್ದಾರೆ. ಆದರೆ, ಬಾಂಬ್ ಇಟ್ಟ ಆರೋಪಿ ಪತ್ತೆಯಾಗದ ಕಾರಣ ಎನ್ಐಎ ರಾಜ್ಯಾದ್ಯಂತ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆಗೆ ಸೂಚಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

> ಶಂಕಿತನು ಅವಳಿ ನಗರಕ್ಕೂ ಬಂದು ಹೋಗಿರುವ ಗುಮಾನಿ ಮೇಲೆ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ
> **ರೇಣುಕಾ ಸುಕುಮಾರ್,** ಪೊಲೀಸ್ ಕಮಿಷನರ್, ಹುಬ್ಬಳ್ಳಿ–ಧಾರವಾಡ

ಫೆಬ್ರುವರಿ 27ರಿಂದ ಮಾರ್ಚ್ 7 ರವರೆಗೆ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ವಿಡಿಯೊ ದೃಶ್ಯಾವಳಿ ಪರಿಶೀಲನೆಯನ್ನು ಒಂದು ತಂಡ ಮಾಡಿದರೆ, ಲೈವ್ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆಯನ್ನು ಮತ್ತೊಂದು ತಂಡ ಮಾಡುತ್ತಿದೆ. 100ಕ್ಕೂ ಹೆಚ್ಚು ವಿಡಿಯೊ ದೃಶ್ಯಾವಳಿಗಳ ಪರಿಶೀಲನೆ ನಡೆಸಲಾಗಿದೆ.

'ನಗರಕ್ಕೆ ಪ್ರವೇಶಿಸುವ ಸ್ಥಳಗಳಲ್ಲಿ ಹಾಗೂ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಪ್ರಮುಖ ವೃತ್ತಗಳು ಹಾಗೂ ಜನದಟ್ಟಣೆ ಪ್ರದೇಶಗಳಲ್ಲಿ ಪೊಲೀಸ್ ಇಲಾಖೆ, ಮಹಾನಗರ ಪಾಲಿಕೆಯ ವತಿಯಿಂದ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳ ವಿಡಿಯೊ ದೃಶ್ಯಾವಳಿ ಪರಿಶೀಲನೆ ನಡೆದಿದೆ. ಪ್ರಮುಖ ಬಡಾವಣೆಗಳ ಮನೆಗಳಲ್ಲಿ ಅಳವಡಿಸಿದ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

16ಕ್ಕೆ ಯಕ್ಷಗಾನ ಕಲಾವಿದೆಯರ ರಾಜ್ಯ ಸಮ್ಮೇಳನ

ಮಂಗಳೂರು: ಯಕ್ಷಗಾನ ಕಲಾವಿದೆಯರ ರಾಜ್ಯಮಟ್ಟದ ಸಮ್ಮೇಳನ 'ಯಕ್ಷ ಸುಮತಿ–2024' ಮಾರ್ಚ್ 16 ರಂದು ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ನಡೆಯಲಿದೆ.

ಬ್ರಹ್ಮಾವರ ನಾದಸೂರಪುರ ಯಕ್ಷರಕ್ಷಣಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರಿಂಜದ ಯಕ್ಷ ಮನಸು, ಮಂಗಳೂರು ವಿಶ್ವವಿದ್ಯಾಲಯ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ವಿಶ್ವವಿದ್ಯಾಲಯ ಸಂಧ್ಯಾ ಕಾಲೇಜಿನ ತುಳು ಸ್ನಾತಕೋತ್ತರ ವಿಭಾಗದ ಸಹಯೋಗದಲ್ಲಿ ನಡೆಯಲಿದೆ ಎಂದು ಕಾರ್ಯಕ್ರಮದ ನಿರ್ದೇಶಕ ಶುಭಾಶಯ ಜೈನ್ ಇಲ್ಲಿ ತಿಳಿಸಿದರು.

ಪ್ರಾಸಿಕ್ಯೂಷನ್ ಪ್ರಭಾರ ನಿರ್ದೇಶಕರ ನೇಮಕಾತಿ ರದ್ದು

ಬೆಂಗಳೂರು: ಪ್ರಾಸಿಕ್ಯೂಷನ್ ನಿರ್ದೇಶನಾಲಯದ ಪ್ರಭಾರ ನಿರ್ದೇಶಕ ಎಚ್.ಕೆ.ಜಗದೀಶ್ ನೇಮಕಾತಿಯನ್ನು ರದ್ದುಪಡಿಸಿರುವ ಹೈಕೋರ್ಟ್, 'ತಕ್ಷಣದಿಂದ ಆದೇಶ ಜಾರಿಗೊಳಿಸಬೇಕು, ವಿಳಂಬ ಮಾಡದೆ ನಿಯಮಾನುಸಾರ ಅರ್ಹರನ್ನು ನೇಮಕ ಮಾಡಬೇಕು' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ವಕೀಲೆ ಸುಧಾ ಕಾಟ್ವ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

'ಈ ಹುದ್ದೆಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಸಮ್ಮತಿ ಅಗತ್ಯ. ಆದರೆ, ಅವರ ಸಮ್ಮತಿ ಪಡೆದಿಲ್ಲ. ಅರ್ಹತೆ ಇಲ್ಲದವರನ್ನು ಪ್ರಭಾರ ಹುದ್ದೆಗೆ ನೇಮಿಸುವಂತಿಲ್ಲ. ಪ್ರಭಾರ ನಿರ್ದೇಶಕ ಒಂದು ವರ್ಷದ ನಂತರ ಮುಂದುವರಿಯುವಂತಿಲ್ಲ. ಆದರೆ, ಹಾಲಿ ನೇಮಕಾತಿಯು 2019ರಿಂದಲೂ ಮುಂದುವರಿಯುತ್ತಿದ್ದು, ಇದು ಒಳ್ಳೆಯ ಬೆಳವಣಿಗೆ ಅಲ್ಲ' ಎಂದು ಪೀಠ ಹೇಳಿತು.

'ಜಗದೀಶ್ ಅವರನ್ನು, ಅಪರಾಧ ಪ್ರಕ್ರಿಯಾ ಸಂಹಿತೆ–1973 (ಸಿಆರ್‌ಪಿಸಿ) ಮತ್ತು ಕರ್ನಾಟಕ ನಾಗರಿಕ ಸೇವೆಗಳ ಅಧಿನಿಯಮ–1966ಕ್ಕೆ (ಕೆಸಿಎಸ್‌ಆರ್) ವಿರುದ್ಧವಾಗಿ 2019ರ ಆಗಸ್ಟ್ 5ರಂದು ಪ್ರಾಸಿಕ್ಯೂಷನ್ ವಿಭಾಗದ ಪ್ರಭಾರ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದರು. ಅರ್ಜಿದಾರರ ಪರ ಎಸ್.ಉಮಾಪತಿ ಅವರು ವಾದ ಮಂಡಿಸಿದರು.

ಮೈಸೂರು: ಸ್ವಪಕ್ಷೀಯರ ವಿರುದ್ಧವೇ ಸಂಸದರ 'ಪ್ರತಾಪ'; ಯದುವೀರ್ ವಿರುದ್ಧವೂ ಪರೋಕ್ಷ ವಾಗ್ದಾಳಿ

ಬಿಜೆಪಿಯಲ್ಲಿ ಅಸಮಾಧಾನದ ಹೊಗೆ

ಪ್ರಜಾವಾಣಿ ವಾರ್ತೆ

ಮೈಸೂರು: ಅಭ್ಯರ್ಥಿ ಘೋಷಣೆಗೆ ಮುನ್ನವೇ ಮೈಸೂರಿನ ಬಿಜೆಪಿ ಪಾಳಯದಲ್ಲಿ ಅಸಮಾಧಾನದ ಹೊಗೆ ಎದ್ದಿದ್ದು, ಹಾಲಿ ಸಂಸದ ಪ್ರತಾಪ ಸಿಂಹ ತಮ್ಮ ಪಕ್ಷದ ನಾಯಕರ ವಿರುದ್ಧವೇ ಹರಿಹಾಯ್ದಿದ್ದಾರೆ.

ಮೈಸೂರು–ಕೊಡಗು ಕ್ಷೇತ್ರದಿಂದ ಟಿಕೆಟ್ ಕೈ ತಪ್ಪುವ ಸಾಧ್ಯತೆ ದಟ್ಟವಾಗುತ್ತಲೇ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯ ಕೆಲವು ರಾಜ್ಯ ನಾಯಕರ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು. ಪಕ್ಷದ ಸಂಭಾವ್ಯ ಅಭ್ಯರ್ಥಿ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಹೊಗಳುತ್ತಲೇ ಕಾಲೆಳೆದರು.

ನಂತರ ನಗರದ ಬೋಗಾದಿಯಲ್ಲಿ ನಡೆದ ಪಕ್ಷದ ಚುನಾವಣಾ ನಿರ್ವಹಣಾ ಸಮಿತಿ ಸಭೆಯಲ್ಲೂ ಅಸಮಾಧಾನ ವ್ಯಕ್ತಪಡಿಸಿದ ಪ್ರತಾಪ ಸಿಂಹ, ಮಾತು ಮುಗಿಸುತ್ತಲೇ ವೇದಿಕೆಯಿಂದ ನಿರ್ಗಮಿಸಿದರು. ಬಿಜೆಪಿಯ ಕರ್ನಾಟಕ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಭೇಟಿಗೆಂದು ಬೆಂಗಳೂರಿಗೆ ತೆರಳಿದರು.

'ನನಗೆ ಈ ಕ್ಷಣಕ್ಕೂ ಟಿಕೆಟ್ ಸಿಗುವ ವಿಶ್ವಾಸವಿದೆ. ಸಂಘಟನೆ ಹಾಗೂ ಸಿದ್ಧಾಂತಕ್ಕೆ ನಾನು ನಿಂತಿರುವ ರೀತಿ ಪರಿಗಣಿಸಿ ನನಗೆ ಟಿಕೆಟ್ ಕೊಡಬೇಕು. ಬಿಜೆಪಿಯ 25 ಹಾಲಿ ಸಂಸದರಲ್ಲಿ ಹಿಂದುತ್ವದ ಬದ್ಧತೆಯಲ್ಲಿ ನನಗೆ ಸಮನಾದ ಮತ್ತೊಬ್ಬ ಸಂಸದರಿಲ್ಲ' ಎಂದರು.



ನನಗೇ ಟಿಕೆಟ್ ಸಿಗುವ ವಿಶ್ವಾಸವಿದೆ. ಯದುವೀರ್ ಅವರಿಗೆ ಸಿಕ್ಕರೆ ನಾನು ಕಾರ್ಯಕರ್ತರ ಜೊತೆಗೂಡಿ ಪಕ್ಷದ ಬ್ಯಾನರ್, ಬಂಟಿಂಗ್ಸ್ ಕಟ್ಟುತ್ತೇನೆ
ಪ್ರತಾಪ ಸಿಂಹ, ಬಿಜೆಪಿ ಸಂಸದ

'ಈ ಹಿಂದೆ ಇಲ್ಲಿ ಬಿಜೆಪಿಯಿಂದ ಗೆದ್ದವರು ಹೇಗೆ ಪಕ್ಷ ಕಟ್ಟಿದ್ದರೆಂಬುದು ಗೊತ್ತಿದೆ. ನಿಮ್ಮ ಮನೆ ಕಾಯುವವರಿಗೆ ಟಿಕೆಟ್ ಕೊಡಬೇಕೇ ಹೊರತು ನಾವೇ ಅವರ ಮನೆ ಕಾಯುವಂತೆ ಆಗಬಾರದು' ಎಂದು ಎಚ್ಚರಿಸಿದರು.

ಯದುವೀರ್ ವಿರುದ್ಧ ವಾಗ್ದಾಳಿ: 'ಎ.ಸಿ. ಕೋಣೆಯಲ್ಲಿ, ಸುಖದ ಸುಪ್ಪತ್ತಿಗೆಯಲ್ಲಿರುವವರು ಜನರ ಭಾವನೆಯನ್ನು ಹಂಚಿಕೊಳ್ಳುತ್ತೇವೆಂದು ಬಂದಾಗ ಖಂಡಿತ ಸ್ವಾಗತಿಸಬೇಕು. ಇಂತಹ ಉದಾರ ಮನಸ್ಸನ್ನು ಹೊಂದಿರುವ ಯದುವೀರ್ ಸ್ಪರ್ಧೆಯನ್ನು ಸ್ವಾಗತಿಸುವೆ. ಅದಕ್ಕಾಗಿ ಪಕ್ಷದ ರಾಜ್ಯ ನಾಯಕರನ್ನು ಅಭಿನಂದಿಸುವೆ' ಎಂದು ಲೇವಡಿ ಮಾಡಿದರು.

'ಅರಮನೆಯಲ್ಲಿ ಆರಾಮವಾಗಿ ಇರುವಂತಹ ವ್ಯಕ್ತಿಯು ಬಿಜೆಪಿಯ ಸಾಮಾನ್ಯ ಕಾರ್ಯಕರ್ತನಾಗಿ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಕರಪತ್ರ ಹಿಡಿದು ಪ್ರತಿಭಟನೆ ಮಾಡುತ್ತಾ, ಸಾಮಾನ್ಯ ಕಾರ್ಯಕರ್ತರ ಜೊತೆ ಕುಳಿತು ಘೋಷಣೆ ಕೂಗಲು ಸಿದ್ಧರಾಗಿದ್ದಾರೆ ಎನ್ನುವುದಾದರೆ ಅದನ್ನು ಶ್ಲಾಘಿಸಲೇಬೇಕಾಗುತ್ತದೆ' ಎಂದು ಮೂದಲಿಸಿದರು.

'ಬಾಹುಬಲಿ ಸಿನಿಮಾದಲ್ಲಿ ರಾಜಮಾತೆ ಅರಮನೆಯಿಂದ ಹೊರಹಾಕಿದ ಬಳಿಕ ಅಮರೇಂದ್ರ ಬಾಹುಬಲಿ ಜನಸಾಮಾನ್ಯರ ಜೊತೆ ಬಂದು ಸೇರಿಕೊಂಡ. ಆದರೆ ಇವರು ಸ್ವ ಇಚ್ಛೆಯಿಂದ ಬರುತ್ತಿದ್ದಾರೆ ಎಂದರೆ ನಾವು ಖುಷಿ ಪಡಬೇಕು' ಎಂದರು.

'ಮೈಸೂರು ರಾಜರು ಮೈಸೂರು ಅರಮನೆ, ವಸ್ತುಪ್ರದರ್ಶನ ಪ್ರಾಧಿಕಾರ ಮೈದಾನ, ಇಲ್ಲಿನ ವಿವಿಧ ಬಡಾವಣೆ ಸೇರಿದಂತೆ ಅನೇಕ ಸಾರ್ವಜನಿಕ ಆಸ್ತಿಗಳ ಮೇಲೆ ದಾವೆ ಹೂಡಿ ತಮ್ಮ ಆಸ್ತಿ ಎಂದು ಆದೇಶ ತಂದಿದ್ದಾರೆ. ಈಗ ಪ್ರಜೆಗಳ ಪ್ರತಿನಿಧಿ ಎಂದಾದ ಮೇಲೆ ಜನರ ನೋವಿಗೆ ಸ್ಪಂದಿಸಬೇಕಾಗುತ್ತದೆ. ಯದುವೀರ್ ಅವರು ಈ ಎಲ್ಲ ಆಸ್ತಿಯನ್ನು ಜನರಿಗೆ ಬಿಟ್ಟುಕೊಡುತ್ತಾರೆ. ಇದರಿಂದ ಮೈಸೂರಿಗೆ ಅನುಕೂಲ ಆಗುತ್ತದೆ' ಎಂದು ವ್ಯಂಗ್ಯವಾಡಿದರು.

ಟಿಕೆಟ್ ಘೋಷಣೆಗೂ ಮುನ್ನವೇ ಸಂಸದ ಪ್ರತಾಪಸಿಂಹ ವಿಚಲಿತರಾಗಿ ಮಾತನಾಡುವುದು ಬೇಡ. ಅವರಿಗೇ ಟಿಕೆಟ್ ಸಿಗಬಹುದು
ಟಿ.ಎಸ್. ಶ್ರೀವತ್ಸ, ಕೆ.ಆರ್. ಕ್ಷೇತ್ರದ ಶಾಸಕ

ಮಹಾರಾಜರು ಸಂಸ್ಥಾನದ ಅಭಿವೃದ್ಧಿಗೆ ಸರ್ವಸ್ವವನ್ನೂ ಅರ್ಪಿಸಿದ್ದಾರೆ. ಈಗ ಯದುವೀರ ಬಗ್ಗೆ ಹಗುರವಾಗಿ ಮಾತನಾಡಬಾರದು
ಎಲ್. ನಾಗೇಂದ್ರ
ಬಿಜೆಪಿ ಮೈಸೂರು ನಗರ ಘಟಕ ಅಧ್ಯಕ್ಷ

4 ಬಾರಿ ಶಾಸಕನಾಗಿದ್ದ ನನಗೇ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಕೊಡಲಿಲ್ಲ. ಕಾರ್ಯಕರ್ತರ ಸಭೆಯಲ್ಲಿ ಪ್ರತಾಪಸಿಂಹ ನನಗೆ ಆಡಿದ ಮಾತುಗಳನ್ನು ನೆನಪಿಸಿಕೊಳ್ಳಲಿ
ಎಸ್.ಎ. ರಾಮದಾಸ್, ಬಿಜೆಪಿ ಮುಖಂಡ

ರಾಧಾಮೋಹನ್ ಭೇಟಿಯಾದ ಪ್ರತಾಪ

ಬೆಂಗಳೂರು: ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಕೈತಪ್ಪುವ ಆತಂಕದಲ್ಲಿರುವ ಹಾಲಿ ಸಂಸದ ಪ್ರತಾಪ್ ಸಿಂಹ ಅವರು ಪಕ್ಷದ ರಾಜ್ಯ ಚುನಾವಣಾ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಅವರನ್ನು ಮಂಗಳವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಮೈಸೂರಿನಿಂದ ಬೆಂಗಳೂರಿಗೆ ಬಂದ ಅವರು, ಸದಾಶಿವನಗರದ ಅಪಾರ್ಟ್‌ಮೆಂಟ್ ಒಂದರಲ್ಲಿ ರಾಧಾಮೋಹನ್ ಅವರನ್ನು ಭೇಟಿಮಾಡಿದರು. ಭೇಟಿಯ ಸಂದರ್ಭದಲ್ಲಿ ಬಿಜೆಪಿಯ ಕೆಲವು ಪ್ರಮುಖರಷ್ಟೇ ಇದ್ದರು. ಭೇಟಿಯ ಬಳಿಕ ಪ್ರತಾಪ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಚುನಾವಣಾ ತಯಾರಿಗಾಗಿ ಬೆಂಗಳೂರಿಗೆ ಬಂದಿರುವ ರಾಧಾಮೋಹನ್, ಸದಾಶಿವನಗರದಲ್ಲಿ ವಾಸ್ತವ್ಯ ಹೂಡಿದ್ದಾರೆ. ಗೋಪ್ಯ ಸಭೆಗಳನ್ನು ಅಲ್ಲಿಯೇ ನಡೆಸುತ್ತಿದ್ದಾರೆ. ಟಿಕೆಟ್ ಹಂಚಿಕೆಗೆ ಸಂಬಂಧಿಸಿದಂತೆ ಗೊಂದಲಗಳ ನಿವಾರಣೆಗೂ ಅಲ್ಲಿಯೇ ಸಭೆ ನಡೆಸುತ್ತಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರತಿಕ್ರಿಯೆಗೆ ಸಿಗದ ಯದುವೀರ್

ರಾಜವಂಶಸ್ಥ ಯದುವೀರ್ ಅವರೇ ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಆಗಲಿದ್ದಾರೆ ಎನ್ನಲಾಗುತ್ತಿದೆ. ಆದರೆ ಈ ಕುರಿತು ಪ್ರತಿಕ್ರಿಯೆ ಪಡೆಯಲು ಅವರು ಮಾಧ್ಯಮಗಳಿಗೆ ಲಭ್ಯವಾಗಿಲ್ಲ. ಸ್ಪರ್ಧೆ ಬಗ್ಗೆ ಎಲ್ಲಿಯೂ ಅವರು ಹೇಳಿಕೊಂಡಿಲ್ಲ.

ನಾಯಕರ ಆಕ್ಷೇಪ

ಪ್ರತಾಪ ಸಿಂಹ ಹೇಳಿಕೆ ಖಂಡಿಸಿ ಮಧ್ಯಾಹ್ನ ಬಿಜೆಪಿ ಮುಖಂಡರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ ಸುದ್ದಿಗೋಷ್ಠಿ ನಡೆಸಿದರು. 'ಪಕ್ಷ ಸೂಚಿಸಿದ ಅಭ್ಯರ್ಥಿ ಪರ ಕೆಲಸ ಮಾಡುತ್ತೇವೆ. ಅಭ್ಯರ್ಥಿ ಘೋಷಣೆಗೆ ಮುನ್ನವೇ ಹೀಗೆ ಟೀಕಿಸುವುದು ಸರಿಯಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಯದುವೀರ್ ಪರ ಮಾವನ ಲಾಬಿ?

• ಆರ್. ಜಿತೇಂದ್ರ

ಮೈಸೂರು: ಇಲ್ಲಿನ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೆಸರು ಮತ್ತೆ ಮುನ್ನಲೆಗೆ ಬರಲು ಅವರ ಮಾವ, ರಾಜಸ್ಥಾನದ ಡುಂಗರ್‌ಪುರ್ ಮನೆತನದ ರಾಜವಂಶಸ್ಥ ಹರ್ಷವರ್ಧನ್ ಸಿಂಗ್ ಡುಂಗರ್‌ಪುರ್ ಪಾತ್ರ ಪ್ರಮುಖವಾಗಿದೆ ಎಂದು ಹೇಳಲಾಗಿದೆ.

ರಾಜಸ್ಥಾನದ ಪ್ರಮುಖ ರಾಜಮನೆತನಗಳಲ್ಲಿ ಒಂದಾದ ಡುಂಗರ್‌ಪುರ್ ವಂಶದ ಹರ್ಷವರ್ಧನ್ ಸಿಂಗ್ ಅವರ ಪುತ್ರಿ ತ್ರಿಷಿಕಾ ಕುಮಾರಿ ಅವರನ್ನು ಮೈಸೂರಿನ ಯದುವೀರ್ ವಿವಾಹವಾಗಿದ್ದಾರೆ.

ಹರ್ಷವರ್ಧನ್ ಸಿಂಗ್ 2016ರಿಂದ 2022ರವರೆಗೆ ಬಿಜೆಪಿಯಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಈಗಲೂ ಬಿಜೆಪಿಯ ಕೇಂದ್ರ ನಾಯಕರ ಜೊತೆ ಉತ್ತಮ ಸಂಬಂಧ ಹೊಂದಿದ್ದಾರೆ. ಅವರೇ ಯದುವೀರ್ ಹೆಸರನ್ನು ಕೇಂದ್ರದ ಮಟ್ಟದಲ್ಲಿ ಪ್ರಸ್ತಾಪ ಮಾಡಿದ್ದು, ಅಳಿಯನನ್ನೂ ರಾಜಕೀಯಕ್ಕೆ ಒಪ್ಪಿಸುವ ಪ್ರಯತ್ನ ನಡೆಸಿದ್ದಾರೆ ಎಂದು ಹೇಳಲಾಗಿದೆ.



ಯದುವೀರ್

ಮೈಸೂರು ಅರಸರಿಗೆ ರಾಜಕೀಯ ಹೊಸತೇನಲ್ಲ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಇಲ್ಲಿಂದಲೇ ಸಂಸದರಾಗಿ ಆಯ್ಕೆಯಾಗಿದ್ದರು. ಒಟ್ಟು ಆರು ಬಾರಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದ ಅವರು ನಾಲ್ಕು ಬಾರಿ ಕಾಂಗ್ರೆಸ್‌ನಿಂದ ಸಂಸದರಾಗಿ ಆಯ್ಕೆಯಾಗಿದ್ದರು. ಎರಡು ಬಾರಿ ಪರಭಾವ ಗೊಂಡಿದ್ದರು. ಒಮ್ಮೆ ಬಿಜೆಪಿ ಅಭ್ಯರ್ಥಿಯಾಗಿಯೂ ಸೋಲು ಕಂಡಿದ್ದರು.

ಮೈಸೂರು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಯದುವೀರ್ ಹೆಸರು ಈ ಹಿಂದೆಯೇ ಕೇಳಿಬಂದಿತ್ತು. ಆದರೆ ಅವರು ರಾಜಕೀಯ ಪ್ರವೇಶವನ್ನು ನಯವಾಗಿ ನಿರಾಕರಿಸುತ್ತಲೇ ಬಂದಿದ್ದಾರೆ. ಪ್ರಮೋದಾದೇವಿ ಒಡೆಯರ್ ಸಹ ಪುತ್ರನ ರಾಜಕೀಯಕ್ಕೆ ಸಮ್ಮತಿಸಿರಲಿಲ್ಲ. ಹಾಗೊಂದು ವೇಳೆ ತಮ್ಮ ಕುಟುಂಬದವರಿಗೆ ರಾಜಕೀಯ ಪ್ರಾತಿನಿಧ್ಯ ಕೊಡಲೇಬೇಕು ಎಂದಾದರೆ ಲೋಕಸಭೆ ಚುನಾವಣೆ ಬದಲಿಗೆ ರಾಜ್ಯಸಭೆಗೆ ನೇರವಾಗಿ ಆರಿಸಿ ಕಳುಹಿಸುವಂತೆ ಕೋರಿದ್ದರು ಎನ್ನಲಾಗಿದೆ.



ಸಮಾವೇಶ ಹೈದರಾಬಾದ್‌ನಲ್ಲಿ ಮಂಗಳವಾರ ನಡೆದ ಬಿಜೆಪಿ ಬೂತ್ ಮಟ್ಟದ ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾರ್ಯಕರ್ತರತ್ತ ಕೈ ಬೀಸಿದರು. ಸಚಿವ ಜಿ. ಕಿಶನ್ ರೆಡ್ಡಿ ಭಾಗವಹಿಸಿದ್ದರು – ಪಿಟಿಐ ಚಿತ್ರ

'ಕಮಲ'ಕ್ಕೆ ಯಾರು ಹುರಿಯಾಳು?

ಚಾಮರಾಜನಗರ: ಮೂರು ಹೆಸರು ಶಿಫಾರಸು, ಇಬ್ಬರ ನಡುವೆ ಪೈಪೋಟಿ, ಹೊಸ ಮುಖ ಖಚಿತ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬ ಬಗ್ಗೆ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಯಾಗುತ್ತಿದೆ.

ರಾಜ್ಯದ 14 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಬಿಜೆಪಿ ಅಂತಿಮಗೊಳಿಸಿದೆ ಎಂದು ಹೇಳಲಾದರೂ, ಈ ಪಟ್ಟಿಯಲ್ಲಿ ಚಾಮರಾಜನಗರ ಕ್ಷೇತ್ರ ಇಲ್ಲ. 'ಟಿಕೆಟ್‌ಗಾಗಿ ಆಕಾಂಕ್ಷಿಗಳ ನಡುವೆ ಪೈಪೋಟಿ ಹೆಚ್ಚಿರುವುದರಿಂದ ನಾಯಕರಿಗೆ ಟಿಕೆಟ್ ಅಂತಿಮಗೊಳಿಸಲಾಗಿಲ್ಲ' ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹಾಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ರಾಜಕೀಯ ನಿವೃತ್ತಿ ಯಾಗುವುದಾಗಿ ಘೋಷಣೆ ಮಾಡಿರುವುದರಿಂದ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದೆ. 11 ಮಂದಿ ಟಿಕೆಟ್‌ಗೆ ಲಾಬಿ ಮಾಡುತ್ತಿದ್ದಾರೆ.

ಕೊಳ್ಳೇಗಾಲದ ಮಾಜಿ ಶಾಸಕ ಎಸ್.ಬಾಲರಾಜ್, ಸಂಸದ ಶ್ರೀನಿವಾಸ್ ಪ್ರಸಾದ್ ಅಳಿಯ ಡಾ.ಎನ್.ಎಸ್. ಮೋಹನ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಮಾಜಿ ಸಚಿವ ಕೋಟೆ ಶಿವಣ್ಣ, ಸಂಸದರ ಮತ್ತೊಬ್ಬ ಅಳಿಯ ಹರ್ಷವರ್ಧನ್, ಮುಖಂಡ ವೆಂಕಟರಣಸ್ವಾಮಿ (ಪಾಪು), ನಿವೃತ್ತ ಐಎಫ್‌ಎಸ್ ಅಧಿಕಾರಿ ರಾಜು, ನಿರ್ದೇಶಕ ಎಸ್.ಮಹೇಂದರ್, ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಮುಖಂಡ ಲಕ್ಷ್ಮಣ್ ಟಿಕೆಟ್ ಆಕಾಂಕ್ಷಿಗಳು.



ಡಾ.ಎನ್.ಎಸ್. ಮೋಹನ್



ಎಸ್.ಬಾಲರಾಜ್

ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಮ್ ಕೂಡ ಪ್ರಬಲ ಆಕಾಂಕ್ಷಿಗಳಾಗಿದ್ದರು. ಇತ್ತೀಚೆಗೆ ಅವರು ನಿಧನರಾಗಿದ್ದಾರೆ. ಅವರ ಪತ್ನಿ ವಾಣಿಯವರಿಗೆ ಟಿಕೆಟ್ ನೀಡಬೇಕು ಎಂದು ಬೆಂಬಲಿಗರು ಒತ್ತಾಯಿಸುತ್ತಿದ್ದಾರೆ.



ರಾಜ್ಯ ನಾಯಕರು ಅಭಿಪ್ರಾಯ ಸಂಗ್ರಹಿಸಿದ್ದು, ಸಂಭಾವ್ಯರ ಹೆಸರು ಶಿಫಾರಸು ಮಾಡಲಿದ್ದಾರೆ. ಸಂಸದೀಯ ಮಂಡಳಿ ಹೆಸರನ್ನು ಅಂತಿಮಗೊಳಿಸಲಿದೆ
ಸಿ.ಎಸ್.ನಿರಂಜನ್ ಕುಮಾರ್, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ, ಚಾಮರಾಜನಗರ

ಹಿರಿಯ ಐಆರ್‌ಎಸ್ ಅಧಿಕಾರಿ, ಗುಂಡ್ಲುಪೇಟೆ ತಾಲ್ಲೂಕಿನ ಸವಕನಹಳ್ಳಿ ಪಾಳ್ಯದ ನಾರಾಯಣಸ್ವಾಮಿ ಅವರ ಹೆಸರೂ ಕೇಳಿಬರುತ್ತಿದೆ.

ಜೊತೆಗೆ, 'ಪಕ್ಷ ಯಾರಿಗೆ ಬೇಕಾದರೂ ಟಿಕೆಟ್ ನೀಡಲಿ, ಆದರೆ ಸ್ಥಳೀಯರನ್ನು ಮಾತ್ರ ಪರಿಗಣಿಸಲಿ' ಎಂಬ ಒತ್ತಾಯವೂ ಆಕಾಂಕ್ಷಿಗಳಿಂದ ಕೇಳಿ ಬಂದಿದೆ.

ಮೂವರ ಹೆಸರು ಅಂತಿಮ

ಕೆಲವು ದಿನಗಳ ಹಿಂದೆ ಬಿಜೆಪಿ ಮುಖಂಡ ಸಿ.ಟಿ.ರವಿ, ಶಾಸಕ ಉಮಾಕಾಂತ್ ಕೋಟ್ಯಾನ್ ನೇತೃತ್ವದ ತಂಡ ಮೈಸೂರಿನಲ್ಲಿ, ಅಭ್ಯರ್ಥಿ ಯಾರಾಗಬೇಕು ಎಂಬ ಬಗ್ಗೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲ ಎಂಟು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಿಜೆಪಿ ಪದಾಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿದೆ. ಆಕಾಂಕ್ಷಿಗಳ ಪೈಕಿ ಹಲವರ ಹೆಸರು ಅಲ್ಲಿ ಪ್ರಸ್ತಾಪವಾಗಿದೆ. ಮೂವರ ಹೆಸರು ಅಂತಿಮವಾಗಿದೆ. ಅವರಲ್ಲಿ ಇಬ್ಬರ ನಡುವೆ ಹೆಚ್ಚಿನ ಪೈಪೋಟಿ ಇದೆ ಎಂದು ತಿಳಿದು ಬಂದಿದೆ.

'ಕೊನೆ ಕ್ಷಣದಲ್ಲಿ ಆಕಾಂಕ್ಷಿಗಳ ಪಟ್ಟಿಯಲ್ಲಿ ಇಲ್ಲದವರೂ ಅಭ್ಯರ್ಥಿಯಾದರೂ ಅಚ್ಚರಿ ಇಲ್ಲ. ಯಾರೇ ಆದರೂ ಈ ಬಾರಿ ಕ್ಷೇತ್ರದಿಂದ ಹೊಸ ಮುಖ ಸ್ಪರ್ಧಿಸುವುದಂತು ಖಚಿತ' ಎಂದು ಹೇಳುತ್ತಾರೆ ಮುಖಂಡರು.

'ವಿ.ಶ್ರೀನಿವಾಸ ಪ್ರಸಾದ್ ಅವರು ತಮ್ಮ ಕಿರಿಯ ಅಳಿಯ ಡಾ.ಎನ್.ಎಸ್. ಮೋಹನ್ ಅವರಿಗೆ ಟಿಕೆಟ್ ನೀಡಬೇಕು ಎಂಬ ಒತ್ತಡ ಹಾಕುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ. ಮೋಹನ್ ಅವರು ಆರ್‌ಎಸ್‌ಎಸ್‌ನೊಂದಿಗೆ ಗುರುತಿಸಿಕೊಂಡಿದ್ದಾರೆ.

ಕಾಂಗ್ರೆಸ್‌ನಲ್ಲಿದ್ದ ಮಾಜಿ ಶಾಸಕ ಎಸ್.ಬಾಲರಾಜ್ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೊಳ್ಳೇಗಾಲ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರಿಂದ ಬಿಜೆಪಿ ಸೇರ್ಪಡೆಗೊಂಡಿದ್ದರು.

'ಯಡಿಯೂರಪ್ಪ ಅವರೊಂದಿಗೆ ಉತ್ತಮ ಒಡನಾಟ ಹೊಂದಿರುವ ಅವರು, ಲೋಕಸಭಾ ಟಿಕೆಟ್ ನೀಡಬೇಕು ಎಂಬ ಷರತ್ತಿನೊಂದಿಗೆ ಬಿಜೆಪಿಗೆ ಸೇರಿದ್ದಾರೆ. ಬಿಜೆಪಿ ನಾಯಕರು ಕೂಡ ಒಪ್ಪಿದ್ದರು ಹಾಗಾಗಿ, ಅವರಿಗೆ ಟಿಕೆಟ್ ಸಿಗಲಿದೆ' ಎಂಬ ನಿರೀಕ್ಷೆಯಲ್ಲಿ ಅವರ ಆಪ್ತರಿದ್ದಾರೆ. ಕೊಳ್ಳೇಗಾಲದ ಮಾಜಿ ಶಾಸಕ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಅವರು ಬಾಲರಾಜ್ ಪರವಾಗಿದ್ದರೆ ಎಂದು ಹೇಳಲಾಗುತ್ತಿದೆ.

ಗೀತಾ ಗೆಲ್ಲಿಸಲು ಯೋಜನೆ: ಶಿವರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ಬೆಳಗಾವಿ/ಹುಬ್ಬಳ್ಳಿ: 'ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ನನ್ನ ಪತ್ನಿ ಗೀತಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದು, ಅವರ ಗೆಲುವಿಗೆ ಬೆಂಬಲವಾಗಿ ನಿಲ್ಲುವುದು ನನ್ನ ಕರ್ತವ್ಯ. ಸಮಯ ಸಿಕ್ಕರೆ ಕಾಂಗ್ರೆಸ್‌ನ ಇತರೆ ಅಭ್ಯರ್ಥಿಗಳ ಪ್ರಚಾರಕ್ಕೆ ಹೋಗುವೆ' ಎಂದು ನಟ ಶಿವರಾಜ್‌ಕುಮಾರ್ ಹೇಳಿದರು.

'ಕರಟಕ ದಮನಕ' ಚಿತ್ರದ ಪ್ರಚಾರಕ್ಕೆ ಸೋಮವಾರ ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಸಲ ಚುನಾವಣೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವೆ' ಎಂದರು.



ಶಿವರಾಜ್ ಕುಮಾರ್

'ಗೀತಾ ಅವರ ತವರು ಶಿವಮೊಗ್ಗ. ಅಲ್ಲೇ ಹುಟ್ಟಿ, ಶಿಕ್ಷಣ ಪಡೆದಿದ್ದಾರೆ. ಈ ಕಾರಣ, ಶಿವಮೊಗ್ಗದಿಂದ ಸ್ಪರ್ಧಿಸುತ್ತಿದ್ದಾರೆ. ಈಗಾಗಲೇ ಅಲ್ಲಿ ಮನೆ ಮಾಡಲಾಗಿದೆ. ಗೀತಾ ಗೆಲ್ಲುವ ವಿಶ್ವಾಸವಿದೆ' ಎಂದರು.

'ಜನಪ್ರತಿನಿಧಿಯಾದರೆ ಜನಸೇವೆ ಮಾಡಲು ಹೆಚ್ಚು ಶಕ್ತಿ ಸಿಗುತ್ತದೆ. ಹಾಗಾಗಿ, ರಾಜಕಾರಣ ಅಗತ್ಯವಿದೆ. ಕಳೆದ ಬಾರಿ ಗೀತಾ ಪರಾಭವಗೊಂಡಿದ್ದರೂ, ಈ ಬಾರಿ ಗೆಲ್ಲಿಸಲು ಯೋಜನೆ ರೂಪಿಸಲಾಗುತ್ತಿದೆ' ಎಂದು ಹೇಳಿದರು.

'ಅಪ್ಪ–ಮಗನದು ಸ್ವಪಕ್ಷೀಯರ ಸೋಲಿಸುವ ದಂಧೆ'

ಕಲಬುರಗಿ: 'ಅಪ್ಪ–ಮಗ ಬಿ.ಎಸ್.ಯಡಿಯೂರಪ್ಪ ಹಾಗೂ ಬಿ.ವೈ. ವಿಜಯೇಂದ್ರಗೆ ಪಕ್ಷದಲ್ಲಿ ತಮಗೆ ಬೇಡವಾದ ಅಭ್ಯರ್ಥಿಗಳನ್ನು ಸೋಲಿಸುವುದೇ ದಂಧೆಯಾಗಿದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಿಎಸ್‌ವೈ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನನ್ನನ್ನು ಸೋಲಿಸಲು ವಿಜಯೇಂದ್ರ ಹಣ ಕಳುಹಿಸಿದ್ದ. ಯಡಿಯೂರಪ್ಪ ಕುಟುಂಬದಲ್ಲಿ ಒಬ್ಬ ಮಗ ಕ್ಯಾಬಿನೆಟ್ ಮಂತ್ರಿಯಾಗಬೇಕು, ಇನ್ನೊಬ್ಬ ಮುಖ್ಯಮಂತ್ರಿಯಾಗಬೇಕು. ಇದು ಯಡಿಯೂರಪ್ಪ ಅವರ ಕೊನೆ ಕನಸು' ಎಂದು ಹರಿಹಾಯ್ದರು.

'ಯಡಿಯೂರಪ್ಪ ಯಾವೊಬ್ಬ ಲಿಂಗಾಯತರನ್ನೂ ಉದ್ಧಾರ ಮಾಡಿಲ್ಲ. ಅವರು ಲಿಂಗಾಯತರೇ ಅಲ್ಲ. ಅವರ ಹಿಂದೆ ಕೆಲವು ಸ್ವಾಮೀಜಿಗಳಿದ್ದಾರೆ. ಹಣ ನೀಡುತ್ತಾನೆ ಅಂತ ಸ್ವಾಮೀಜಿಗಳು ಆತನಿಗೆ ತಥಾಸ್ತು ಎನ್ನುತ್ತಾರೆ' ಎಂದು ಏಕವಚನದಲ್ಲಿ ಟೀಕಿಸಿದರು.

ನಾಲ್ಕು ಕ್ಷೇತ್ರ: ಹಲವು ಬಗೆಯ ಲೆಕ್ಕಾಚಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿ ಯಾರೆಂದು ಖಚಿತವಾದ ಬಳಿಕ ತನ್ನ ಅಭ್ಯರ್ಥಿಯನ್ನು ಪ್ರಕಟಿಸಲು ಬಿಜೆಪಿ ಮುಂದಾಗಿದೆ.

ಹಾಲಿ ಸಂಸದ ಜಿ.ಎಂ. ಸಿದ್ದೇಶ್ವರ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ತಮಗೆ ಟಿಕೆಟ್ ನೀಡದಿದ್ದರೆ ಕುಟುಂಬ ಸದಸ್ಯರಿಗೆ ನೀಡಬೇಕು ಎಂದು ಪಟ್ಟು ಹಿಡಿದಿದ್ದಾರೆ. ಅವರನ್ನು ಕಣಕ್ಕಿಳಿಸುವುದಕ್ಕೆ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ವಿರೋಧ ವ್ಯಕ್ತಪಡಿಸಿದ್ದಾರೆ. ತಮಗೆ ಅಥವಾ ಹೊಸ ಮುಖಗಳಿಗೆ ಅವಕಾಶ ನೀಡಬೇಕು ಎಂದು ಲಾಬಿ ನಡೆಸಿದ್ದಾರೆ. ಕಾಂಗ್ರೆಸ್‌ನಿಂದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಪತ್ನಿ ಪ್ರಭಾ ಅವರನ್ನು ಹುರಿಯಾಳುವನ್ನಾಗಿ ಮಾಡುವ ಬಗ್ಗೆ ಚರ್ಚೆಗಳು ನಡೆದಿವೆ.

ಸೋಮವಾರ ಇಲ್ಲಿ ನಡೆದ ಬಿಜೆಪಿ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ದಾವಣಗೆರೆ ಅಭ್ಯರ್ಥಿ ಬಗ್ಗೆ ಚರ್ಚೆಯಾಗಿದೆ. 'ಕಾಂಗ್ರೆಸ್‌ನಿಂದ ಶಾಮನೂರು ಶಿವಶಂಕರಪ್ಪ ಕುಟುಂಬದವರು ಸ್ಪರ್ಧಿಸಿದರೆ ಸಿದ್ದೇಶ್ವರ ಕುಟುಂಬದವರನ್ನು ಕಣಕ್ಕೆ ಇಳಿಸುವುದು, ಮಹಿಳಾ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದರೆ ಬಿಜೆಪಿಯಿಂದ ಮಹಿಳಾ ಅಭ್ಯರ್ಥಿಯನ್ನು ಅಭ್ಯರ್ಥಿಯನ್ನಾಗಿ ಮಾಡುವುದು, ಹೊಸಬರಿಗೆ ಮಣೆ ಹಾಕಿದರೆ ನಮ್ಮಲ್ಲೂ ಹೊಸ ಮುಖಗಳಿಗೆ ಅವಕಾಶ ಕಲ್ಪಿಸಲು ಚರ್ಚೆಗಳು ನಡೆದಿವೆ' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಚಿಕ್ಕಬಳ್ಳಾಪುರ ಕ್ಷೇತ್ರದ ಅಭ್ಯರ್ಥಿಯಾಗಲು ಮಾಜಿ ಸಚಿವ ಡಾ.ಕೆ. ಸುಧಾಕರ್ ಹಾಗೂ ಶಾಸಕ ಎಸ್.ಆರ್. ವಿಶ್ವನಾಥ್ ಪುತ್ರ ಅಲೋಕ್ ನಡುವೆ ಪೈಪೋಟಿ ಏರ್ಪಟ್ಟಿದೆ. ಅಭ್ಯರ್ಥಿಗಳ ಅಖೈರುಗೊಳಿಸಲು ರಾಜ್ಯದ ಬಿಜೆಪಿ ನಾಯಕರ ಜತೆಗೆ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಕಳೆದ ವಾರ ಸಭೆ ನಡೆಸಿದ್ದರು. ಡಾ. ಸುಧಾಕರ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡುವ ಬಗ್ಗೆ ಸಭೆಯಲ್ಲಿ ಸಹಮತ ವ್ಯಕ್ತವಾಗಿತ್ತು. ಸೋಮವಾರ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಸುಧಾಕರ್ ಅಭ್ಯರ್ಥಿತನಕ್ಕೆ ಆಕ್ಷೇಪ ವ್ಯಕ್ತವಾಯಿತು. 'ತಮ್ಮನ್ನು ಕಣಕ್ಕೆ ಇಳಿಸುವಂತೆ ವರಿಷ್ಠರಿಗೆ ಸುಧಾಕರ್ ಖುದ್ದು ಮನವಿ ಮಾಡಿದ್ದಾರೆ. ಇನ್ನೊಂದೆಡೆ, ಕಾಂಗ್ರೆಸ್‌ನಿಂದ ಬೆಂಗಳೂರು ಉತ್ತರ ಕ್ಷೇತ್ರದಿಂದ ಅಭ್ಯರ್ಥಿಯಾಗಲು ಪ್ರಯತ್ನ ನಡೆಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದ ಬಗ್ಗೆ ಇನ್ನಷ್ಟು ಚರ್ಚೆ ನಡೆಸಿ ತೀರ್ಮಾನಕ್ಕೆ ಬರುವುದು ಉತ್ತಮ' ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು. ಹೀಗಾಗಿ, ಕ್ಷೇತ್ರದ ಅಭ್ಯರ್ಥಿಯ ಹೆಸರು ಅಂತಿಮವಾಗಲಿಲ್ಲ ಎಂದು ಮೂಲಗಳು ತಿಳಿಸಿವೆ.

ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಸಂಸದೆ ಶೋಭಾ ಕರಂದ್ಲಾಜೆ ಅವರ ಕಾರ್ಯವೈಖರಿ, ಆಡಳಿತ ವಿರೋಧಿ ಅಲೆ ಹಾಗೂ ಕ್ಷೇತ್ರದಲ್ಲಿ ನಡೆಯುತ್ತಿರುವ 'ಗೋ ಬ್ಯಾಕ್ ಶೋಭಾ' ಅಭಿಯಾನದ ಬಗ್ಗೆ ವರಿಷ್ಠರು ರಾಜ್ಯ ನಾಯಕರಿಂದ ಮಾಹಿತಿ ಪಡೆದರು. 'ಕೆಲವು ನಾಯಕರು ದುರುದ್ದೇಶಪೂರ್ವಕವಾಗಿ ಈ ಅಭಿಯಾನ ನಡೆಸುತ್ತಿದ್ದಾರೆ. ಶೋಭಾ ಅವರು ಭಾರಿ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ' ಎಂದು ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಮನದಟ್ಟು ಮಾಡುವ ಪ್ರಯತ್ನ ನಡೆಸಿದರು.

'2019ರ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಭಾರತದಲ್ಲಿ ಜಯ ಗಳಿಸಿದ ಪಕ್ಷದ ಏಕೈಕ ಮಹಿಳಾ ಅಭ್ಯರ್ಥಿಯವರು. ಅವರಿಗೆ ಟಿಕೆಟ್ ನಿರಾಕರಿಸಿದರೆ ತಪ್ಪು ಸಂದೇಶ ರವಾನೆಯಾಗಲಿದೆ. ಉಡುಪಿ–ಚಿಕ್ಕಮಗಳೂರಿನಲ್ಲಿ ಹೊಸ ಮುಖಕ್ಕೆ ಮಣೆ ಹಾಕಿ ಬೆಂಗಳೂರು ಉತ್ತರದಲ್ಲಿ ಶೋಭಾ ಅವರನ್ನು ಹುರಿಯಾಳುವನ್ನಾಗಿ ಮಾಡುವುದು ಸೂಕ್ತ' ಎಂದು ಕೆಲವು ನಾಯಕರು ಸಲಹೆ ನೀಡಿದರು. ಉಡುಪಿ–ಚಿಕ್ಕಮಗಳೂರಿನಿಂದ ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಅಭ್ಯರ್ಥಿಯನ್ನಾಗಿ ಮಾಡುವ ಬಗ್ಗೆಯೂ ಪ್ರಸ್ತಾಪವಾಯಿತು. ಆದರೆ, ರಾಷ್ಟ್ರ ರಾಜಕಾರಣಕ್ಕೆ ಬರಲು ಕೋಟ ಒಪ್ಪಲಿಲ್ಲ ಎಂದು ಮೂಲಗಳು ತಿಳಿಸಿವೆ. ಶೋಭಾ ಅವರು ಬೆಂಗಳೂರು ಉತ್ತರಕ್ಕೆ ಅಭ್ಯರ್ಥಿಯಾಗುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಬಿಜೆಪಿ ರಾಜ್ಯ ಘಟಕದ ನಿಕಟಪೂರ್ವ ಅಧ್ಯಕ್ಷರೂ ಆಗಿರುವ ದಕ್ಷಿಣ ಕನ್ನಡ ಸಂಸದ ನಳಿನ್ ಕುಮಾರ್ ಕಟೀಲು ಅವರಿಗೆ 'ಕಡ್ಡಾಯ ನಿವೃತ್ತಿ' ಬಗ್ಗೆ ವರಿಷ್ಠರು ಸಂದೇಶ ರವಾನಿಸಿದ್ದಾರೆ. ಈ ಸಲ ಕ್ಷೇತ್ರದಲ್ಲಿ ಹೊಸಬರಿಗೆ ಅವಕಾಶ ನೀಡಲಾಗುತ್ತದೆ ಎಂದು ಹಿರಿಯ ನಾಯಕರೊಬ್ಬರು ದೂರವಾಣಿ ಕರೆ ಮಾಡಿ ಕಟೀಲ್ ಅವರಿಗೆ ತಿಳಿಸಿದ್ದಾರೆ.

'ಕಟೀಲ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ಅರುಣ್ ಕುಮಾರ್ ಪುತ್ತಿಲ ಪಕ್ಷೇತರರಾಗಿ ಸ್ಪರ್ಧಿಸಲಿದ್ದಾರೆ. ಇದರಿಂದಾಗಿ, ಬಿಜೆಪಿ ಮತಗಳು ವಿಭಜನೆಯಾಗಿ ಕಾಂಗ್ರೆಸ್‌ಗೆ ಅನುಕೂಲವಾಗಬಹುದು. ಅದರ ಬದಲು ಹೊಸಬರಿಗೆ ಅವಕಾಶ ನೀಡಿದರೆ ಪುತ್ತಿಲ ಅವರನ್ನು ಮನವೊಲಿಸಬಹುದು' ಎಂಬ ಚರ್ಚೆ ನಡೆಯಿತು. ಇದಕ್ಕೆ ವರಿಷ್ಠರು ಸಹಮತಿ ಸೂಚಿಸಿದರು ಎಂದು ಮೂಲಗಳು ಹೇಳಿವೆ.

ನನ್ನ ಸಾವಿನ ನಿರೀಕ್ಷೆ ನಮ್ಮ ಪಕ್ಷದವರಿಗಿದೆ: ಜಿಗಜಿಣಗಿ

ಪ್ರಜಾವಾಣಿ ವಾರ್ತೆ

ವಿಜಯಪುರ: 'ನನ್ನ ಆರೋಗ್ಯ ಸರಿಯಿಲ್ಲ. ಆಸ್ಪತ್ರೆಯಲ್ಲೇ ಪ್ರಾಣ ಹೋಗುವುದೆಂದು ಬಹಳ ಜನ ಅಪಪ್ರಚಾರ ಮಾಡಿದರು. ದೆಹಲಿವರೆಗೂ ಹೋಗಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೂ ಈ ವಿಷಯ ಹೇಳಿದರು. ದೆಹಲಿಗೆ ಹೋಗಿ ಹೇಳುವ ಉದ್ದೇಶ ಏನಿತ್ತು' ಎಂದು ಸಂಸದ ರಮೇಶ ಜಿಗಜಿಣಗಿ ಪ್ರಶ್ನಿಸಿದರು.

ನಗರದ ರೈಲು ನಿಲ್ದಾಣದಲ್ಲಿ ಮಂಗಳವಾರ 'ಒಂದು ನಿಲ್ದಾಣ, ಒಂದು ಉತ್ಪನ್ನ' ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, 'ನನ್ನ ಸಾವು ಅವರ ಕೈಯಲ್ಲಿದೆಯೇ? ನನ್ನ ಬಗ್ಗೆ ಇವರೆಲ್ಲ ಇಷ್ಟೊಂದು ಚಿಂತೆ ಏಕೆ ಮಾಡುತ್ತಾರೆ? ನಾನು ಬೇಗ ಸತ್ತರೆ, ಸಂಸದ ಆಗಬೇಕು ಎಂಬ ಆಸೆ ನಮ್ಮ ಪಕ್ಷದಲ್ಲೇ ಕೆಲವರಿಗಿದೆ' ಎಂದು ಹರಿಹಾಯ್ದರು.

'ನನ್ನ ವಯಸ್ಸು 83 ಅಥವಾ 93 ಆಗಲಿ, ನಾನು ಬದುಕೋನೆ. ದಲಿತ ರಾಜಕಾರಣಿಯಾಗಿ ಇತಿಹಾಸ ನಿರ್ಮಿಸಿಯೇ ಸಾಯಬೇಕೆಂದು ದೇವರು ನನ್ನ ಹಣೆಯಲ್ಲಿ ಬರೆದಿದ್ದಾನೆ' ಎಂದರು.



ರಮೇಶ ಜಿಗಜಿಣಗಿ

'ಲೋಕಸಭಾ ಚುನಾವಣೆಯಲ್ಲಿ ವಿಜಯಪುರ ಕ್ಷೇತ್ರದ ಟಿಕೆಟ್ ನೀಡುವ ವಿಷಯದಲ್ಲಿ ಪಕ್ಷದ ನಿರ್ಣಯಕ್ಕೆ ನಾನು ಬದ್ಧ. ನನ್ನ ಬಿಟ್ಟು ಬೇರೆ ಯಾರಿಗೂ ಟಿಕೆಟ್ ಕೊಡಲ್ಲ ಎಂದು ಪಕ್ಷದವರು ಸ್ಪಷ್ಟವಾಗಿ ಹೇಳಿದ್ದಾರೆ. ನೀನೇನೂ ಚಿಂತೆ ಮಾಡಬೇಡ. ನೀನು ಸತ್ತರೂ ಜನ, ನಿನ್ನ ಹೆಣಕ್ಕೆ ವೋಟ್ ಹಾಕಲಿ ಎಂದು ಹೇಳಿದ್ದಾರೆ' ಎಂದು ಅವರು ತಿಳಿಸಿದರು.

'ಸಂಸತ್ ಅಧಿವೇಶನದಲ್ಲಿ ಜಿಲ್ಲೆಯ ಅಭಿವೃದ್ಧಿ ಕುರಿತು ಒಂದೂ ಪ್ರಶ್ನೆ ಕೇಳಿಲ್ಲ ಎಂದು ಅನೇಕರು ನನ್ನನ್ನು ಟೀಕಿಸಿದ್ದಾರೆ. ಆದರೆ, ನನ್ನ ಬೇಡಿಕೆ ಪತ್ರಗಳಿಗೆ ಸರ್ಕಾರದಿಂದ ಸ್ಪಂದನೆ ಸಿಕ್ಕಿರುವಾಗ ನಾನೇಕೆ ಪ್ರಶ್ನೆ ಕೇಳಬೇಕು' ಎಂದರು.

ಬಿಎಸ್‌ಪಿ 25 ಅಭ್ಯರ್ಥಿಗಳ ಪಟ್ಟಿ ಪ್ರಕಟ

ಕಲಬುರಗಿ: ಲೋಕಸಭೆ ಚುನಾವಣೆಗೆ ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ರಾಜ್ಯದ 28 ಕ್ಷೇತ್ರಗಳ ಪೈಕಿ 25 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪ್ರಕಟಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪಟ್ಟಿ ಪ್ರಕಟಿಸಿದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, 'ರಾಜ್ಯದಲ್ಲಿ ಯಾವುದೇ ಪಕ್ಷದೊಂದಿಗೆ ನಾವು ಮೈತ್ರಿ ಮಾಡಿಕೊಂಡಿಲ್ಲ. ಎಲ್ಲ 28 ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುತ್ತೇವೆ. ಧರ್ಮಗಳನ್ನು ಒಡೆದು ಬಿಜೆಪಿ ಮತ್ತು ಜಾತಿಗಳನ್ನು ಒಡೆದು ಕಾಂಗ್ರೆಸ್ ಆಡಳಿತ ಮಾಡುತ್ತಿವೆ. ಹೀಗಾಗಿ ಅವುಗಳಿಂದ ನಾವು ಅಂತರ ಕಾಯ್ದುಕೊಂಡಿದ್ದೇವೆ' ಎಂದರು.



ಮಾರಸಂದ್ರ ಮುನಿಯಪ್ಪ

'ಇನ್ನುಳಿದ ಮೂರು ಕ್ಷೇತ್ರಗಳಿಗೆ ಶೀಘ್ರವೇ ಅಭ್ಯರ್ಥಿಗಳನ್ನು ಪ್ರಕಟಿಸಲಾಗುವುದು' ಎಂದು ತಿಳಿಸಿದರು.

ಪಕ್ಷದ ಕರ್ನಾಟಕ ಉಸ್ತುವಾರಿ ಹಾಗೂ ರಾಜ್ಯಸಭಾ ಸದಸ್ಯ ರಾಮ್‌ಜಿ ಗೌತಮ್, ರಾಜ್ಯ ಸಂಯೋಜಕರಾದ ನಿತಿನ್ ಸಿಂಗ್, ಎಂ. ಗೋಪಿನಾಥ ಮತ್ತು ಎಂ. ಕೃಷ್ಣಮೂರ್ತಿ ಹಾಜರಿದ್ದರು.

ಬಿಎಸ್‌ಪಿಯ ಅಭ್ಯರ್ಥಿಗಳ ಪಟ್ಟಿ

ಲೋಕಸಭಾ ಕ್ಷೇತ್ರ	ಅಭ್ಯರ್ಥಿ
ಬಾಗಲಕೋಟೆ	ವೈ.ಸಿ. ಕಾಂಬ್ಳೆ
ಬೆಂಗಳೂರು ಕೇಂದ್ರ	ಸತೀಶಚಂದ್ರ ಎಂ.
ಬೆಂಗಳೂರು ಉತ್ತರ	ಚಿಕ್ಕಣ್ಣ (ಪೂಜಾರಿ ಚಿಕ್ಕಣ್ಣ)
ಬೆಂಗಳೂರು ಗ್ರಾಮಾಂತರ	ಚಿನ್ನಪ್ಪ ಚಿಕ್ಕಹಾಗಡೆ
ಬೆಂಗಳೂರು ದಕ್ಷಿಣ	ಮಣ್ಣೂರ್ ನಾಗರಾಜ್
ಬೆಳಗಾವಿ	ಯಮನಪ್ಪ ತಳವಾರ
ಬಳ್ಳಾರಿ (ಎಸ್‌ಟಿ)	ಶಕುಂತಲಾ
ಬೀದರ್	ರಾಜು
ವಿಜಯಪುರ (ಎಸ್‌ಸಿ)	ಕಲ್ಲಪ್ಪ ತೊರವಿ
ಚಾಮರಾಜನಗರ (ಎಸ್‌ಸಿ)	ಸಿ.ಮಹದೇವಯ್ಯ
ಚಿಕ್ಕಬಳ್ಳಾಪುರ	ಆರ್. ಮುನಿಯಪ್ಪ
ಚಿತ್ರದುರ್ಗ (ಎಸ್‌ಸಿ)	ಅಶೋಕ್ ಚಕ್ರವರ್ತಿ
ದಕ್ಷಿಣ ಕನ್ನಡ	ಕಾಂತಪ್ಪ ಅಲಂಗಾರ್
ದಾವಣಗೆರೆ	ಮಲ್ಲೇಶ
ಧಾರವಾಡ	ಶೋಭಾ ಬಳ್ಳಾರಿ
ಕಲಬುರಗಿ (ಎಸ್‌ಸಿ)	ಹುಚ್ಚಪ್ಪ ವಟಾರ್
ಹಾಸನ	ಗಂಗಾಧರ್ ಬಹುಜನ್
ಹಾವೇರಿ	ಅಶೋಕ ಮರಿಯಣ್ಣನವರ್
ಕೋಲಾರ (ಎಸ್‌ಸಿ)	ಸುರೇಶ್
ಕೊಪ್ಪಳ	ಮೈಲಾರಪ್ಪ
ಮಂಡ್ಯ	ಶಿವಶಂಕರ್
ಮೈಸೂರು	ಚಂದ್ರಶೇಖರ ಪಿ.
ಶಿವಮೊಗ್ಗ	ಎ.ಡಿ.ಶಿವಪ್ಪ
ತುಮಕೂರು	ರಾಜಾಸಿಂಹ
ಉಡುಪಿ ಚಿಕ್ಕಮಗಳೂರು	ಕೆ.ಟಿ.ರಾಧಾಕೃಷ್ಣ

ಉಡುಪಿ- ಚಿಕ್ಕಮಗಳೂರು ಕ್ಷೇತ್ರದಿಂದ ಜಯಪ್ರಕಾಶ್ ಹೆಗ್ಡೆಗೆ ಕಾಂಗ್ರೆಸ್ ಟಿಕೆಟ್?

ಕಾಂಗ್ರೆಸ್ ತೆಕ್ಕೆಗೆ ಬಿಜೆಪಿ, ಜೆಡಿಎಸ್ ನಾಯಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆ ಘೋಷಣೆಗೆ ದಿನಗಣನೆ ನಡೆಯುತ್ತಿದ್ದಂತೆಯೇ 'ಆಪರೇಷನ್ ಹಸ್ತ' ನಡೆಸಿರುವ ಕಾಂಗ್ರೆಸ್, ಹಿಂದುಳಿದ ವರ್ಗಗಳ ಆಯೋಗದ ನಿಕಟಪೂರ್ವ ಅಧ್ಯಕ್ಷ, ಬಿಜೆಪಿಯ ಕೆ. ಜಯಪ್ರಕಾಶ್ ಹೆಗ್ಡೆ, ಬೈಂದೂರು ಕ್ಷೇತ್ರದ ಬಿಜೆಪಿ ಮಾಜಿ ಶಾಸಕ ಬಿ.ಎಂ. ಸುಕುಮಾರ ಶೆಟ್ಟಿ, ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಸಿಗದ ಕಾರಣಕ್ಕೆ ಬಿಜೆಪಿ ತ್ಯಜಿಸಿ ಜೆಡಿಎಸ್ ಸೇರಿದ್ದ ಮಾಜಿ ಶಾಸಕ ಎಂ.ಪಿ. ಕುಮಾರಸ್ವಾಮಿ ಅವರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿದೆ.

ಈ ಪೈಕಿ, ಜಯಪ್ರಕಾಶ್ ಹೆಗ್ಡೆ ಅವರು ಉಡುಪಿ– ಚಿಕ್ಕಮಗಳೂರು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗುವುದು ಬಹುತೇಕ ಖಚಿತವಾಗಿದೆ.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಈ ಮೂವರನ್ನು ಕಾಂಗ್ರೆಸ್‌ಗೆ ಬರಮಾಡಿಕೊಂಡರು.



ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕೆ. ಜಯಪ್ರಕಾಶ್ ಹೆಗ್ಡೆ, ಬಿ.ಎಂ. ಸುಕುಮಾರ ಶೆಟ್ಟಿ ಮತ್ತು ಎಂ.ಪಿ. ಕುಮಾರಸ್ವಾಮಿ ಅವರಿಗೆ ಪಕ್ಷದ ಬಾವುಟ ನೀಡಿ ಕಾಂಗ್ರೆಸ್‌ಗೆ ಬರಮಾಡಿಕೊಂಡರು. ಗೃಹ ಸಚಿವರಾದ ಜಿ. ಪರಮೇಶ್ವರ, ಕೆ.ಜೆ. ಜಾರ್ಜ್, ಲಕ್ಷ್ಮಿ ಹೆಬ್ಬಾಳಕರ ಮತ್ತಿತರರು ಪಾಲ್ಗೊಂಡಿದ್ದರು

ಬಳಿಕ ಮಾತನಾಡಿದ ಶಿವಕುಮಾರ್, 'ನದಿಗಳು ಎಲ್ಲೇ ಹುಟ್ಟಿದರೂ ಸಮುದ್ರಕ್ಕೆ ಸೇರುತ್ತವೆ. ಅದೇ ರೀತಿ ಬೇರೆ ಪಕ್ಷದಲ್ಲಿ ಇದ್ದವರು ಕೊನೆಗೆ ಕಾಂಗ್ರೆಸ್‌ಗೆ ಸೇರಿಕೊಳ್ಳುತ್ತಾರೆ. ಇದು ಮಾನಸ ಸರೋವರ ಇದ್ದಂತೆ' ಎಂದರು.

'ಬಿಜೆಪಿಯವರು ಪ್ರತಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದವರನ್ನು ಸೆಳೆಯುತ್ತಿದ್ದಾರೆ. ಅವರ ಪಕ್ಷ ಗಟ್ಟಿಯಾಗಿದೆ ಎಂದಾದರೆ ಬೇರೆ ಪಕ್ಷದವರನ್ನು ಯಾಕೆ ಸೆಳೆಯಬೇಕು? ರಾಜ್ಯದಲ್ಲಿ ಬಿಜೆಪಿ ಮೇಲೆ ಜನರಿಗೆ ಆಕ್ರೋಶವಿದೆ. ಕಾಂಗ್ರೆಸ್ ಅನ್ನು ಸೋಲಿಸಲು ಬಿಜೆಪಿ, ಜೆಡಿಎಸ್ ಮೈತ್ರಿ ಮಾಡಿಕೊಂಡಿವೆ. ಎಷ್ಟೇ ಮೈತ್ರಿ ಮಾಡಿಕೊಂಡರೂ ನಮಗೆ ಹೆಚ್ಚು ಸ್ಥಾನಗಳು ಬರುತ್ತವೆ' ಎಂದರು.

ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಸುಕುಮಾರ ಶೆಟ್ಟಿ, 'ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ತಪ್ಪಿದಾಗ ನನಗೆ ನೋವಾಯಿತು. ಬಿಜೆಪಿಯ ಕೆಲವರು ನನ್ನ ಬಳಿ ಬಂದರೂ ನಾನು ಆ ಕಡೆ ಹೋಗಲೇ ಇಲ್ಲ. ನಮ್ಮದು ಪ್ರಾಮಾಣಿಕ ಗರ್ಭಗುಡಿ. ಅವರದ್ದು ನಕಲಿ ಗರ್ಭಗುಡಿ' ಎಂದರು.

'ಕಾಂಗ್ರೆಸ್ ಸೇರಬೇಕೆಂದು ಹಲವು ಬಾರಿ ಪ್ರಯತ್ನಿಸಿದ್ದೆ. ನನಗೆ ಜಾತ್ಯತೀತತೆ ಮೇಲೆ ನಂಬಿಕೆ. ಕಾಂಗ್ರೆಸ್ ಇಂತಹ ನಂಬಿಕೆಯಲ್ಲಿ ಸಾಗಿದೆ. 'ಮುಂದಿನ ತಿಂಗಳು ಸರ್ಕಾರ ಬೀಳಲಿದೆ. ಹೋಗಬೇಡ' ಎಂದು ಬಿಜೆಪಿಯವರು ಹೇಳಿದರು. ಅವರಂಥ ಕಳ್ಳರು ಇದ್ದರೆ ಏನಾಗುತ್ತದೆ' ಎಂದು ಎಂ.ಪಿ. ಕುಮಾರಸ್ವಾಮಿ ಹೇಳಿದರು.

‘ಕಾಕ್ಲಿಯರ್ ಇಂಪ್ಲಾಂಟ್’ ಯೋಜನೆ ‘ಶ್ರವಣ ಸಂಜೀವಿನಿ’ ಆಗಿ ಮರುನಾಮಕರಣ

353 ಮಕ್ಕಳಿಗೆ ‘ಇಂಪ್ಲಾಂಟ್’ ಅಳವಡಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಹುಟ್ಟಿನಿಂದಲೇ ಶ್ರವಣದೋಷ ಎದುರಿಸುತ್ತಿರುವ ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಸುವ ಯೋಜನೆಗೆ ಇಲ್ಲಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ (ಆಯಿಷ್) ‘ಶ್ರವಣ ಸಂಜೀವಿನಿ’ ಎಂದು ಮರುನಾಮಕರಣ ಮಾಡಲಾಯಿತು.

ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಯೋಜನೆಯ ಫಲಾನುಭವಿ ಮಕ್ಕಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಶ್ರವಣ ಸಾಧನಗಳನ್ನು ವಿತರಿಸಿ, ಮಕ್ಕಳು ಮತ್ತು ಪೋಷಕರಿಗೆ ವಾಕ್ ಮತ್ತು ಶ್ರವಣ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿ, ‘ಶ್ರವಣ ಸಮಸ್ಯೆ ಎದುರಿಸುತ್ತಿರುವ ಮಗುವಿನ ಶಸ್ತ್ರಚಿಕಿತ್ಸೆಗೆ ₹ 10 ಲಕ್ಷದಿಂದ ₹ 15 ಲಕ್ಷ ಖರ್ಚಾಗುತ್ತದೆ. ಹೀಗಾಗಿ 2016ರಲ್ಲಿ ನಮ್ಮದೇ ಸರ್ಕಾರವಿದ್ದಾಗ ಕಾಕ್ಲಿಯರ್ ಇಂಪ್ಲಾಂಟ್ ಯೋಜನೆ ಆರಂಭಿಸಿ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ನೆರವಾಗಿತ್ತು’ ಎಂದು ಹೇಳಿದರು.

‘ಈ ಬಾರಿ ಬಜೆಟ್‌ನಲ್ಲಿ ಯೋಜನೆಗಾಗಿ ₹ 32 ಕೋಟಿ ಮೀಸಲಿಟ್ಟಿರುವುದಲ್ಲದೇ, 353 ಮಕ್ಕಳಿಗೆ ಶಸ್ತ್ರಚಿಕಿತ್ಸೆಯನ್ನೂ ನಡೆಸಲಾಗಿದೆ. ಶ್ರವಣ ಸಮಸ್ಯೆ ಎದುರಿಸುತ್ತಿರುವ ಮಕ್ಕಳಿಗೆ ಎಲ್ಲರಂತೆ ಸಮಾನ ಶಿಕ್ಷಣ, ಅವಕಾಶ, ಕಲಿಕೆ ಸಾಧ್ಯವಾಗಬೇಕು. ಹೀಗಾಗಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ವಿಶೇಷ ಕಾಳಜಿ ವಹಿಸಲಾಗಿದೆ’ ಎಂದು ತಿಳಿಸಿದರು.

‘ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಕೆಯಲ್ಲಿ ದೇಶದಲ್ಲಿಯೇ ರಾಜ್ಯ ಮೊದಲ ಸ್ಥಾನದಲ್ಲಿದೆ. ಆಯಿಷ್ ನೇತೃತ್ವದಲ್ಲಿ ರಾಜ್ಯದ 27 ಆಸ್ಪತ್ರೆಗಳಲ್ಲಿ ಸೇವೆ ಲಭ್ಯವಾಗುತ್ತಿದೆ. ಅವುಗಳಲ್ಲಿ 12 ಸರ್ಕಾರಿ ಆಸ್ಪತ್ರೆಗಳಿವೆ’ ಎಂದು ಮಾಹಿತಿ ನೀಡಿದರು.

‘ಶಸ್ತ್ರಚಿಕಿತ್ಸೆಗೂ ಮುನ್ನ ನಾನಾ ರೀತಿಯ ತಪಾಸಣೆಯನ್ನು ನುರಿತ ತಜ್ಞರೇ ನಡೆಸಬೇಕಾಗುತ್ತದೆ. ಹೀಗಾಗಿಯೇ ಆಯಿಷ್‌ನ ಸಹಕಾರ ಪಡೆಯಲಾಗಿದೆ. ಶಸ್ತ್ರಚಿಕಿತ್ಸೆ ನಂತರವೂ ಮಗುವಿನ ಕಲಿಕೆಗೆ ತರಬೇತಿಯನ್ನು ಪೋಷಕರು, ಸಿಬ್ಬಂದಿಗೆ ನೀಡಲಾಗುತ್ತಿದೆ’ ಎಂದು ತಿಳಿಸಿದರು.

‘ಶ್ರವಣದೋಷ ಮುಕ್ತ ಕರ್ನಾಟಕ ನಿರ್ಮಾಣವೇ ಸರ್ಕಾರದ ಗುರಿ. ಸಮಸ್ಯೆ ಎದುರಿಸುತ್ತಿರುವ ಮಕ್ಕಳನ್ನು ಗುರುತಿಸುವ ಕೆಲಸ ಮಾಡಲಾಗುತ್ತಿದೆ. 8 ತಿಂಗಳಿಂದ 6 ವರ್ಷದ ಮಕ್ಕಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ಶಾಸಕರಾದ ಕೆ.ಹರೀಶ್ ಗೌಡ, ತನ್ವೀರ್ ಸೇಠ್ ಅವರು ಫಲಾನುಭವಿ ಮಕ್ಕಳಾದ ಯಶಸ್ವಿನಿ, ಮಹೇಶ್ ಕುಮಾರ್, ಹೃದನ್ಯ, ಚತುರ್ವೇದ, ಖುಷಿ, ರಚನಾ, ಪೋಷಿತಾ, ಉನ್ನತ್ ಅವರಿಗೆ ಶಸ್ತ್ರಚಿಕಿತ್ಸೆಯ ಕಿಟ್ ಅನ್ನು ವಿತರಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ಡಾ.ವೈ.ನವೀನ್ ಭಟ್, ಆಯುಷ್ ನಿರ್ದೇಶಕಿ ಪ್ರೊ.ಎಂ.ಪುಷ್ಪಾವತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕಿ ಡಾ.ಬಿ.ಎಸ್. ಪುಷ್ಪಲತಾ, ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯ ರಾಜ್ಯ ನೋಡಲ್ ಅಧಿಕಾರಿ ಬಿ.ಆರ್.ಚಂದ್ರಿಕಾ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಹಾಜರಿದ್ದರು.


ಮೈಸೂರಿನಲ್ಲಿ ಮಂಗಳವಾರ ‘ಶ್ರವಣ ಸಂಜೀವಿನಿ’ ಯೋಜನೆಗೆ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಡಾ.ಪಿ.ಸಿ.ಕುಮಾರಸ್ವಾಮಿ, ಡಾ.ಬಿ.ಆರ್‌ಚಂದ್ರಿಕಾ, ಡಾ.ಬಿ.ಎಸ್‌ಪುಷ್ಪಲತಾ, ಡಾ.ವೈ.ನವೀನ್ ಭಟ್, ಕೆ.ಹರೀಶ್‌ಗೌಡ, ಪ್ರೊ.ಎಂ.ಪುಷ್ಪವತಿ, ತನ್ವೀರ್ ಸೇಠ್ ಭಾಗವಹಿಸಿದ್ದರು. –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು
- ಶ್ರವಣ ಸಾಧನಗಳ ವಿತರಣೆ
- ಶಸ್ತ್ರಚಿಕಿತ್ಸೆ ಕಿಟ್ ನೀಡಿಕೆ
- ಶ್ರವಣದೋಷ ಮುಕ್ತ ಕರ್ನಾಟಕದ ಗುರಿ

‘ನೆರವಾದ ಆಯಿಷ್’

‘ಐದು ವರ್ಷದ ಹಿಂದೆ ಧ್ವನಿ ಕಳೆದುಕೊಳ್ಳುವ ಸಂದರ್ಭ ಎದುರಾದಾಗ ಆಯಿಷ್ ನನಗೆ ನೆರವಾಗಿ ಚಿಕಿತ್ಸೆ, ಆರೈಕೆ ನೀಡಿದೆ’ ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

‘ಕಾಕ್ಲಿಯರ್ ಇಂಪ್ಲಾಂಟ್ ಯೋಜನೆ ಮೂಲಕ ಸರ್ಕಾರವು ಶ್ರವಣದೋಷವುಳ್ಳ ಮಕ್ಕಳ ಪೋಷಕರಿಗೆ ಸಹಾಯಹಸ್ತ ಚಾಚಿದೆ. ಯೋಜನೆ ಪ್ರಯೋಜನ ಪಡೆಯಬೇಕು’ ಎಂದು ಕೋರಿದರು.

‘ಹೊಸ ಆಸ್ಪತ್ರೆಗಳನ್ನು ಕಟ್ಟಿಸುವುದಕ್ಕಿಂತ ಹಳೆ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಹೆಚ್ಚಿಸುವಲ್ಲಿ ಆರೋಗ್ಯ ಇಲಾಖೆ ಕ್ರಮವಹಿಸಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ’ ಎಂದೂ ಶ್ಲಾಘಿಸಿದರು.

ನಕಲಿ ಜಾತಿ ಪ್ರಮಾಣಪತ್ರ– ಚಂದ್ರಪ್ಪ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಲೋಕಸಭಾ ಕ್ಷೇತ್ರದ ‘ಕೈ’ ಟಿಕೆಟ್ ಆಕಾಂಕ್ಷಿ, ಮಾಜಿ ಸಂಸದ ಬಿ.ಎನ್. ಚಂದ್ರಪ್ಪ ಅವರು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಮಂಗಳವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಚಂದ್ರಪ್ಪ, ಚಿತ್ರದುರ್ಗ ಟಿಕೆಟ್ ಕುರಿತ ಗೊಂದಲದ ಬಗ್ಗೆ ಮಾತುಕತೆ ನಡೆಸಿದರು. ‘ನನ್ನ ಜಾತಿ ಪ್ರಮಾಣ ಪತ್ರದ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣಪತ್ರ ಸೃಷ್ಟಿಸಲಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭೇಟಿಯ ಬಳಿಕ ಮಾತನಾಡಿದ ಚಂದ್ರಪ್ಪ, ‘ನಾನು ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತ. ಪಕ್ಷ ಘೋಷಿಸಿದ ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ನನ್ನ ಹೆಸರನ್ನು ಯಾಕೆ ತಡೆಹಿಡಿಯಲಾಯಿತೆಂದು ಗೊತ್ತಿಲ್ಲ. ಈ ಬಗ್ಗೆ ವರಿಷ್ಠರನ್ನು ಕೇಳುವುದಕ್ಕೂ ಹೋಗಿಲ್ಲ. ತಾಂತ್ರಿಕ ಕಾರಣಕ್ಕೆ ತಡೆಹಿಡಿದಿರಬಹುದು’ ಎಂದರು.

ತಮ್ಮದು ನಕಲಿ ಜಾತಿ ಪ್ರಮಾಣಪತ್ರ ಎಂಬ ಆರೋಪದ ಬಗ್ಗೆ ಬೇಸರ ವ್ಯಕ್ತಪಡಿಸಿದ ಚಂದ್ರಪ್ಪ, ‘ಈ ಬಗ್ಗೆ ನಮ್ಮ ಕಡೆಯವರು ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದಾರೆ. ನನ್ನದು ಮೂಲ ಜಾತಿ ಪ್ರಮಾಣಪತ್ರ. ನನ್ನ ಜಾತಿ ಪ್ರಮಾಣಪತ್ರವನ್ನು ಕೆಲವು ಟಿಕೆಟ್ ಆಕಾಂಕ್ಷಿಗಳು ನಕಲಿ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿದ್ದಾರೆ’ ಎಂದು ಆರೋಪಿಸಿದರು.

ಅನಂತಕುಮಾರ್ ಹೆಗಡೆ ಹೇಳಿಕೆಗೆ ಸಿ.ಎಂ ಪ್ರತಿಕ್ರಿಯೆ

‘ಸಂವಿಧಾನ ಬದಲಾವಣೆ ಬಿಜೆಪಿ ರಹಸ್ಯ ಕಾರ್ಯಸೂಚಿ’

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ಮನುವಾದ, ಮನುಸ್ಮೃತಿ ಮೇಲೆ ನಂಬಿಕೆ ಇಟ್ಟಿರುವ ಬಿಜೆಪಿಯವರು ಸಂವಿಧಾನ ಬದಲಿಸುವ ತಮ್ಮ ರಹಸ್ಯ ಕಾರ್ಯಸೂಚಿಯನ್ನು ಸಂಸದ ಅನಂತಕುಮಾರ್ ಹೆಗಡೆಯವರ ಬಾಯಿಂದ ಹೇಳಿಸುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ವಾಗ್ದಾಳಿ ನಡೆಸಿದರು.

ತಾಲ್ಲೂಕಿನ ಹೆಗ್ಗವಾಡಿಯಲ್ಲಿ ಸಂಸದ ಅನಂತಕುಮಾರ್ ಹೆಗಡೆ ಹೇಳಿಕೆ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ಅನಂತ ಕುಮಾರ್ ಹೆಗಡೆ ಸಾಮಾನ್ಯ ವ್ಯಕ್ತಿಯಲ್ಲ. ಐದು ಬಾರಿ ಸಂಸದರಾದವರು. ಕೇಂದ್ರ ಸಚಿವರಾಗಿದ್ದವರು. ಅವರು ಇಂತಹ ಹೇಳಿಕೆ ನೀಡುತ್ತಾರೆ ಎಂದರೆ, ಪಕ್ಷದ ತೀರ್ಮಾನ ಇಲ್ಲದೆಯೇ ಹೇಳುವುದಕ್ಕಾಗುತ್ತದೆಯಾ? ಈ ಹಿಂದೆಯೂ, ತಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನ ಬದಲಿಸಲು ಎಂದು ಹೇಳಿಕೆ ನೀಡಿದ್ದರು. ಈಗ ಮೂರನೇ ಎರಡರಷ್ಟು ಬಹುಮತ ಬಂದರೆ ಸಂವಿಧಾನ ಬದಲಿಸುತ್ತೇವೆ ಎಂದಿದ್ದಾರೆ’ ಎಂದು ಟೀಕಿಸಿದರು.

ಸಿಎಎಗೆ ವಿರೋಧ: ಸಿಎಎ ಜಾರಿ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಿ.ಎಂ, ‘ಚುನಾವಣೆಗಾಗಿ ಜಾರಿಗೆ ತಂದಿದ್ದಾರೆ. ಇಲ್ಲದಿದ್ದರೆ ಇಷ್ಟು ದಿನ ಯಾಕೆ ಸುಮ್ಮನಿದ್ದರು? ಧರ್ಮಾಧಾರಿತ ಪೌರತ್ವ ನೀಡುವುದಕ್ಕೆ ನಮ್ಮ ವಿರೋಧವಿದೆ’ ಎಂದರು.

ಬಿಜೆಪಿ ಸೋಲಿಸುವುದೇ ಗುರಿ: ಮೈಸೂರು–ಕೊಡಗು ಕ್ಷೇತ್ರಕ್ಕೆ ಬಿಜೆಪಿಯಿಂದ ರಾಜವಂಶಸ್ಥ ಯದುವೀರ್ ಅವರ ಹೆಸರು ಕೇಳಿಬರುತ್ತಿರುವುದರ ಕುರಿತ ಪ್ರಶ್ನೆಗೆ, ‘ಪ್ರತಾಪ ಸಿಂಹ ಹೆಸರು ಕೆಡಿಸಿಕೊಂಡಿದ್ದಾನೆ ಎಂದು ಬದಲಾವಣೆ ಮಾಡಿಕೊಂಡಿರಬಹುದು. ಅದು ನನಗೆ ಗೊತ್ತಿಲ್ಲ. ಯದುವೀರ್ ಹೆಸರು ಇನ್ನೂ ಬಂದಿಲ್ಲ. ಅವರು ಯಾರನ್ನು ಅಭ್ಯರ್ಥಿ ಮಾಡುತ್ತಾರೆ ಎಂಬುದು ಪ್ರಶ್ನೆ ಅಲ್ಲ. ನಾವು ಬಡವರ ಪರ ಮಾಡಿದ ಕಾರ್ಯಕ್ರಮಗಳನ್ನು ಅವಲಂಬಿಸಿದ್ದೇವೆಯೇ ವಿನಾ ಬಿಜೆಪಿಯಿಂದ ಯಾರು ಅಭ್ಯರ್ಥಿಯಾಗುತ್ತಾರೆ ಎಂಬುದು ಮುಖ್ಯವಲ್ಲ’ ಎಂದು ಹೇಳಿದರು.

ಒಂದು ತೊಟ್ಟು ನೀರು ಕೊಡುವುದಿಲ್ಲ

‘ತಮಿಳುನಾಡಿಗೆ ಕದ್ದು ಮುಚ್ಚಿ ಕಾವೇರಿ ನೀರು ಬಿಡಲಾಗುತ್ತಿದೆ’ ಎಂಬ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು, ‘ಇದೆಲ್ಲ ಸುಳ್ಳು. ತಮಿಳುನಾಡಿಗೆ ಒಂದು ತೊಟ್ಟು ನೀರು ಕೊಡುವುದಿಲ್ಲ. ನಮಗೇ ನೀರು ಇಲ್ಲ. ಅವರಿಗೆ ಹೇಗೆ ಕೊಡುವುದು. ತಮಿಳುನಾಡಿನವರೂ ನೀರು ಕೇಳಿಲ್ಲ. ನೀರು ಕೊಡುವ ಪ್ರಶ್ನೆಯೇ ಇಲ್ಲ. ತಮಿಳುನಾಡಿನವರು ಕೇಳಿದರೂ ಕೊಡುವುದಿಲ್ಲ, ಕೇಂದ್ರದವರು ಹೇಳಿದರೂ ಕೊಡುವುದಿಲ್ಲ’ ಎಂದರು.

‘ಕಾಂಗ್ರೆಸ್ ನೆಮ್ಮದಿಯಿಂದ ಇರಲು ಬಿಡಲ್ಲ’

ಕಾರವಾರ: ‘ದೇಶದಲ್ಲಿ ಅವಾಂತರಗಳನ್ನು ಸೃಷ್ಟಿಸಿರುವ ಕಾಂಗ್ರೆಸ್‌ಗೆ ನಾನು ನೆಮ್ಮದಿಯಿಂದ ಇರಲು ಬಿಡುವುದಿಲ್ಲ’ ಎಂದು ಸಂಸದ ಅನಂತಕುಮಾರ್ ಹೆಗಡೆ ಹೇಳಿದರು.

ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಪ್ರಧಾನಿ ನರೇಂದ್ರ ಮೋದಿ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಆನೆ ಮತ್ತು ಕುರಿಯಷ್ಟೇ ವ್ಯತ್ಯಾಸ ಇದೆ. ಮೋದಿ ಅವರಿಗೆ ರಾಹುಲ್ ಪ್ರತಿಸ್ಪರ್ಧಿ ಎಂಬುದೇ ನಗು ತರಿಸುತ್ತದೆ’ ಎಂದು ವ್ಯಂಗ್ಯವಾಡಿದರು.

‘ಸಂವಿಧಾನ ಬದಲು ಹೇಳಿಕೆ; ಎಫ್‌ಐಆರ್ ಚಳವಳಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಸಂವಿಧಾನ ಬದಲಾವಣೆ ಮಾಡುತ್ತೇವೆ ಎನ್ನುವ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ರಾಜ್ಯ ಸರ್ಕಾರ ಏಳು ದಿನಗಳಲ್ಲಿ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಬೇಕು. ಇಲ್ಲದಿದ್ದರೆ, ರಾಜ್ಯದಾದ್ಯಂತ ಎಫ್‌ಐಆರ್ ಚಳವಳಿ ಆರಂಭಿಸುತ್ತೇವೆ’ ಎಂದು ವಿವಿಧ ದಲಿತ ಸಂಘ–ಸಂಸ್ಥೆಗಳ ಮಹಾಮಂಡಳದ ಅಧ್ಯಕ್ಷ ಗುರುನಾಥ ಉಳ್ಳಿಕಾಶಿ ಹೇಳಿದರು.

‘ಅನಂತಕುಮಾರ್ ಹೇಳಿಕೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯುತ್ತೇವೆ. ವಾರದೊಳಗೆ ಸ್ಪಂದಿಸದಿದ್ದರೆ, ಪ್ರತಿ ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನೆ ನಡೆಸಿ ಮಹಾಮಂಡಳದ ವತಿಯಿಂದ ಪ್ರಕರಣ ದಾಖಲಿಸುತ್ತೇವೆ’ ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಅನಂತಕುಮಾರ ಹೇಳಿಕೆಯನ್ನು ಬಿಜೆಪಿ ಮುಖಂಡ ಸಿ.ಟಿ. ರವಿ ಸಮರ್ಥಿಸಿಕೊಂಡಿದ್ದಾರೆ. ನಮ್ಮ ಪ್ರಕಾರ, ಸಂವಿಧಾನವೇ ಆನೆ. ಅದರ ಬಗ್ಗೆ ಇಲ್ಲಸಲ್ಲದ ಹೇಳಿಕೆ ನೀಡುವವರೇ ನಾಯಿ. ಇದು ಹೀಗೆ ಮುಂದುವರಿದರೆ, ಅವರಿಬ್ಬರು ಪಾಲ್ಗೊಳ್ಳುವ ಕಾರ್ಯಕ್ರಮದ ಸ್ಥಳಕ್ಕೆ ಹೋಗಿ ಅವರ ಮುಖಕ್ಕೆ ಮಸಿ ಬಳಿಯುತ್ತೇವೆ’ ಎಂದು ಅವರು ಎಚ್ಚರಿಕೆ ನೀಡಿದರು.

‘ಬಿಜೆಪಿ ಕೈಯಲ್ಲಿ ಸಂವಿಧಾನ ಅಸುರಕ್ಷಿತ’ (ಗದಗ ವರದಿ): ‘ದೇಶದ ಸಂವಿಧಾನ ಬದಲಿಸುವುದಾಗಿ ಹೇಳುವ ಸಂಸದ ಅನಂತಕುಮಾರ್ ಆಗಾಗ್ಗೆ ತೀವ್ರ ಸ್ವರೂಪದ ಹೇಳಿಕೆ ನೀಡುತ್ತಾರೆ. ಬಿಜೆಪಿಯವರ ಕೈಯಲ್ಲಿ ಸಂವಿಧಾನ ಸುರಕ್ಷಿತವಾಗಿ ಇರದು ಎಂಬುದು ಜನರಿಗೆ ಅರಿವಾಗಿದೆ’ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಪಿ.ಡಿ.ಒಗಳಿಗೆ ವಿನಾಯಿತಿ: ಪ್ರಸ್ತಾವ

ಬೆಂಗಳೂರು: ರಾಜ್ಯದಲ್ಲಿ ತೀವ್ರ ಬರಗಾಲ ಇರುವುದರಿಂದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು (ಪಿ.ಡಿ.ಒ) ಕಾಯಂ ಸ್ವರೂಪದ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಬಾರದು ಎಂಬ ಪಂಚಾಯತ್ ರಾಜ್ ಇಲಾಖೆಯ ಮನವಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳಿಗೆ ರವಾನಿಸಿರುವ ರಾಜ್ಯ ಮುಖ್ಯ ಚುನಾವಣಾಧಿಕಾರಿ, ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

ಫೆ. 16ರಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರಿಗೆ ಪತ್ರ ಬರೆದಿದ್ದ ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್, ‘ತನಿಖಾ ಠಾಣೆಗಳಲ್ಲಿ ನಿಯೋಜನೆ ಸೇರಿದಂತೆ ಪಿ.ಡಿ.ಒಗಳನ್ನು ಕಾಯಂ ಸ್ವರೂಪದ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿದರೆ ಜನರ ಸಮಸ್ಯೆಗಳಿಗೆ ಸ್ಪಂದಿಸಲು ಕಷ್ಟವಾಗುತ್ತದೆ’ ಎಂದು ತಿಳಿಸಿದ್ದರು.

ಪೂರ್ಣ ಪ್ರಮಾಣದ ಚುನಾವಣಾ ಕೆಲಸದಲ್ಲಿ ಪಿ.ಡಿ.ಒಗಳು ತಲ್ಲೀನರಾದರೆ ಬರ ನಿರ್ವಹಣೆಯ ಕೆಲಸಗಳಿಗೆ ಅಡ್ಡಿಯಾಗುತ್ತದೆ. ಆದ್ದರಿಂದ ಅಲ್ಪಾವಧಿಯ ಚುನಾವಣಾ ಕೆಲಸಗಳಿಗೆ ಮಾತ್ರ ನಿಯೋಜಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಬೇಕು ಎಂದು ಕೋರಿದ್ದರು.

ಮಾರ್ಚ್ 2ರಂದು ಎಲ್ಲ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಪತ್ರ ಬರೆದಿರುವ ಮುಖ್ಯ ಚುನಾವಣಾಧಿಕಾರಿ ಕಚೇರಿಯು, ‘ಪಿ.ಡಿ.ಒಗಳಿಗೆ ದೀರ್ಘಾವಧಿಯ ಚುನಾವಣಾ ಕರ್ತವ್ಯದಿಂದ ವಿನಾಯ್ತಿ ನೀಡಿ, ಸಾಂದರ್ಭಿಕ/ಅಲ್ಪಾವಧಿಯ ಕೆಲಸಗಳಿಗೆ ಮಾತ್ರ ನಿಯೋಜನೆ ಮಾಡಬೇಕೆಂಬ ಕೋರಿಕೆಯನ್ನು ಆಧರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ನಿರ್ದೇಶನ ನೀಡಿದೆ.

ಬೋರ್ಡ್ ಪರೀಕ್ಷೆ ರದ್ದು

ಒಂದನೇ ಪುಟದಿಂದ...

ಇದನ್ನು ಪ್ರಶ್ನಿಸಿ ನೋಂದಾಯಿತ ಅನುದಾನ ರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸಾ) ಸಲ್ಲಿಸಿದ ವಿಶೇಷ ಮೇಲ್ಮನವಿ ಅರ್ಜಿ ಕುರಿತಂತೆ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಪಂಕಜ್ ಮಿತ್ತಲ್ ಅವರಿದ್ದ ದ್ವಿಸದಸ್ಯ ಪೀಠ ವಿಚಾರಣೆ ನಡೆಸಿತು.

‘ಪರೀಕ್ಷೆ ನಡೆಸುವ ರಾಜ್ಯ ಸರ್ಕಾರದ ಕ್ರಮವು ಶಿಕ್ಷಣ ಹಕ್ಕು ಕಾಯ್ದೆಯ ಸೆಕ್ಷನ್ 30 ಅನ್ನು ಉಲ್ಲಂಘಿಸುತ್ತದೆ. ಈ ಪರೀಕ್ಷೆ ಕಾನೂನುಬಾಹಿರವೆಂದು ಹೈಕೋರ್ಟ್‌ನ ಏಕಸದಸ್ಯ ಪೀಠ ಹೇಳಿದೆ. ಪರೀಕ್ಷಾ ವ್ಯವಸ್ಥೆ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರುವ ಈ ಪರೀಕ್ಷೆಯನ್ನು ನಡೆಸಬಾರದು’ ಎಂದು ಸೂಚಿಸಿದೆ.

‘ನಾವು ಈ ಮೇಲ್ಮನವಿಯನ್ನು ಅಂಗೀಕರಿಸುತ್ತಿದ್ದೇವೆ. ವಿಭಾಗೀಯ ಪೀಠ ನೀಡಿದ ಆದೇಶವನ್ನು ವಜಾಗೊಳಿಸುತ್ತಿದ್ದೇವೆ. ವಿಭಾಗೀಯ ಪೀಠವು ಮುಖ್ಯ ಮೇಲ್ಮನವಿಗಳನ್ನು ಕಾನೂನಿನ ಅನುಸಾರ ತ್ವರಿತವಾಗಿ ವಿಚಾರಣೆ ನಡೆಸಿ ತೀರ್ಪು ನೀಡಬೇಕು. ಆ ವಿಚಾರಣೆಯು ಅರ್ಜಿಯ ಮೆರಿಟ್ ಅನ್ನು ಆಧರಿಸಿರಬೇಕು, ನಾವು ವ್ಯಕ್ತಪಡಿಸಿದ ಅಭಿಪ್ರಾಯಗಳ ಮೇಲಲ್ಲ’ ಎಂದು ಪೀಠ ಸ್ಪಷ್ಟಪಡಿಸಿದೆ.

ಕರ್ನಾಟಕ ಸರ್ಕಾರದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ದೇವದತ್ ಕಾಮತ್, ‘ವಿಭಾಗೀಯ ಪೀಠವು ಸರಿಯಾದ ಆದೇಶ ನೀಡಿದೆ. ಇದು ವಾಸ್ತವದಲ್ಲಿ ಪರೀಕ್ಷೆಯೂ ಅಲ್ಲ, ಸಂಕಲನಾತ್ಮಕ ಮೌಲ್ಯಮಾಪನ. ಇದರಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗುವ ಅಗತ್ಯವಿಲ್ಲ. ಇದು ವಿದ್ಯಾರ್ಥಿಗಳನ್ನು ಅವರ ಭವಿಷ್ಯಕ್ಕಾಗಿ ಸಿದ್ಧಪಡಿಸುವುದು ರಾಜ್ಯದ ನೀತಿಯಾಗಿದೆ’ ಎಂದರು.

‘9 ಹಾಗೂ 11ನೇ ತರಗತಿಗಳು ಶಿಕ್ಷಣ ಹಕ್ಕು ಕಾಯ್ದೆಯ (ಆರ್‌ಟಿಇ) ವ್ಯಾಪ್ತಿಗೆ ಬರುವುದಿಲ್ಲ. 11ನೇ ತರಗತಿ ಪರೀಕ್ಷೆಗಳು ಈಗಾಗಲೇ ಮುಗಿದಿವೆ’ ಎಂದು ಕಾಮತ್ ವಾದಿಸಿದರು.

ಆರ್‌ಟಿಇ ಕಾಯ್ದೆಯ ಸೆಕ್ಷನ್ 30 ಅನ್ನು ಉಲ್ಲೇಖಿಸಿದ ಕಾಮತ್, ‘ಯಾವುದೇ ಮಗು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಗತ್ಯವಿಲ್ಲ’ ಎಂದರು.

> ಮಕ್ಕಳ ಜತೆ ಸಮಾಲೋಚನೆ ನಡೆಸಿದ ನಂತರವೇ ರಾಜ್ಯ ಸರ್ಕಾರ ಬೋರ್ಡ್ ಪರೀಕ್ಷೆ ನಡೆಸುವ ನಿರ್ಧಾರ ತೆಗೆದುಕೊಳ್ಳಬೇಕಿತ್ತು. ಸುಪ್ರೀಂಕೋರ್ಟ್ ಸೂಕ್ತ ನಿರ್ಧಾರ ತೆಗೆದುಕೊಂಡಿದೆ.
> **ನಾಗಸಿಂಹ ಜಿ.ರಾವ್,** ನಿರ್ದೇಶಕ, ಮಕ್ಕಳ ಹಕ್ಕುಗಳ ಟ್ರಸ್ಟ್

‘ವಿದ್ಯಾರ್ಥಿಗಳು ತೇರ್ಗಡೆಯಾಗಬೇಕಿಲ್ಲ ಎಂದರೆ ಪರೀಕ್ಷೆಯನ್ನು ಯಾಕೆ ನಡೆಸುತ್ತೀರಿ’ ಎಂದು ಪೀಠ ಪ್ರಶ್ನಿಸಿತು. ಪರೀಕ್ಷೆ ನಡೆಸುವ ರಾಜ್ಯ ಸರ್ಕಾರದ ತೀರ್ಮಾನವನ್ನು ಸಮರ್ಥಿಸಿದ ಕಾಮತ್, ‘ತರಗತಿಯಲ್ಲಿ ನೀಡುತ್ತಿರುವ ವಿಷಯವು ಗುಣಮಟ್ಟಕ್ಕೆ ತಕ್ಕಂತೆ ಇಲ್ಲ ಎಂಬುದನ್ನು ನಾವು ಕಂಡುಕೊಂಡಿದ್ದೇವೆ. ಹಾಗಾಗಿ, ನಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಶಾಲೆಗಳು ತಮ್ಮ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಿವೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬೇಕಿದೆ. ಇದನ್ನು ನಿರ್ಣಯಿಸಲು ಏಕರೂಪದ ಮೌಲ್ಯಮಾಪನ ನಡೆಸುವುದು ಉತ್ತಮ ಮಾರ್ಗ’ ಎಂದು ಪ್ರತಿಪಾದಿಸಿದರು.

ನ್ಯಾಯಮೂರ್ತಿ ಮಿತ್ತಲ್, ‘ನೀವು ಸಂಪೂರ್ಣ ಶಿಕ್ಷಣ ವ್ಯವಸ್ಥೆಯನ್ನು ಹಾಳು ಮಾಡಿದ್ದೀರಿ’ ಎಂದು ಕಟುವಾಗಿ ಹೇಳಿದರು. ಆಗ ಕಾಮತ್, ‘ಪರೀಕ್ಷೆಯ ಅಗತ್ಯವಿದೆ. ವಿಭಾಗೀಯ ಪೀಠದ ಆದೇಶದ ವಿರುದ್ಧದ ಮೇಲ್ಮನವಿಗಳನ್ನು ಅಂಗೀಕರಿಸಬಾರದು’ ಎಂದು ಕೋರಿದರು. ನ್ಯಾಯಮೂರ್ತಿ ತ್ರಿವೇದಿ, ‘ಬೋರ್ಡ್ ಪರೀಕ್ಷೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಭಯವಿದೆ’ ಎಂದರು.

ಕಾಮತ್ ವಾದ ಮಂಡಿಸಿ, ‘9ನೇ ತರಗತಿಯು ಆರ್‌ಟಿಇ ವ್ಯಾಪ್ತಿಗೆ ಬರುವುದಿಲ್ಲ. ಈ ವಿದ್ಯಾರ್ಥಿಗಳು 10ನೇ ತರಗತಿಗೆ ತಯಾರಿ ನಡೆಸಬೇಕು. ಹಾಗಾಗಿ, 9ನೇ ತರಗತಿಯ ಬೋರ್ಡ್ ಪರೀಕ್ಷೆಗೆ ಅವಕಾಶ ನೀಡಬೇಕು’ ಎಂದು ಮನವಿ ಮಾಡಿದರು.

ರುಪ್ಸಾ ಪರ ವಾದ ಮಂಡಿಸಿದ ವಕೀಲ ಕೆ.ವಿ.ಧನಂಜಯ, ‘ಕರ್ನಾಟಕ ಶಿಕ್ಷಣ ಕಾಯ್ದೆಯಡಿ ಪರೀಕ್ಷೆಗೆ ಸಂಬಂಧಿಸಿದ ಕಲಂ 22ರ ಪ್ರಕಾರ, ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಮಾಡಬೇಕಾದರೆ, ಕಾಯ್ದೆಯ ಅನ್ವಯ ಮೊದಲು ನಿಯಮಗಳನ್ನು ರೂಪಿಸಬೇಕು. ಅದು ಶಾಸಕಾಂಗದಲ್ಲಿ ಅನುಮೋದನೆಗೊಂಡ ಬಳಿಕವಷ್ಟೇ ಅಂತಿಮಗೊಳಿಸಿ ಜಾರಿಗೆ ತರಬೇಕು. ಆದರೆ, ಈ ಪ್ರಕರಣದಲ್ಲಿ ಸರ್ಕಾರ ಅಂತಹ ವಿಧಾನವನ್ನು ಪಾಲಿಸಿಲ್ಲ’ ಎಂದು ಪೀಠದ ಗಮನಕ್ಕೆ ತಂದರು.

ಆಗ ಕಾಮತ್, ‘ಏಕಸದಸ್ಯ ಪೀಠದ ನ್ಯಾಯಮೂರ್ತಿಯವರು ಕಾಯ್ದೆಯ ಸೆಕ್ಷನ್ 22 ಅಥವಾ ಸೆಕ್ಷನ್ 15 ಅನ್ನು ಗಮನಿಸಲಿಲ್ಲ. ಕಾಯ್ದೆಯ ನಿಬಂಧನೆಗಳನ್ನು ಗಮನಿಸದೆಯೇ ನಮ್ಮ ಪ್ರಕಾರ ಕಾನೂನುಬಾಹಿರ ಆದೇಶ ಹೊರಡಿಸಲಾಗಿದೆ’ ಎಂದರು.



❦ ಸುಭಾಷಿತ ❦
ಮನುಷ್ಯನಲ್ಲಿ ಆಸೆ ಇಲ್ಲದಿದ್ದರೆ ಪ್ರಯತ್ನವೂ ಇರುವುದಿಲ್ಲ.
–ಮಹಾವೀರ

ಜಾರಿಗೆ ಬಂದ ಸಿಎಎ ಪೌರತ್ವದ ಆಶಯಕ್ಕೆ ವಿರುದ್ಧ

ವಿವಾದಾತ್ಮಕ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಜಾರಿಗೊಳಿಸಲು ಬೇಕಿರುವ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದ ಕೇಂದ್ರ ಸರ್ಕಾರದ ನಡೆಯ ಹಿಂದೆ ಇದ್ದುದು ಚುನಾವಣಾ ಲೆಕ್ಕಾಚಾರ ಎಂಬುದು ಸ್ಪಷ್ಟ. ಈ ಕಾಯ್ದೆಯ ಜಾರಿಗೆ ನಾಲ್ಕು ವರ್ಷಗಳಿಂದ ಯಾವ ಕ್ರಮವನ್ನೂ ಕೇಂದ್ರವು ಕೈಗೊಂಡಿರಲಿಲ್ಲ. ಭಾರತದ ನೆರೆಹೊರೆಯ, ಮುಸ್ಲಿಂ ಬಾಹುಳ್ಯದ ದೇಶಗಳಾದ ಪಾಕಿಸ್ತಾನ, ಅಫ್ಗಾನಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ದೌರ್ಜನ್ಯಕ್ಕೆ ಗುರಿಯಾಗಿ 2014ರ ಡಿಸೆಂಬರ್ 31ಕ್ಕೆ ಮೊದಲು ಭಾರತವನ್ನು ಪ್ರವೇಶಿಸಿದ ಹಿಂದೂ, ಪಾರ್ಸಿ, ಸಿಖ್, ಜೈನ, ಬೌದ್ಧ, ಕ್ರೈಸ್ತ ಸಮುದಾಯದವರಿಗೆ ಭಾರತದ ಪೌರತ್ವ ನೀಡುವ ಉದ್ದೇಶವನ್ನು ಸಿಎಎ ಹೊಂದಿದೆ. ಲೋಕಸಭಾ ಚುನಾವಣೆಗೆ ಮಾದರಿ ನೀತಿ ಸಂಹಿತೆಯು ಇನ್ನು ಕೆಲವೇ ದಿನಗಳಲ್ಲಿ ಜಾರಿಗೆ ಬರುವ ನಿರೀಕ್ಷೆ ಇದೆ. ಈ ಹೊತ್ತಿನಲ್ಲಿ ಕೇಂದ್ರವು ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಹೀಗಾಗಿ, ಇದನ್ನು ಚುನಾವಣಾ ಅಸ್ತ್ರವನ್ನಾಗಿಸಿಕೊಳ್ಳುವ ಉದ್ದೇಶ ಕೇಂದ್ರಕ್ಕೆ ಇದೆ ಎಂಬುದು ಖಚಿತ. ಅಧಿಸೂಚನೆಯು ಮುಸ್ಲಿಮರ ಜನಸಂಖ್ಯೆ ಹೆಚ್ಚಿರುವ, ಪಶ್ಚಿಮ ಬಂಗಾಳದಂತಹ ರಾಜ್ಯಗಳನ್ನು ನಿರ್ದಿಷ್ಟವಾಗಿ ಗುರಿಯಾಗಿಸಿಕೊಂಡಿರುವ ಸಾಧ್ಯತೆ ಇದೆ. ನಾಲ್ಕು ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ಈ ಕಾಯ್ದೆಗೆ ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸದೇ ಇದ್ದುದಕ್ಕೆ ಕಾರಣ ಏನು ಎಂಬ ಪ್ರಶ್ನೆಗೆ ತೃಪ್ತಿಕರವಾದ ಉತ್ತರ ಇಲ್ಲ.



ಲೋಕಸಭಾ ಚುನಾವಣೆ ಸನ್ನಿಹಿತವಾಗಿರುವ ಹೊತ್ತಿನಲ್ಲಿ ಕೇಂದ್ರವು ಈ ಕಾಯ್ದೆ ಜಾರಿಗೆ ಮುಂದಾಗಿರುವುದನ್ನು ನೋಡಿದರೆ, ಇದನ್ನು ಚುನಾವಣಾ ಅಸ್ತ್ರವನ್ನಾಗಿಸಿಕೊಳ್ಳುವ ಉದ್ದೇಶ ಹೊಂದಿರುವುದು ಖಚಿತವಾಗುತ್ತದೆ

ಈ ಕಾಯ್ದೆಯು ಆರಂಭದಿಂದಲೂ ವಿವಾದಾತ್ಮಕವಾಗಿಯೇ ಇದೆ. ಇದು ಅಸಾಂವಿಧಾನಿಕ, ತಾರತಮ್ಯದಿಂದ ಕೂಡಿರುವಂಥದ್ದು ಎಂಬ ಟೀಕೆಗೆ ಗುರಿಯಾಗಿದೆ. ಈ ಕಾಯ್ದೆಗೆ ಅಸ್ಸಾಂ ಮತ್ತು ದೆಹಲಿ ಸೇರಿದಂತೆ ದೇಶದ ಹಲವು ಕಡೆಗಳಲ್ಲಿ ತೀವ್ರ ಪ್ರತಿರೋಧ ಕೂಡ ವ್ಯಕ್ತವಾಗಿತ್ತು. ಪ್ರತಿಭಟನೆಗಳ ಸಂದರ್ಭದಲ್ಲಿ ಹಿಂಸಾಚಾರ ಕೂಡ ನಡೆದಿತ್ತು. ಆದರೆ ಕೋವಿಡ್ ಸಾಂಕ್ರಾಮಿಕ ತೀವ್ರವಾಗಿ ಹರಡಿದ ನಂತರದಲ್ಲಿ ಈ ಪ್ರತಿಭಟನೆಗಳು ಕಡಿಮೆ ಆಗಿದ್ದವು. ಅಸ್ಸಾಂನಲ್ಲಿ ಇದನ್ನು ತೀವ್ರವಾಗಿ ವಿರೋಧಿಸಲಾಗಿದೆ ಎಂಬುದು ಉಲ್ಲೇಖಾರ್ಹ. ಕಾಯ್ದೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಕಾಯ್ದೆಯ ವಿಚಾರವಾಗಿ ಸುಪ್ರೀಂ ಕೋರ್ಟ್ ತನ್ನ ನಿಲುವು ಹೇಳಿಲ್ಲ. ಈ ಹೊತ್ತಿನಲ್ಲಿ ಕೇಂದ್ರವು ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಈಗ ನಿಯಮಗಳನ್ನು ಕೂಡ ಕೋರ್ಟ್‌ನಲ್ಲಿ ಪ್ರಶ್ನೆ ಮಾಡುವುದು ಖಚಿತ. ಆಡಳಿತ ಪಕ್ಷವು ತಾನು ನೀಡಿದ್ದ ಇನ್ನೊಂದು ಆಶ್ವಾಸನೆಯನ್ನು ಈಡೇರಿಸಿರುವುದಾಗಿ ಹೇಳಿಕೊಂಡಿದೆ. ಆದರೆ ಸರ್ಕಾರ ಇರಿಸಿರುವ ಹೆಜ್ಜೆಯು ಸಮಾಜವನ್ನು ಧ್ರುವೀಕರಿಸುವ, ಮತದಾರರನ್ನು ಧರ್ಮದ ಆಧಾರದಲ್ಲಿ ವಿಭಜಿಸುವ ಇನ್ನೊಂದು ನಡೆ ಎಂದು ವಿರೋಧ ಪಕ್ಷಗಳು ಟೀಕಿಸಿವೆ.

ಸಿಎಎ ವ್ಯಾಪ್ತಿಯಿಂದ ಮುಸ್ಲಿಮರನ್ನು ಹೊರಗೆ ಇರಿಸಿರುವುದು ಇದರ ಬಗ್ಗೆ ಇರುವ ಪ್ರಮುಖ ತಕರಾರು. ಪ್ರಸ್ತಾವಿತ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿಗೆ ಬಂದರೆ, ಮುಸ್ಲಿಮರಿಗೆ ಪೌರತ್ವದ ನಿರಾಕರಣೆ ಆಗಬಹುದು ಎಂಬ ಭೀತಿ ಕೂಡ ಇದೆ. ಎನ್‌ಆರ್‌ಸಿ ಹೇಗಿರಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಎನ್‌ಆರ್‌ಸಿ ಹಾಗೂ ಸಿಎಎ ಒಟ್ಟಾಗಿ ಜಾರಿಗೆ ಬಂದಾಗ ಸಮಾಜದಲ್ಲಿ ಪಲ್ಲಟಗಳು ಉಂಟಾಗಬಹುದು ಮತ್ತು ರಾಜಕೀಯ ಸಮೀಕರಣದಲ್ಲಿ ಭಾರಿ ಬದಲಾವಣೆಗಳು ಆಗಬಹುದು. ನೆರೆಹೊರೆಯ ದೇಶಗಳಲ್ಲಿ ದೌರ್ಜನ್ಯಕ್ಕೆ ಗುರಿಯಾದವರಿಗೆ ಭಾರತದ ಪೌರತ್ವ ನೀಡಲಾಗುತ್ತದೆ ಎಂಬುದು ಆಕ್ಷೇಪಕ್ಕೆ ಕಾರಣವಲ್ಲ. ಆದರೆ ಪೌರತ್ವ ನೀಡುವಾಗ ಧರ್ಮವನ್ನು ಆಧಾರವಾಗಿ ಇರಿಸಿಕೊಳ್ಳಲಾಗುತ್ತದೆ, ತಾರತಮ್ಯ ಎಸಗಲಾಗುತ್ತದೆ ಎಂಬುದು ಆಕ್ಷೇಪಕ್ಕೆ ಕಾರಣ. ಇದು, ದೇಶದ ಸಂವಿಧಾನವು ಪೌರತ್ವದ ವಿಚಾರವಾಗಿ ಹೊಂದಿರುವ ಆಶಯಗಳಿಗೆ ವಿರುದ್ಧವಾಗಿದೆ. ಈಗ ಈ ಕಾಯ್ದೆಯು ಚುನಾವಣೆಯಲ್ಲಿ ಅಸ್ತ್ರವಾಗಿ ಬಳಕೆ ಆಗಲಿದೆ. ಬಹುಶಃ ಕಾಯ್ದೆಯನ್ನು ಭವಿಷ್ಯದಲ್ಲಿಯೂ ಬಳಕೆ ಮಾಡಿಕೊಳ್ಳುವ ಉದ್ದೇಶವೊಂದು ಇರಬಹುದು.

ದಿನದ ಟ್ವೀಟ್

ಪಾರದರ್ಶಕತೆ ಇಲ್ಲದಿದ್ದರೆ...



ಈ ಕೆಲಸವನ್ನು ಸುಪ್ರೀಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಳ್ಳುವುದಕ್ಕೆ ಮೊದಲೇ ಮಾಡಬಹುದಿತ್ತು, ಅಲ್ಲವೇ?! ಸುಪ್ರೀಂ ಕೋರ್ಟ್ ತಾಕೀತು ಮಾಡಿದ ಮರುದಿನ, ಚುನಾವಣಾ ಬಾಂಡ್ ಕುರಿತ ಎಲ್ಲ ದತ್ತಾಂಶಗಳನ್ನು ಚುನಾವಣಾ ಆಯೋಗಕ್ಕೆ ಎಸ್‌ಬಿಐ ಸಲ್ಲಿಸಿದೆ.

ಗ್ರೌಚಿ ಮ್ಯಾಕ್ಸ್

ಕಿಡಿನುಡಿ



ಸಾರ್ವತ್ರಿಕ ಚುನಾವಣೆಯನ್ನು ಮುಂದಿಟ್ಟುಕೊಂಡು, ಮೋದಿ ನೇತೃತ್ವದ ಸರ್ಕಾರವು ಸಿಎಎ ಕುರಿತ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಇದು, ಕೋಮು ಧ್ರುವೀಕರಣವನ್ನು ಚುರುಕುಗೊಳಿಸುವ ಮತ್ತು ಚುನಾವಣೆಯಲ್ಲಿ ಲಾಭ ಗಳಿಸುವ ಸ್ಪಷ್ಟ ಗುರಿಯನ್ನು ಹೊಂದಿದೆ. ಈ ನಿಯಮಗಳನ್ನು ಹೇಗೆ ರೂಪಿಸಲಾಗಿದೆ ಎಂದರೆ, ಪೌರತ್ವಕ್ಕಾಗಿ ತಮ್ಮಲ್ಲಿನ ಜನರನ್ನು ಗುರುತಿಸಿ ನೋಂದಣಿ ಮಾಡುವ ಪ್ರಕ್ರಿಯೆಯಿಂದಲೇ ರಾಜ್ಯ ಸರ್ಕಾರಗಳನ್ನು ಅವು ದೂರ ಇಡುತ್ತವೆ. ಸಿಎಎಯನ್ನು ವಿರೋಧಿಸಿದ್ದ ರಾಜ್ಯ ಸರ್ಕಾರಗಳನ್ನು ಹೊರಗಿಡುವ ಉದ್ದೇಶ ಇದರ ಹಿಂದೆ ಇರುವುದು ಸ್ಪಷ್ಟವಾಗುತ್ತದೆ.

ಸೀತಾರಾಂ ಯಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ

ಶನಿವಾರ, 13-3-1999

• **ಪೇಟೆಂಟ್ ಶಾಸನ: ಕಾನೂನು ಆಯೋಗದ ಶಿಫಾರಸು ನಿಗೂಢ**

ನವದೆಹಲಿ, ಮಾರ್ಚ್ 12– ಪೇಟೆಂಟ್ ಮಸೂದೆ ಬಗ್ಗೆ ಕಾನೂನು ಆಯೋಗವು ಮಾಡಿರುವ ಶಿಫಾರಸು ಏನೆಂದು ಸದನದ ಗಮನಕ್ಕೆ ತರದೇ ಹೋದುದನ್ನು ಪ್ರತಿಭಟಿಸಿ ಲೋಕಸಭೆಯಲ್ಲಿ ಇಂದು ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

ಕಾನೂನು ಆಯೋಗವು ತನ್ನ ವರದಿಯಲ್ಲಿ ಪೇಟೆಂಟ್ ಮಸೂದೆಗೆ ಕೆಲವು ತಿದ್ದುಪಡಿಗಳನ್ನು ಸಲಹೆ ಮಾಡಿದ್ದರೂ, ಅದನ್ನು ಲೋಕಸಭೆಯ ಗಮನಕ್ಕೆ ತರದೆ ಪೇಟೆಂಟ್ ಮಸೂದೆಗೆ ಒಪ್ಪಿಗೆ ಪಡೆಯುವ ಮೂಲಕ ಸರ್ಕಾರ ಈ ಸದನಕ್ಕೆ ಅಗೌರವ ಸೂಚಿಸಿದೆ ಎಂದು ಕಾಂಗ್ರೆಸ್, ಸಿಪಿಐ (ಎಂ), ಸಿಪಿಐ, ರಾಷ್ಟ್ರೀಯ ಜನತಾದಳ, ಸಮಾಜವಾದಿ ಪಕ್ಷ ಮತ್ತು ಜನತಾದಳದ ಸದಸ್ಯರು ತೀವ್ರವಾಗಿ ಆಕ್ಷೇಪಿಸಿದರು.

ಶೂನ್ಯ ವೇಳೆಯಲ್ಲಿ ಮಾಜಿ ಪ್ರಧಾನಿ ಚಂದ್ರಶೇಖರ್ ಈ ವಿಷಯವನ್ನು ಪ್ರಸ್ತಾಪಿಸಿದಾಗ, ಆಳುವ ಬಿಜೆಪಿಯ ಮಿತ್ರಪಕ್ಷವಾದ ಸಮತಾ ಪಕ್ಷ ಸೇರಿದಂತೆ ಪ್ರತಿಪಕ್ಷಗಳು ಸರ್ಕಾರದ ಕ್ರಮವನ್ನು ಟೀಕಿಸಿದವು.

• **ನೈರುತ್ಯ ರೈಲ್ವೆ ವಲಯ ಹುಬ್ಬಳ್ಳಿಗೆ ಸ್ಥಳಾಂತರ**

ನವದೆಹಲಿ, ಮಾರ್ಚ್ 12– ಬೆಂಗಳೂರಿನಲ್ಲಿ ಆರಂಭಿಸಲಾಗಿರುವ ನೈರುತ್ಯ ರೈಲ್ವೆ ವಲಯ ಕೇಂದ್ರ ಸ್ಥಾನವನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

50 ವರ್ಷಗಳ ಹಿಂದೆ

ಬುಧವಾರ, 13-3-1974

• **ಕೃಷ್ಣಾ ಪಂಚಾಯ್ತಿ: ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ಗೆ ರಾಜ್ಯದ ಅಪೀಲು**

ಬೆಂಗಳೂರು, ಮಾರ್ಚ್ 12– ಕೃಷ್ಣಾ ಪಂಚಾಯಿತಿ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅಪೀಲು ಹೋಗಲಿದೆ.

ಈ ಸಂಬಂಧ ಕಾನೂನು ತಜ್ಞರ ಸಲಹೆಯನ್ನು ಸರ್ಕಾರ ಪಡೆಯುತ್ತಿದೆ ಎಂದೂ, ರಾಜ್ಯದ ಹಿತರಕ್ಷಣೆಗೆ ಸರ್ಕಾರ ಆದ್ಯ ಗಮನ ಕೊಡುವ ಬಗ್ಗೆ ಸದಸ್ಯರಿಗೆ ಕಳವಳ ಅನಗತ್ಯವೆಂದೂ ಪಕ್ಷದ ಉಪನಾಯಕ, ಸಚಿವ ಎಚ್.ಎಂ. ಚನ್ನಬಸಪ್ಪ ಅವರು ಇಂದು ವಿಧಾನಮಂಡಲದ ಕಾಂಗ್ರೆಸ್ ಪಕ್ಷದ ಸಭೆಗೆ ಭರವಸೆ ನೀಡಿದರು.

ದೆಹಲಿಗೆ ತೆರಳಿರುವ ಮುಖ್ಯಮಂತ್ರಿ ಅವರ ಗೈರುಹಾಜರಿ ಕಾರಣ ಸಚಿವ ಎಚ್.ಎಂ.ಸಿ ಅವರ ಅಧ್ಯಕ್ಷತೆಯಲ್ಲಿ ಪಕ್ಷದ ಸಭೆ ನಡೆಯಿತು.

ಪಕ್ಷದ ಸಭೆಯಲ್ಲಿ ಜ್ವಲಂತ ಪ್ರಶ್ನೆಗಳ ಪ್ರಸ್ತಾಪಕ್ಕಾಗಿ ಮೊದಲ ಅರ್ಧ ಗಂಟೆ ‘ಶೂನ್ಯ ಕಾಲ’ದ ಪ್ರಯೋಗವನ್ನು ಜಾರಿಗೆ ತರಲು ನಿರ್ಧರಿಸಲಾಯಿತು.

• **ಬರ ಪರಿಹಾರ ನೆರವು ಖೋತಾ ಕುರಿತ ಕೇಂದ್ರ–ರಾಜ್ಯ ಪತ್ರ ವ್ಯವಹಾರ ಮಂಡಿಸಲು ಆಗ್ರಹ**

ಬೆಂಗಳೂರು, ಮಾರ್ಚ್ 12– ಬರಗಾಲಕ್ಕೆ ವೆಚ್ಚ ಮಾಡಿದ ಹಣದಲ್ಲಿ ಕೇಂದ್ರ ಸರ್ಕಾರ ಇಪ್ಪತ್ತು ಕೋಟಿ ರೂಪಾಯಿಗಳನ್ನು ಹಿಡಿದಿಟ್ಟುಕೊಳ್ಳಲು, ಪರಿಹಾರ ಕಾರ್ಯದಲ್ಲಿ ನಡೆದ ದುರ್ವ್ಯವಹಾರ ಕಾರಣ ಎಂದು ವಿಧಾನ-ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಅವರು ಇಂದು ಆಪಾದಿಸಿ, ದುರ್ವ್ಯವಹಾರಗಳ ತನಿಖೆಗೆ ಸಮಿತಿ ರಚಿಸಿ, ಕೇಂದ್ರ ಮತ್ತು ರಾಜ್ಯದ ನಡುವೆ ಆದ ಪತ್ರ ವ್ಯವಹಾರವನ್ನು ಸಭೆಯ ಮುಂದಿಡಬೇಕೆಂದು ಆಗ್ರಹಿಸಿದರು. ಆಯವ್ಯಯದ ಚರ್ಚೆಯಲ್ಲಿ ನಿನ್ನೆ ಅಪೂರ್ಣವಾಗಿದ್ದ ತಮ್ಮ ಭಾಷಣವನ್ನು ರಾಮಕೃಷ್ಣ ಹೆಗಡೆ ಮುಂದುವರಿಸಿದರು.

ಸಂವಿಧಾನ ವಿರೋಧಿ ಹೇಳಿಕೆಗಳು ಮತ್ತು ಹೇಳಿಕೆಗಳ ಹಿಂದಿನ ಹುನ್ನಾರಗಳು...

ಆ ‘ಮಾರಿಜಾತ್ರೆ’ಯಲ್ಲಿ ಬಲಿ ಏನಂತೆ?



ಅನುರಣನ

ನಾರಾಯಣ ಎ.

ಇವೆಲ್ಲಾ ಏನು? ಇನ್ನೇನು ಚುನಾವಣೆ ಬಂದೇಬಿಟ್ಟಿತು ಎನ್ನುವ ಹೊತ್ತಿಗೆ ಬಿಜೆಪಿಯ ಒಬ್ಬರು ‘ಸಂವಿಧಾನ ತಿದ್ದುಪಡಿ ಮಾಡುತ್ತೇವೆ’ ಅಂತ ವೀರಾವೇಶದಿಂದ ಹೇಳುವುದು, ಆ ಪಕ್ಷದ ಕೆಲವರು ತಣ್ಣಗೆ ಪ್ರತಿಕ್ರಿಯಿಸಿ ‘ಇಲ್ಲ ಹಾಗೇನಿಲ್ಲ, ಅದೇನಿದ್ದರೂ ಹೇಳಿದವರ ವೈಯಕ್ತಿಕ ಅಭಿಪ್ರಾಯ, ಪಕ್ಷದ್ದಲ್ಲ’ ಅಂತ ಸಮಜಾಯಿಷಿ ನೀಡುವುದು, ಅದೇ ಪಕ್ಷದ ಇನ್ನಿತರರು ‘ತಿದ್ದುಪಡಿ ಮಾಮೂಲಿ ನಡೆಯುತ್ತದಲ್ಲ, ಅದರಲ್ಲೇನು ಮಹಾ’ ಅಂತ ಮರುಪ್ರಶ್ನೆ ಹಾಕುವುದು. ಇದು ಮತ್ತೆ ಮತ್ತೆ ನಮ್ಮ ಮುಂದೆ, ವಿಶೇಷವಾಗಿ ಕರ್ನಾಟಕದಲ್ಲಿ ನಡೆಯುತ್ತಿರುವ ವಿದ್ಯಮಾನವೇ ಆದರೂ ಈ ಬಾರಿ ಕಾಂಗ್ರೆಸ್ ಹಾಗೇ ಸ್ವಲ್ಪ ಪ್ರತಿಭಟನೆಗೆ ಇಳಿದಿರುವುದು, ಇವೆಲ್ಲಾ ಏನು?

ಇಲ್ಲಿ ಕೆಲವೊಂದು ವಿಚಾರಗಳನ್ನು ಗಮನಿಸಬೇಕು. ರಾಜಕಾರಣವೂ ಪ್ರಕೃತಿಯ ಹಾಗೆ. ಕಾರ್ಯಕಾರಣ ಇಲ್ಲದೆ ರಾಜಕಾರಣದಲ್ಲೂ ಏನೂ ಸಂಭವಿಸುವುದಿಲ್ಲ. ಈ ಎಲ್ಲಾ ಹೇಳಿಕೆ, ಸಮಜಾಯಿಷಿಗಳ ಉದ್ದೇಶ ಇಷ್ಟೇ: ಸಂವಿಧಾನ ಬದಲಾಯಿಸುತ್ತೇವೆ ಎಂದಾಗ ಯಾರು ಪುಳಕಿತರಾಗುತ್ತಾರೋ ಅಂತಹವರಿಗೆ ಸಂವಿಧಾನ ಬದಲಾಯಿಸುತ್ತೇವೆ ಎನ್ನುವ ಸಂದೇಶ ಹೋಗಬೇಕು. ಮತ್ತೆ ಮತ್ತೆ ಇಂತಹ ಮಾತನ್ನು ಕೇಳುತ್ತಾ ಕೇಳುತ್ತಾ ಅದರ ಕುರಿತು ಎಲ್ಲರೂ ಸಂವೇದನೆ ಕಳೆದುಕೊಳ್ಳುವಷ್ಟು ಬಾರಿ ಅದನ್ನು ಪುನರಾವರ್ತಿಸಿ, ಸಂವಿಧಾನದ ವಿಚಾರದಲ್ಲಿ ಏನು ಮಾಡಲು ಹೊರಟಿದ್ದಾರೋ ಅದನ್ನು ಮಾಡಲು ಸರಿಯಾದ ಭೂಮಿಕೆ ಸಿದ್ಧವಾಗಬೇಕು. ಆ ತಯಾರಿ ಪೂರ್ಣ ಆಗುವವರೆಗೆ ಸಂವಿಧಾನ ಬದಲಾಯಿಸುತ್ತೇವೆ ಎಂಬ ಹೇಳಿಕೆ ಬಂದಾಗ ಮುನಿಸಿಕೊಳ್ಳುವವರನ್ನು (ಅಂತಹವರ ಸಂಖ್ಯೆ ದೊಡ್ಡದೇ ಇದೆ ಎಂದು ಭಾವಿಸಲಾದ ಕಾರಣ) ಸಮಾಧಾನಪಡಿಸಲು ಸಮಜಾಯಿಷಿ, ಸ್ಪಷ್ಟೀಕರಣದಂತಹವೂ ಬರುತ್ತಿರಬೇಕು. ಸಮಜಾಯಿಷಿ, ಸ್ಪಷ್ಟೀಕರಣವನ್ನು ಯಾರ ಬಾಯಿಂದ ಕೊಡಿಸಬೇಕೋ ಅವರಿಂದಲೇ ಕೊಡಿಸಬೇಕು.

ಎಲ್ಲವೂ ಒಂದು ವ್ಯವಸ್ಥಿತ ಬೌದ್ಧಿಕ, ಮನೋವೈಜ್ಞಾನಿಕ ತಂತ್ರ. ಇದನ್ನು ಅರ್ಥ ಮಾಡಿಕೊಳ್ಳದೆ ಲಬೋಲಬೋ ಅಂತ ಮಾಡುವ ಪ್ರತಿಭಟನೆಗಳಿಂದ ಏನೂ ಆಗುವುದಿಲ್ಲ. ಸಂವಿಧಾನ ವಿರೋಧಿಗಳಿಗೆ ತಾವೇನು ಮಾಡುತ್ತಿದ್ದೇವೆ ಎನ್ನುವುದು ಸರಿಯಾಗಿ ಗೊತ್ತಿದೆ. ಸಂವಿಧಾನವನ್ನು ರಕ್ಷಿಸಿ ಕಾಪಿಡುತ್ತೇವೆ ಎನ್ನುವವರಿಗೆ ತಾವೇನು ಮಾಡುತ್ತಿದ್ದೇವೆ ಅಂತ ತಿಳಿದಂತಿಲ್ಲ, ತಾವೇನು ಮಾಡಬೇಕು ಅಂತಲೂ ತಿಳಿದಂತಿಲ್ಲ. ಹಾಗಾಗಿ, ಸಂವಿಧಾನ ವಿರೋಧಿಗಳು ಹೂಡಿದ ತಂತ್ರ ಆರಂಭಿಕ ಯಶಸ್ಸಿನ ಹಾದಿಯಲ್ಲೇ ಇದೆ.

ಸಂವಿಧಾನವನ್ನು ಕೆಡವುವ ದೀರ್ಘಾವಧಿ ಉದ್ದೇಶ ಹೊಂದಿರುವ ಈ ಮನೋಯುದ್ಧದಲ್ಲಿ ಪ್ರಯೋಗವಾಗುವ ಪ್ರತಿಯೊಂದು ಪದವನ್ನೂ ಗಮನಿಸಬೇಕು. ಪದ ಪದವನ್ನೂ ಒಡೆದು, ವಿಂಗಡಿಸಿ ಅರ್ಥ ಹುಡುಕಬೇಕು. ‘ಸಂವಿಧಾನ ಬದಲಾಯಿಸಲೆಂದೇ ಬಂದಿದ್ದೇವೆ’ ಅಂತ ಹೇಳುತ್ತಲೇ ಇರುವ ಬಿಜೆಪಿಯ ಸಂಸದರು ಈ ಬಾರಿ ಪ್ರಯೋಗಿಸಿದ ಪದಗಳನ್ನು ಗಮನಿಸಿ: ‘ಲೋಕಸಭೆಯಲ್ಲಿ 400ಕ್ಕಿಂತ ಹೆಚ್ಚು ಸೀಟುಗಳು ಬಂದುಬಿಡಲಿ, ರಾಜ್ಯಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಸಿಕ್ಕಿಬಿಡಲಿ, ದೇಶದ ಬಹುತೇಕ ರಾಜ್ಯಗಳಲ್ಲಿ ಬಿಜೆಪಿ ಆಳುವ ಪಕ್ಷವಾಗಿಬಿಡಲಿ, ಆಮೇಲೆ ಮಾರಿಜಾತ್ರೆ ನೋಡಿ’ ಅಂತ ಅವರು ಹೇಳಿದ್ದಾರೆ. ಮಾರಿಜಾತ್ರೆ ಎಂಬ ಪದವನ್ನು ಅಡಿಗೆರೆ ಎಳೆದು, ಅಳೆದು, ತೂಗಿ ನೋಡಿ. ಮಾರಿಹಬ್ಬದಲ್ಲಿ ಬಲಿ ಕೊಡುವ ಸಂಪ್ರದಾಯ ಇದೆ. ಮಾರಿಹಬ್ಬ ಎಂದರೆ ತಕ್ಷಣ ಕಣ್ಣ ಮುಂದೆ ಬರುವುದೇ ಬಲಿ. ಸಂಸದರು ಹೇಳಿದ ಮಾರಿಹಬ್ಬದಲ್ಲಿ ಬಲಿ ಆಗಲಿರುವುದು ಏನು? ಸಂವಿಧಾನ ತಾನೇ?

ಈ ಹಿಂದೆ ಅವರು ‘ಬದಲಾವಣೆ’ ಎನ್ನುವ ಪದವನ್ನು ನೇರವಾಗಿ ಬಳಸಿದ್ದರು. ಈ ಬಾರಿ ‘ಬದಲಾವಣೆ’ ಎಂಬ ಪದ ಬಳಸಿಲ್ಲ. ತಿದ್ದುಪಡಿ ಎನ್ನುವ ಪದ ಬಳಸಿದ್ದಾರೆ. ಯಾಕೆಂದರೆ, ತಿದ್ದುಪಡಿ ಮಾಮೂಲು ನಡೆಯುತ್ತದೆ, ಈಗಾಗಲೇ ನೂರಕ್ಕಿಂತಲೂ ಹೆಚ್ಚು ತಿದ್ದುಪಡಿಗಳಾಗಿವೆ, ಅದಕ್ಕೆ ಸಂವಿಧಾನದಲ್ಲೇ ಅವಕಾಶ ಇದೆ, ಅದರಲ್ಲೇನು ಮಹಾ ಅಂತ ಜನ ಅಂದುಕೊಳ್ಳಬೇಕು. ಅದೇವೇಳೆ, ಸಂವಿಧಾನದ ಬಗ್ಗೆ ಸದಾ ಅಪಸ್ವರ ತೆಗೆಯುವವರನ್ನೇ ಬೆಂಬಲಿಸುವುದು ಎನ್ನುವ ಮತದಾರರಿಗೂ ‘ಮಾರಿಜಾತ್ರೆ’ ಎಂಬ ಪದದ ಮೂಲಕ ಸರಿಯಾದ ಸಂದೇಶ ಹೋಗಬೇಕು. ತಿದ್ದುಪಡಿ, ಬದಲಾವಣೆ, ಮಾರ್ಪಾಟು ಅಂತ ಏನೇನೋ ಪದಪುಂಜಗಳ ಜತೆ ಆಟವಾಡುತ್ತಾ ಬಲಿ ನೀಡಲು ವೇದಿಕೆ ನಿರ್ಮಾಣ ಆಗಬೇಕು.

ಸಂವಿಧಾನದ ಪರವಾಗಿ ಹೋರಾಟಕ್ಕೆ ಇಳಿದಿರುವವರು ಸದರಿ ಸಂಸದರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎನ್ನುತ್ತಿದ್ದಾರೆ. ಆಯಿತು, ಅವರನ್ನು ಪಕ್ಷದಿಂದ ಉಚ್ಚಾಟಿಸಿದರೆ ಅಲ್ಲಿಗೆ ವಿಷಯ ಮುಗಿದು ಹೋಗುತ್ತದೆಯೇ? ಬಿಜೆಪಿಗೆ ಸಂವಿಧಾನದ ಬಗ್ಗೆ ಇರುವ ಸಂಬಂಧ ತುಂಬಾ ಸಂಕೀರ್ಣವಾದದ್ದು. ಸಂವಿಧಾನವನ್ನು ಗುರಿಯಾಗಿಸಿಕೊಂಡು ಯಾರೋ ಎಂದೋ ಒಮ್ಮೆ ನೀಡುವ ಹೇಳಿಕೆಗಳ ಮೂಲಕ ಅದನ್ನು ಅರ್ಥ ಮಾಡಿಕೊಂಡರೆ ಸಾಲದು. ಅಂತಹ ಹೇಳಿಕೆಗಳ ವಿರುದ್ಧ ಪ್ರತಿಭಟಿಸುವ ಮೂಲಕ ಮಾತ್ರ ಸಂವಿಧಾನವನ್ನು ಉಳಿಸಲೂ ಆಗದು. ಅಂತಹ ಹೇಳಿಕೆಗಳು ಬರೀ ಸಮಸ್ಯೆಯ ಲಕ್ಷಣಗಳೇ ವಿನಾ ಸಮಸ್ಯೆಯ ಮೂಲ ಅಲ್ಲ.

ಬಿಜೆಪಿಯವರು ಮತ್ತು ಅವರ ಸೈದ್ಧಾಂತಿಕ ಪರಿವಾರದವರು ‘ನಾವು ಭಾರತವನ್ನು ಹಿಂದೂ ರಾಷ್ಟ್ರ ಮಾಡಿಯೇ ತೀರುತ್ತೇವೆ’ ಎಂದು ಹೇಳಿದಾಗ, ಅವರು ಪರ್ಯಾಯವಾಗಿ ಹೇಳುವುದು ‘ನಾವು ಸಂವಿಧಾನವನ್ನು ನಾಶ ಮಾಡುತ್ತೇವೆ’ ಅಂತಲೇ. ಯಾಕೆಂದರೆ, ಸಂವಿಧಾನ ಅರ್ಥಾತ್ ಮೂಲ ಸಂವಿಧಾನ ಹೇಳುವುದು, ಈ ರಾಷ್ಟ್ರ ಇಲ್ಲಿರುವ ಎಲ್ಲ ಧರ್ಮೀಯರಿಗೂ ಸಮಾನವಾಗಿ ಸೇರಿದ್ದು ಅಂತ. ಇದು ಹಿಂದೂ ರಾಷ್ಟ್ರ ಎಂದರೆ ಯಾರ ರಾಷ್ಟ್ರ ಎನ್ನುವ ಪ್ರಶ್ನೆ ಬರುತ್ತದೆ ಮತ್ತು ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಬಹುತ್ವವೇ ಮೂಲವಾಗಿರುವ ಭಾರತೀಯ ಸಮಾಜದಲ್ಲಿ ಕಷ್ಟ ಎನ್ನುವ ರಾಜಕೀಯ ಕಾಣ್ಕೆ ಸಂವಿಧಾನದ್ದು.

ಬಹುಧರ್ಮೀಯರಿರುವ ಭಾರತ ಹಿಂದೂರಾಷ್ಟ್ರ ಅಂತ ಆದರೆ ಈ ದೇಶ ಒಂದಾಗಿ ನೆಮ್ಮದಿಯಿಂದ ಉಳಿಯಲಾರದು ಎನ್ನುವ ಅಮೋಘ ಆಧ್ಯಾತ್ಮಿಕ ಕಾಣ್ಕೆ ಸಂವಿಧಾನದ್ದು. ಹಾಗಾಗಿ, ‘ಹಿಂದೂ ರಾಷ್ಟ್ರ ಮಾಡುತ್ತೇವೆ’ ಅಂತ ಹೇಳುವವರು ಪರ್ಯಾಯವಾಗಿ ಹೇಳುತ್ತಿರುವುದು ಏನೆಂದರೆ, ಈ ಸಂವಿಧಾನ ಬೇಡ ಎಂದು. ಎಗ್ಗಿಲ್ಲದೆ ಎಲ್ಲೆಡೆಯಿಂದ ಕಿವಿಗಪ್ಪಳಿಸುತ್ತಿರುವ ಈ ಹೇಳಿಕೆಗಳ ವಿರುದ್ಧ ಯಾರೂ ಪ್ರತಿಭಟಿಸುವುದಿಲ್ಲ. ಹಿಂದೂ ರಾಷ್ಟ್ರ ಆದರೆ ತೊಂದರೆ ಏನು ಎನ್ನುವ ಮುಗ್ಧ ಪ್ರಶ್ನೆ ಕೇಳುವ ಜನರಿಗೆ ಅದರ ಅಪಾಯ ಏನು ಅಂತ ಯಾರೂ ತಿಳಿಹೇಳುವುದಿಲ್ಲ.

ಮೊನ್ನೆ ಸದರಿ ಸಂಸದರು ನೀಡಿದ ಹೇಳಿಕೆಯನ್ನು ಸಮರ್ಥಿಸುತ್ತಾ ಇನ್ನೊಬ್ಬ ಬಿಜೆಪಿ ನಾಯಕರು ಒಂದು ಮಾತು ಹೇಳಿದ್ದು ವರದಿಯಾಗಿದೆ. ‘ಈ ದೇಶವನ್ನು ಒಕ್ಕೂಟ ಅಂತ ಕರೆಯುವವರು ನಿಜವಾದ ಸಂವಿಧಾನ ವಿರೋಧಿಗಳು’ ಅಂತ ಅವರು ಹೇಳಿದ್ದಾರೆ. ಅಂದರೆ ಅವರ ಪ್ರಕಾರ, ಈ ದೇಶವನ್ನು ರಾಜ್ಯಗಳ ಒಕ್ಕೂಟ ಅಂತ ಹೇಳುವುದೇ ತಪ್ಪು. ಸಂವಿಧಾನವು ಸಾರ್ವಭೌಮ ಅಧಿಕಾರವನ್ನು ಕೇಂದ್ರಕ್ಕೆ ನೀಡಿದ ಹಾಗೆಯೇ ಆಯ್ದ ವಿಷಯಗಳಲ್ಲಿ ರಾಜ್ಯಗಳಿಗೂ ನೀಡಿದೆ. ಆದಕಾರಣ ಇದು ಒಕ್ಕೂಟ. ಆದರೆ, ಮಾಜಿ ಮಂತ್ರಿಯೂ ಆಗಿರುವ ಆ ಬಿಜೆಪಿ ನಾಯಕರ ಪ್ರಕಾರ, ಒಕ್ಕೂಟ ಅಂತ ಹೇಳುವುದೇ ದ್ರೋಹ. ಹೀಗೆ ಅವರು ಹೇಳಿದಾಗ ಅವರು ಪರ್ಯಾಯವಾಗಿ ಹೇಳುವುದು ಈ ಸಂವಿಧಾನವನ್ನು ಬದಲಾಯಿಸಬೇಕು ಅಂತಲೇ. ಯಾಕೆಂದರೆ, ಒಕ್ಕೂಟ ವ್ಯವಸ್ಥೆಯೂ ಮೂಲ ಸಂವಿಧಾನದ ಭಾಗ.

ಹಾಗಾಗಿ, ಸಂವಿಧಾನವನ್ನು ಬದಲಾಯಿಸಬೇಕು ಅಥವಾ ಈ ಸಂವಿಧಾನದ ಸ್ಥಾನದಲ್ಲಿ ಹೊಸ ಸಂವಿಧಾನ ಬರಬೇಕು ಎನ್ನುವ ಹೇಳಿಕೆಯನ್ನು ವಿವಿಧ ಪದಗಳಲ್ಲಿ, ವಿವಿಧ ದೃಷ್ಟಾಂತಗಳ ಮೂಲಕ, ವಿವಿಧ ಉಪಮೆಗಳ ಮೂಲಕ, ವಿವಿಧ ಪ್ರತಿಮೆಗಳ ಮೂಲಕ ಮತ್ತೆ ಮತ್ತೆ ಹೇಳಲಾಗುತ್ತಿದೆ. ಅರ್ಥಾತ್ ಜನಮಾನಸವನ್ನು ‘ಮಾರಿಜಾತ್ರೆ’ಗೆ ಅಣಿಗೊಳಿಸಲಾಗುತ್ತಿದೆ. ಪ್ರತಿಭಟಿಸಬೇಕು ಎಂದಿದ್ದವರು ಈ ಇಡೀ ಹುನ್ನಾರದ ವಿರುದ್ಧ ಪ್ರತಿಭಟಿಸದೆ, ಒಬ್ಬ ವ್ಯಕ್ತಿಯನ್ನೇ ಗುರಿಯಾಗಿಸಿಕೊಳ್ಳುವುದರಿಂದ ಸಂವಿಧಾನದ ರಕ್ಷಣೆ ಆಗುವುದಿಲ್ಲ.



ಚುರುಮುರಿ



ಅಂಬಾನಿ ಹೊಲೆಸಿದ್ದು

• ಆನಂದ

‘ಇದೇನ್ರೀ ಹೊಸ ವರಸೆ? ಹೀಗೂ ಉಂಟೆ!’ ಮಡದಿಯ ಉದ್ಗಾರ.

‘ಹೇಗೆ?’ ಎಂದೆ.

‘ಪ್ರೀ ವೆಡ್ಡಿಂಗ್ ಸಮಾರಂಭಕ್ಕೆ ಅತಿಥೀನ ಕರೆದು, ಅವರು ಬಂದ ತಕ್ಷಣ ಅವರನ್ನು ಟೇಲರ್ ಬಳಿ ಕರೆದೊಯ್ಯುವುದು ಅಂದರೆ?’

‘ಪಾಪ, ಆ ಅತಿಥಿ ಬಳಿ ಒಳ್ಳೆಯ ಬಟ್ಟೆ ಇತ್ತೋ ಇಲ್ವೋ ಸಮಾರಂಭಕ್ಕೆ ಧರಿಸಲು’ ಎಂದು ಮಾಮೂಲಿನಂತೆ ನಾನು ಸಮಾಧಾನ ಹೇಳಲು ಹೊರಟೆ.

‘ಅಲ್ರೀ, ಆ ಅತಿಥಿ ಬೇರೆ ಯಾರೂ ಅಲ್ಲ ಬಿಲ್ ಗೇಟ್ಸ್. ನಮ್ಮ ನಾರಾಯಣಮೂರ್ತಿ ಅವರಂತೆ ಕೋಟ್ಯಧಿಪತಿ. ಅವರ ಬಳಿ ಒಳ್ಳೆಯ ಬಟ್ಟೆ ಇರೋಲ್ವೆ?’

‘ಯಾರು? ಗೇಟ್ಸ್ಸೇ...?’ ಎಂದು ಕೇಳಿದೆ. ಅವರು ನನ್ನ ಚಡ್ಡಿ ದೋಸ್ತ್ ಎನ್ನುವಂತೆ.

‘ಹೌದ್ರೀ, ಅವರೇ. ಅಂಬಾನಿ ತಮ್ಮ ಮಗನ ಪ್ರೀ ವೆಡ್ಡಿಂಗ್‌ಗೆ ಬಂದಿದ್ದ ಗೇಟ್ಸ್ ಅವರನ್ನು ಸೀದಾ ಟೇಲರ್ ಬಳಿ ಕರೆದೊಯ್ದರಂತೆ ಭಾರತೀಯ ಡ್ರೆಸ್ ಹೊಲೆಸಲು. ಗೇಟ್ಸ್ ಬಳಿ ಶೇರ್ವಾನಿ, ಜುಬ್ಬ ಎಲ್ಲಿರುತ್ತೆ? ಸೂಟು, ಟೀ ಶರ್ಟ್‌ನಂತಹವು ಇರುತ್ತವೆ. ಏನು ಚೆನ್ನ ಅವನ್ನು ಈ ಸಮಯದಲ್ಲಿ ಹಾಕಿಕೊಳ್ಳುವುದು. ಅವು ಬೋರ್ಡ್ ಮೀಟಿಂಗಿಗೆ ಸರಿ’.

‘ಬಿ ಆ್ಯನ್ ಇಂಡಿಯನ್ ವೈಲ್ ಯು ಆರ್ ಇನ್ ಇಂಡಿಯಾ ಎಂಬುದು ಅಂಬಾನಿಗಳ ಮಂತ್ರ ಅಂತ ಕಾಣುತ್ತೆ’.

‘ವ್ಹಾಟ್ ಅಂಬಾನಿ ಡಸ್ ಟುಡೆ ಅದರ್ ಕ್ರೋರ್ಪತೀಸ್ ಮೆ ಡೂ ಇಟ್ ಟುಮಾರೊ’.

‘ಹೊಸ ಸಂಪ್ರದಾಯ ಹುಟ್ಟುಹಾಕಿದ್ರು ಅಂತ ಕಾಣುತ್ತೆ. ಇನ್ನು ಮುಂದೆ ಲಗ್ನಪತ್ರಿಕೇಲಿ ‘ಆಶೀರ್ವಾದವೇ ಉಡುಗೊರೆ’ ಜತೆಗೆ ‘ಮದುವೆ ಉಡುಪು ನಮ್ಮ ಜವಾಬ್ದಾರಿ’ ಅಂತಲೂ ಪ್ರಿಂಟ್ ಮಾಡಿಸಬಹುದು’.

‘ನಿಮಗೂ ಒಂದು ಇನ್ವಿಟೇಷನ್ ಬಂದಿದ್ರೆ ಚೆನ್ನಾಗಿರ್ತಿತ್ತು ರೀ...’ ಎಂದು ಮಡದಿ ಹೇಳಿದಾಗ ನಾನು ಹೌಹಾರಿದೆ. ನಾನು? ಅಂಬಾನಿ?ಎತ್ತಣಿಂದೆತ್ತ? ತಮಾಷೆಗೂ ಒಂದು ಮಿತಿ ಇರುತ್ತೆ’ ಎಂದೆ.

‘ಹಾಗಾದರೂ ನಿಮಗೆ ಒಂದಿಷ್ಟು ಒಳ್ಳೆ ಬಟ್ಟೆ ಸಿಗ್ತಿತ್ತು, ಅದಕ್ಕೇ ಹೇಳಿದೆ. ಅಂಬಾನಿ ಹೊಲೆಸಿದ್ದು ಅಂತ ಹೇಳಿಕೊಂಡು ನಂತರ ಬೀಗಬಹುದಿತ್ತು’ ಎಂದಳು.

ವ್ಹಾಟ್ ಆ್ಯನ್ ಐಡಿಯಾ!

ಸಂಗತ

₹ 10ರ ನಾಣ್ಯ ಹೇಳುವುದೇನು?

ಜನರಲ್ಲಿ ಹತ್ತು ರೂಪಾಯಿ ನಾಣ್ಯದ ಕುರಿತು ಇರುವ ಅಪನಂಬಿಕೆಯನ್ನು, ಬ್ಯಾಂಕಿಂಗ್ ವಲಯದ ಬಗ್ಗೆ ಅವರಲ್ಲಿ ಬೇರೂರತೊಡಗಿರುವ ಅವಿಶ್ವಾಸದ ಸೂಚನೆ ಎಂದು ಪರಿಗಣಿಸಬೇಕಾಗಿದೆ

• ಎಚ್.ಕೆ.ಶರತ್

ಅಂಗಡಿಯಿಂದ ಚಿಲ್ಲರೆ ರೂಪದಲ್ಲಿ 20 ರೂಪಾಯಿ ನೋಟು ಪಡೆದುಕೊಂಡು ಹೋಗಿದ್ದ ಒಬ್ಬ ಯುವಕ ಕೆಲ ಹೊತ್ತಿನ ನಂತರ ಬಂದು, ‘ಪಕ್ಕದ ಬೇಕರಿಯವರು ಈ ನೋಟು ಇಸ್ಕೊಳ್ತಾ ಇಲ್ಲ. ಬೇರೆ ನೋಟು ಕೊಡಿ’ ಅಂತ ಆಗ್ರಹಿಸಿದ. ಅದಕ್ಕೆ ಅಂಗಡಿಯವರು, ‘ಮೊದ್ಲೇ ಚಿಲ್ಲರೆ ಸಿಗೋದು ಕಷ್ಟ. ಅದರಲ್ಲೂ ಹಳೆ ನೋಟು ಬೇಡ, ಚೂರುಪಾರು ಹರಿದಿರುವ ನೋಟು ಬೇಡ ಅಂತೆಲ್ಲ ಡಿಮ್ಯಾಂಡ್ ಮಾಡಿದ್ರೆ ಚಿಲ್ಲರೆ ಹೊಂದಿಸೋದು ಹೇಗೆ? ಬೇಕಿದ್ದರೆ 10 ರೂಪಾಯಿಯ ಕಾಯಿನ್‌ಗಳಿವೆ ಕೊಡ್ಲಾ’ ಅಂದರು. ‘ಆಯ್ತು ಕೊಡಿ’ ಅಂತ ಚೂರು ಹರಿದಿದ್ದ 20 ರೂಪಾಯಿ ನೋಟು ಕೊಟ್ಟು ಎರಡು ನಾಣ್ಯಗಳನ್ನು ಪಡೆದುಕೊಂಡು ಹೋದ. ಕೆಲವೇ ನಿಮಿಷಗಳಲ್ಲಿ ಮತ್ತೆ ವಾಪಸ್ ಬಂದು, ‘ಆ ಬೇಕರಿಯವರು ಈ ಕಾಯಿನ್‌ಗಳನ್ನೂ ತಗೋತಿಲ್ಲ’ ಅಂದ. ‘ಹಾಗಾದ್ರೆ ಸದ್ಯಕ್ಕೆ ಇರೋ ಇಪ್ಪತ್ರೂಪಾಯಿ ನೋಟನ್ನೇ ಕೊಡ್ತೀನಿ. ಎಲ್ಲೂ ಹೋಗ್ಲಿಲ್ಲ ಅಂದ್ರೆ ಇಲ್ಲೇ ತಂದ್ಕೊಡು’ ಎಂದ ಅಂಗಡಿಯವರ ಮಾತಿಗೆ ಯುವಕ ಸಮ್ಮತಿಸಿದ.

ಹತ್ತು ರೂಪಾಯಿಯ ನಾಣ್ಯಗಳ ಚಲಾವಣೆಗೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್ ಯಾವುದೇ ನಿರ್ಬಂಧ ಹೇರದಿದ್ದರೂ, ಇಂದಿಗೂ ಜನಸಾಮಾನ್ಯರು, ವ್ಯಾಪಾರಸ್ಥರು ಇವುಗಳನ್ನು ಸ್ವೀಕರಿಸಲು ಹಿಂಜರಿಯುತ್ತಿದ್ದಾರೆ. ತೀರಾ ಅನಿವಾರ್ಯ ಸಂದರ್ಭಗಳಲ್ಲಿ ಬೇರೆ ಆಯ್ಕೆಗಳು ಲಭ್ಯವಾಗದಿದ್ದಲ್ಲಿ ಮಾತ್ರ ಒಲ್ಲದ ಮನಸ್ಸಿನಿಂದಲೇ ನಾಣ್ಯಗಳನ್ನು ಪಡೆಯಲು ಮುಂದಾಗುತ್ತಿದ್ದಾರೆ. ಹತ್ತು ರೂಪಾಯಿಯ ನಾಣ್ಯದ ಕುರಿತು ಜನರ ಮನಸ್ಸಿನಲ್ಲಿ ಬೇರೂರಿರುವ ತಪ್ಪು ತಿಳಿವಳಿಕೆ ಹೋಗಲಾಡಿಸುವ ಸಲುವಾಗಿ ಆರ್‌ಬಿಐ ಸುತ್ತೋಲೆಗಳನ್ನೇ ಹೊರಡಿಸಿದ್ದರೂ ಅವು ಜನರ ಮೇಲೆ ಬೀರಿರುವ ಪರಿಣಾಮ ಮಾತ್ರ ನಗಣ್ಯ.

₹ 10ರ ನಾಣ್ಯಕ್ಕೆ ಕೂಡ ಬೇರೆ ನಾಣ್ಯಗಳು ಹಾಗೂ ನೋಟುಗಳಿಗೆ ಇರುವಷ್ಟೇ ಮಾನ್ಯತೆ ಇದೆ ಎನ್ನುವುದನ್ನು ಮನದಟ್ಟು ಮಾಡಿಕೊಡುವ ಪ್ರಯತ್ನವನ್ನು ಯಾರಾದರೂ ಮಾಡಲು ಮುಂದಾದರೆ, ಅವರಿಗೆ ಎದುರಾಗುವ ಪ್ರಶ್ನೆ, ‘ಬೇರೆ ಕಡೆ ಕೊಡೋಕೆ ಹೋದ್ರೆ ಯಾರೂ ಇಸ್ಕೊಳ್ಳಲ್ಲ. ಇವನ್ನ ಇಟ್ಕೊಂಡು ಏನ್ ಮಾಡೋದು?’

ಜನರಿಂದಲೇ ಭಾಗಶಃ ‘ನಿಷೇಧ’ಕ್ಕೆ ಒಳಗಾಗುತ್ತಿರುವ ಹತ್ತು ರೂಪಾಯಿ ನಾಣ್ಯವು ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಜನರಲ್ಲಿ ಸುಪ್ತವಾಗಿ ಬೇರೂರತೊಡಗಿರುವ ಅಪನಂಬಿಕೆಗೆ ಹಿಡಿದ ಕನ್ನಡಿಯಂತೆ ಭಾಸವಾಗುವುದಿಲ್ಲವೇ?

2016ರಲ್ಲಿ ಯಾವುದೇ ಮುನ್ಸೂಚನೆ ನೀಡದೆ ದಿಢೀರನೆ ₹ 500 ಹಾಗೂ ₹ 1000 ಮುಖಬೆಲೆಯ ನೋಟುಗಳನ್ನು ಅಮಾನ್ಯಗೊಳಿಸಲಾಯಿತು. ಈ ಬೆಳವಣಿಗೆ ಅದುವರೆಗೂ ದೇಶದ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಅದರ ನಿಯಂತ್ರಣದ ಹೊಣೆ ಹೊತ್ತಿರುವ ರಿಸರ್ವ್ ಬ್ಯಾಂಕ್ ಮೇಲೆ ಜನಸಾಮಾನ್ಯರು ಇಟ್ಟಿದ್ದ ನಂಬಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಹೀಗಾಗಿಯೇ, ರಿಸರ್ವ್ ಬ್ಯಾಂಕ್ ಅಧಿಕೃತವಾಗಿ ಹೇಳದಿರುವ ಅಂಶಗಳಿಗೂ ಜನಸಾಮಾನ್ಯರ ವಲಯದಲ್ಲಿ ಮಾನ್ಯತೆ ದೊರೆತು, ಅವು ಅನುಷ್ಠಾನಕ್ಕೂ ಬರುತ್ತಿವೆ. ನೋಟು ರದ್ದತಿಯ ನಂತರ ಚಲಾವಣೆಗೆ ಬಿಟ್ಟಿದ್ದ ₹ 2000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯಲಾಗಿದೆ. ದೈನಂದಿನ ವಹಿವಾಟಿನ ವೇಳೆ ಕೈ ಬದಲಾವಣೆಯಾಗುತ್ತಿದ್ದ ₹ 10 ಮತ್ತು ₹ 20 ಮುಖಬೆಲೆಯ ನೋಟುಗಳನ್ನು ಗಮನಿಸುತ್ತಿದ್ದವರಿಗೆ, ಕಡಿಮೆ ಮುಖಬೆಲೆಯ ಹೊಸ ನೋಟುಗಳು ಸಿಗುವುದು ತೀರಾ ಅಪರೂಪವಾಗುತ್ತಿದೆ. ನಾಣ್ಯಗಳ ಚಲಾವಣೆಯನ್ನು ಪ್ರೋತ್ಸಾಹಿಸುವ ಸಲುವಾಗಿಯೇ ಬ್ಯಾಂಕುಗಳು ಹೀಗೆ ಮಾಡುತ್ತಿರಬಹುದೇನೊ ಎನ್ನುವ ಅನುಮಾನ ವ್ಯಾಪಾರಸ್ಥರದ್ದು.

ರಿಸರ್ವ್ ಬ್ಯಾಂಕ್ ತಾನು ಅನುಸರಿಸುವ ಕಾರ್ಯತಂತ್ರದ ಕುರಿತು ಜನಸಾಮಾನ್ಯರಿಗೆ ಮುನ್ಸೂಚನೆ ನೀಡದೆ ಅನುಷ್ಠಾನಕ್ಕೆ ತರುವುದು ತೀರಾ ಅಪರೂಪವೇನಲ್ಲ. ಹೀಗಾಗಿ, ದೈನಂದಿನ ವ್ಯವಹಾರಗಳಲ್ಲಿ ನಗದು ಚಲಾವಣೆಯಾಗುವುದನ್ನು ಗಮನಿಸುವ ಮಂದಿ, ತಮ್ಮದೇ ಆದ ವಿಶ್ಲೇಷಣೆಗಳನ್ನು ಹರಿಯಬಿಡುವುದು ಮತ್ತು ಅವುಗಳಿಗೆ ಜನಸಾಮಾನ್ಯರ ನಡುವೆ ಮನ್ನಣೆ ದೊರೆಯುತ್ತಾ ಸಾಗುವುದು ಮುಂದುವರಿದೇ ಇದೆ.



ದೈನಂದಿನ ವ್ಯಾಪಾರ ವಹಿವಾಟುಗಳಲ್ಲಿ ಯುಪಿಐ ಆಧಾರಿತ ಆನ್‌ಲೈನ್ ಪಾವತಿ ವ್ಯಾಪಕವಾಗಿ ಇರುವುದರಿಂದ ಚಿಲ್ಲರೆ ಸಮಸ್ಯೆ ವ್ಯಾಪಾರಸ್ಥರನ್ನು ತೀವ್ರವಾಗಿಯೇನೂ ಬಾಧಿಸುತ್ತಿಲ್ಲ. ಆದರೆ, ತಾಂತ್ರಿಕ ಕಾರಣಗಳಿಂದಾಗಿ ಆನ್‌ಲೈನ್ ಪಾವತಿ ವ್ಯವಸ್ಥೆಯಲ್ಲಿ ತೊಡಕು ಉಂಟಾದಾಗ ಮತ್ತು ಆನ್‌ಲೈನ್ ಪಾವತಿ ವ್ಯವಸ್ಥೆಗೆ ಒಗ್ಗಿಕೊಳ್ಳದ ವ್ಯಾಪಾರಿ ಅಥವಾ ಗ್ರಾಹಕರಿಗೆ ಚಿಲ್ಲರೆಯ ಅಲಭ್ಯತೆ ಕಾಡುತ್ತದೆ.

ಹತ್ತು ರೂಪಾಯಿ ನಾಣ್ಯದ ಕುರಿತು ಮೂಡಿರುವ ಅಪನಂಬಿಕೆಯನ್ನು ಬರೀ ಅದೊಂದಕ್ಕೆ ಮಾತ್ರ ಅನ್ವಯಿಸಿ ನೋಡುವ ಬದಲಿಗೆ, ಬ್ಯಾಂಕಿಂಗ್ ವಲಯದ ಮೇಲೆ ಜನರಲ್ಲಿ ಬೇರೂರತೊಡಗಿರುವ ಅವಿಶ್ವಾಸದ ಸೂಚನೆ ಎಂಬಂತೆ ಪರಿಗಣಿಸುವ ಜರೂರತ್ತಿದೆ.

ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ವಿವರಗಳನ್ನು ಬಹಿರಂಗಪಡಿಸಲು ಸುಪ್ರೀಂ ಕೋರ್ಟ್ ಸೂಚಿಸಿದ ನಂತರ, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ವರ್ತಿಸಿದ ರೀತಿ ಕೂಡ ಬ್ಯಾಂಕಿಂಗ್ ವಲಯದ ಮೇಲೆ ಜನಸಾಮಾನ್ಯರು ಇಟ್ಟಿರುವ ಭರವಸೆಗೆ ಚ್ಯುತಿ ತರುವಂತೆ ಇತ್ತು. ಬ್ಯಾಂಕಿಂಗ್ ವ್ಯವಸ್ಥೆಗೆ ಗ್ರಾಹಕರ ಹಿತಕ್ಕಿಂತ ಅಧಿಕಾರಸ್ಥರು ಮತ್ತು ಅವರಿಗೆ ಬೆನ್ನೆಲುಬಾಗಿ ನಿಲ್ಲುವ ಬೆರಳೆಣಿಕೆಯಷ್ಟು ಉದ್ಯಮಿಗಳ ಹಿತ ಕಾಯುವುದಷ್ಟೇ ಆದ್ಯತೆಯಾದಾಗ ಅದರ ವಿಶ್ವಾಸಾರ್ಹತೆಗೆ ಧಕ್ಕೆ ಒದಗದಿರುವುದೇ?

ವಾಚಕರ ವಾಣಿ

ರೋಪ್‌ವೇ: ಮತ್ತೆ ಮುನ್ನೆಲೆಗೆ ತಂದದ್ದೇಕೆ?

ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ಅಳವಡಿಸುವ ವಿಚಾರವು ಪರಿಸರಪ್ರಿಯರ ವಿರೋಧದ ಕಾರಣದಿಂದ ಈವರೆಗೆ ತಟಸ್ಥವಾಗಿತ್ತು. ಆದರೆ ಈಗ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಮೈಸೂರಿನಲ್ಲಿ ಅದನ್ನು ಪ್ರಸ್ತಾಪಿಸುವ ಮೂಲಕ ಮತ್ತೊಮ್ಮೆ ಮುನ್ನೆಲೆಗೆ ತಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ, ಪರಿಸರಪ್ರಿಯರು ಒಪ್ಪಿದರೆ ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ನಿರ್ಮಿಸಲಾಗುವುದು ಎಂದು ಹೋಟೆಲ್ ಮಾಲೀಕರ ಮನವಿಗೆ ಸಂಬಂಧಿಸಿದಂತೆ ಹೇಳಿದ್ದಾರೆ. ಬರೀ ಪ್ರವಾಸೋದ್ಯಮ ಮತ್ತು ಹೋಟೆಲ್‌ಗಳ ಅಭಿವೃದ್ಧಿಯನ್ನಷ್ಟೇ ಗಮನದಲ್ಲಿ ಇಟ್ಟುಕೊಂಡು ಹೀಗೆ ಯೋಚಿಸುವ ಬದಲು, ಚಾಮುಂಡಿ ಬೆಟ್ಟದಲ್ಲಿನ ಸ್ಥಿತಿಗತಿಯನ್ನೂ ಪರಿಗಣಿಸಿದ್ದರೆ ರೋಪ್‌ವೇ ಯೋಜನೆ ಬಹುಶಃ ಅಪ್ರಸ್ತುತ ಎನಿಸುತ್ತಿತ್ತು.

ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಸ್ಥಾನವಲ್ಲದೆ ಒಂದು ಗ್ರಾಮವೂ ಇದೆ. ಎಲ್ಲ ಊರು, ಪಟ್ಟಣಗಳೂ ಬೆಳೆಯುತ್ತಿರುವಂತೆ ಚಾಮುಂಡಿ ಗ್ರಾಮವೂ ಬೆಳೆಯುತ್ತಿದೆ! ಆದರೆ ಜಮೀನುಗಳನ್ನು ಲೇಔಟ್‌ಗಳನ್ನಾಗಿ ಪರಿವರ್ತಿಸುವ ಮೂಲಕ ನಮ್ಮ ಊರು, ಪಟ್ಟಣಗಳನ್ನು ವಿಸ್ತರಣೆ ಮಾಡುತ್ತಿದ್ದೇವೆ. ಚಾಮುಂಡಿ ಬೆಟ್ಟ ಮತ್ತು ಗ್ರಾಮವನ್ನು ಅಭಿವೃದ್ಧಿಪಡಿಸಬೇಕಾದರೆ ಬೆಟ್ಟವನ್ನು ಸಮತಟ್ಟು ಮಾಡಿ, ಮನೆ, ಮಾರುಕಟ್ಟೆಯನ್ನು ನಿರ್ಮಿಸಬೇಕಾಗುತ್ತದೆ. ಅಭಿವೃದ್ಧಿಗೆ ಕೊನೆ ಎಂಬುದೇ ಇರುವುದಿಲ್ಲ. ಹಿಂದೆ ಸಚಿವರಾಗಿದ್ದವರೊಬ್ಬರು, ಚಾಮುಂಡಿ ಬೆಟ್ಟದಲ್ಲಿ ಇರುವ ನಿವಾಸಿಗಳನ್ನು ಬೇರೆಡೆ ಸ್ಥಳಾಂತರಿಸಿ, ಅಲ್ಲಿ ಚಾಮುಂಡಿ ದೇವಸ್ಥಾನ ಮಾತ್ರ ಇರುವಂತೆ ಮಾಡುವುದರ ಕುರಿತು ಯೋಚಿಸಿದ್ದರೆಂದು ವರದಿಯಾಗಿತ್ತು. ಇದು ಚಾಮುಂಡಿ ಬೆಟ್ಟದ ಪರಿಸರವನ್ನು ಕಾಪಾಡಲು ಅಗತ್ಯ ಕೂಡ ಎಂಬ ಮಾತು ಕೇಳಿಬಂದಿತ್ತು. ಹೀಗಿರುವಾಗ, ಹಿಂದೆ ಸರಿದಿದ್ದ ಚಾಮುಂಡಿ ಬೆಟ್ಟದ ರೋಪ್‌ವೇ ಯೋಜನೆಯನ್ನು ಆಗಾಗ್ಗೆ ಮುನ್ನೆಲೆಗೆ ತರುವುದು ಅರ್ಥವಾಗದ ವಿಚಾರ.

ಮುಳ್ಳೂರು ಪ್ರಕಾಶ್, ಮೈಸೂರು

ಚುನಾವಣಾ ಅಸ್ತ್ರವಾಗಿ ಸಿಎಎ ಬಳಕೆ ಸಲ್ಲ

ಪೌರತ್ವ ತಿದ್ದುಪಡಿ ಕಾಯ್ದೆಯು (ಸಿಎಎ) ಸದನದಲ್ಲಿ ಅಂಗೀಕೃತವಾದ ನಾಲ್ಕು ವರ್ಷಗಳ ನಂತರ ಕೇಂದ್ರ ಸರ್ಕಾರವು ಅದನ್ನು ಜಾರಿಗೆ ತರಲು ಹೊರಟಿರುವುದು ನ್ಯಾಯಸಮ್ಮತ ಅಲ್ಲ. ಈಗ ಚುನಾವಣೆಯಲ್ಲಿ ಅದನ್ನು ಅಸ್ತ್ರವನ್ನಾಗಿ ಬಳಸಲು ಮುಂದಾಗಿರುವುದು ಖಂಡನಾರ್ಹ. ಅಲ್ಲದೆ ಇದು ಕಾನೂನಿನ ದುರುಪಯೋಗ ಸಹ.

ಕೆ.ಎಸ್.ಪಾರ್ಥಸಾರಥಿ, ಬೆಂಗಳೂರು

ವೈಚಾರಿಕ ಒಮ್ಮತ ಮೂಡಲಿ

ಇಂದಿನ ಚುನಾವಣಾ ಪ್ರಚಾರದ ಭರಾಟೆಯಲ್ಲಿ, ಜನಸಾಮಾನ್ಯರ ಬದುಕಿಗೆ ಹತ್ತಿರವಾದ ನೈಜ ಸಂಗತಿಗಳು ತೆರೆಯ ಹಿಂದೆ ಸರಿಯುತ್ತಿವೆಯೇ ಎಂಬ ಆತಂಕ ಮೂಡುತ್ತದೆ. ಸಂವಿಧಾನವನ್ನು ಬದಲಾಯಿಸುವ ಇರಾದೆ, ಕೇಂದ್ರ– ರಾಜ್ಯಗಳ ನಡುವಿನ ಸಂಬಂಧ, ಭ್ರಷ್ಟಾಚಾರದಂತಹ ವಿಷಯಗಳು ಚರ್ಚಾರ್ಹವಾಗಿದ್ದು, ಹೆಚ್ಚು ಪ್ರಾಮುಖ್ಯ ಪಡೆಯಬೇಕಾಗಿದೆ. ದೇಶಭಕ್ತಿ, ದೇವರಿಗೆ ಸಂಬಂಧಿಸಿದಂತಹ ಭಾವನಾತ್ಮಕ ಸಂಗತಿಗಳಿಗಿಂತ ಪ್ರಚಲಿತ ಸಂಗತಿಗಳ ಬಗ್ಗೆ ವೈಚಾರಿಕ ಒಮ್ಮತ ಮೂಡುವ ಅಗತ್ಯವಿದೆ.

ಆಶಯ, ಮೈಸೂರು

ರೈತರ ಆಕ್ರೋಶ ಯಾರ ಮೇಲೆ?

ಹಾವೇರಿ ಜಿಲ್ಲೆಯ ಬ್ಯಾಡಗಿಯಲ್ಲಿ ಮೆಣಸಿನಕಾಯಿ ದರದ ದಿಢೀರ್ ಕುಸಿತದಿಂದ ಆಕ್ರೋಶಕ್ಕೆ ಒಳಗಾದ ರೈತರು ಎಪಿಎಂಸಿ ಕಚೇರಿಯಲ್ಲಿ ದಾಂದಲೆ ನಡೆಸಿರುವುದು ವರದಿಯಾಗಿದೆ (ಪ್ರ.ವಾ., ಮಾರ್ಚ್ 12). ಹಾಗಿದ್ದರೆ ರೈತರ ಆಕ್ರೋಶ ಯಾರ ಮೇಲೆ? ಬೆಲೆ ಕುಸಿತದ ವಿರುದ್ಧವೋ ಸರ್ಕಾರದ ವಿರುದ್ಧವೋ ಅಥವಾ ನಮ್ಮ ರಕ್ಷಣೆಗಾಗಿ ಇರುವ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿಯ ವಿರುದ್ಧವೋ ಎಂಬುದು ತಿಳಿಯದಾಗಿದೆ. ರೈತರು ಪ್ರತಿಭಟನೆ ನಡೆಸುವುದು ತಪ್ಪಲ್ಲ. ಆದರೆ ಆ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿ, ಘಟನೆಯನ್ನು ನಿಯಂತ್ರಿಸಲು ಸ್ಥಳಕ್ಕೆ ಬಂದ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿಯನ್ನೇ ಅವರು ಅಟ್ಟಾಡಿಸಿಕೊಂಡು ಹೋಗಿ ಹಲ್ಲೆ ನಡೆಸಿರುವುದು, ಪತ್ರಕರ್ತರತ್ತ ಕಲ್ಲು ತೂರಿರುವುದು ನಮ್ಮ ಜನರ ಮನಃಸ್ಥಿತಿ ಎಂತಹ ಅಧೋಗತಿಗೆ ಇಳಿದಿದೆ ಎಂಬುದನ್ನು ತಿಳಿಸುತ್ತದೆ.

ಬೆಳೆದ ಉತ್ಪನ್ನಕ್ಕೆ ಸರಿಯಾದ ಬೆಲೆ ಸಿಗದಿದ್ದಾಗ, ದೇಶದ ಬೆನ್ನೆಲುಬು ಎನಿಸಿಕೊಂಡಿರುವ ರೈತರ ಸಹನೆಯ ಕಟ್ಟೆ ಒಡೆಯುವುದು ಸ್ವಾಭಾವಿಕ. ಆದರೆ ಅದು ಪ್ರತಿಭಟನೆಯ ಮೂಲಕ ತಮ್ಮ ಅಸಮಾಧಾನವನ್ನು ನ್ಯಾಯಯುತವಾಗಿ ಸರ್ಕಾರಕ್ಕೆ ಮುಟ್ಟಿಸುವಂತಹ ರೀತಿಯಲ್ಲಿ ಇರಬೇಕೇ ವಿನಾ ಹಿಂಸಾಕೃತ್ಯಗಳಿಗೆ ಇಳಿಯುವಂತೆ ಅಲ್ಲ.

ಜಗದೀಶ ಗಿರಡ್ಡಿ, ಇಳಕಲ್

ಹೃದಯದ ಸಖ್ಯವೇ ಇರಲಿ...

ರಾಜಕಾರಣಿಗಳೆಂದರೆ ಭ್ರಷ್ಟರೆಂಬುದು ಜನಜನಿತವಾದ ವಿಷಯ. ಚುನಾವಣಾ ವ್ಯವಸ್ಥೆಯೂ ಇದಕ್ಕೆ ಪೂರಕವಾಗಿಯೇ ಇದೆ. ಇಂತಹ ಸಂದರ್ಭದಲ್ಲಿ, ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಅವರು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಸಮ್ಮತಿ ನೀಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 12). ಲಕ್ಷಾಂತರ ಹೃದಯಗಳಿಗೆ ಚಿಕಿತ್ಸೆ ನೀಡಿ ಮಂಜುನಾಥ್ ಅವರ ಹೃದಯ ಮಿಡಿದಿದೆ. ಸಾರ್ಥಕ ಬದುಕು ಕಂಡಿರುವ ಅವರು, ಈ ಹೊಲಸು ರಾಜಕಾರಣಿಗಳ ತಾಳಕ್ಕೆ ಹೇಗೆ ಸ್ಪಂದಿಸಬಹುದು?

ಶಿಕ್ಷಣ ತಜ್ಞರಾದ ಕನಕಪುರ ಕರಿಯಪ್ಪನವರು ವಿದ್ಯಾಸಂಸ್ಥೆಯೊಂದನ್ನು ಕಟ್ಟಿ ಅದರ ಕೀರ್ತಿಯನ್ನು ಎತ್ತರಕ್ಕೆ ಏರಿಸಿದರು. ಆದರೆ, ರಾಜಕಾರಣ ಅವರನ್ನು ದೂರ ತಳ್ಳಿತು. ತಮ್ಮದೇ ಆದ ದೂರದೃಷ್ಟಿ ಇಟ್ಟುಕೊಂಡು ರಾಜಕೀಯ ಕ್ಷೇತ್ರಕ್ಕೆ ಬಂದಿದ್ದ ಅನೇಕ ವಿದ್ವಾಂಸರನ್ನು ರಾಜಕೀಯ ಕ್ಷೇತ್ರ ಉಳಿಸಿಕೊಳ್ಳಲಿಲ್ಲ. ಇನ್ನು ತಮ್ಮದಲ್ಲದ ಕ್ಷೇತ್ರದಲ್ಲಿ ಈ ಹೃದಯ ತಜ್ಞರಿಗೆ ಉಳಿಗಾಲವಿದೆಯೇ? ಮಂಜುನಾಥ್ ಅವರು ತಮ್ಮ ಜೀವಿತದ ಉಳಿದ ಅವಧಿಯನ್ನು, ನಲುಗಿರುವ ಸಾವಿರಾರು ಹೃದಯಗಳ ಜೊತೆಯಲ್ಲಿಯೇ ಕಳೆಯುವಂತೆ ಆಗಲಿ. ಹೃದಯ ಚಿಕಿತ್ಸೆಗೆ ಮಾರ್ಗದರ್ಶನ ನೀಡುವ ಕೆಲಸ ಮಾಡಲಿ. ಜನಸಾಮಾನ್ಯರು ಸದಾ ಅವರನ್ನು ವೈದ್ಯಕೀಯ ಕ್ಷೇತ್ರದಲ್ಲಿ ಕಾಣಲು ಇಷ್ಟಪಡುತ್ತಾರೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಆಂಧ್ರ ರಾಜಕೀಯ ಲೆಕ್ಕಾಚಾರ ಬದಲು

ಲೋಕಸಭೆ ಚುನಾವಣೆಯ ಹೊಸ್ತಿಲಲ್ಲಿ ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳ ಮೈತ್ರಿಯ ಲೆಕ್ಕಾಚಾರಗಳು ಬದಲಾಗುತ್ತಿವೆ. ಹಲವು ವರ್ಷಗಳಿಂದ ಬಿಜೆಪಿ ಎಲ್ಲಾ ನೀತಿಗಳನ್ನು ಬೆಂಬಲಿಸಿಕೊಂಡು ಬಂದಿದ್ದ ಜಗನ್‌ಮೋಹನ್ ರೆಡ್ಡಿ ಅವರ ವೈಎಸ್‌ಆರ್ ಕಾಂಗ್ರೆಸ್ ಜತೆಗೆ ಬಿಜೆಪಿ ಮೈತ್ರಿ ಬೆಳೆಸಲೇ ಇಲ್ಲ. ಬದಲಿಗೆ ತಮ್ಮನ್ನು ದೂಷಿಸುತ್ತಿದ್ದ ಟಿಡಿಪಿ ಜತೆಗೆ ಆಂಧ್ರ ಪ್ರದೇಶದಲ್ಲಿ ಮೈತ್ರಿ ಮಾಡಿಕೊಂಡಿದೆ. ಅಂತೆಯೇ ಹರಿಯಾಣದಲ್ಲಿ ತಮ್ಮ ರಾಜ್ಯ ಸರ್ಕಾರಕ್ಕೆ ಬೆಂಬಲ ನೀಡಿದ್ದ ಜೆಜೆಪಿ ಜತೆಗೂ ಮೈತ್ರಿ ಕಡಿದುಕೊಂಡ ಬಿಜೆಪಿ, ಸ್ವತಂತ್ರವಾಗಿ ಕಣಕ್ಕೆ ಇಳಿಯಲು ಮುಂದಾಗಿದೆ

ಪ್ರಜಾ ಮತ – ಜನತಂತ್ರದ ಹಬ್ಬ | ಲೋಕಸಭಾ ಚುನಾವಣೆ - 2024

ಪ್ರಜಾವಾಣಿ ವಾರ್ತೆ

ಅವಿಭಜಿತ ಆಂಧ್ರ ಪ್ರದೇಶದ ರಾಜಕಾರಣದ ಲೆಕ್ಕಾಚಾರಗಳೇ ಬೇರೆ. ಈಗಿನ ಆಂಧ್ರ ಪ್ರದೇಶದ ಲೆಕ್ಕಾಚಾರಗಳೇ ಬೇರೆ. ಆಂಧ್ರ ಪ್ರದೇಶದ ಜನರು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳನ್ನು ದೂರ ಇಟ್ಟಿದ್ದಾರೆ. ಆಂಧ್ರದ ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ರಾಜ್ಯವನ್ನು ವಿಭಜಿಸಿ ತೆಲಂಗಾಣವನ್ನು ರೂಪಿಸಲಾಗಿದೆ ಎಂದು ಕಾಂಗ್ರೆಸ್‌ನೊಂದಿಗೆ ಜನರಿಗೆ ಮುನಿಸು; ರಾಜ್ಯಕ್ಕೆ ವಿಶೇಷ ರಾಜ್ಯದ ಸ್ಥಾನಮಾನ ನೀಡಲಿಲ್ಲ ಎನ್ನುವ ಕಾರಣಕ್ಕೆ ಬಿಜೆಪಿಯೊಂದಿಗೂ ಮುನಿಸು. ಈಗಿನ ರಾಜ್ಯದ ರಾಜಕಾರಣದಲ್ಲಿ ಎಲ್ಲಿಯೂ ರಾಷ್ಟ್ರೀಯ ಪಕ್ಷಗಳು ಜನರ ಲೆಕ್ಕಾಚಾರದಲ್ಲಿ ಇಲ್ಲವೇ ಇಲ್ಲ. ಆದರೆ, ರಾಜ್ಯದ ಪ್ರಾದೇಶಿಕ ಪಕ್ಷಗಳು ಮಾತ್ರ ಬಿಜೆಪಿಯೊಂದಿಗಿನ ಮೈತ್ರಿಗೆ, ಸ್ನೇಹಕ್ಕೆ ಹಾತೊರೆಯುತ್ತಿವೆ.



ಚಂದ್ರಬಾಬು ನಾಯ್ಡು

ಬಿಜೆಪಿಗೆ ರಾಜ್ಯದಲ್ಲಿ ಸ್ವತಂತ್ರ ಅಸ್ತಿತ್ವ ಇಲ್ಲ. ಆದ್ದರಿಂದಲೇ ಬಿಜೆಪಿಗೆ ಅಸ್ತಿತ್ವ ಕಂಡುಕೊಳ್ಳುವ ತವಕ. ಕಾಂಗ್ರೆಸ್‌ನ ಅಸ್ತಿತ್ವ ಕುಸಿದು ಬಿದ್ದಿದೆ. ಆದ್ದರಿಂದಲೇ ಕಾಂಗ್ರೆಸ್‌ಗೆ ತನ್ನ ಅಸ್ತಿತ್ವವನ್ನು ಮರಳಿ ಪಡೆದುಕೊಳ್ಳುವ ಹಂಬಲ.

ಬಿಜೆಪಿಗೆ, ತನ್ನ ಅಸ್ತಿತ್ವ ಕಂಡುಕೊಳ್ಳಲು ಪ್ರಾದೇಶಿಕ ಪಕ್ಷಗಳ ಸಹಾಯ ಬೇಕೇಬೇಕು. ಇದೇ ಕಾರಣಕ್ಕೆ ಒಮ್ಮೆ ತೆಲುಗುದೇಶಂ (ಟಿಡಿಪಿ) ಪಕ್ಷದೊಂದಿಗೆ, ಇನ್ನೊಮ್ಮೆ ಈಗ ಆಡಳಿತದಲ್ಲಿರುವ ವೈಎಸ್‌ಆರ್ ಕಾಂಗ್ರೆಸ್ ಪಕ್ಷದೊಂದಿಗೆ ಗುರುತಿಸಿಕೊಂಡಿದೆ. ಇಷ್ಟಾದರೂ ಬಿಜೆಪಿ ರಾಜ್ಯದಲ್ಲಿ ಅಸ್ತಿತ್ವ ಕಂಡುಕೊಂಡಿಲ್ಲ.

ಬದಲಾದ ಮೈತ್ರಿ ಲೆಕ್ಕಾಚಾರ: ಯಾವುದೇ ಪ್ರಾದೇಶಿಕ ಪಕ್ಷಕ್ಕೂ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದೊಂದಿಗೆ ಸ್ನೇಹ ಸಂಬಂಧ ಇರಿಸಿಕೊಳ್ಳುವುದು ಹೆಚ್ಚು ಲಾಭದಾಯಕವಾಗಿರುತ್ತದೆ. ಇದೇ ಕಾರಣಕ್ಕೆ ಟಿಡಿಪಿಯಾಗಲಿ, ವೈಎಸ್‌ಆರ್ ಕಾಂಗ್ರೆಸ್ ಆಗಲಿ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರದೊಂದಿಗೆ ಸ್ನೇಹದಲ್ಲಿಯೇ ಇವೆ.

‘ರಾಜಕೀಯ ಲಾಭಕ್ಕಾಗಿ ಇಲ್ಲಿನ ಪ್ರಾದೇಶಿಕ ಪಕ್ಷಗಳು ಬಿಜೆಪಿಯೊಂದಿಗೆ ಮೈತ್ರಿಗೆ ಹವಣಿಸುತ್ತಿಲ್ಲ. ಬದಲಿಗೆ ಆ ಪಕ್ಷಗಳ ನಾಯಕರ ವೈಯಕ್ತಿಕ ಕಾರಣಕ್ಕಾಗಿ ಬಿಜೆಪಿಯೊಂದಿಗಿನ ಮೈತ್ರಿ ಬೇಕಾಗಿದೆ’ ಎನ್ನುವುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ. ಚಂದ್ರಬಾಬು ನಾಯ್ಡು ಅವರ ಮೇಲೆ ಹಲವು ಪ್ರಕರಣಗಳಿವೆ. ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರ ಮೇಲೆ ಕೂಡ ಹಣ ಅಕ್ರಮ ವರ್ಗಾವಣೆ ಸೇರಿದಂತೆ ಹಲವು ಪ್ರಕರಣಗಳಿವೆ. ಈ ಪ್ರಕರಣಗಳ ತನಿಖೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೇ ಜಗನ್ ಹಾಗೂ ನಾಯ್ಡು ಅವರು ಅವರು ಬಿಜೆಪಿಗೆ ಬೆಂಬಲ ನೀಡುತ್ತಿದ್ದಾರೆ ಎನ್ನುತ್ತಾರೆ ವಿಶ್ಲೇಷಕರು.



ಆಂಧ್ರದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಇತ್ತೀಚೆಗಷ್ಟೇ ಭೇಟಿಯಾಗಿದ್ದರು. ಇದಾದ ಕೆಲ ದಿನಗಳ ಬಳಿಕ ಬಿಜೆಪಿಯು ಟಿಡಿಪಿಯೊಂದಿಗೆ ಮೈತ್ರಿ ಮಾಡಿಕೊಂಡಿತು –ಪಿಟಿಐ ಚಿತ್ರ



ಕಾಂಗ್ರೆಸ್‌ಗೆ ಶರ್ಮಿಳಾ ಆಸರೆ



ಶರ್ಮಿಳಾ

ಕಾಂಗ್ರೆಸ್ ತನ್ನ ಅಸ್ತಿತ್ವವನ್ನು ಮರಳಿ ಪಡೆದುಕೊಳ್ಳಲು, ಹೊಸ ಹೊಸ ಲೆಕ್ಕಾಚಾರಗಳೊಂದಿಗೆ ಚುನಾವಣೆಗೆ ಸಿದ್ಧವಾಗಿದೆ. ಅಣ್ಣ ವೈ.ಎಸ್. ಜಗನ್ ಮೋಹನ್ ರೆಡ್ಡಿಯೊಂದಿಗೆ ಮುನಿಸಿಕೊಂಡು ತೆಲಂಗಾಣಕ್ಕೆ ಹೋಗಿ ಪಕ್ಷ ಕಟ್ಟಿದ್ದ ವೈ.ಎಸ್. ಶರ್ಮಿಳಾ ಅವರನ್ನು ಕಾಂಗ್ರೆಸ್ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ತೆಲಂಗಾಣದ ರಾಜಕೀಯದಿಂದ ಬಿಡಿಸಿ, ಆಂಧ್ರದ ರಾಜಕಾರಣಕ್ಕೆ ಶರ್ಮಿಳಾ ಅವರನ್ನು ಎಳೆದುತಂದಿದೆ.

ಬಿಆರ್‌ಎಸ್ ಪಕ್ಷದ ವಿರುದ್ಧ, ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಆಡಳಿತದ ವಿರುದ್ಧ ಶರ್ಮಿಳಾ ಅವರು ಬೀದಿಗಿಳಿದಿದ್ದರು. ಪಾದಯಾತ್ರೆಗಳನ್ನು ಕೈಗೊಂಡು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿದ್ದರು. ಈಗ ಕಾಂಗ್ರೆಸ್‌ನ ಆಂಧ್ರ ಪ್ರದೇಶದ ಘಟಕದ ಅಧ್ಯಕ್ಷೆಯಾಗಿ ಜಗನ್ ಅವರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಇವರ ಪ್ರತಿಭಟನೆಯಲ್ಲಿ ಹೆಚ್ಚು ಹೆಚ್ಚು ಜನರು ಭಾಗವಹಿಸುತ್ತಿದ್ದಾರೆ. ಅಧ್ಯಕ್ಷೆಯಾದ ಬಳಿಕ, ರಾಜ್ಯವನ್ನೆಲ್ಲಾ ಸುತ್ತಾಡಿದ್ದಾರೆ. ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡುವ ಕುರಿತು ಶರ್ಮಿಳಾ ಮಾತನಾಡುತ್ತಿದ್ದಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಆಂಧ್ರ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವುದಾಗಿ ಈಗಾಗಲೇ ಹೇಳಿದ್ದಾರೆ.

‘ವೈ.ಎಸ್’ ಎಂಬ ಕುಟುಂಬದ ಹೆಸರು ಬಳಸಿಕೊಂಡು ಜನರಲ್ಲಿ ಗೊಂದಲ ಮೂಡಿಸುವ ಪ್ರಯತ್ನವನ್ನು ಶರ್ಮಿಳಾ ನಡೆಸುತ್ತಿದ್ದಾರೆ ಎಂದು ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಆರೋಪಿಸಿದೆ. ಅದೇನೆ ಇದ್ದರೂ, ಅವಿಭಜಿತ ಆಂಧ್ರ ಪ್ರದೇಶದ ಜನಪ್ರಿಯ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ದಿವಂಗತ ರಾಜಶೇಖರ ರೆಡ್ಡಿ ಅವರ ಮಗಳು ಶರ್ಮಿಳಾ ಅವರನ್ನು ಬಳಸಿಕೊಂಡು ಕಾಂಗ್ರೆಸ್ ಪಕ್ಷವು ಆಂಧ್ರ ಪ್ರದೇಶದಲ್ಲಿ ತನ್ನ ಅಸ್ತಿತ್ವವನ್ನು ಮರಳಿ ಪಡೆದುಕೊಳ್ಳುವ ಯತ್ನದಲ್ಲಿದೆ.

ಇನ್ನು ಬಿಜೆಪಿಗೆ ಸಹ ಈ ಪ್ರಾದೇಶಿಕ ಪಕ್ಷಗಳೊಂದಿಗೆ ಸ್ನೇಹ ಸಂಬಂಧದಲ್ಲಿರುವುದು ರಾಜಕೀಯವಾಗಿ ಲಾಭದಾಯಕವಾದುದೇ. ಪ್ರಾದೇಶಿಕ ಪಕ್ಷಗಳ ಹೆಸರಲ್ಲಿ ಕೆಲವು ಸ್ಥಾನ ಗೆಲ್ಲುವ ಅನಿವಾರ್ಯ ಬಿಜೆಪಿಗೆ. ಇದೇ ಕಾರಣಕ್ಕೆ ಟಿಡಿಪಿ ಹೆಸರನ್ನು ಬಳಸಿಕೊಂಡು ಕೆಲವು ಸ್ಥಾನಗಳನ್ನಾದರೂ ಗೆಲ್ಲುವ ವಿಶ್ವಾಸಲ್ಲಿ ಬಿಜೆಪಿ ಇದೆ ಎಂದು ರಾಜಕೀಯ ತಜ್ಞರು ಅಭಿಪ್ರಾಯಪಡುತ್ತಿದ್ದಾರೆ.

2014ರಿಂದ 2018ವರೆಗೆ ಟಿಡಿಪಿ ನೇತೃತ್ವದ ಸರ್ಕಾರದಲ್ಲಿ ಬಿಜೆಪಿಯೂ ಭಾಗವಾಗಿತ್ತು. ಆದರೆ, ಆಂಧ್ರ ಪ್ರದೇಶಕ್ಕೆ ವಿಶೇಷ ರಾಜ್ಯದ ಸ್ಥಾನಮಾನ ನೀಡಲಿಲ್ಲ ಎನ್ನುವ ಕಾರಣಕ್ಕೆ ಚಂದ್ರಬಾಬು ನಾಯ್ಡು ಅವರು ಎನ್‌ಡಿಎಯಿಂದ ಹೊರಬಂದಿದ್ದರು. ಟಿಡಿಪಿ ಹಾಗೂ ಬಿಜೆಪಿಯು ಮೈತ್ರಿಯಲ್ಲಿದ್ದ ಕಾಲದಲ್ಲಿ ಬಿಜೆಪಿಗೆ ಲಾಭವೇ ಆಗಿತ್ತು. ಮೈತ್ರಿಯಿಂದ ಹೊರಬಂದ ಮೇಲೆ ಬಿಜೆಪಿಗೆ ಹೊಡೆತವೇ ಬಿದ್ದಿದೆ. 2014ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯು ಶೇ 2.20ರಷ್ಟು ಮತ ಪಡೆದುಕೊಂಡಿತ್ತು. 2019ರ ವಿಧಾನಸಭಾ ಚುನಾವಣೆ ಹೊತ್ತಿಗೆ ಈ ಪ್ರಮಾಣ ಶೇ 0.84ರಷ್ಟಕ್ಕೆ ಇಳಿಯಿತು.

ವೈಎಸ್‌ಆರ್ ಕಾಂಗ್ರೆಸ್ ಹಾಗೂ ಬಿಜೆಪಿಯು ಮೈತ್ರಿ ಮಾಡಿಕೊಂಡಿಲ್ಲ. ಆದರೆ, ಜಗನ್ ಮಾತ್ರ ಕೇಂದ್ರ ಸರ್ಕಾರಕ್ಕೆ ಬೆಂಬಲ ನೀಡುತ್ತಲೇ ಬಂದಿದ್ದರು. 2019ರ ವಿಧಾನಸಭಾ ಚುನಾವಣೆಯಲ್ಲಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷವು ಭಾರಿ ಗೆಲುವು ಸಾಧಿಸಿತ್ತು. ಆದರೆ, 2024ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಸೋಲುವ ಭೀತಿ ಎದುರಿಸುತ್ತಿದೆ ಹಾಗೂ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಜನಪ್ರಿಯತೆ ಕಳೆದುಕೊಳ್ಳುತ್ತಿದ್ದಾರೆ. ಇದೇ ಕಾರಣಕ್ಕೆ ಬಿಜೆಪಿಯು ಜಗನ್ ಅವರನ್ನು ದೂರಮಾಡಿದೆ ಎನ್ನಲಾಗುತ್ತಿದೆ.

ಹರಿಯಾಣ: ನವ ಜಾತಿ ಸಮೀಕರಣ

ಪ್ರಜಾವಾಣಿ ವಾರ್ತೆ

ಹರಿಯಾಣ, ದೇಶದ ಶಕ್ತಿ ಕೇಂದ್ರ ದೆಹಲಿಗೆ ಅಂಟಿಕೊಂಡೇ ಇರುವ ಈ ಸಣ್ಣ ರಾಜ್ಯದಲ್ಲಿ ಇರುವುದು 10 ಲೋಕಸಭಾ ಕ್ಷೇತ್ರಗಳು ಮಾತ್ರ. ಆದರೂ ಎಲ್ಲಾ ರಾಷ್ಟ್ರೀಯ ಪಕ್ಷಗಳಿಗೆ ಅತ್ಯಂತ ಮುಖ್ಯವಾದ ರಾಜ್ಯ ಇದು. ಹರಿಯಾಣವು ಪಕ್ಕದ ಪಂಜಾಬ್, ಉತ್ತರ ಪ್ರದೇಶ, ರಾಜಸ್ಥಾನದಲ್ಲಿನ ಚುನಾವಣಾ ಸಮೀಕರಣದ ಮೇಲೂ ಪರಿಣಾಮ ಬೀರುತ್ತದೆ. ಹೀಗಾಗಿ ಹರಿಯಾಣದಲ್ಲಿ ಎಲ್ಲವನ್ನೂ ಸುಸ್ಥಿತಿಯಲ್ಲಿ ಇರಿಸಿಕೊಳ್ಳಬೇಕಿರುವುದು ಎಲ್ಲಾ ಪಕ್ಷಗಳಿಗೆ ಅನಿವಾರ್ಯವೇ ಆಗಿದೆ. ಒಂದೆರಡು ದಿನಗಳಿಂದ ಹರಿಯಾಣ ಭಾರಿ ಸುದ್ದಿಯಲ್ಲಿದೆ. 9 ವರ್ಷಗಳಿಗಿಂತಲೂ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿದ್ದ ಮನೋಹರ ಲಾಲ್ ಖಟ್ಟರ್ ಇದ್ದಕ್ಕಿಂದ್ದಂತೆ ರಾಜೀನಾಮೆ ನೀಡಿದ್ದಾರೆ. ಬಿಜೆಪಿಯ ನಾಯಬ್ ಸಿಂಗ್ ಸೈನಿ ಮುಖ್ಯಮಂತ್ರಿಯಾಗಿದ್ದಾರೆ. ಸರ್ಕಾರ ಮತ್ತು ಸಂಪುಟ ಎರಡೂ ಬದಲಾಗಿದೆ.

ಈ ಎಲ್ಲಾ ಬೆಳವಣಿಗೆಗೆ ಪ್ರಮುಖ ಕಾರಣವಾಗಿದ್ದು ಲೋಕಸಭಾ ಸೀಟು ಹಂಚಿಕೆ. 2019ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪೂರ್ಣ ಬಹುಮತ ದೊರೆತಿರಲಿಲ್ಲ. ಹೀಗಾಗಿ ಜೆಜೆಪಿ ಬೆಂಬಲ ಪಡೆದು ಬಿಜೆಪಿ ಸರ್ಕಾರ ರಚಿಸಿತ್ತು. ಆದರೆ ಈಗ ಎರಡೂ ಪಕ್ಷಗಳ ಮೈತ್ರಿ ಮುರಿದುಬಿದ್ದಿದೆ, ಅದೂ ಸೀಟು ಹಂಚಿಕೆ ವಿಚಾರದಲ್ಲಿ. 9 ಲೋಕಸಭಾ ಕ್ಷೇತ್ರಗಳನ್ನು ತಾನು ಉಳಿಸಿಕೊಂಡು, ಒಂದರಲ್ಲಿ ಜೆಜೆಪಿ ಕಣಕ್ಕೆ ಇಳಿಯಲಿ ಎಂಬುದು ಬಿಜೆಪಿಯ ಪಟ್ಟು. ತಮಗೆ ಎರಡು ಕ್ಷೇತ್ರಗಳು ಬೇಕೇಬೇಕು ಎಂಬುದು ಜೆಜೆಪಿಯ ಬಿಗಿಪಟ್ಟು. ಈ ಹಗ್ಗಜಗ್ಗಾಟದಲ್ಲಿ ಮೈತ್ರಿ ತುಂಡಾಗಿದೆ. ಎಲ್ಲಾ ಹತ್ತು ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯುವುದಾಗಿ ಬಿಜೆಪಿ ಘೋಷಿಸಿದೆ. ಜೆಜೆಪಿಯೂ ಅದೇ ಹಾದಿ ಹಿಡಿದಿದೆ.

ಇದರ ಮಧ್ಯೆ ಬಿಜೆಪಿಗೆ ನೀಡಿದ್ದ ಬೆಂಬಲವನ್ನು ಜೆಜೆಪಿ ವಾಪಸ್ ಪಡೆದಿದೆ ಮತ್ತು ಉಪಮುಖ್ಯಮಂತ್ರಿ ಸ್ಥಾನವನ್ನೂ ತ್ಯಜಿಸಿದೆ. ಸರ್ಕಾರವನ್ನು ಉಳಿಸಿಕೊಳ್ಳಲು ಬಿಜೆಪಿ ಪಕ್ಷೇತರ ಅಭ್ಯರ್ಥಿಗಳ ಬೆಂಬಲ ಪಡೆದಿದೆ. ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿ ನಡೆದ ಈ ಬೆಳವಣಿಗೆಗಳು ಚುನಾವಣೆಯ ಮೇಲೆ ಖಂಡಿತಾ ಪರಿಣಾಮ ಬೀರುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ. ಜೆಜೆಪಿ ಮತ್ತು ಬಿಜೆಪಿ ಮೈತ್ರಿ ಮುರಿದುಬಿದ್ದಿದ್ದು ಆ ಎರಡು ಪಕ್ಷಗಳು ಮಾತ್ರವಲ್ಲ, ಜತೆಗೆ ಕಾಂಗ್ರೆಸ್‌ನ ಮೇಲೂ ಪರಿಣಾಮ ಬೀರಲಿದೆ ಎಂದು ಅಂದಾಜಿಸಲಾಗುತ್ತಿದೆ.

ಜಾಟರು ಜೆಜೆಪಿಯ ಪ್ರಧಾನ ಮತಬ್ಯಾಂಕ್. ಜಾಟರ ಕುರಿತು ಹರಿಯಾಣ ಬಿಜೆಪಿ ನಾಯಕರು ಈ ಹಿಂದೆ ಆಡಿದ್ದ ಮಾತುಗಳಿಗೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಜತೆಗೆ ಎಂಎಸ್‌ಪಿಗೆ ಕಾನೂನಿನ ಭದ್ರತೆ ಒದಗಿಸುವಂತೆ ಪ್ರತಿಭಟಿಸುತ್ತಿರುವ ರೈತರಲ್ಲಿ ಜಾಟರದ್ದೂ ದೊಡ್ಡ ಸಂಖ್ಯೆ ಇದೆ. ಇವೆಲ್ಲವೂ ಒಟ್ಟಾರೆಯಾಗಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪ್ರತಿಕೂಲವಾಗಿ ಪರಿಣಮಿಸುತ್ತದೆ ಎಂದು ಅಂದಾಜಿಸಲಾಗಿತ್ತು. ಸೀಟು ಹಂಚಿಕೆಯಲ್ಲಿ ಎರಡೂ ಪಕ್ಷಗಳು ತಮ್ಮ ಪಟ್ಟು ಬಿಡದೇ ಇರಲು ಇದೇ ಕಾರಣ ಎನ್ನಲಾಗಿದೆ.



ರಾಜ್ಯದ ಜನಸಂಖ್ಯೆಯ ಶೇ 20ರಷ್ಟಿರುವ ಜಾಟರು ಹಲವು ಕ್ಷೇತ್ರಗಳಲ್ಲಿ ನಿರ್ಣಾಯಕರು. ರೈತರ ಪ್ರತಿಭಟನೆ ಕಾರಣದಿಂದ ಜಾಟರು ಬಿಜೆಪಿಯಿಂದ ದೂರ ಸರಿಯಲಿದ್ದಾರೆ ಎಂದೇ ಎಣಿಸಲಾಗಿದೆ. ಜೆಜೆಪಿ ಸ್ವತಂತ್ರವಾಗಿ ಕಣಕ್ಕೆ ಇಳಿದರೆ ಹಲವು ಕ್ಷೇತ್ರಗಳಲ್ಲಿ ಅದು ಬಿಜೆಪಿಗೆ ತೊಡಕಾಗಲಿದೆ. ಆದರೆ ಕಾಂಗ್ರೆಸ್ ಸಹ ಜಾಟರು ಮತ್ತು ರೈತರ ಮತಗಳನ್ನೇ ನೆಚ್ಚಿಕೊಂಡಿದೆ. ಜಾಟರ ಮತಗಳು ಜೆಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ವಿಭಜನೆಯಾಗುವ ಸಾಧ್ಯತೆ ಅತ್ಯಧಿಕವಾಗಿದೆ. ಇದರಿಂದ ಬಿಜೆಪಿಗೆ ಲಾಭವೇ ಆಗಲಿದೆ ಎಂಬುದು ಆ ಪಕ್ಷದ ಲೆಕ್ಕಾಚಾರ. ಕೊನೆಯ ಕ್ಷಣದಲ್ಲಿ ಕಾಂಗ್ರೆಸ್ ಮತ್ತು ಜೆಜೆಪಿ ಹೊಂದಾಣಿಕೆ ಮಾಡಿಕೊಂಡರೆ ಬಿಜೆಪಿಯ ಲೆಕ್ಕಾಚಾರ ತಲೆಕೆಳಗಾಗಲಿದೆ. ಆದರೆ ಅಂತಹ ಸಾಧ್ಯತೆ ಅತ್ಯಂತ ಕಡಿಮೆ.

ಹರಿಯಾಣದಲ್ಲಿ ಜಾಟರು ಯಾವ ಪಕ್ಷದತ್ತ ಹೊರಳಲಿದ್ದಾರೆ ಎಂಬುದು ಪಂಜಾಬ್, ರಾಜಸ್ಥಾನ ಮತ್ತು ಉತ್ತರ ಪ್ರದೇಶದಲ್ಲಿನ ಜಾಟರ ಆಯ್ಕೆಯನ್ನೂ ಪ್ರಭಾವಿಸಲಿದೆ. ಈ ಎಲ್ಲಾ ರಾಜ್ಯಗಳಲ್ಲಿ ಬಿಜೆಪಿಗೆ ಜಾಟರು ಕೈಕೊಟ್ಟರೆ, ಅದು ಭಾರಿ ಹಿನ್ನಡೆಗೆ ಕಾರಣವಾಗಲಿದೆ. ಜಾಟರನ್ನು ಸಮಾಧಾನಪಡಿಸಲು ಎಂಎಸ್‌ಪಿಗೆ ಕಾನೂನಿನ ಭದ್ರತೆ ಒದಗಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿಲ್ಲ. ಆದರೆ ಜಾಟರು ತಮ್ಮಿಂದ ದೂರ ಸರಿದರೆ ಆಗುವ ನಷ್ಟವನ್ನು ತುಂಬಿಕೊಳ್ಳಲು ಬಿಜೆಪಿ ಬೇರೆ ಜಾತಿ ಸಮೀಕರಣದ ಮೊರೆ ಹೋಗಿದೆ. ಆ ಕಾರಣದಿಂದಲೇ ಖಟ್ಟರ್ ಅವರನ್ನು ಕೆಳಗಿಳಿಸಿ ಒಬಿಸಿ ನಾಯಕ ಸೈನಿ ಅವರನ್ನು ಮುಖ್ಯಮಂತ್ರಿಯಾಗಿ ಘೋಷಿಸಿದೆ. ಒಬಿಸಿ ಮತಗಳನ್ನು ತನ್ನತ್ತ ಸೆಳೆದುಕೊಳ್ಳುವ ಸಲುವಾಗಿಯೇ ಸೈನಿ ಅವರಿಗೆ ಮುಖ್ಯಮಂತ್ರಿ ಹುದ್ದೆ ನೀಡಲಾಗಿದೆ. ಜಾತಿಗಣತಿ ಮತ್ತು ಒಬಿಸಿ ಮೀಸಲಾತಿ ಹೆಚ್ಚಳದ ಮಾತುಗಳನ್ನಾಡುತ್ತಿರುವ ಕಾಂಗ್ರೆಸ್‌ನಿಂದ ಒಬಿಸಿ ಮತಗಳನ್ನು ಕಬಳಿಸುವ ತಂತ್ರವೂ ಇದರಲ್ಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಆಧಾರ: ಪಿಟಿಐ

ಪ್ರಯೋಗಕ್ಕೆ ಇಳಿದ ಬಿಜೆಪಿ

ಹರಿಯಾಣದಲ್ಲಿ ಇದೇ ವರ್ಷ ವಿಧಾನಸಭಾ ಚುನಾವಣೆಯೂ ನಡೆಯಲಿದೆ. ಆ ಚುನಾವಣೆಯನ್ನೂ ಗಮನದಲ್ಲಿ ಇರಿಸಿಕೊಂಡು ಮುಖ್ಯಮಂತ್ರಿ ಮತ್ತು ಸಂಪುಟವನ್ನು ಬಿಜೆಪಿ ಬದಲಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಖಟ್ಟರ್ ಮತ್ತು ಅವರ ಸರ್ಕಾರದ ಮೇಲೆ ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಇತ್ತು. ಲೋಕಸಭೆ ಚುನಾವಣೆಯಲ್ಲೂ ಅದು ಪಕ್ಷಕ್ಕೆ ವ್ಯತಿರಿಕ್ತವಾಗಿ ಪರಿಣಮಿಸುತ್ತದೆ ಎಂದು ಅಂದಾಜಿಸಲಾಗಿತ್ತು. ಆಡಳಿತ ವಿರೋಧಿ ಅಲೆಯ ಪರಿಣಾಮವನ್ನು ತಗ್ಗಿಸಲೆಂದೇ ಖಟ್ಟರ್ ಅವರನ್ನು ಬದಲಿಸಲಾಗಿದೆ. ಇದೇ ರೀತಿಯ ಪ್ರಯೋಗವನ್ನು ಗುಜರಾತ್ ಮತ್ತು ಉತ್ತರಾಖಂಡ ವಿಧಾನಸಭಾ ಚುನಾವಣೆಗಳಿಗೂ ಮುನ್ನ ಬಿಜೆಪಿ ಮಾಡಿತ್ತು. ಮತ್ತು ಅದು ಫಲವನ್ನೂ ಕೊಟ್ಟಿತ್ತು.

ಈಚೆಗಷ್ಟೇ ಚುನಾವಣೆ ನಡೆದು ಹೊಸ ಸರ್ಕಾರ ರಚನೆಯಾದ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಡದಲ್ಲೂ ಬಿಜೆಪಿಯು ಒಬಿಸಿ ನಾಯಕರನ್ನೇ ಮುಖ್ಯಮಂತ್ರಿಯನ್ನಾಗಿಸಿದೆ. ಈ ಮೂಲಕ ಒಬಿಸಿ ಸಮುದಾಯಗಳಲ್ಲಿ ತನ್ನ ನೆಲೆ ಗಟ್ಟಿಗೊಳಿಸಿಕೊಳ್ಳಲು ಯತ್ನಿಸುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಸಿನಿ ಬಿಟ್ಸ್



ನಟ ಶಿವರಾಜ್‌ಕುಮಾರ್ ಅಭಿನಯದ ‘ಭೈರತಿ ರಣಗಲ್’ ಈ ವರ್ಷ ಸ್ವಾತಂತ್ರ್ಯ ದಿನಾಚರಣೆಯಂದು ತೆರೆಗೆ ಬರಲಿದೆ. ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜ್‌ಕುಮಾರ್ ಅವರು ನಿರ್ಮಿಸುತ್ತಿರುವ ಚಿತ್ರಕ್ಕೆ ನರ್ತನ್ ಆ್ಯಕ್ಷನ್ ಕಟ್ ಹೇಳಿದ್ದಾರೆ.


‘ಭೈರತಿ ರಣಗಲ್’ ಆರು ವರ್ಷಗಳ ಹಿಂದೆ ಬಿಡುಗಡೆಯಾದ ‘ಮಫ್ತಿ’ ಚಿತ್ರದ ಪ್ರೀಕ್ವೆಲ್. ಅಲ್ಲಿದ್ದ ಭೈರತಿ ರಣಗಲ್‌ನ ಸಣ್ಣ ಕಥೆಯನ್ನು ನಿರ್ದೇಶಕರು ಇಲ್ಲಿ ಬೆಳೆಸಿದ್ದಾರೆ. ಯಾಕೆ ಅವನು ಭೈರತಿ ರಣಗಲ್ ಆಗುತ್ತಾನೆ? ಜನರಿಗೆ ಯಾಕೆ ಅವನನ್ನು ಕಂಡರೆ ಅಷ್ಟು ಪ್ರೀತಿ ಎಂಬುದನ್ನು ಇಲ್ಲಿ ಹೇಳಲಾಗಿದೆ. ಹೆಚ್ಚು ಆಡಂಬರವಿಲ್ಲದೆ, ಸರಳವಾಗಿ ಕಥೆ ನಿರೂಪಿಸಿದ್ದೇವೆ. ಎಷ್ಟು ಬೇಕೋ ಅಷ್ಟು ಮಾತಿದೆ. ನಿರ್ದೇಶಕ ನರ್ತನ್ ಬಹಳ ಚೆನ್ನಾಗಿ ಕಥೆ ಮಾಡಿಕೊಂಡಿದ್ದಾರೆ’ ಎಂದರು ಶಿವಣ್ಣ.

ರುಕ್ಮಿಣಿ ವಸಂತ್, ರಾಹುಲ್ ಬೋಸ್, ಅವಿನಾಶ್ , ದೇವರಾಜ್, ಮಧು ಗುರುಸ್ವಾಮಿ, ಛಾಯಾ ಸಿಂಗ್, ಬಾಬು ಹಿರಣ್ಣಯ್ಯ ಮುಂತಾದವರು ಅಭಿನಯಿಸುತ್ತಿದ್ದಾರೆ.

‘ಶಿವಣ್ಣ ಈ ಚಿತ್ರದಲ್ಲಿ ಆ ಡ್ರೆಸ್ ಯಾಕೆ ಹಾಕುತ್ತಾರೆ? ಎನ್ನುವುದೇ ಚಿತ್ರದ ಕಥೆ. ‘ಮಫ್ತಿ’ ಚಿತ್ರ ಮಾಡುವಾಗಲೇ, ಆ ಪಾತ್ರದ ತೂಕ ಹೆಚ್ಚಿತ್ತು. ಆ ಪಾತ್ರವನ್ನು ಇಷ್ಟಕ್ಕೆ ಮುಗಿಸಬಾರದು, ಇದರ ಹಿನ್ನೆಲೆ ಏನಾದರೂ ಬರೆಯಬೇಕು ಎಂದಾಗ ರಣಗಲ್ ಹಿಂದಿನ ಕಥೆ ಸೃಷ್ಟಿಯಾಯಿತು. ಈಗಾಗಲೇ ಶೇ70 ರಷ್ಟು ಚಿತ್ರೀಕರಣ ಮುಗಿದಿದೆ’ ಎಂದು ಮಾಹಿತಿ ನೀಡಿದರು ನಿರ್ದೇಶಕರು.

ಚಿತ್ರಕ್ಕೆ ನವೀನ್ ಕುಮಾರ್ ಛಾಯಾಚಿತ್ರಗ್ರಹಣ ಮತ್ತು ರವಿ ಬಸ್ರೂರು ಅವರ ಸಂಗೀತವಿದೆ.

‘ಛೂ ಮಂತರ್’ ಎಂದ ‘ಅವತಾರ ಪುರುಷ’



ಶರಣ್

‘ಅವತಾರ ಪುರುಷ’, ‘ಗುರು ಶಿಷ್ಯರು’ ಸಿನಿಮಾ ಬಳಿಕ ತೆರೆ ಮೇಲೆ ಮೋಡಿ ಮಾಡಲು ಸ್ಯಾಂಡಲ್‌ವುಡ್‌ನ ‘ಅಧ್ಯಕ್ಷ’ ಶರಣ್ ಮತ್ತೊಮ್ಮೆ ಬರುತ್ತಿದ್ದಾರೆ. ಶರಣ್ ಅಭಿನಯದ ‘ಅವತಾರ ಪುರುಷ–2’ ಮಾರ್ಚ್ 22ರಂದು ಹಾಗೂ ‘ಛೂ ಮಂತರ್’ ಸಿನಿಮಾ ಏಪ್ರಿಲ್ 5ರಂದು ತೆರೆಗೆ ಬರುತ್ತಿವೆ.

ಸಿಂಪಲ್ ಸುನಿ ನಿರ್ದೇಶನದ ‘ಅವತಾರ ಪುರುಷ–ಅಷ್ಟದಿಗ್ಬಂಧನ ಮಂಡಲಕ’ ಸಿನಿಮಾ 2022ರ ಮೇ 6ರಂದು ತೆರೆಕಂಡಿತ್ತು. ಇದೇ ಸಿನಿಮಾದ ಎರಡನೇ ಭಾಗ ‘ಅವತಾರ ಪುರುಷ–ತ್ರಿಶಂಕು ಪಯಣ’ ಮಾರ್ಚ್ 22ರಂದು ತೆರೆಕಾಣುತ್ತಿದೆ. ಚುಟು–ಚುಟು ಜೋಡಿ ಶರಣ್ ಹಾಗೂ ಆಶಿಕಾ ರಂಗನಾಥ್ ಅಭಿನಯದ ಈ ಸಿನಿಮಾದಲ್ಲಿ ಸಾಯಿಕುಮಾರ್, ಶ್ರೀನಗರ ಕಿಟ್ಟಿ ನಟಿಸಿದ್ದಾರೆ. ವಾಮಾಚಾರ, ಮಾಟ ಮಂತ್ರದ ಸುತ್ತ ಚಿತ್ರದ ಕಥೆ ಹೆಣೆಯಲಾಗಿದ್ದು, ಪುಷ್ಕರ್ ಮಲ್ಲಿಕಾರ್ಜುನಯ್ಯ ಅವರು ನಿರ್ಮಾಣ ಮಾಡಿದ್ದಾರೆ.

‘ಛೂ ಮಂತರ್’ ಸಿನಿಮಾದಲ್ಲಿ ಶರಣ್‌ಗೆ ಅದಿತಿ ಪ್ರಭುದೇವ ಹಾಗೂ ಮೇಘನಾ ಗಾಂವ್ಕರ್ ಜೋಡಿಯಾಗಿದ್ದು, ಸಿನಿಮಾವನ್ನು ತರುಣ್ ಸ್ಟುಡಿಯೋಸ್ ಲಾಂಛನದಲ್ಲಿ ತರುಣ್ ಶಿವಪ್ಪ ಹಾಗೂ ಮಾನಸ ತರುಣ್ ನಿರ್ಮಾಣ ಮಾಡಿದ್ದಾರೆ. ನವನೀತ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರದ ಟ್ರೇಲರ್ ಶೀಘ್ರದಲ್ಲೇ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ. ಇದೊಂದು ಹಾರರ್ ಜಾನರ್ ಸಿನಿಮಾವಾಗಿದ್ದು, ‘ಉಪಾಧ್ಯಕ್ಷ’ನಾಗಿ ತೆರೆ ಮೇಲೆ ಮಿಂಚಿರುವ ಚಿಕ್ಕಣ್ಣ ಕೂಡ ಈ ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ. ಹೀಗೆ ‘ಅಧ್ಯಕ್ಷ’ ಮತ್ತು ‘ಉಪಾಧ್ಯಕ್ಷ’ನ ಸಮ್ಮಿಲನವನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಕೊನೆಯನೆಂದೂ ಮುಟ್ಟದಿರು...

ನುಡಿ ಬೆಳಗು





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಮನೆಗೆ ಬಂದವರು ‘ಅಕ್ಕಾ ನೀವು ಮನೆಯನ್ನು ಎಷ್ಟು ನೀಟಾಗಿ ಇಟ್ಟುಕೊಂಡಿದ್ದೀರಿ. ಚೆಂದದ ಗಿಡ ಬೆಳೆಸಿದ್ದೀರಿ. ಇಷ್ಟೊಂದು ಸುಂದರವಾಗಿ ಮನೆ ಇಟ್ಟುಕೊಂಡವರನ್ನು ನಾನು ನೋಡೇ ಇಲ್ಲ. ನಿಮ್ಮ ಬಗ್ಗೆ ಹೆಮ್ಮೆ ಎನಿಸುತ್ತದೆ’ ಎಂದು ವರ್ಣಿಸಿದರು. ಈ ವಾಕ್ಯಗಳಿಂದ ಪುಳಕಿತರಾದ ಆ ತಾಯಿ ಇಡೀ ಬದುಕನ್ನೇ ಮನೆ ಒರೆಸುತ್ತಾ, ಅದರ ಅಂದ ಚೆಂದ ಹೆಚ್ಚಿಸುತ್ತಾ ಉಳಿದು ಬಿಟ್ಟರು. ಆತ್ಮೀಯರ ಮನೆಗಳಿಗೆ ಹೋದರೂ ರಾತ್ರಿಯೊಳಗೆ ಮನೆ ತಲುಪುವ ರೂಢಿ ಸಿದ್ಧಿಸಿಕೊಂಡರು. ಜನರ ಪ್ರಶಂಸೆಯ ಮಾತಿನ ನಿರೀಕ್ಷೆಯ ದಾಹದಲ್ಲೇ ಐವತ್ತು ವರ್ಷ ಕಳೆದರು.

ಸುಂದರ ಮನೆ ಕಟ್ಟಿಸಿದ ಗೆಳತಿಯೊಬ್ಬರ ಮನೆಗೆ ಹೋಗಿದ್ದೆ. ಮನೆಯಲ್ಲಿ ಗಂಡ ಹೆಂಡತಿ ಇಬ್ಬರೇ ಇದ್ದರು. ಮಗ ದೂರದ ಅಮೆರಿಕದಲ್ಲಿ ವಾಸ. ಬರುವುದು ವರ್ಷಕ್ಕೋ ಎರಡು ವರ್ಷಕ್ಕೋ. ಬಂದರೂ ಕೆಲ ದಿನಗಳ ಅತಿಥಿ. ಅವನಿಗೆಂದು ಮೀಸಲಿಟ್ಟ ರೂಮನ್ನು ದಿನಾ ಗುಡಿಸಿ, ಒರೆಸಿ, ಶ್ರದ್ಧೆಯಿಂದ ಕಾಯುತ್ತಿದ್ದರು. ಈ ಚೆಂದಕ್ಕೆ ಇಷ್ಟು ದೊಡ್ಡ ಮನೆ ಬೇಕಿತ್ತಾ ಎಂದು ನನ್ನನ್ನೇ ಪ್ರಶ್ನಿಸಿದರು. ಬಹುತೇಕ ಮನೆಗಳ ಪರಿಸ್ಥಿತಿ ಈಗ ಹೀಗೆ ಆಗಿದೆ. ಮಕ್ಕಳೊಟ್ಟಿಗೆ ಬದುಕುವಾಗ ಇಕ್ಕಟ್ಟಿನ ಬಾಡಿಗೆ ಮನೆಯಲ್ಲಿ ವಾಸ. ಓನರ್ ಕೊಡುವ ಕಿರುಕುಳ, ಹಿಂಸೆಗಳು ಎಲ್ಲರಲ್ಲೂ ಸ್ವಂತ ಸೂರಿನ ಕನಸು ಬಿತ್ತುತ್ತವೆ. ಇದೆಲ್ಲಾ ನನಸಾಗುವ ಹೊತ್ತಿಗೆ ಮಕ್ಕಳು ಮನೆ ಬಿಟ್ಟು ನಡೆದಿರುತ್ತಾರೆ.

ಬಿಕೋ ಎನ್ನುವ ಮನೆಗೆ ತಾವೇ ಕಾಯಂ ಕಾವಲುಗಾರರಾಗುತ್ತಾರೆ. ಕಸ ಗುಡಿಸಲಾಗದ, ಎದ್ದು ನಿರ್ವಹಣೆ ಮಾಡಲಾಗದ, ದೊಡ್ಡ ಮನೆ ಪಶ್ಚಾತ್ತಾಪ ಎನಿಸುತ್ತದೆ. ಇಷ್ಟೆಲ್ಲಾ ಗೊತ್ತಿದ್ದರೂ ಮನೆಯ ವ್ಯಾಮೋಹದ ಸುಳಿ ಬಿಡುವುದಿಲ್ಲ. ಬದುಕುವ ಕೆಲವೇ ವರ್ಷ ಬಾಕಿ ಉಳಿದಿದ್ದರೂ ನೂರಾರು ವರ್ಷ ಬಾಳಿಕೆ ಬರುವ ಗಟ್ಟಿ ಮನೆ ಕಟ್ಟುತ್ತೇವೆ.

ಮನೆ ಕಟ್ಟಿಸುವ ಅನೇಕರು ಕಳ್ಳರ ಕಾಟದ ಬಗ್ಗೆ ತುಂಬಾ ಚಿಂತಿಸುತ್ತಾರೆ. ಆತ ತಮ್ಮ ಮನೆಗೆ ಎಲ್ಲೆಲ್ಲಿಂದ ನುಗ್ಗಿ ಬರಬಹುದೆಂದು ತಾವೇ ಊಹಿಸಿ ಅಲ್ಲೆಲ್ಲಾ ಕಬ್ಬಿಣದ ಸರಳುಗಳನ್ನು ನೆಡುತ್ತಾರೆ. ಬಯಲೇ ಆಲಯವೆಂದು ಬದುಕುವ ಆದಿವಾಸಿಗಳು, ಕುರಿಗಾಹಿಗಳು, ಕಟ್ಟಡ ಕಾರ್ಮಿಕರು, ನಿರ್ಗತಿಕರು ಯಾವತ್ತೂ ಇದ್ಯಾವುದರ ಬಗ್ಗೆ ಚಿಂತಿಸುವುದಿಲ್ಲ. ಏಕೆಂದರೆ ಇವರು ಕಳೆದುಕೊಳ್ಳಲು ಬಚ್ಚಿಟ್ಟ ಯಾವ ಸಂಪತ್ತೂ ಇರುವುದಿಲ್ಲ. ಜೊತೆಗೆ ನಮ್ಮಂತೆ ಅವರು ಆಸೆಬುರುಕರೂ ಆಗಿರುವುದಿಲ್ಲ. ವೈಭವದ ಮನೆಯಲ್ಲಿ ನೆಮ್ಮದಿಯಿಂದ ಬದುಕುತ್ತೇವೆ ಎನ್ನುವುದು ಅರ್ಧ ಸತ್ಯದ ನಂಬಿಕೆ.

ನೆಮ್ಮದಿ ಸಂತಸಗಳು ಸುಟ್ಟ ಇಟ್ಟಿಗೆ ಗೋಡೆಯಿಂದ ಹುಟ್ಟುವುದಿಲ್ಲ. ಮೆತ್ತಿದ ಬಣ್ಣಗಳಿಂದ ನಿಗಿನಿಗಿಸುವುದಿಲ್ಲ. ಅವು ನಮ್ಮ ಮನಸ್ಸಿನಿಂದಲೇ ಮೂಡಬೇಕು. ಗುಡಿಸಲಿನಲ್ಲಿ ಬದುಕುವ ಬಡವ ಸದಾ ದುಃಖಿತ ಎಂದು ಬಂಗಲೆಯ ಅಮಲಿನಲ್ಲಿರುವವರು ತಪ್ಪಾಗಿ ಭಾವಿಸುತ್ತಾರೆ. ಕುವೆಂಪು ಹೇಳಿದಂತೆ ಎಲ್ಲಿಯೂ ನಿಲ್ಲದ, ಮನೆಯನೆಂದು ಕಟ್ಟದ, ಕೊನೆಯನೆಂದು ಮುಟ್ಟದ ಅನೇಕ ಚೇತನಗಳು ನಮ್ಮ ನಡುವೆಯೇ ಪರಮಸುಖದಲ್ಲಿ ಬಾಳುತ್ತಿವೆ. ನಾವು ಕಂಡಿಲ್ಲ ಅಷ್ಟೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮಾರ್ಚ್ 13, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಚತುರ್ಥಿ ಗಂ. 25-26 ನಕ್ಷತ್ರ: ಅಶ್ವಿನಿ ಗಂ. 18-25 ಯೋಗ: ಐಂದ್ರ ಗಂ. 24-48 ಕರಣ: ವಣಿಜ ಗಂ. 14-41, ಕುಂಭ ಮಾಸದ 29 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 3.
ರಾಹುಕಾಲ : ಮಧ್ಯಾಹ್ನ 12-00–01-30
ಸೂರ್ಯೋದಯ : 06-42 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 02 ರಂಜಾನ್
ಅದೃಷ್ಟ ಸಂಖ್ಯೆ : 1, 7

ಮೇಷ: ಬಹಳ ದಿನಗಳಿಂದ ನಿಮ್ಮ ಮೇಲಧಿಕಾರಿಗಳು ಬಯಸಿದ ಹೆಚ್ಚಿನ ಜವಾಬ್ದಾರಿ ಉತ್ತಮವಾಗಿ ನಿಭಾಯಿಸಿದ ಕಾರಣ ಅತಿಯಾಗಿ ಮೆಚ್ಚುವರು. ಸಹಚರರಿಗೆ ನಂಬಿಕೆ ವಿಶ್ವಾಸ ಅಧಿಕವಾಗುವುದು.

ವೃಷಭ: ನೀರಿಗೆ ಸಂಬಂಧಿಸಿದ ಸರ್ಕಾರದ ಬೃಹತ್ ಯೋಜನೆಗಳ ಗುತ್ತಿಗೆ ಕೆಲಸಗಳನ್ನು ಪಾಲುದಾರಿಕೆಯಲ್ಲಿ ಪಡೆಯುವುದಕ್ಕೆ ಪ್ರಯತ್ನ ಮಾಡಿ. ದೇವರು ನಿಮ್ಮ ಕೈ ಬಿಡಲಿಲ್ಲವೆಂಬ ವಿಚಾರ ಅನುಭವಕ್ಕೆ ಬರಲಿದೆ.

ಮಿಥುನ: ಸಮಸ್ಯೆಗೆ ಮೂಲ ಏನೆಂಬುದನ್ನು ಕಂಡುಕೊಂಡರೆ ಪರಿಸ್ಥಿತಿ ಸುಧಾರಿಸುವುದು. ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದಾಗ ಭವಿಷ್ಯದ ದೃಷ್ಟಿ ಇರಲಿ. ತರಕಾರಿ ಮತ್ತು ಹಣ್ಣು ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರ ಇರಲಿದೆ.

ಕರ್ಕಾಟಕ: ಸ್ನೇಹಿತರ ಹಾಗೂ ಕುಟುಂಬದವರ ಸಲಹೆ ಮೇರೆಗೆ ಉತ್ತಮ ಬದಲಾವಣೆಗಳನ್ನು ಮಾಡಿಕೊಳ್ಳುವಿರಿ. ನಿಧಾನಗತಿಯಲ್ಲಿ ತಂದೆಯವರ ಆರೋಗ್ಯ ಉತ್ತಮವಾಗಲಿದೆ. ವಿದ್ಯಾಭ್ಯಾಸದ ಬಗ್ಗೆ ಗಮನಹರಿಸಿ.

ಸಿಂಹ: ಆಲೋಚನೆಯ ಹೊಸ ಕಾರ್ಯಗಳು ಸ್ವಲ್ಪ ತಡವಾಗಿ ಪ್ರಾರಂಭವಾದರೂ ಸ್ವಲ್ಪ ಸಮಯ ಕಳೆದ ಹಾಗೇ ಎಲ್ಲವೂ ನಿಮ್ಮ ಆಸೆಗೆ ತಕ್ಕಂತೆ ನಡೆಯಲಿದೆ. ಯಾವುದೆ ರೀತಿಯ ಅಡೆತಡೆ, ತೊಂದರೆ ಇರಲಾರದು.

ಕನ್ಯಾ: ದಿನಸಿ ವರ್ತಕರಿಗೆ ಉತ್ತಮ ಲಾಭ ಪ್ರಾಪ್ತಿಯಾಗಲಿದೆ. ಸಂಜೆಯ ಸಮಯದಲ್ಲಿ ಆಲಸ್ಯವಾಗಬಹುದು. ಆರೋಗ್ಯದಲ್ಲಿ ಸಣ್ಣಪುಟ್ಟ ವ್ಯತ್ಯಯಗಳು ಕಾಣಲಿದೆ.

ತುಲಾ: ನೂತನ ವಸ್ತ್ರ ಖರೀದಿಯ ಯೋಗವಿದೆ. ಆರೋಗ್ಯದ ವಿಚಾರವಾಗಿ ದೇಹ ಪ್ರಕೃತಿಗೆ ಅನುಗುಣವಾಗಿ ವೈದ್ಯರು ನೀಡಿರುವ ಸಲಹೆಯನ್ನು ಚಾಚೂ ತಪ್ಪದೆ ಆಚರಿಸಿ. ನವಗ್ರಹ ಪೀಡಾ ಪರಿಹಾರ ಸ್ತೋತ್ರ ಪಠಿಸಿದರೆ ಉತ್ತಮ.

ವೃಶ್ಚಿಕ: ಪಾಲುದಾರಿಕೆ ವಿಚಾರವಾಗಿ ನೀಡುವ ಆಶ್ವಾಸನೆ ಸಹೋದರ ವರ್ಗದಲ್ಲಿ ಬಹಳ ಸಂತಸ ಉಂಟಾಗುವುದು. ಅಭಿಪ್ರಾಯಗಳಿಗೆ ಕುಟುಂಬದವರು ಸಮ್ಮತಿಯನ್ನು ಕೊಡಲಿದ್ದಾರೆ. ಗಣಪತಿಯನ್ನು ಆರಾಧಿಸಿ.

ಧನು: ಸಂಶೋಧನಾ ಕಾರ್ಯಗಳಲ್ಲಿ ಆಸಕ್ತಿ ವೃದ್ಧಿಯಾಗುವುದು ಅಥವಾ ಸಂಶೋಧನಾ ವೃತ್ತಿಯಲ್ಲಿರುವವರಿಗೆ ಈ ದಿನ ಅಧ್ಯಯನಕ್ಕೆ ಸುಸಮಯ. ಸುಳ್ಳು ನುಡಿಯುವ ಅಭ್ಯಾಸವನ್ನು ಕಡಿಮೆಮಾಡಿಕೊಳ್ಳಿರಿ.

ಮಕರ: ಎರಡು ದೋಣಿಗೆ ಕಾಲು ಹಾಕಿರುವ ನಿಮ್ಮ ಜೀವನ ಶೈಲಿಯಿಂದ ಸಮಸ್ಯೆಗಳು ಎದುರಾಗಬಹುದು. ಹೋಟೆಲ್ ಉದ್ಯಮಿಗಳಿಗೆ ಮತ್ತು ಅಡುಗೆ ವೃತ್ತಿಯವರಿಗೆ ಈ ದಿನ ಲಾಭದಾಯಕವಾಗಿರುತ್ತದೆ.

ಕುಂಭ: ಏಕಾಂಗಿಯಾಗಿರುವವರಿಗೆ ಸಂಗಾತಿ ಸಿಗುವ ಲಕ್ಷಣಗಳಿವೆ. ಬಿರುಕು ಬಿಟ್ಟಿರುವ ಸಂಬಂಧಗಳನ್ನು ಸರಿಪಡಿಸುವ ಆಲೋಚನೆಯ ಮಾರ್ಗಕ್ಕೆ ಅಡೆತಡೆ ಉಂಟಾಗಬಹುದು. ಪ್ರಯಾಣ ಯೋಗವಿದೆ.

ಮೀನ: ಬಿಡುವಿಲ್ಲದ ವೃತ್ತಿ ಜೀವನವನ್ನು ಒಂದೆರೆಡು ದಿನಗಳ ಮಟ್ಟಿಗೆ ವಿಶ್ರಾಂತಿ ಜೀವನವಾಗಿ ಬದಲಾಯಿಸಿಕೊಳ್ಳುವುದರಿಂದ ನೆಮ್ಮದಿ ಮೂಡುತ್ತದೆ. ನೆನಪಿನಶಕ್ತಿ ವೃದ್ಧಿಗೆ ಶ್ರೀ ಶಾರದೆಯಲ್ಲಿ ಪ್ರಾರ್ಥಿಸಿ.

ಪದಬಂಧ 5619


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಎಳೆಯ ಪ್ರಾಯವಿದು (5)
3.ದೇವಾಲಯದ ಗೋಪುರದ ತುದಿ (3)
5.ಪಾಪಿಗಳ ಲೋಕ ತಿರುವು ಮುರುವಾಗಿದೆ (3)
7.ಕಾರ್ಯಗಳನ್ನು ನಡೆಸುವ ಶಾಖೆ (3)
8.ತಪ್ಪಾಗಿ ಭಾವಿಸುವಿಕೆ (5)
11.ಭಾರವಲ್ಲದ್ದು ಇದು! (3)
12.ಬಾಣ ಹಿಡಿದಿರುವ ಶೈವಭಕ್ತನಿಲ್ಲಿ ತಿರುಗಿದ್ದಾನೆ (3)
14.ಈತ ಜಿಪುಣ! (3)
15. ಅಡುಗೆಯಲ್ಲಿ ನುರಿತವನು (5)

ಮೇಲಿಂದ ಕೆಳಕ್ಕೆ

1. ರಾಣಿಯ ಹತ್ತಿರ ನೀಚನಿದ್ದಾನೆ! (4)
2.ಅನೇಕಚಿಕ್ಕ ಚಿಕ್ಕ ಮನೆಗಳುಳ್ಳಆವಾರ (3)
4.ಸಭೆ ನಡೆಯುತ್ತಿರುವ ಜಾಗ (4)
6.ಹಳೆಯದನ್ನು ಹೊಸದು ಮಾಡುವಿಕೆ (5)
7.ರತಿಪತಿಯಿಂದ ಮೂಡಿರುವ ಆಸೆ (3)
8.ವರ ಹಿಡಿದಿರುವ ಲೋಹ (3)
9.ಕಂದಾಯವನ್ನು ವಸೂಲು ಮಾಡುವುದು (4)
10.ಹಣಕ್ಕಾಗಿಯೇ ಈ ಗೊಂದಲ (4)
13.ರಸಾಸ್ವಾದನೆಯನ್ನು ಬಲ್ಲವನು (3)



5618 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಾಖ್ಯಾನ 3.ಕೋಲಾಹಲ 5.ಗುಡಾಣ 6.ತಿರುಪು 8.ಪುಲ್ಲಿಂಗ 9.ಅಂಕ 10.ಲಾಯ 11.ನದಿಸು 12.ಸುಗಮ 14.ಮಲರು 16.ಗ್ರಹಗತಿ 17.ನಾರಿಕೇಳ

ಮೇಲಿಂದ ಕೆಳಕ್ಕೆ:
1.ಉನ್ನತಿ 2.ನಗು 3.ಕೋಣ 4.ಲವಂಗ 7.ಪುಷ್ಟೀಕರಿಸು 8.ಪುಸಲಾಯಿಸು 11.ನಖಾಗ್ರ 13.ಮರುಳ 14.ಮತಿ 15.ರುನಾ

ಸುಡೊಕು 6004

8	7			6			5	
2					5		6	
		1	2			4		9
		2					4	
4					6			
	1		3		2		7	
	2			1		8		
1			8					4
	8			3	7		1	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6003 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ಸಿಎಎ ನಿಯಮ ಅಧಿಸೂಚನೆಗೆ ಮಮತಾ ಬ್ಯಾನರ್ಜಿ ಟೀಕೆ • ಪ್ರತಿಪಕ್ಷಗಳಿಂದ ತೀವ್ರ ವಿರೋಧ

ಅಸಾಂವಿಧಾನಿಕ, ಪಕ್ಷಪಾತದ ಕ್ರಮ

ಬರಸಾತ್, ಪಶ್ಚಿಮ ಬಂಗಾಳ (ಪಿಟಿಐ): ಸಿಎಎ ಜಾರಿಗೆ ಅಧಿಸೂಚನೆ ಹೊರಡಿಸಿರುವ ಕೇಂದ್ರ ಸರ್ಕಾರದ ಕ್ರಮವು 'ಅಸಾಂವಿಧಾನಿಕ ಮತ್ತು ಪಕ್ಷಪಾತದಿಂದ ಕೂಡಿದೆ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಟೀಕಿಸಿದ್ದಾರೆ.

ಉತ್ತರ 24 ಪರಗಣ ಜಿಲ್ಲೆಯ ಹಬ್ರಾದಲ್ಲಿ ಮಂಗಳವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಕಾಯ್ದೆಯಡಿ ಪೌರತ್ವವನ್ನು ಕೋರಿ ಅರ್ಜಿ ಸಲ್ಲಿಸುವ ಮೊದಲು ಜನರು ಹಲವು ಬಾರಿ ಚಿಂತನೆ ನಡೆಸಬೇಕು' ಎಂದು ಸಲಹೆ ನೀಡಿದ್ದಾರೆ.

'ಅಧಿಸೂಚನೆ ಹೊರಡಿಸಿರುವ ಸಿಇಇ ನಿಯಮಗಳಿಗೆ ಕಾನೂನು ಮಾನ್ಯತೆ ಇದೆಯೇ ಎಂಬ ಬಗ್ಗೆಯೇ ನನಗೆ ಅನುಮಾನಗಳಿವೆ. ಈ ಕುರಿತು ಯಾವುದೇ ಸ್ಪಷ್ಟತೆ ಇಲ್ಲ. ಇದು, ಸಂವಿಧಾನದ ಮೂಲಭೂತ ಹಕ್ಕಾಗಿರುವ ಸಮಾನತೆಗೆ ವಿರುದ್ಧವಾಗಿದೆ' ಎಂದು ಟೀಕಿಸಿದರು.

'ಕಾಯ್ದೆಯ ಅನುಷ್ಠಾನ ಜನರ ಹಕ್ಕುಗಳನ್ನು ಕಸಿದುಕೊಳ್ಳುವ ಸಂಚು. ಪೌರತ್ವ ಕೋರಿ ಅರ್ಜಿ ಸಲ್ಲಿಸಿದ ಕೂಡಲೇ ಅವರು ಇಲ್ಲಿನ ಅಕ್ರಮ ನಿವಾಸಿಯಾಗುತ್ತಾರೆ. ಅವರನ್ನು ಕೂಡಲೇ ನಿರಾಶ್ರಿತರ ಶಿಬಿರಗಳಿಗೆ ಒಯ್ಯಲಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಯಾರಿಗಾದರೂ ಪೌರತ್ವದ ಹಕ್ಕುಗಳು ದೊರೆತರೆ ನನಗೂ ಸಂತೋಷವಾಗಲಿದೆ. ಅಂತಹ ಹಕ್ಕಿನಿಂದ ಯಾರಾದರೂ ವಂಚಿತರಾಗಿದ್ದರೆ ನಾನೇ ಆಶ್ರಯ ನೀಡುತ್ತೇನೆ. ಆದರೆ ಯಾರನ್ನಾದರೂ 'ಹೊರಗೆ ಕಳುಹಿಸಲು' ನಾನು ಅವಕಾಶ ನೀಡುವುದಿಲ್ಲ' ಎಂದು ಹೇಳಿದರು.

ಸಿಎಎಗೂ ರಾಷ್ಟ್ರೀಯ ಪೌರತ್ವ ನೋಂದಣಿಗೂ (ಎನ್‌ಆರ್‌ಸಿ) ಸಂಬಂಧವಿದೆ. ಈಗಾಗಲೇ ಪೌರತ್ವ ಪಡೆದಿರುವ ಮುಸಲ್ಮಾನ ವಲಸಿಗರನ್ನು ಅಕ್ರಮವಾಗಿ ನೆಲೆಸಿರುವ ನಿವಾಸಿಗಳು ಎಂದು ಘೋಷಿಸಲಾಗುತ್ತದೆ. ಎನ್‌ಆರ್‌ಸಿ ಅನ್ವಯ ಅವರು ತೊಂದರೆ ಎದುರಿಸಲಿದ್ದಾರೆ ಎಂದರು.



ಸಿಎಎ ನಿಯಮಗಳನ್ನು ಕುರಿತಂತೆ ಅಧಿಸೂಚನೆ ಹೊರಡಿಸಿದ ಕೇಂದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ ಕಾಲೇಜು ವಿದ್ಯಾರ್ಥಿಗಳು ಮಂಗಳವಾರ ಗುವಾಹಟಿಯಲ್ಲಿ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಸಿಎಎ ಕುರಿತ ವದಂತಿಗಳಿಂದ ವಿಚಲಿತರಾಗಬೇಡಿ. ಇದರ ಉದ್ದೇಶ ಬಾಂಗ್ಲಾದೇಶ, ಅಫ್ಗಾನಿಸ್ತಾನ, ಪಾಕಿಸ್ತಾನದಿಂದ ಬಂದ ನಿರಾಶ್ರಿತರಿಗೆ ಪೌರತ್ವ ನೀಡುವುದೇ ಆಗಿದೆ
ಸೈಯದ್ ಶಾಹನವಾಜ್ ಹುಸೇನ್
ಬಿಜೆಪಿ ನಾಯಕ

ವಿಪಕ್ಷಗಳು, ನೆರೆ ರಾಷ್ಟ್ರಗಳಲ್ಲಿದ್ದ ಧಾರ್ಮಿಕ ಅಲ್ಪಸಂಖ್ಯಾತರು ಭಾರತೀಯ ಪೌರತ್ವ ಪಡೆಯುವ ಹಕ್ಕು ಕಸಿದುಕೊಳ್ಳುತ್ತಿವೆ. ಅವರಲ್ಲಿ ಮಾನವೀಯತೆ ಸತ್ತಿದೆಯೇ?
ಅನುರಾಗ್ ಠಾಕೂರ್
ಕೇಂದ್ರ ಸಚಿವ

ಹೊಸ ಚುನಾವಣಾ ಅಸ್ತ್ರ –ಒಮರ್

ಶ್ರೀನಗರ (ಪಿಟಿಐ): ಸಿಎಎ ನಿಯಮಗಳನ್ನು ಅಧಿಸೂಚನೆ ಹೊರಡಿಸುವ ಮೂಲಕ ಬಿಜೆಪಿಯು ಮುಸಲ್ಮಾನರಿಗೆ ರಂಜಾನ್ ಉಡುಗೊರೆ ನೀಡಿದೆ ಎಂದು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಟೀಕಿಸಿದ್ದಾರೆ.

ಲೋಕಸಭೆಯ ಸಾರ್ವತ್ರಿಕ ಚುನಾವಣೆಯ ವೇಳಾಪಟ್ಟಿ ಘೋಷಣೆಗೂ ಮೊದಲು ಈ ಕುರಿತು ಅಧಿಸೂಚನೆ ಹೊರಡಿಸಲಾಗಿದೆ. ಇದು, ಸ್ವತಃ ಬಿಜೆಪಿಗೆ 400 ಸ್ಥಾನ ಗೆಲ್ಲುವ ವಿಶ್ವಾಸ ಇಲ್ಲ ಎಂಬುದನ್ನು ಬಿಂಬಿಸುತ್ತಿದೆ ಎಂದು ಸುದ್ದಿಗಾರರ ಜೊತೆ ಮಾತನಾಡುತ್ತಾ ಟೀಕಿಸಿದರು.

ಕಾಯ್ದೆಗೆ 2019ರಲ್ಲಿಯೇ ಅನುಮೋದನೆ ದೊರೆತಿದೆ. ಆದರೆ, ಈಗ ಚುನಾವಣೆ ಘೋಷಣೆಗೆ ಮೊದಲು ಅಧಿಸೂಚನೆ ಹೊರಡಿಸಲಾಗಿದೆ. ರಾಮಮಂದಿರ ನಿರ್ಮಾಣದ ಬಳಿಕ ತಾವು ಸೋಲುವುದಿಲ್ಲ ಎಂದು ಬಿಜೆಪಿಯವರು ಹೇಳಿಕೊಳ್ಳುತ್ತಿದ್ದರು. ಆದರೆ, ಅವರ ಬಲವೀಗ ಕ್ಷೀಣಿಸಿದೆ. ಹೀಗಾಗಿ, ಬಿಜೆಪಿಯು ಹೊಸ ಅಸ್ತ್ರಗಳನ್ನು ಪ್ರಯೋಗಿಸುತ್ತಿದೆ ಎಂದು ಹೇಳಿದರು.

'ಮುಂದಿನ ಲೋಕಸಭೆ ಚುನಾವಣೆಯಲ್ಲಿಯೂ ಒಂದು ವಿಷಯವಾಗಿ ಧರ್ಮವನ್ನು ಬಳಸಲು ಬಿಜೆಪಿ ಉದ್ದೇಶಿಸಿರುವುದು ಸ್ಪಷ್ಟವಾಗಿದೆ. ಬಿಜೆಪಿ ಮುಸ್ಲಿಮರನ್ನು ವಿರೋಧಿಸುವುದು ಹೊಸತಲ್ಲ, ಸಿಎಎ ಮೂಲಕವೂ ಮುಸಲ್ಮಾನರನ್ನೇ ಗುರಿಯಾಗಿಸಿಕೊಂಡಿದೆ' ಎಂದು ಹೇಳಿದರು.

'ಜಾತ್ಯತೀತ ತತ್ವಗಳ ಸ್ಪಷ್ಟ ಉಲ್ಲಂಘನೆ'

ನವದೆಹಲಿ (ಪಿಟಿಐ): ಸಿಎಎ ನಿಯಮಗಳ ಅಧಿಸೂಚನೆ ಹೊರಡಿಸಿರುವುದು ಸಂವಿಧಾನದ ಜಾತ್ಯತೀತ ತತ್ವಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಸಿಪಿಎಂ ಪಕ್ಷ ಅಭಿಪ್ರಾಯಪಟ್ಟಿದೆ. ಸಿಎಎ ಜಾರಿಯನ್ನು ಬಲವಾಗಿ ವಿರೋಧಿಸಿದೆ.

ಈ ಕುರಿತು ಹೇಳಿಕೆಯಲ್ಲಿ ಪಕ್ಷವು, 'ಸಿಎಎ ನಿಯಮಗಳಿಗೂ, ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ)ಗೂ ನೇರವಾದ ಸಂಬಂಧವಿದೆ. ಮುಸಲ್ಮಾನರನ್ನು ಗುರಿಯಾಗಿಸಿಯೇ ಈಗ ಅಧಿಸೂಚನೆ ಹೊರಡಿಸಲಾಗಿದೆ' ಎಂದು ಆರೋಪಿಸಿದೆ.

ಸಿಎಎ ಅನುಷ್ಠಾನವನ್ನು ಸಿಪಿಎಂ ಪಾಲಿಟ್ ಬ್ಯೂರೊ ತೀವ್ರವಾಗಿ ಖಂಡಿಸಲಿದೆ. ವ್ಯಕ್ತಿಯ ಧರ್ಮ ಮತ್ತು ಪೌರತ್ವಕ್ಕೂ ಸಂಪರ್ಕ ಕಲ್ಪಿಸುವುದು ಸರಿಯಾದ ಕ್ರಮವಲ್ಲ. ಸಿಎಎ ನಿಯಮಗಳು ಮುಸಲ್ಮಾನರ ಬಗ್ಗೆ ಪಕ್ಷಪಾತ ನಿಲುವು ಹೊಂದಿವೆ ಎಂದು ಪಕ್ಷ ಟೀಕಿಸಿದೆ.

'ಪೌರತ್ವವನ್ನು ನೀಡಲು ಜನರನ್ನು ಗುರುತಿಸುವ ಪ್ರಕ್ರಿಯೆಯಿಂದ ಆಯಾ ರಾಜ್ಯ ಸರ್ಕಾರಗಳನ್ನು ಹೊರಗಿಡಲಾಗಿದೆ. ಸಿಎಎ ವಿರೋಧಿಸುವ ರಾಜ್ಯಗಳನ್ನು ಕೈಬಿಡುವುದೇ ಇದರ ಉದ್ದೇಶವಾಗಿತ್ತು. ಮುಖ್ಯವಾಗಿ ಸಿಎಎ ಜಾರಿಗೊಳಿಸಿದ ಸಂದರ್ಭ ಶಂಕಾಸ್ಪದವಾಗಿದೆ' ಎಂದು ಹೇಳಿದರು.

ಸಿಎಎ ಜಾರಿಯನ್ನು ತೀವ್ರವಾಗಿ ವಿರೋಧಿಸುವ ಪಕ್ಷ, ಈ ಕಾಯ್ದೆಯ ರದ್ದತಿಗಾಗಿ ಹೋರಾಟವನ್ನು ಮುಂದುವರಿಸಲಿದೆ ಎಂದು ಅವರು ಹೇಳಿದ್ದಾರೆ.

ಭರವಸೆಯ ಕಿರಣ –ಪಾಕ್‌ನ ಹಿಂದೂ ನಿರಾಶ್ರಿತರು

ನವದೆಹಲಿ (ಪಿಟಿಐ): ಸಿಎಎ ನಿಯಮಗಳ ಕುರಿತು ಸರ್ಕಾರ ಈಗ ಅಧಿಸೂಚನೆ ಹೊರಡಿಸಿರುವುದು ನಮಗೆ ಭದ್ರತಾ ಭಾವನೆ ನೀಡಿದೆ ಎಂದು ದೆಹಲಿಯಲ್ಲಿ ನೆಲೆಸಿರುವ ಪಾಕಿಸ್ತಾನಿ ಹಿಂದೂ ನಿರಾಶ್ರಿತರು ಅಭಿಪ್ರಾಯಪಟ್ಟಿದ್ದಾರೆ.

ಭಾರತಕ್ಕೆ ವಲಸೆ ಬಂದಾಗಿನಿಂದಲೂ ನಾವು ಗುಡಿಸಲು ಮನೆ, ಟೆಂಟ್‌ಗಳಲ್ಲಿ ವಾಸಿಸುತ್ತಿದ್ದೇವೆ. ಉರುವಲು ಬಳಸಿ ಅಡುಗೆ ಮಾಡುತ್ತಿದ್ದೇವೆ. ಸಿಎಎ ನಮಗೆ ಭರವಸೆಯ ಆಶಾಕಿರಣವಾಗಿದೆ ಎಂದು ಹೇಳಿದ್ದಾರೆ.

ನಾನು ಪಾಕಿಸ್ತಾನದಿಂದ 2011ರಲ್ಲಿ ವಲಸೆ ಬಂದಿದ್ದೇನೆ. ವಿದ್ಯುತ್ ಸಂಪರ್ಕ ಸೇರಿದಂತೆ ನಮಗೆ ಮೂಲಸೌಕರ್ಯವೂ ದೊರೆತಿಲ್ಲ ಎಂದು ಮಜ್ನು ಕ ಟಿಲ್ಲಾ ನಿರಾಶ್ರಿತ ಸಮುದಾಯದ ನಿವಾಸಿ ಧರ್ಮವೀರ್ ಸೋಳಂಕಿ ಪ್ರತಿಕ್ರಿಯಿಸಿದರು.

ಆದರೆ, ಈಗ ಸಿಎಎ ಅಧಿಸೂಚನೆ ಹೊರಬಿದ್ದಿದೆ. ನಮ್ಮ ಎಲ್ಲ ಸಮಸ್ಯೆಗಳು ಪರಿಹಾರವಾಗುವ ಭರವಸೆ ಮೂಡಿದೆ. ಕಳೆದ 13 ವರ್ಷಗಳಲ್ಲಿ ಕೆಲವರಿಗೆ ಮಿನಿ ಎಲ್‌ಪಿಜಿ ಸಿಲಿಂಡರ್ ದೊರೆತಿರಬಹುದು. ಹಲವರು ಅಡುಗೆಗೆ ಉರುವಲು ಬಳಸುತ್ತಿದ್ದೇವೆ ಎಂದು ಸೋನಾದಾಸ್ ಹೇಳಿದರು. ಬಹುಶಃ ನಮ್ಮ ಕಷ್ಟದ ದಿನಗಳು ಅಂತ್ಯಗೊಳ್ಳುತ್ತಿವೆ ಎಂದು ಕನ್ಹಯ್ಯಾ ಅವರು ಪ್ರತಿಕ್ರಿಯಿಸಿದರು.

'ಸಿಎಎ ಜಾರಿಗೆ ಅವಕಾಶ ನೀಡೆವು'

ಚೆನ್ನೈ (ಪಿಟಿಐ): 'ಸಿಎಎ ಜನರನ್ನು ವಿಭಜಿಸಲಿದೆ ಮತ್ತು ಅಪ್ರಯೋಜನಕಾರಿ' ಎಂದು ಬಣ್ಣಿಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, ರಾಜ್ಯದಲ್ಲಿ ಈ ಕಾಯ್ದೆಯನ್ನು ಜಾರಿಗೊಳಿಸುವುದಿಲ್ಲ ಎಂದು ಹೇಳಿದ್ದಾರೆ.

ಅಧಿಸೂಚನೆ ಕುರಿತು ಬಿಜೆಪಿ ವಿರುದ್ಧ ಹರಿಹಾಯ್ದ ಅವರು, ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ತರಾತುರಿಯಲ್ಲಿ ಈ ತೀರ್ಮಾನ ಕೈಗೊಂಡಿದೆ. ಇದು, ಸಂವಿಧಾನದ ಮೂಲ ಆಶಯಕ್ಕೆ ವಿರುದ್ಧವಾಗಿದೆ ಎಂದು ಟೀಕಿಸಿದ್ದಾರೆ.

ದೇಶದ ಏಕತೆಗೆ ಧಕ್ಕೆ ತರುವ ಯಾವುದೇ ಕಾಯ್ದೆಗೆ ಸರ್ಕಾರ ರಾಜ್ಯದಲ್ಲಿ ಅವಕಾಶ ನೀಡುವುದಿಲ್ಲ. ಸಿಎಎ ಜಾತ್ಯತೀತತೆ, ಅಲ್ಪಸಂಖ್ಯಾತರು ಮತ್ತು ಶ್ರೀಲಂಕಾದ ತಮಿಳು ನಿರಾಶ್ರಿತರ ವಿರುದ್ಧವಾಗಿದೆ ಎಂದು ಹೇಳಿದರು.

ಸಿಎಎ ಅನುಷ್ಠಾನ ತಡೆ ಕೋರಿ ಅರ್ಜಿ

ನವದೆಹಲಿ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ– 2019ರ (ಸಿಎಎ) ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಅರ್ಜಿಗಳು ಇತ್ಯರ್ಥ ಆಗುವವರೆಗೂ ಪೌರತ್ವ ತಿದ್ದುಪಡಿ ನಿಯಮಗಳ (2024) ಅನುಷ್ಠಾನವನ್ನು ತಡೆಹಿಡಿಯಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಮಂಗಳವಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಈ ಕುರಿತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಅರ್ಜಿ ಸಲ್ಲಿಸಿದೆ. ಮುಸ್ಲಿಂ ಸಮುದಾಯಕ್ಕೆ ಸೇರಿದ ಜನರವಿರುದ್ಧ ಯಾವುದೇ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳದಂತೆ ನಿರ್ದೇಶಿಸಬೇಕು ಎಂದೂ ಅದು ಕೋರಿದೆ. ಮುಸ್ಲಿಂ ಸುಮುದಾಯದವರು ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಲು ಅನುಮತಿ ನೀಡುವಂತೆ ಮತ್ತು ಅವರ ಅರ್ಹತೆಯ ಬಗ್ಗೆ ವರದಿ ಸಲ್ಲಿಸುವಂತೆ ಕೇಂದ್ರಕ್ಕೆ ನಿರ್ದೇಶಿಸಬೇಕು ಎಂದೂ ಅದು ಮನವಿ ಮಾಡಿದೆ.

ಈಗಾಗಲೇ ಸಿಎಎ ನಿಬಂಧನೆಗಳನ್ನು ಪ್ರಶ್ನಿಸಿ ಸುಮಾರು 250 ಅರ್ಜಿಗಳು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಉಳಿದಿವೆ ಎಂಬ ಅಂಶವನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

'ಒಂದು ವೇಳೆ ಸುಪ್ರೀಂ ಕೋರ್ಟ್ ಸಿಎಎ ಅನ್ನು ಅಸಂವಿಧಾನಿಕ ಎಂದು ನಿರ್ಧರಿಸಿದರೆ, ಈ ದೋಷಪೂರಿತ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಪೌರತ್ವ ಪಡೆದವರು ತಮ್ಮ ಪೌರತ್ವದಿಂದ ವಂಚಿತರಾಗುತ್ತಾರೆ. ಆಗ ಗೊಂದಲದ ಪರಿಸ್ಥಿತಿ ಸೃಷ್ಟಿಯಾಗುತ್ತದೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಈ ಕುರಿತ ಅರ್ಜಿಗಳು ಇತ್ಯರ್ಥವಾಗುವವರೆಗೆ ಸಿಎಎ ಅನುಷ್ಠಾನವನ್ನು ಮುಂದೂಡುವುದು ಸೂಕ್ತ ಎಂದೂ ಅರ್ಜಿಯಲ್ಲಿ ತಿಳಿಸಲಾಗಿದೆ. 'ವಲಸಿಗರಿಗೆ ಪೌರತ್ವ ನೀಡುವುದಕ್ಕೆ ವಿರೋಧವಿಲ್ಲ. ಆದರೆ, ಒಂದು ಧರ್ಮವನ್ನು ಹೊರಗಿಟ್ಟು ಕಾಯ್ದೆ ಮಾಡಿರುವುದು ಸರಿಯಲ್ಲ. ಧರ್ಮದ ಆಧಾರದ ಮೇಲೆ ತಾರತಮ್ಯ ಮಾಡುವುದು ಸಂವಿಧಾನದ ಜಾತ್ಯತೀತ ಪರಿಕಲ್ಪನೆಗೆ ಧಕ್ಕೆ ತರುತ್ತದೆ' ಎಂದು ಅದು ಹೇಳಿದೆ.

ಪೌರತ್ವ ತಿದ್ದುಪಡಿ ನಿಯಮಗಳಿಗೆ ತಡೆ ಕೋರಿ ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ ಸಹ ಪ್ರತ್ಯೇಕ ಅರ್ಜಿ ಸಲ್ಲಿಸಿದೆ.

ಪೋರ್ಟಲ್ ಆರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೌರತ್ವ ತಿದ್ದುಪಡಿ ಕಾಯ್ದೆಯಡಿ (ಸಿಎಎ) ಭಾರತೀಯ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸುವವರಿಗೆ ಗೃಹ ಸಚಿವಾಲಯ ಮಂಗಳವಾರ ಪೋರ್ಟಲ್ ಆರಂಭಿಸಿದೆ. ಅಲ್ಲದೆ ಈ ಕುರಿತು ಶೀಘ್ರದಲ್ಲಿಯೇ 'ಸಿಎಎ–2019' ಮೊಬೈಲ್ ಆ್ಯಪ್ ಅನ್ನು ಸರ್ಕಾರ ಪ್ರಾರಂಭಿಸಲಿದೆ.

ಅರ್ಜಿಗಳ ಪ್ರಕ್ರಿಯೆ ಮತ್ತು ಇತರ ಸಮಸ್ಯೆಗಳ ಕುರಿತು ವಿವರಿಸಲು ಪೋರ್ಟಲ್‌ನಲ್ಲಿ ಎಫ್‌ಎಕ್ಯೂಗಳನ್ನೂ (ಪದೇ ಪದೇ ಕೇಳಲಾಗುವ ಪ್ರಶ್ನೆಗಳು) ಒದಗಿಸಲಾಗಿದೆ.

ಸಿಎಎ–2019ರ ಪ್ರಕಾರ 2014ರ ಡಿಸೆಂಬರ್ 31ಕ್ಕೂ ಮೊದಲು ಅಫ್ಗಾನಿಸ್ತಾನ, ಬಾಂಗ್ಲಾದೇಶ, ಪಾಕಿಸ್ತಾನದಿಂದ ಭಾರತಕ್ಕೆ ಬಂದಿರುವ ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ, ಕ್ರೈಸ್ತ ಸಮುದಾಯಗಳಿಗೆ ಸೇರಿದವರು ಅರ್ಜಿ ಸಲ್ಲಿಸಲು ಅರ್ಹರು.

ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ. ಎಫ್‌ಎಕ್ಯೂ ಪ್ರಕಾರ, ಅರ್ಜಿದಾರರು ಜಿಲ್ಲಾ ಮಟ್ಟದ ಸಮಿತಿ ಮೂಲಕ ಉನ್ನತಾಧಿಕಾರ ಸಮಿತಿಗೆ ಅರ್ಜಿ ಸಲ್ಲಿಸಬೇಕು. ಅರ್ಜಿದಾರರು ₹50 ಅನ್ನು ಆನ್‌ಲೈನ್ ಮೂಲಕ ಪಾವತಿಸಬೇಕು. ಅಲ್ಲದೆ 6 ಬಗೆಯ ದಾಖಲೆಗಳನ್ನು ಒದಗಿಸಬೇಕು. ತಾವು ಭಾರತ ಪ್ರವೇಶಿಸಿದ ನಿರ್ದಿಷ್ಟ ದಿನಾಂಕ ನಮೂದಿಸಬೇಕು.

ಸಲ್ಲಿಕೆಯಾದ ಅರ್ಜಿ, ದಾಖಲೆಗಳನ್ನು ಡಿಎಲ್‌ಸಿ ಪರಿಶೀಲಿಸುತ್ತದೆ. ನಂತರ ಹಂತದಲ್ಲಿ ಪರಮಾರ್ಶೆಗಾಗಿ ಮೂಲ ದಾಖಲೆಗಳನ್ನು ಹಾಜರು ಪಡಿಸಲು ಅರ್ಜಿದಾರರಿಗೆ ತಿಳಿಸುತ್ತದೆ. ಎಲ್ಲ ದಾಖಲೆಗಳು ಕ್ರಮಬದ್ಧವಾಗಿವೆ ಎಂದು ಕಂಡುಬಂದರೆ, ನಿರ್ದಿಷ್ಟ ಅಧಿಕಾರಿಯು ಅರ್ಹ ಅರ್ಜಿದಾರರಿಗೆ 'ಪೌರತ್ವಕ್ಕೆ ಸಂಬಂಧಿಸಿದಂತೆ ತಾವು ನಿಷ್ಠರಾಗಿರುತ್ತೇವೆ' ಎಂದು ಬೋಧಿಸುತ್ತಾರೆ.

ದಾಖಲೆಗಳಲ್ಲಿ ಲೋಪಗಳೇನಾದರೂ ಕಂಡುಬಂದಲ್ಲಿ, ಆ ಕುರಿತು ಅರ್ಜಿದಾರರನ್ನು ಡಿಎಲ್‌ಸಿ ಪ್ರಶ್ನಿಸುತ್ತದೆ. ಅರ್ಜಿದಾರರು ಸಮಂಜಸ ಕಾರಣವಿಲ್ಲದೆ ಗೈರಾದರೆ, ಅವರ ಅರ್ಜಿ ನಿರಾಕರಿಸುವಂತೆ ಉನ್ನತಾಧಿಕಾರ ಸಮಿತಿಗೆ ಡಿಎಲ್‌ಸಿ ತಿಳಿಸುತ್ತದೆ.

ಪ್ರತಿಜ್ಞಾ ವಿಧಿ ಬೋಧನೆಯ ಬಳಿಕ ಡಿಎಲ್‌ಸಿ ಆನ್‌ಲೈನ್ ಮೂಲಕ ಉನ್ನತಾಧಿಕಾರ ಸಮಿತಿಗೆ ವಿಷಯ ತಿಳಿಸುತ್ತದೆ ಮತ್ತು ದಾಖಲೆಗಳನ್ನು ರವಾನಿಸುತ್ತದೆ. ಆ ಬಳಿಕ ಉನ್ನತಾಧಿಕಾರ ಸಮಿತಿಯು ಪೌರತ್ವಕ್ಕೆ ಸಂಬಂಧಿಸಿದ ಅರ್ಜಿಯನ್ನು ಪರಿಶೀಲಿಸಿ, ಅನುಮೋದಿಸುತ್ತದೆ ಅಥವಾ ತಿರಸ್ಕರಿಸುತ್ತದೆ.

ಅರ್ಜಿದಾರರು ಅರ್ಜಿ ಸಲ್ಲಿಸುವ ವೇಳೆ ಸಹಿ ಮಾಡಿದ ಪ್ರತಿಯನ್ನು ನಿರ್ದಿಷ್ಟವಾಗಿ ಕೇಳದಿದ್ದರೆ, ಪೌರತ್ವದ ಡಿಜಿಟಲ್ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಪೌರತ್ವ ಕಾಯ್ದೆಯ ಸೆಕ್ಷನ್ 6ಬಿ ಅಡಿಯಲ್ಲಿ ನೋಂದಣಿ ಮೂಲಕ ಪೌರತ್ವ ಪಡೆದವರು ಭಾರತ ಪ್ರವೇಶಿಸಿದ ದಿನಾಂಕದಿಂದ ಭಾರತದ ಪ್ರಜೆ ಎಂದು ಪರಿಗಣಿಸಲಾಗುತ್ತದೆ.

'ಮುಸ್ಲಿಮರು ಚಿಂತಿಸಬೇಕಿಲ್ಲ'

ನವದೆಹಲಿ (ಪಿಟಿಐ): 'ಪೌರತ್ವ ತಿದ್ದುಪಡಿ ಕಾಯ್ದೆಯು ಭಾರತೀಯ ಮುಸ್ಲಿಮರ ಪೌರತ್ವದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರುವುದಿಲ್ಲ. ಹೀಗಾಗಿ ಚಿಂತಿಸುವ ಅಗತ್ಯವಿಲ್ಲ' ಎಂದು ಗೃಹ ಸಚಿವಾಲಯ ಮಂಗಳವಾರ ತಿಳಿಸಿದೆ.

'ಈ ಕಾಯ್ದೆಯು ಭಾರತೀಯ ನಾಗರಿಕರಿಗೆ ತನ್ನ ಪೌರತ್ವ ಸಾಬೀತು ಪಡಿಸಲು ಯಾವುದೇ ದಾಖಲೆ ನೀಡುವಂತೆ ಕೇಳುವುದಿಲ್ಲ' ಎಂದು ಸ್ಪಷ್ಟಪಡಿಸಿದೆ. ಈ ಮೂಲಕ ಅದು ಮುಸ್ಲಿಂ ವಿದ್ಯಾರ್ಥಿಗಳ ಆತಂಕವನ್ನು ದೂರಗೊಳಿಸಲು ಯತ್ನಿಸಿದೆ.

'ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನಗಳಲ್ಲಿ ಅಲ್ಪಸಂಖ್ಯಾತರ ಮೇಲಿನ ಕಿರುಕುಳದಿಂದಾಗಿ ಇಸ್ಲಾಂನ ಹೆಸರು ವಿಶ್ವದಾದ್ಯಂತ ಕೆಟ್ಟದಾಗಿ ಬಿಂಬಿತವಾಯಿತು. ಆದರೆ ಇಸ್ಲಾಂ ಶಾಂತಿಯ ಧರ್ಮವಾಗಿದ್ದು, ದ್ವೇಷ, ಹಿಂಸೆ, ಧಾರ್ಮಿಕ ನೆಲೆಯಲ್ಲಿ ಯಾವುದೇ ಕಿರುಕುಳವನ್ನು ಬೋಧಿಸುವುದಿಲ್ಲ' ಎಂದು ಪ್ರಕಟಣೆ ತಿಳಿಸಿದೆ.

ಗಡೀಪಾರು ಕುರಿತು ವ್ಯವಹರಿಸಲ್ಲ: 'ಭಾರತವು ವಲಸಿಗರಿಗೆ ಸಂಬಂಧಿಸಿದಂತೆ ಆ ಮೂರು ದೇಶಗಳೊಂದಿಗೆ ಯಾವುದೇ ಒಪ್ಪಂದ ಹೊಂದಿಲ್ಲ. ಹೀಗಾಗಿ ವಲಸಿಗರನ್ನು ಆ ದೇಶಗಳಿಗೆ ಹಿಂದಕ್ಕೆ ಕಳುಹಿಸಲು ಆಗುವುದಿಲ್ಲ' ಎಂದಿರುವ ಗೃಹ ಸಚಿವಾಲಯವು 'ಸಿಎಎ, ಅಕ್ರಮ ವಲಸಿಗರ ಗಡೀಪಾರು ಕುರಿತು ವ್ಯವಹರಿಸುವುದಿಲ್ಲ' ಎಂದೂ ಹೇಳಿದೆ.

ಉನ್ನತ ಮಟ್ಟದ ಸಮಿತಿ ಅಧ್ಯಕ್ಷರ ಜತೆ ಖಂಡ್ರೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಸಂರಕ್ಷಣೆ ಮತ್ತು ಕೈಗಾರಿಕಾ ಅಭಿವೃದ್ಧಿ ಕುರಿತು ಪರಿಶೀಲನೆಗಾಗಿ ಅರಣ್ಯ ಇಲಾಖೆಯು ರಚಿಸಿರುವ ರಾಜ್ಯ ಮಟ್ಟದ ಪರಿಸರ ಪರಿಣಾಮ ಪರಾಮರ್ಶನ ಪ್ರಾಧಿಕಾರ (ಎಸ್‌ಇಐಎಎ) ಮತ್ತು ರಾಜ್ಯ ಮಟ್ಟದ ತಜ್ಞರ ನಿಷ್ಕರ್ಶಾ ಸಮಿತಿ (ಎಸ್‌ಇಎಸಿ) ಅಧ್ಯಕ್ಷರ ಜತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಮಂಗಳವಾರ ಸಭೆ ನಡೆಸಿದರು.

ಎಸ್‌ಇಐಎಎ ಅಧ್ಯಕ್ಷ ಬಿ. ಗುರುಪ್ರಸಾದ್ ಮತ್ತು ಎಸ್‌ಇಎಸಿ ಅಧ್ಯಕ್ಷ ಎನ್. ಮಹೇಶ್ ಸಭೆಯಲ್ಲಿದ್ದರು. ಇಬ್ಬರ ಜತೆಗೂ ಚರ್ಚಿಸಿದ ಸಚಿವರು, ಜೀವನ ಮತ್ತು ಜೀವನೋಪಾಯಕ್ಕೆ ತೊಂದರೆ ಆಗಬಾರದು. ಪರಿಸರಕ್ಕೂ ಹಾನಿಯಾಗದಂತೆ ಸಮಿತಿಗಳು ಎಚ್ಚರ ವಹಿಸಬೇಕು ಎಂದು ಸೂಚಿಸಿದರು.

ಕೈಗಾರಿಕೆಗಳಿಂದ ಪರಿಸರಕ್ಕೆ ಹಾನಿಯಾಗುವುದನ್ನು ತಡೆಯಬೇಕು. ಆದರೆ, ನವೋದ್ಯಮಿಗಳು, ಉದ್ದಿಮೆದಾರರು ಮತ್ತು ಸಾರ್ವಜನಿಕರ ಶೋಷಣೆಗೆ ಅವಕಾಶವಿಲ್ಲದಂತೆ ಸಮಿತಿಗಳು ಕೆಲಸ ಮಾಡಬೇಕು ಎಂದು ನಿರ್ದೇಶನ ನೀಡಿದರು.

'₹284 ಕೋಟಿಯ ಯೋಜನೆ ಕೇಂದ್ರ ಸರ್ಕಾರದ ಒಪ್ಪಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಶಾಲಾ ಕಾಲೇಜುಗಳಿಗೆ ಕಟ್ಟಡ, ಕೊಠಡಿಗಳ ನಿರ್ಮಾಣ ಸೇರಿದಂತೆ ಮೂಲಸೌಕರ್ಯ ಕಲ್ಪಿಸುವ ₹284 ಕೋಟಿ ಮೊತ್ತದ ಯೋಜನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರು ದೆಹಲಿಯಲ್ಲಿ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವೆ ಸ್ಮೃತಿ ಇರಾನಿ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಪ್ರಸ್ತಾವ ಸಲ್ಲಿಸಿದ್ದರು. ಅದರ ಆಧಾರದಲ್ಲಿ ಇಷ್ಟು ಮೊತ್ತದ ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ.

'ಈ ಯೋಜನೆಯಡಿ ತಗಲುವ ವೆಚ್ಚದಲ್ಲಿ ಕೇಂದ್ರ ಸರ್ಕಾರ ಶೇ 60 ಹಾಗೂ ರಾಜ್ಯ ಸರ್ಕಾರ ಶೇ 40 ಪಾಲು ಭರಿಸಲಿವೆ. ಕೇಂದ್ರ ಸರ್ಕಾರ ನೀಡಲಿರುವ ಮೊತ್ತದಲ್ಲಿ ರಾಜ್ಯದಲ್ಲಿ 27 ಯೋಜನೆಗಳು ಅನುಷ್ಠಾನಗೊಳ್ಳಲಿದ್ದು, ಶಾಲೆ-ಕಾಲೇಜು ಕಟ್ಟಡ, ಕೊಠಡಿ, ಗ್ರಂಥಾಲಯ ಸೇರಿ ಮೂಲಸೌಕರ್ಯ ಕಲ್ಪಿಸಲು ನೇರವಾಗಲಿದೆ' ಎಂದು ಅಲ್ಪಸಂಖ್ಯಾತರ ಇಲಾಖೆಯ ಮೂಲಗಳು ತಿಳಿಸಿವೆ.

'ಎಫ್‌ಐಆರ್‌ನಲ್ಲಿ ಎಲ್ಲ ವಿವರಗಳಿರಲಿ'

ನವದೆಹಲಿ(ಪಿಟಿಐ): ತನಿಖಾಧಿಕಾರಿಗಳು/ ಪೊಲೀಸ್ ಅಧಿಕಾರಿಗಳು ಸಲ್ಲಿಸುವ ಅಂತಿಮ ವರದಿ ಅಥವಾ ಆರೋಪಪಟ್ಟಿಯು ಸಿಆರ್‌ಪಿಸಿ ಸೆಕ್ಷನ್ 173(2)ರಲ್ಲಿ ಹೇಳಿರುವಂತೆ, ಎಲ್ಲ ಅಗತ್ಯ ವಿವರಗಳನ್ನು ಒಳಗೊಂಡಿರಬೇಕು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಸೂಚಿಸಿದೆ.

ತನಿಖಾಧಿಕಾರಿಗಳು ಬಹುತೇಕ ಸಂದರ್ಭಗಳಲ್ಲಿ, ಸಿಆರ್‌ಪಿಸಿ ಸೆಕ್ಷನ್ 173(2) ಅಡಿ ಅಗತ್ಯವಿರುವ ಮಾಹಿತಿಯನ್ನು ಆರೋಪಪಟ್ಟಿಯಲ್ಲಿ ಉಲ್ಲೇಖಿಸುವುದಿಲ್ಲ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಮೂರ್ತಿಗಳಾದ ಬೇಲಾ ಎಂ.ತ್ರಿವೇದಿ ಹಾಗೂ ಪಂಕಜ್ ಮಿತ್ತಲ್ ಅವರಿದ್ದ ನ್ಯಾಯಪೀಠ, ಇದಕ್ಕೆ ಸಂಬಂಧಿಸಿ ನಿರ್ದೇಶನಗಳನ್ನು ನೀಡಿದೆ.

'ಸಿಆರ್‌ಪಿಸಿ ಸೆಕ್ಷನ್ 173(2) ಅಡಿ ಸಲ್ಲಿಸುವ ವರದಿಯು, ಪ್ರಾಸಿಕ್ಯೂಷನ್, ಪ್ರತಿವಾದಿ ಹಾಗೂ ನ್ಯಾಯಾಲಯದ ದೃಷ್ಟಿಯಿಂದ ಬಹಳ ಮಹತ್ವದ ದಾಖಲೆಯಾಗಿದೆ' ಎಂದೂ ನ್ಯಾಯಪೀಠ ಹೇಳಿದೆ.

ಕೊಲೆ ಪ್ರಕರಣವೊಂದರಲ್ಲಿ ಒಬ್ಬ ವ್ಯಕ್ತಿ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಜಾರ್ಖಂಡ್ ಹೈಕೋರ್ಟ್ ತಿರಸ್ಕರಿಸಿತ್ತು. ಹೈಕೋರ್ಟ್‌ನ ಈ ಆದೇಶ ಪ್ರಶ್ನಿಸಿ ವ್ಯಕ್ತಿಯು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಪೀಠ ಈ ನಿರ್ದೇಶನಗಳನ್ನು ನೀಡಿದೆ.

'ಸೊನ್ನೆಗೆ ಸೊನ್ನೆ ಸೇರಿದರೆ ಶೂನ್ಯವೇ'

ನವದೆಹಲಿ (ಪಿಟಿಐ): 'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಪಕ್ಷವು ಕಾಂಗ್ರೆಸ್ ಜೊತೆ ಮೈತ್ರಿ ಅಥವಾ ಕಾಂಗ್ರೆಸ್‌ನೊಂದಿಗೆ ವಿಲೀನ ಮಾಡಿದರೂ, ಯಾವುದೇ ಪ್ರಯೋಜನವಾಗುವುದಿಲ್ಲ. ಯಾಕೆಂದರೆ, ಸೊನ್ನೆಗೆ ಸೊನ್ನೆ ಸೇರಿದರೆ ಶೂನ್ಯವೇ ಆಗುತ್ತದೆ'

–ಹೀಗೆಂದು ದೆಹಲಿ, ಹರಿಯಾಣ ಮತ್ತು ಗುಜರಾತ್ ರಾಜ್ಯಗಳಲ್ಲಿ ಕಾಂಗ್ರೆಸ್–ಎಎಪಿ ಮೈತ್ರಿ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ವ್ಯಂಗ್ಯವಾಡಿದ್ದಾರೆ.

ಖಟ್ಟರ್ ಹಠಾತ್ ರಾಜೀನಾಮೆ • ಲೋಕಸಭಾ ಚುನಾವಣೆಗೆ ಸ್ಪರ್ಧೆ ಸಾಧ್ಯತೆ

ನಾಯಬ್ ಸೈನಿ ಹರಿಯಾಣದ ನೂತನ ಸಿ.ಎಂ

ಚಂಡೀಗಢ (ಪಿಟಿಐ): ಬಿಜೆಪಿ ಮುಖಂಡ ನಾಯಬ್ ಸಿಂಗ್ ಸೈನಿ ಅವರು ಹರಿಯಾಣದ ನೂತನ ಮುಖ್ಯಮಂತ್ರಿಯಾಗಿ ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು. ಇದಕ್ಕೂ ಮೊದಲು ಮನೋಹರಲಾಲ್ ಖಟ್ಟರ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ, ಅವರ ಸಂಪುಟದ ಸದಸ್ಯರು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಬಿಜೆಪಿಯ ಮುಖಂಡರಾದ ಕನ್ವರ್ ಪಾಲ್, ಮೂಲ್‌ಚಂದ್ ಶರ್ಮ, ಜೈಪ್ರಕಾಶ್ ದಲಾಲ್ ಮತ್ತು ಬನ್ವರಿ ಲಾಲ್ ಹಾಗೂ ಪಕ್ಷೇತರ ಶಾಸಕ ರಂಜಿತ್ ಸಿಂಗ್ ಚೌತಾಲಾ ಅವರು ಸೈನಿ ಅವರ ಜೊತೆ ಸಂಪುಟ ದರ್ಜೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಪ್ರಮಾಣ ವಚನ ಬೋಧಿಸಿದರು. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಸೈನಿ ಅವರು ಖಟ್ಟರ್ ಅವರಿಗೆ ನಮಸ್ಕರಿಸಿದರು, ಅವರ ಆಶೀರ್ವಾದ ಕೋರಿದರು. ಖಟ್ಟರ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಹಠಾತ್ತನೆ ರಾಜೀನಾಮೆ ಸಲ್ಲಿಸಿದ ನಂತರದಲ್ಲಿ, ಬಿಜೆಪಿ ಪ್ರಮುಖರು ಒಬಿಸಿ ಸಮುದಾಯದ ಪ್ರಮುಖ ನಾಯಕ ಸೈನಿ ಅವರ ಹೆಸರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಅಂತಿಮಗೊಳಿಸಿದರು.


ನಾಯಾಬ್ ಸಿಂಗ್ ಸೈನಿ (ಎಡ) ಅವರಿಗೆ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಪ್ರತಿಜ್ಞಾವಿಧಿ ಬೋಧಿಸಿದರು. –ಪಿಟಿಐ ಚಿತ್ರ


ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಆಗಿ ಆಯ್ಕೆಯಾಗುತ್ತಿದ್ದಂತೆಯೇ ಸೈನಿ ಅವರು ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರ ರಚಿಸಲು ಹಕ್ಕು ಮಂಡಿಸಿದರು. ಆಗ ಸೈನಿ ಅವರ ಜೊತೆ ಕೇಂದ್ರ ಸಚಿವ ಅರ್ಜುನ್ ಮುಂಡಾ, ಬಿಜೆಪಿ ಪ್ರಧಾನ ಕಾರ್ಯದರ್ಶಿ ತರುಣ್ ಚುಘ್, ಖಟ್ಟರ್ ಮತ್ತು ಪಕ್ಷದ ಹರಿಯಾಣ ಉಸ್ತುವಾರಿ ಬಿಪ್ಲಬ್ ದೇಬ್ ಅವರೂ ಇದ್ದರು.

ಸೈನಿ ಅವರು ಹರಿಯಾಣ ಬಿಜೆಪಿ ಘಟಕದ ಅಧ್ಯಕ್ಷರೂ ಹೌದು. ಅವರು ಹಾಲಿ ಸಂಸದ ಕೂಡ ಹೌದು. ಹರಿಯಾಣ ವಿಧಾನಸಭೆಗೆ ಅಕ್ಟೋಬರ್‌ನಲ್ಲಿ ಚುನಾವಣೆ ನಡೆಯಬೇಕಿದೆ.

ಖಟ್ಟರ್ ಮತ್ತು ಸಂಪುಟದ 13 ಸದಸ್ಯರು ತಮ್ಮ ರಾಜೀನಾಮೆಯನ್ನು ರಾಜ್ಯಪಾಲರಿಗೆ ಮಂಗಳವಾರ ಬೆಳಿಗ್ಗೆ ಸಲ್ಲಿಸಿದರು. ಇದಾದ ಕೆಲವೇ ಹೊತ್ತಿನಲ್ಲಿ ಬಿಜೆಪಿ ಶಾಸಕರು, ಶಾಸಕಾಂಗ ಪಕ್ಷದ ಸಭೆಯತ್ತ ಸಾಗಿದರು. ಖಟ್ಟರ್ ಅವರ ಆಪ್ತ ಎಂದು ಗುರುತಿಸಿಕೊಂಡಿರುವ ಸೈನಿ ಅವರು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದರು. ಅರ್ಜುನ್ ಮುಂಡಾ ಮತ್ತು ಚುಘ್ ಅವರನ್ನು ಪಕ್ಷದ ವೀಕ್ಷಕರನ್ನಾಗಿ ದೆಹಲಿಯಿಂದ ಕಳುಹಿಸಿಕೊಡಲಾಗಿತ್ತು.

ಸೈನಿ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಅಕ್ಟೋಬರ್‌ನಲ್ಲಿ ನೇಮಕ ಮಾಡಲಾಗಿತ್ತು. ಆಗ ಈ ಕ್ರಮವನ್ನು ರಾಜ್ಯದ ಒಬಿಸಿ ಸಮುದಾಯದ ಮತಗಳನ್ನು ಒಗ್ಗೂಡಿಸುವ ಪ್ರಯತ್ನ ಎಂದು ಹೇಳಲಾಗಿತ್ತು.

ಖಟ್ಟರ್ ಅವರನ್ನು ಕರನಾಲ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯನ್ನಾಗಿ ಘೋಷಿಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಹರಿಯಾಣದಲ್ಲಿ ಬಿಜೆಪಿ ಮತ್ತು ಜೆಜೆಪಿ ನಡುವಿನ ಮೈತ್ರಿಯು ಅಂತ್ಯಗೊಳ್ಳುತ್ತಿದೆ ಎಂಬ ಊಹಾಪೋಹಗಳ ನಡುವೆ ಮುಖ್ಯಮಂತ್ರಿ ಬದಲಾವಣೆ ಆಗಿದೆ.



ಸೈನಿ ಆಯ್ಕೆಯ ಹಿಂದಿರುವ ಲೆಕ್ಕಾಚಾರ

ಕುರುಕ್ಷೇತ್ರದ ಸಂಸದರಾಗಿರುವ ಸೈನಿ ಅವರು ಒಬಿಸಿ ಸಮುದಾಯವರು. ಅವರನ್ನು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ 2023ರ ಅಕ್ಟೋಬರ್‌ನಲ್ಲಿ ನೇಮಿಸಲಾಗಿತ್ತು. ಖಟ್ಟರ್ ಅವರ ಪರಮಾಪ್ತ. ಪಕ್ಷದ ಕಿಸಾನ್ ಮೋರ್ಚಾ, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿದ್ದ ಅವರು 2014ರ ವಿಧಾನಸಭಾ ಚುನಾವಣೆಯಲ್ಲಿ ನಾರಾಯಣಗಡ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. 2016ರಲ್ಲಿ ಸಚಿವರನ್ನಾಗಿ ಮಾಡಲಾಗಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಅವರು 4 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದರು.

ಸೂಕ್ತ ಅಭ್ಯರ್ಥಿಗಾಗಿ ಮುಂದುವರಿದ ಶೋಧ

ಅಭ್ಯರ್ಥಿ ಸಿಗದೇ 'ಕೈ'ಗೆ ತಲೆನೋವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭ್ಯರ್ಥಿ ಹೆಸರು ಘೋಷಿಸಲು ಬಾಕಿ ಇರುವ 21 ಲೋಕಸಭಾ ಕ್ಷೇತ್ರಗಳ ಪೈಕಿ 15 ಕ್ಷೇತ್ರಗಳಿಗೆ ಒಂದೇ ಹೆಸರು ಅಂತಿಮಗೊಳಿಸಿರುವ ಕಾಂಗ್ರೆಸ್ ಸ್ಕ್ರೀನಿಂಗ್ ಸಮಿತಿಗೆ, ಕೆಲವು ಕ್ಷೇತ್ರಗಳಲ್ಲಿ ಸೂಕ್ತ ಅಭ್ಯರ್ಥಿ ಸಿಗದಿರುವುದು ತಲೆನೋವು ತಂದಿದೆ.

'ಸೋಮವಾರ ರಾತ್ರಿವರೆಗೆ ನಡೆದ ಸಮಿತಿಯ ಸಭೆಯಲ್ಲಿ, ಬಿಜೆಪಿ ಹಿಡಿತದಲ್ಲಿರುವ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಕೇಂದ್ರ ಕ್ಷೇತ್ರಗಳಿಗೆ ಪಕ್ಷದ ಅಭ್ಯರ್ಥಿ ಹೆಸರು ಅಂತಿಮಗೊಳಿಸಲು ಸಾಧ್ಯವಾಗಿಲ್ಲ. ಈ ಕ್ಷೇತ್ರಗಳಲ್ಲಿ ಕಣಕ್ಕಿಳಿಯಲು ಸಮರ್ಥ ಅಭ್ಯರ್ಥಿಯ ಶೋಧ ಮುಂದುವರಿದಿದೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಬೆಂಗಳೂರು ಉತ್ತರದಿಂದ ಕುಸುಮಾ ಹನುಮಂತರಾಯಪ್ಪ ಅವರಿಗೆ ಟಿಕೆಟ್ ನೀಡಲು ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಇತರ ನಾಯಕರು ಮುಂದಾಗಿದ್ದರು. 'ಎರಡು ಬಾರಿ ಚುನಾವಣೆಯಲ್ಲಿ ಸೋತಿದ್ದೇನೆ. ಗೆದ್ದರೆ ಸಮಸ್ಯೆ ಇಲ್ಲ. ಸೋಲು ಕಂಡರೆ ಮತ್ತೊಮ್ಮೆ ಆ ಹಣೆಪಟ್ಟಿ ಹೊರಬೇಕಾಗುತ್ತದೆ' ಎಂಬ ಕಾರಣಕ್ಕೆ ಕಣಕ್ಕಿಳಿಯಲು ಕುಸುಮಾ ಹಿಂದೇಟು ಹಾಕುತ್ತಿದ್ದಾರೆ ಎಂದು ಗೊತ್ತಾಗಿದೆ. 'ಆರ್‌ಆರ್ ನಗರ ವಿಧಾನಸಭಾ ಕ್ಷೇತ್ರದಲ್ಲಿ ಕುಸುಮಾ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಅದನ್ನು ಬಿಟ್ಟು ಉತ್ತರ ಲೋಕಸಭಾ ಕ್ಷೇತ್ರ ಯಾಕೆ?' ಎಂಬ ನಿರ್ಧಾರಕ್ಕೆ ಕುಸುಮಾ ಅವರ ತಂದೆ ಹನುಮಂತರಾಯಪ್ಪ ಬಂದಿದ್ದಾರೆ. ಇನ್ನು ಸಚಿವ ಕೃಷ್ಣ ಬೈರೇಗೌಡ ಕೂಡ ಈ ಕ್ಷೇತ್ರದಿಂದ ಸ್ಪರ್ಧೆಗೆ ಹಿಂದೇಟು ಹಾಕಿದ್ದಾರೆ.

ಬೆಂಗಳೂರು ದಕ್ಷಿಣ ಕ್ಷೇತ್ರದ ವಿಚಾರದಲ್ಲೂ ಇದೇ ಗೊಂದಲವಿದೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಪುತ್ರಿ ಸೌಮ್ಯಾ ರೆಡ್ಡಿ ಅವರನ್ನು ಕಣಕ್ಕಿಳಿಸಲು ಕಾಂಗ್ರೆಸ್ ನಾಯಕರು ಚರ್ಚೆ ನಡೆಸಿದ್ದಾರೆ. ಮಗಳ ಸ್ಪರ್ಧೆಗೆ ರಾಮಲಿಂಗಾರೆಡ್ಡಿ ಒಲವು ತೋರಿಸುತ್ತಿಲ್ಲ.

'ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಶಾಂತಿ ನಗರ ಶಾಸಕ ಎನ್.ಎ. ಹ್ಯಾರಿಸ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಕಾಂಗ್ರೆಸ್ ನಾಯಕರು ಆಸಕ್ತಿ ತೋರಿಸಿದ್ದಾರೆ. ಆದರೆ, ಹ್ಯಾರಿಸ್ ಕೂಡಾ ಅಖಾಡಕ್ಕೆ ಇಳಿಯಲು ಹಿಂದೇಟು ಹಾಕುತ್ತಿದ್ದಾರೆ' ಎಂದು ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು ಹೇಳಿದರು.

'28 ಕ್ಷೇತ್ರಗಳ ಪೈಕಿ ಹಾವೇರಿ ಮತ್ತು ಬೆಂಗಳೂರು ಕೇಂದ್ರ ಕ್ಷೇತ್ರದಿಂದ ಸಮುದಾಯವರಿಗೆ ಟಿಕೆಟ್ ನೀಡಬೇಕು ಎಂದು ಮುಸ್ಲಿಂ ಮುಖಂಡರು ಈ ಹಿಂದೆ ಆಗ್ರಹಿಸಿದ್ದರು. ಯಾವುದಾದರೂ ಒಂದು ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯವರಿಗೆ ಟಿಕೆಟ್ ನೀಡಲು ಪಕ್ಷದ ವಲಯದಲ್ಲಿ ಚರ್ಚೆ ನಡೆದಿತ್ತು. ಹಾವೇರಿಯಲ್ಲಿ ತಂತ್ರಗಾರಿಕೆ ಬದಲಿಸಿ, ಲಿಂಗಾಯತ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ಘೋಷಿಸಲಾಗಿದೆ. ಮುಸ್ಲಿಂ ಸಮುದಾಯಕ್ಕೆ ಒಂದಾದರೂ ಕ್ಷೇತ್ರ ನೀಡಬೇಕೆಂದರೆ, ಬೆಂಗಳೂರು ಕೇಂದ್ರವೊಂದೇ ಅನುಕೂಲಕಾರಿ ಕ್ಷೇತ್ರವಾಗಿದೆ. ಆದರೆ, ಇಲ್ಲಿ ಅಭ್ಯರ್ಥಿಯೇ ಸಿಗುತ್ತಿಲ್ಲ' ಎಂದು ಅವರು ತಿಳಿಸಿದರು.

ಅಭ್ಯರ್ಥಿ ಕೊರತೆ ಕುರಿತು ಗಂಭೀರ ಚರ್ಚೆ ನಡೆಸಿರುವ ಸ್ಕ್ರೀನಿಂಗ್ ಸಮಿತಿ, ಸಮೀಕ್ಷಾ ವರದಿಯಲ್ಲಿ ಯಾರ ಹೆಸರು ಮುಂಚೂಣಿಯಲ್ಲಿದೆಯೋ ಅವರಿಗೆ ಟಿಕೆಟ್ ನೀಡಲು ಮುಂದಾಗಿದೆ ಎಂದೂ ಮೂಲಗಳು ಹೇಳಿವೆ.

ಕೋಲಾರದಿಂದ ಮುನಿಯಪ್ಪ ಕಣಕ್ಕೆ ?

ಕೋಲಾರ ಲೋಕಸಭಾ ಕ್ಷೇತ್ರದಿಂದ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರನ್ನು ಕಣಕ್ಕಿಳಿಸಲು ಕಾಂಗ್ರೆಸ್ ನಾಯಕರು ಒಲವು ಹೊಂದಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಮುನಿಯಪ್ಪ, 'ನನ್ನ ಸ್ಪರ್ಧೆ ಬಗ್ಗೆ ಹೈಕಮಾಂಡ್ ನಾಯಕರು ಈವರೆಗೂ ಏನೂ ಕೇಳಿಲ್ಲ. ಯಾರು ಮೈತ್ರಿ ಮಾಡಿಕೊಂಡರೂ ಕೋಲಾರದಲ್ಲಿ ಕಾಂಗ್ರೆಸ್ ಗೆಲ್ಲಲಿದೆ' ಎಂದರು.

'ಪಕ್ಷ ಯಾರಿಗಾದರೂ ಟಿಕೆಟ್ ನೀಡಲಿ. ಗೆಲ್ಲಿಸಿಕೊಂಡು ಬರುವುದು ನಮ್ಮ ಜವಾಬ್ದಾರಿ. ಯಾರಿಗೆ ಟಿಕೆಟ್ ಎನ್ನುವುದು ಹೈಕಮಾಂಡ್‌ಗೆ ಬಿಟ್ಟದ್ದು. ಯಾರಿಗಾದರೂ ಕೊಡಲಿ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆ' ಎಂದರು.

ಮಾದಕವಸ್ತು ಸಾಗಿಸುತ್ತಿದ್ದ ಪಾಕ್ ದೋಣಿ ಜಪ್ತಿ

ನವದೆಹಲಿ / ಅಹಮದಾಬಾದ್ (ಪಿಟಿಐ): ವಿವಿಧ ಕೇಂದ್ರೀಯ ಸಂಸ್ಥೆಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ, ₹480 ಕೋಟಿ ಮೌಲ್ಯದ ಮಾದಕವಸ್ತುವನ್ನು ಪಾಕಿಸ್ತಾನದಿಂದ ಸಾಗಿಸುತ್ತಿದ್ದ ದೋಣಿಯನ್ನು ಪೋರಬಂದರ್ ಬಳಿ ಅರಬ್ಬಿಸಮುದ್ರದಲ್ಲಿ ಜಪ್ತಿ ಮಾಡಲಾಗಿದೆ ಎಂದು ರಕ್ಷಣಾ ಸಚಿವಾಲಯ ಮಂಗಳವಾರ ಹೇಳಿದೆ.

ಮಾರ್ಚ್ 11ರ ರಾತ್ರಿ ಈ ಕಾರ್ಯಾಚರಣೆಯನ್ನು ನಡೆಸಲಾಗಿದ್ದು, ದೋಣಿಯಲ್ಲಿದ್ದ ಆರು ಜನರನ್ನು ಬಂಧಿಸಲಾಗಿದೆ ಎಂದೂ ತಿಳಿಸಿದೆ.

ಮಾದಕವಸ್ತು ನಿಯಂತ್ರಣ ಸಂಸ್ಥೆ (ಎನ್‌ಸಿಬಿ), ಗುಜರಾತ್ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಹಾಗೂ ಭಾರತೀಯ ಕರಾವಳಿ ರಕ್ಷಣಾ ಪಡೆ (ಐಸಿಜಿ) ಜಂಟಿಯಾಗಿ ಈ ಕಾರ್ಯಾಚರಣೆ ನಡೆಸಿವೆ.

'ಪೋರಬಂದರ್‌ನಿಂದ 350 ಕಿ.ಮೀ. ದೂರದಲ್ಲಿ, ಹಡಗುಗಳು ಹಾಗೂ ಡಾರ್ನಿಯರ್ ವಿಮಾನ ಬಳಸಿ ನಡೆಸಿದ ಈ ಜಂಟಿ ಕಾರ್ಯಾಚರಣೆಯು ಕರಾವಳಿ ರಕ್ಷಣಾ ಪಡೆ, ಎನ್‌ಸಿಬಿ ಹಾಗೂ ಗುಜರಾತ್‌ನ ಎಟಿಎಸ್ ನಡುವಿನ ಅತ್ಯುನ್ನತ ಸಮನ್ವಯಕ್ಕೆ ಸಾಕ್ಷಿಯಾಗಿತ್ತು' ಎಂದೂ ಸಚಿವಾಲಯ ತಿಳಿಸಿದೆ.

'ಮಾದಕವಸ್ತುವಿದ್ದ ದೋಣಿ ಸಾಗುತ್ತಿದ್ದ ಸ್ಥಳವನ್ನು ಡಾರ್ನಿಯರ್ ವಿಮಾನ ಗುರುತಿಸಿ, ಮಾಹಿತಿ ರವಾನಿಸಿದ ನಂತರ, ಎನ್‌ಸಿಬಿ ಹಾಗೂ ಎಟಿಎಸ್ ಸಿಬ್ಬಂದಿ ಒಳಗೊಂಡ ತಂಡಗಳು ದೋಣಿಯನ್ನು ಪತ್ತೆ ಮಾಡಿದವುಎಂದು ಎಂದು ಸಚಿವಾಲಯ ತಿಳಿಸಿದೆ.

ಕಳೆದುಹೋದ-ಕಳ್ಳತನವಾದ ಮೊಬೈಲ್ ನಿಷ್ಕ್ರಿಯಕ್ಕೆ ವ್ಯವಸ್ಥೆ

ಮೊಬೈಲ್ ಜಪ್ತಿಯಲ್ಲಿ ರಾಜ್ಯ ಮೊದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜನರು ಕಳೆದುಕೊಂಡಿದ್ದ ಹಾಗೂ ಕಳ್ಳತನವಾಗಿದ್ದ 2,06,773 ಲಕ್ಷ ಮೊಬೈಲ್‌ಗಳನ್ನು ಕೇಂದ್ರೀಯ ಉಪಕರಣ ಗುರುತು ನೋಂದಣಿ (ಸಿಇಐಆರ್) ವ್ಯವಸ್ಥೆ ಮೂಲಕ ಬ್ಲಾಕ್ ಮಾಡಲಾಗಿದ್ದು, ಈ ಪೈಕಿ 29,519 ಮೊಬೈಲ್‌ಗಳನ್ನು ಪೊಲೀಸರು ಜಪ್ತಿ ಮಾಡಿ ವಾರಸುದಾರರಿಗೆ ಒಪ್ಪಿಸಿದ್ದಾರೆ.

89,554 ಮೊಬೈಲ್‌ಗಳು ಇರುವ ಸ್ಥಳವನ್ನು ನೆಟ್‌ವರ್ಕ್ ಮೂಲಕ ಕರ್ನಾಟಕ ಪೊಲೀಸರು ಪತ್ತೆ ಮಾಡಿದ್ದಾರೆ. ದೇಶದಲ್ಲಿ ಅತೀ ಹೆಚ್ಚು ಮೊಬೈಲ್ ಜಪ್ತಿ ಮಾಡಿದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ.

'ದೇಶದಲ್ಲಿ ಮಾರ್ಚ್ 12ರವರೆಗೆ 14,06,244 ಮೊಬೈಲ್‌ಗಳನ್ನು ಜನರು ಬ್ಲಾಕ್ ಮಾಡಿದ್ದಾರೆ. ಅದರಲ್ಲಿ 7,50,453 ಮೊಬೈಲ್‌ಗಳು ಇರುವ ಸ್ಥಳಗಳನ್ನು ಪತ್ತೆ ಮಾಡಲಾಗಿದೆ. 1,00,353 ಮೊಬೈಲ್‌ಗಳನ್ನು ಜಪ್ತಿ ಮಾಡಿ, ವಾರಸುದಾರರಿಗೆ ಒಪ್ಪಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆದುಹೋದ ಹಾಗೂ ಕಳ್ಳತನವಾದ ಮೊಬೈಲ್‌ಗಳನ್ನು ಜಪ್ತಿ ಮಾಡಿ ವಾರಸುದಾರರಿಗೆ ವಾಪಸು ನೀಡುವಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಎರಡನೇ ಸ್ಥಾನದಲ್ಲಿ ತೆಲಂಗಾಣ ಹಾಗೂ ಮೂರನೇ ಸ್ಥಾನದಲ್ಲಿ ಮಹಾರಾಷ್ಟ್ರ ಇದೆ' ಎಂದರು.

ಕಳೆದುಕೊಂಡ ಹಾಗೂ ಕಳ್ಳತನವಾದ ಮೊಬೈಲ್‌ಗಳನ್ನು ಮಾಲೀಕರಿಗೆ ವಾಪಸು ಕೊಡಿಸುವ ನಿಟ್ಟಿನಲ್ಲಿ ಕೇಂದ್ರ ದೂರ ಸಂಪರ್ಕ ಇಲಾಖೆಯು ಸಿಇಐಆರ್ ವ್ಯವಸ್ಥೆ ಜಾರಿಗೆ ತಂದಿದೆ. ಕರ್ನಾಟಕ ಪೊಲೀಸ್ ಇಲಾಖೆಯೂ ಈ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ಜನರಿಂದ ದೂರುಗಳನ್ನು ಆಲಿಸಿ ಇತ್ಯರ್ಥ ಪಡಿಸುತ್ತಿದೆ.

ಕಳೆದುಹೋದ–ಕಳ್ಳತನವಾದ ಮೊಬೈಲ್ ನೋಂದಣಿ ವಿವರ

ರಾಜ್ಯ	ಬ್ಲಾಕ್ ಮಾಡಿದ ಮೊಬೈಲ್‌ಗಳು	ಲೋಕೇಶನ್ ಪತ್ತೆಯಾದ ಮೊಬೈಲ್‌ಗಳು	ಜಪ್ತಿಯಾದ ಮೊಬೈಲ್‌ಗಳು
ಕರ್ನಾಟಕ	2,06,773	89.554	29,519
ಮಹಾರಾಷ್ಟ್ರ	1,93,517	96,226	12,568
ದೆಹಲಿ	4,99,666	3,06,194	2,526
ತೆಲಂಗಾಣ	1,44,933	67,224	23,498
ಉತ್ತರ ಪ್ರದೇಶ	44,1910	24,724	3,213

ಸಿಇಐಆರ್ ಬಳಕೆ ಹೇಗೆ ?

'ಮೊಬೈಲ್ ಕಳೆದುಹೋದಾಗ ಅಥವಾ ಕಳ್ಳತನವಾದಾಗ, ಸಂಬಂಧಪಟ್ಟ ಪೊಲೀಸ್ ಠಾಣೆಗೆ ದೂರು ನೀಡಬಹುದು.

ಜೊತೆಗೆ, http://www.ceir.gov.in/ ಜಾಲತಾಣಕ್ಕೆ ಭೇಟಿ ನೀಡಿ ಐಎಂಇಐ ಸಂಖ್ಯೆ ಸಹಾಯದಿಂದ ಮಾಹಿತಿಗಳನ್ನು ಭರ್ತಿ ಮಾಡಿ ಮೊಬೈಲ್ ಬ್ಲಾಕ್ ಮಾಡಬಹುದು' ಎಂದು ಅಧಿಕಾರಿ ಹೇಳಿದರು.

'ಜಾಲತಾಣದಲ್ಲಿ ದಾಖಲಾದ ಮಾಹಿತಿ ಎಲ್ಲ ಪೊಲೀಸರಿಗೆ ರವಾನೆ ಆಗಲಿದೆ. ದೂರು ದಾಖಲಾದ ಮೊಬೈಲ್ ಸಿಕ್ಕರೆ, ಜಾಲತಾಣದಲ್ಲಿ ಮಾಹಿತಿ ದಾಖಲಿಸಲಿದ್ದಾರೆ. ಇದರಿಂದಾಗಿ ವಾರಸುದಾರರಿಗೆ ಬೇಗನೇ ಮೊಬೈಲ್ ದೊರೆಯಲಿದೆ' ಎಂದು ತಿಳಿಸಿದರು.

‘ಭಾರತ ಶಕ್ತಿ’ ಪ್ರದರ್ಶನದ ವೇಳೆಯೇ ಘಟನೆ • ಅಪಾಯದಿಂದ ಪೈಲಟ್ ಪಾರು

ರಾಜಸ್ಥಾನ: ತೇಜಸ್ ಎಲ್‌ಸಿಎ ಪತನ

ಜೈಸಲ್ಮೇರ್/ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ ‘ತೇಜಸ್’ ಹಗುರ ಯುದ್ಧ ವಿಮಾನವೊಂದು (ಎಲ್‌ಸಿಎ) ತರಬೇತಿ ಹಾರಾಟದ ವೇಳೆ ಮಂಗಳವಾರ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಪತನವಾಗಿದೆ. ವಿಮಾನದಲ್ಲಿದ್ದ ಪೈಲಟ್ ಸುರಕ್ಷಿತವಾಗಿ ಪಾರಾಗಿದ್ದಾರೆ. ಘಟನೆಯಲ್ಲಿ ಯಾವುದೇ ಸಾವುನೋವು ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪತನಕ್ಕೆ ಕಾರಣವೇನು ಎಂಬುದನ್ನು ಪತ್ತೆಮಾಡಲು ತನಿಖೆ ಆರಂಭಿಸಲಾಗಿದೆ ಎಂದು ಸೇನೆ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಭಾಗಿಯಾಗಿದ್ದ, ಸೇನೆಯ ಮೂರು ವಿಭಾಗಗಳ ಬೃಹತ್ ಕೌಶಲ ಪ್ರದರ್ಶನ ‘ಭಾರತ ಶಕ್ತಿ’ ನಡೆಯುತ್ತಿರುವ ಪೋಖರಣ್‌ನಿಂದ 100 ಕಿ.ಮೀ. ದೂರದಲ್ಲಿ ಈ ಘಟನೆ ನಡೆದಿದೆ. ದೇಶೀಯವಾಗಿ ನಿರ್ಮಿಸಲಾಗಿರುವ ತೇಜಸ್ ಯುದ್ಧ ವಿಮಾನಗಳೂ ಈ ಪ್ರದರ್ಶನದ ಭಾಗವಾಗಿವೆ ಎಂದು ವಾಯುಪಡೆ ಹೇಳಿದೆ.

ಕಲ್ಲಾ ವಸತಿ ಪ್ರದೇಶದಲ್ಲಿಯ ಹಾಸ್ಟೆಲೊಂದರ ಮೇಲೆ ವಿಮಾನ ಪತನವಾಗಿದೆ. ಆ ವೇಳೆ ಹಾಸ್ಟೆಲ್‌ನಲ್ಲಿ ಯಾರೊಬ್ಬರೂ ಇರಲಿಲ್ಲ. ಸ್ಥಳದಲ್ಲಿ ದಟ್ಟ ಕಪ್ಪು ಹೊಗೆ ಕಾಣಿಸಿಕೊಂಡಿತು. ಘಟನೆಯಲ್ಲಿ ಯಾವ ಸ್ವತ್ತಿಗೂ ಹಾನಿಯಾಗಿಲ್ಲ ಎಂದು ಜೈಸಲ್ಮೇರ್‌ನ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ತೇಜಸ್ ಯುದ್ಧ ವಿಮಾನಗಳನ್ನು ಸೇನೆಗೆ ಸೇರಿಸಿ 23 ವರ್ಷಗಳು ಕಳೆದಿವೆ. ಇದೇ ಮೊದಲ ಬಾರಿಗೆ ಈ ಸರಣಿಯ ವಿಮಾನವೊಂದು ಅಪಘಾತಕ್ಕೀಡಾಗಿರುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.



ರಾಜಸ್ಥಾನದ ಪೋಖರಣ್‌ನಲ್ಲಿ ಮಂಗಳವಾರ ನಡೆದ ‘ಭಾರತ ಶಕ್ತಿ’ ಸೇನಾ ಪ್ರದರ್ಶನವನ್ನು ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತಿತತರ ಗಣ್ಯರು ವೀಕ್ಷಿಸಿದರು – ಪಿಟಿಐ ಚಿತ್ರ



ಯುದ್ಧ ವಿಮಾನ ಪತನದ ನಂತರ ಕಂಡ ಚಿತ್ರಣ – ಪಿಟಿಐ ಚಿತ್ರ

ಭಾರತದ ತ್ರಿಶಕ್ತಿಯ ಪ್ರದರ್ಶನ: ಮೋದಿ

ಪೋಖರಣ್ (ಪಿಟಿಐ): ಜೈಸಲ್ಮೇರ್‌ನಲ್ಲಿ ಯುದ್ಧ ವಿಮಾನ ಪತನವಾಗಿದ್ದರೆ, ಅತ್ತ ಪೋಖರಣ್‌ನಲ್ಲಿ ನಡೆದ ‘ಭಾರತ ಶಕ್ತಿ’ ಸೇನಾ ಬೃಹತ್ ಪ್ರದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಕ್ಷಣಾ ಸಾಮಗ್ರಿಗಳ ತಯಾರಿಕೆಯಲ್ಲಿ ದೇಶ ಸ್ವಾವಲಂಬಿ ಆಗುತ್ತಿರುವ ವಿಚಾರಕ್ಕೆ ಹೆಚ್ಚಿನ ಮಹತ್ವ ನೀಡಿದರು.

ದೇಶದ ತ್ರಿಶಕ್ತಿಯಾದ ‘ಆತ್ಮನಿರ್ಭರತೆ’, ‘ವಿಶ್ವಾಸ’ ಮತ್ತು ‘ಆತ್ಮಗೌರವ’ದ ಅನಾವರಣವು ಪೋಖರಣ್‌ನಲ್ಲಿ ಆಗುತ್ತಿದೆ. ‘ತೇಜಸ್’ ಹಗುರ ಯುದ್ಧ ಹೆಲಿಕಾಪ್ಟರ್‌ಗಳನ್ನು ನಮ್ಮ ಪೈಲಟ್‌ಗಳು ಈಗ ಬಳಸುತ್ತಿದ್ದಾರೆ’ ಎಂದು ಮೋದಿ ಸಂತಸ ವ್ಯಕ್ತಪಡಿಸಿದರು.

50 ನಿಮಿಷಗಳು ನಡೆದ ಪ್ರದರ್ಶನದಲ್ಲಿ ದೇಶೀಯವಾಗಿ ನಿರ್ಮಾಣವಾಗಿರುವ ಯುದ್ಧ ಸಾಮಗ್ರಿಗಳ ಕೌಶಲ ಮತ್ತು ಸಾಮರ್ಥ್ಯವನ್ನು ಸೇನೆಯು ತೆರೆದಿಟ್ಟಿತು.

‘ತೇಜಸ್ ಎಲ್‌ಸಿಎ’ ಮತ್ತು ‘ಎಎಲ್‌ಎಚ್ ಎಂಕೆ–4’ ಯುದ್ಧವಿಮಾನಗಳ ಅಬ್ಬರ ಆಕಾಶದಲ್ಲಿ ಪ್ರತಿಧ್ವನಿಸಿದರೆ, ಯುದ್ಧ ಟ್ಯಾಂಕ್‌ಗಳಾದ ‘ಅರ್ಜುನ್’, ‘ಕೆ–9 ವಜ್ರ’, ‘ಧನುಷ್’ ಮತ್ತು ‘ಶಾರಂಗ್’ಗಳು ತಮ್ಮ ಶಕ್ತಿ ಪ್ರದರ್ಶಿಸಿದವು.

ಪಿನಾಕಾ ಉಪಗ್ರಹ ವ್ಯವಸ್ಥೆ, ಡ್ರೋನ್ ವ್ಯವಸ್ಥೆಗಳ ಕೌಶಲ ನೋಡಿ ಜನ ಬೆರಗಾದರು.

‘ಅಗ್ನಿ 5’ ಪರೀಕ್ಷಾರ್ಥ ಪ್ರಯೋಗಕ್ಕೆ ಶ್ಲಾಘನೆ

ನವದೆಹಲಿ (ಪಿಟಿಐ): ದೇಶೀಯವಾಗಿ ಅಭಿವೃದ್ಧಿಪಡಿಸಿದ ಅಗ್ನಿ–5 ಕ್ಷಿಪಣಿಯ ಮೊದಲ ಪರೀಕ್ಷಾರ್ಥ ಪ್ರಯೋಗವನ್ನು ಸೋಮವಾರ ಯಶಸ್ವಿಯಾಗಿ ನಡೆಸಿದ ಡಿಆರ್‌ಡಿಒ ವಿಜ್ಞಾನಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಅಭಿನಂದನೆ ಸಲ್ಲಿಸಿದ್ದಾರೆ.

‘ಮಿಷನ್ ದಿವ್ಯಾಸ್ತ್ರ’ದ ಅಡಿಯಲ್ಲಿ ದೇಶೀಯವಾಗಿ ಅಭಿವೃದ್ಧಿಪಡಿಸಿದ, ಹಲವು ಗುರಿಗಳನ್ನು ಸ್ವತಂತ್ರವಾಗಿ ಭೇದಿಸಿ ಮತ್ತೆ ವಾಪಸ್ಸಾಗುವ ಕ್ಷಿಪಣಿ ವಾಹಕ ತಂತ್ರಜ್ಞಾನ (ಎಂಐಆರ್‌ವಿ) ಹೊಂದಿರುವ ಅಗ್ನಿ–5 ಕ್ಷಿಪಣಿಯ ಯಶಸ್ವೀ ಪ್ರಯೋಗ ನಡೆಸಿದ ಡಿಆರ್‌ಡಿಒ ವಿಜ್ಞಾನಿಗಳ ಬಗ್ಗೆ ಹೆಮ್ಮೆಯಾಗುತ್ತಿದೆ’ ಎಂದು ಪ್ರಧಾನಿ ಮೋದಿ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

‘ಭಾರತವು ಅಗ್ನಿ–5 ಯಶಸ್ವೀ ಪ್ರಯೋಗದ ಮೂಲಕ ಎಂಐಆರ್‌ವಿ ತಂತ್ರಜ್ಞಾನ ಹೊಂದಿದ ಕೆಲವೇ ದೇಶಗಳ ಸಾಲಿಗೆ ಸೇರಿದೆ. ನಾನು ಡಿಆರ್‌ಡಿಒ ವಿಜ್ಞಾನಿಗಳನ್ನು ಮತ್ತು ಇಡೀ ತಂಡವನ್ನು ಅಭಿನಂದಿಸುತ್ತೇನೆ’ ಎಂದು ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್ ‘ಎಕ್ಸ್’ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಶಾಜಹಾನ್ ಅರ್ಜಿ ತಿರಸ್ಕರಿಸಿದ ಹೈಕೋರ್ಟ್

ಕೋಲ್ಕತ್ತ(ಪಿಟಿಐ): ಪಡಿತರವನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದ ಹಗರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಶಾಜಹಾನ್ ಶೇಖ್ ಸಲ್ಲಿಸಿದ್ದ ಅರ್ಜಿಯನ್ನು ಕಲ್ಕತ್ತ ಹೈಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

ಇ.ಡಿ ಪರ ವಾದ ಮಂಡಿಸಿದ ವಕೀಲರು ಆರೋಪಿಗೆ ನಿರೀಕ್ಷಣಾ ಜಾಮೀನು ನೀಡುವುದಕ್ಕೆ ವಿರೋಧ ವ್ಯಕ್ತಪಡಿಸಿದರು. ನಂತರ, ನ್ಯಾಯಮೂರ್ತಿ ದೇವಾಂಗ್ಶು ಬಸಾಕ್ ಅವರಿದ್ದ ವಿಭಾಗೀಯ ನ್ಯಾಯಪೀಠ, ಶೇಖ್ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದರು.

ಪಶ್ಚಿಮ ಬಂಗಾಳದ ಆಡಳಿತಾರೂಢ ಪಕ್ಷ ಟಿಎಂಸಿಯಿಂದ ಅಮಾನತುಗೊಂಡಿರುವ ಶಾಜಹಾನ್ ಶೇಖ್, ಈ ಹಗರಣದಲ್ಲಿ ಪ್ರಮುಖ ಆರೋಪಿ. ಹಗರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ನಡೆಸುತ್ತಿದೆ.

ಹಗರಣಕ್ಕೆ ಸಂಬಂಧಿಸಿ, ಇ.ಡಿ ಈಗಾಗಲೇ ಮಾಜಿ ಸಚಿವ ಜ್ಯೋತಿಪ್ರಿಯ ಮಲಿಕ್ ಅವರನ್ನು ಬಂಧಿಸಿದೆ.



ಸನ್ಮಾನದ ಕ್ಷಣ ದೆಹಲಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಧವ ಕೌಶಿಕ್ ಕೇಂದ್ರ ಸಾಹಿತ್ಯ ಅಕಾಡೆಮಿಯ 2023ನೇ ಸಾಲಿನ ಪ್ರಶಸ್ತಿಯನ್ನು ಹಿರಿಯ ಚಿಂತಕ, ವಾಗ್ಮಿ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ನೀಡಿದರು

ಕಮಲನಾಥ್, ಗೆಹಲೋತ್ ಪುತ್ರನಿಗೆ ‘ಕೈ’ ಟಿಕೆಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ 43 ಅಭ್ಯರ್ಥಿಗಳ ಪಟ್ಟಿಯನ್ನು ಕಾಂಗ್ರೆಸ್ ಮಂಗಳವಾರ ಪ್ರಕಟಿಸಿದೆ.

ಅಸ್ಸಾಂನ ಜೋರ್ಹತ್‌ನಿಂದ ಸಂಸದ ಗೌರವ್ ಗೊಗೊಯ್, ಮಧ್ಯ ಪ್ರದೇಶದ ಛಿಂದ್ವಾಡದಿಂದ ನಕುಲ್ ನಾಥ್ ಹಾಗೂ ರಾಜಸ್ಥಾನದ ಜಲೋರ್‌ನಿಂದ ವೈಭವ್ ಗೆಹಲೋತ್ ಸ್ಪರ್ಧಿಸಲಿದ್ದಾರೆ. ಹಿರಿಯ ನಾಯಕರಾದ ಕಮಲನಾಥ್, ಅಶೋಕ ಗೆಹಲೋತ್ ಹಾಗೂ ದಿಗ್ವಿಜಯ್ ಸಿಂಗ್ ಅವರು ಸ್ಪರ್ಧಿಸುವ ಸಾಧ್ಯತೆ ದೂರವಾಗಿದೆ.

ಸಚಿನ್ ಪೈಲಟ್, ಜಿತೇಂದ್ರ ಸಿಂಗ್ ಅವರಂತಹ ಹಿರಿಯ ನಾಯಕರು ಕಣಕ್ಕಿಳಿಯುವುದು ಅನುಮಾನ. ಛತ್ತೀಸಗಢದಿಂದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಹಾಗೂ ಮಾಜಿ ಸಚಿವ ತಾಮ್ರಧ್ವಜ ಸಾಹು ಅವರು ಲೋಕಸಭಾ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಮೊದಲ ಪಟ್ಟಿಯಲ್ಲೇ ಈ ಇಬ್ಬರು ನಾಯಕರ ಹೆಸರನ್ನು ಪ್ರಕಟಿಸಲಾಗಿತ್ತು. ಇನ್ನಷ್ಟು ಹಿರಿಯ ನಾಯಕರನ್ನು ಉಮೇದುವಾರರನ್ನಾಗಿ ಮಾಡಲಾಗುತ್ತದೆ ಎಂಬ ಸುದ್ದಿಗಳು ಹಬ್ಬಿದ್ದವು. ಆದರೆ, ಹಿರಿಯ ನಾಯಕರು ಸ್ಪರ್ಧಿಸಲು ಹಿಂಜರಿದಿದ್ದಾರೆ.

ಬಿಜೆಪಿ ತ್ಯಜಿಸಿ ಕಾಂಗ್ರೆಸ್‌ಗೆ ಸೇರ್ಪಡೆಯಾದ ರಾಜಸ್ಥಾನದ ಚುರು ಸಂಸದ ರಾಹುಲ್ ಕಸ್ವಾನ್ ಅವರನ್ನು ಹುರಿಯಾಳುವನ್ನಾಗಿ ಮಾಡಲಾಗಿದೆ. ಎರಡನೇ ಪಟ್ಟಿಯಲ್ಲಿ ಮೂವರು ಹಾಲಿ ಸಂಸದರನ್ನು ಉಮೇದುವಾರರನ್ನಾಗಿ ಘೋಷಿಸಲಾಗಿದೆ.

ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿಯ ಮುಂದಿನ ಸಭೆ ಇದೇ 15ರಂದು ನಡೆಯಲಿದೆ.

ನಮಾಜ್ ಪ್ರಕರಣ: ಎಸ್‌ಐ ಅಮಾನತು ಖಂಡಿಸಿ ಪ್ರತಿಭಟನೆ

ನವದೆಹಲಿ (ಪಿಟಿಐ): ಇಂದರ್‌ಲೋಕ್ ಪ್ರದೇಶದ ರಸ್ತೆಯಲ್ಲಿ ನಮಾಜ್ ಮಾಡುತ್ತಿದ್ದ ಕೆಲವರನ್ನು ಒದ್ದ ಸಬ್ ಇನ್‌ಸ್ಪೆಕ್ಟರ್ ಅಮಾನತುಗೊಳಿಸಿರುವುದನ್ನು ಖಂಡಿಸಿ ಹಿಂದೂ ರಕ್ಷಣಾ ದಳದ ಸದಸ್ಯರು ಮಂಗಳವಾರ ದೆಹಲಿ ಪೊಲೀಸ್ ಪ್ರಧಾನ ಕಚೇರಿಯ ಹೊರಗೆ ಪ್ರತಿಭಟನೆ ನಡೆಸಿದರು.

ಬಲಪಂಥೀಯ ಸಂಘಟನೆಯ ಸದಸ್ಯರು ಪ್ರತಿಭಟನೆಯ ವೇಳೆ ಹನುಮಾನ್ ಚಾಲೀಸಾ ಮತ್ತು ಜೈ ಶ್ರೀ ರಾಮ್ ಘೋಷಣೆ ಕೂಗಿದರು. ಸುಮಾರು 50-60 ಪ್ರತಿಭಟನಕಾರರನ್ನು ಬಂಧಿಸಲಾಗಿದೆ.

ಮಾರ್ಚ್ 8ರಂದು ಉತ್ತರ ದೆಹಲಿಯ ಇಂದರ್‌ಲೋಕ್‌ನ ರಸ್ತೆಯೊಂದರಲ್ಲಿ ಸಬ್ ಇನ್‌ಸ್ಪೆಕ್ಟರ್ ಮನೋಜ್ ಕುಮಾರ್ ತೋಮರ್ ಅವರು ನಮಾಜ್ ಮಾಡುತ್ತಿದ್ದ ಕೆಲವರನ್ನು ತಳ್ಳಿ ಒದ್ದಿದ್ದರು. ಇದನ್ನು ಖಂಡಿಸಿ ನೂರಾರು ಮಂದಿ ಸ್ಥಳೀಯರು ಪೊಲೀಸರ ವಿರುದ್ಧ ಪ್ರತಿಭಟನೆ ನಡೆಸಲು ಕಾರಣವಾಯಿತು. ತಪ್ಪಿತಸ್ಥ ಅಧಿಕಾರಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿತ್ತು.

‘ರಸ್ತೆಗಳಲ್ಲಿ ನಮಾಜ್ ಮಾಡುವ ಹಕ್ಕು ಅವರಿಗೆ ಇದ್ದರೆ, ರಸ್ತೆಗಳಲ್ಲಿ ಹನುಮಾನ್ ಚಾಲೀಸಾ ಪಠಣ ಮಾಡುವ ಹಕ್ಕು ನಮಗೂ ಇದೆ. ಸಬ್ ಇನ್‌ಸ್ಪೆಕ್ಟರ್ ಅವರನ್ನು ಪುನಃ ಕರ್ತವ್ಯಕ್ಕೆ ತೆಗೆದುಕೊಳ್ಳಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆ’ ಎಂದು ಹಿಂದೂ ರಕ್ಷಣಾ ದಳದ ಮುಖಂಡರು ಹೇಳಿದ್ದಾರೆ.

ಪೊಲೀಸ್ ಪ್ರಧಾನ ಕಚೇರಿಗೆ ಹೋಗುವ ಮಾರ್ಗವನ್ನು ಪ್ರತಿಭಟನಕಾರರು ಪ್ರವೇಶಿಸದಂತೆ ಪೊಲೀಸರು ರಸ್ತೆಗೆ ಬ್ಯಾರಿಕೇಡ್ ಅಳವಡಿಸಿ ಮುಚ್ಚಿದ್ದಾರೆ.

ಮುಂಬೈ ವಿಮಾನ ನಿಲ್ದಾಣಕ್ಕೆ ಅಂತರರಾಷ್ಟ್ರೀಯ ಪ್ರಶಸ್ತಿ ಗರಿ

ಮುಂಬೈ (ಪಿಟಿಐ): ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು (ಸಿಎಸ್‌ಎಂಐಎ) 4 ಕೋಟಿಗೂ ಹೆಚ್ಚು ಪ್ರಯಾಣಿಕರಿಗೆ ಸೇವೆ ಕಲ್ಪಿಸುವ ಮೂಲಕ ಏಷ್ಯಾ ಪೆಸಿಫಿಕ್ ಪ್ರಾಂತ್ಯದಲ್ಲೇ ಅತ್ಯುತ್ತಮವಾದ ವಿಮಾನ ನಿಲ್ದಾಣ ಎಂಬ ಶ್ರೇಯಕ್ಕೆ ಭಾಜನವಾಗಿದೆ.

ಈ ಮೂಲಕ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳ ಕೌನ್ಸಿಲ್‌ನ ವಿಮಾನ ನಿಲ್ದಾಣ ಸೇವೆಯ ಗುಣಮಟ್ಟ (ಏರ್‌ಪೋರ್ಟ್ ಸರ್ವಿಸ್ ಕ್ವಾಲಿಟಿ) ಪ್ರಶಸ್ತಿಗೆ ಭಾಜನವಾಗಿದೆ.

ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಸತತ ಏಳನೇ ವರ್ಷವೂ ಪ್ರತಿಷ್ಠಿತವಾದ ಅತ್ಯುತ್ತಮ ವಿಮಾನ ನಿಲ್ದಾಣ ಎಂಬ ಹೆಗ್ಗಳಿಗೆ ಪಾತ್ರವಾಗಿದೆ ಎಂದು ಸಿಎಸ್‌ಎಂಐಎ ಬುಧವಾರ ಹೇಳಿಕೆ ಬಿಡುಗಡೆ ಮಾಡಿದೆ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಕೌನ್ಸಿಲ್‌ನ (ಎಸಿಐ) ಪ್ರಧಾನ ನಿರ್ದೇಶಕ ಲೂಯಿಸ್ ಫಿಲಿಪ್ ಡಿ ಒಲಿವೀರಾ ಅವರು, ‘ಈ ಪ್ರಶಸ್ತಿಯು ವಿಮಾನ ನಿಲ್ದಾಣದ ಇಡೀ ತಂಡದ ಹೊಸ ಪರಿಕಲ್ಪನೆ ಮತ್ತು ಸಮರ್ಪಣೆ ಭಾವವನ್ನು ಗುರುತಿಸಲಿದೆ. ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಭಿನಂದನೆಗಳು’ ಎಂದು ತಿಳಿಸಿದ್ದಾರೆ.

ವಾಹನಗಳಿಗೆ ಬೆಂಕಿ: 81 ಮಂದಿ ಬಂಧನ

ಒಂದನೇ ಪುಟದಿಂದ...

‘ಪ್ರತಿಭಟನೆ ನಿಯಂತ್ರಿಸಲು ಮುಂದಾದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶಕುಮಾರ್ ಅವರ ಕೈಗೆ ಗಾಯವಾಗಿದೆ. ಅವರ ತಲೆಗೆ ದೊಣ್ಣೆಯಿಂದ ಕಿಡಿಗೇಡಿಗಳು ಹೊಡೆದಿದ್ದರು. ಹೆಲ್ಮೆಟ್ ಹಾಕಿದ್ದರಿಂದ ಎಸ್ಪಿ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ವರ್ತಕರ ಅಂಗಡಿ ಧ್ವಂಸ:

‘ಗಲಾಟೆ ವೇಳೆ ಪೊಲೀಸರನ್ನು ಬೆನ್ನಟ್ಟಿ ಬಂದ ಕಿಡಿಗೇಡಿಗಳು, ಅಂಗಡಿಗೆ ನುಗ್ಗಿ ಪೀಠೋಪಕರಣ ಧ್ವಂಸಗೊಳಿಸಿ, ₹7 ಲಕ್ಷ ದೋಚಿದ್ದಾರೆ. ನಮ್ಮ ಬ್ಯಾಡಗಿ ಸ್ಥಳೀಯ ರೈತರು ಯಾರೂ ಭಾಗಿಯಾಗಿಲ್ಲ. ಇದೆಲ್ಲ ಆಂಧ್ರ ಪ್ರದೇಶದಿಂದ ಬಂದವರ ಕೃತ್ಯ. ಬ್ಯಾಡಗಿ ಮಾರುಕಟ್ಟೆ ಹೆಸರು ಹಾಳು ಮಾಡಲು ಉದ್ದೇಶಪೂರ್ವಕವಾಗಿ ಗಲಾಟೆ ಮಾಡಿದ್ದಾರೆ’ ಎಂದು ವರ್ತಕ ಜಗದೀಶ ದೇವಿಹೊಸೂರು ಅಸಮಾಧಾನ ಹೊರಹಾಕಿದರು.

ರಾಜೀನಾಮೆ ಇಂಗಿತ:

ಬ್ಯಾಡಗಿ ಪಟ್ಟಣದ ಸಿದ್ಧೇಶ್ವರ ಕಲ್ಯಾಣ ಮಂಟಪದಲ್ಲಿ ಮಂಗಳವಾರ ನಡೆದ ಅಧಿಕಾರಿಗಳ ಮತ್ತು ವರ್ತಕರ ಸಭೆಯಲ್ಲಿ ವರ್ತಕರ ಸಂಘದ ಅಧ್ಯಕ್ಷ ಸುರೇಶಗೌಡ ಪಾಟೀಲ ಮಾತನಾಡಿ, ‘40 ವರ್ಷಗಳ ಇತಿಹಾಸದಲ್ಲಿ ಇಂಥ ದುರ್ಘಟನೆ ನಡೆದಿರಲಿಲ್ಲ. ನನ್ನ ಅವಧಿಯಲ್ಲಿ ಈ ರೀತಿ ಆಗಬಾರದಿತ್ತು. ಮನಸ್ಸಿಗೆ ನೋವಾಗಿದ್ದು, ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವೆ’ ಎಂದರು. ಇದಕ್ಕೆ ವರ್ತಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.



ಬ್ಯಾಡಗಿ ಎಪಿಎಂಸಿ ಮಾರುಕಟ್ಟೆಯಲ್ಲಿ ಮಂಗಳವಾರ ಎಂದಿನಂತೆ ಮೆಣಸಿನಕಾಯಿ ವಹಿವಾಟು ನಡೆಯಿತು

ಮೆಣಸಿನಕಾಯಿ ಗುಣಮಟ್ಟ ಕಡಿಮೆ ಆಗಿರುವ ಕಾರಣ ದರ ಕುಸಿದಿದೆ. ಗಲಾಟೆಯು ಎಪಿಎಂಸಿಗೆ ಕಪ್ಪುಚುಕ್ಕೆ. ತಪ್ಪಿತಸ್ಥರಿಗೆ ಶಿಕ್ಷೆ ಆಗಲಿದೆ
ಬಸವರಾಜ ಶಿವಣ್ಣನವರ, ಶಾಸಕ, ಬ್ಯಾಡಗಿ

ವಾರದಲ್ಲಿ 2 ದಿನ ಟೆಂಡರ್‌ಗೆ ಮನವಿ ಮಾಡಿರುವೆ. ಮಾರುಕಟ್ಟೆಗೆ ಕಪ್ಪುಚುಕ್ಕೆ ಇಡುವುದನ್ನು ಕ್ಷಮಿಸಲಾಗದು.
ರಘುನಂದನಮೂರ್ತಿ, ಜಿಲ್ಲಾಧಿಕಾರಿ, ಹಾವೇರಿ

ಕಣ್ಣೀರಿಟ್ಟ ಉಪಾಧ್ಯಕ್ಷ

‘ಸೋಮವಾರದ ಟೆಂಡರ್‌ನಲ್ಲಿ ಮೆಣಸಿನಕಾಯಿ ದರ ಕುಸಿದಿಲ್ಲ. ಮಾರುಕಟ್ಟೆಗೆ ಕೋಟಿ ಚೀಲ ಬರಲಿ. ಖರೀದಿಸುವ ಸಾಮರ್ಥ್ಯವಿದೆ. ಬ್ಯಾಡಗಿ ಮಾರುಕಟ್ಟೆಯ ಹೆಸರು ಹಾಳು ಮಾಡಲು ಈ ಕೃತ್ಯ ಎಸಗಿದ್ದಾರೆ. ರಕ್ಷಣೆ ನೀಡಲು ಬಂದ ಪೊಲೀಸರನ್ನೇ ಹೊಡೆದಿದ್ದಾರೆ. ಇದರ ಹಿಂದೆ ಪಿತೂರಿ ಇದೆ’ ಎಂದು ವರ್ತಕರ ಸಂಘದ ಉಪಾಧ್ಯಕ್ಷ ಎ.ಆರ್. ನದಾಫ್ ಮಂಗಳವಾರ ಸಭೆಯಲ್ಲಿ ಕಣ್ಣೀರಿಟ್ಟರು.

ಸಹಜ ಸ್ಥಿತಿಯತ್ತ ಎಪಿಎಂಸಿ

ಬ್ಯಾಡಗಿ ಎಪಿಎಂಸಿ ಮಾರುಕಟ್ಟೆ ಮಂಗಳವಾರ ಸಹಜ ಸ್ಥಿತಿಗೆ ಮರಳಿತು. ಎಂದಿನಂತೆ ವಹಿವಾಟು ನಡೆದವು. ಪೊಲೀಸರ ಬಿಗಿ ಭದ್ರತೆ ಮುಂದುವರಿದಿದೆ.

ಬ್ಯಾಡಗಿ ಎಪಿಎಂಸಿಯಲ್ಲಿ ಮಂಗಳವಾರ 46,111 ಮೆಣಸಿನಕಾಯಿ ಚೀಲಗಳು ಆವಕವಾಗಿದ್ದವು. 2,445 ಲಾಟ್‌ಗಳಿದ್ದು, 184 ಖರೀದಿದಾರರು ಭಾಗವಹಿಸಿದ್ದರು. ಕಡ್ಡಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹28,509, ಡಬ್ಬಿ ಮೆಣಸಿನಕಾಯಿ ₹34,289 ಹಾಗೂ ಗುಂಟೂರ ಮೆಣಸಿನಕಾಯಿ ₹12,159 ಸರಾಸರಿ ದರದಲ್ಲಿ ಮಾರಾಟವಾದವು.

ರಾಷ್ಟ್ರಪತಿಗೆ ಎಸ್‌ಸಿಬಿಎ ಪತ್ರ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ ನೀಡಿರುವ ತೀರ್ಪನ್ನು ಮರುಪರಿಶೀಲಿಸುವಂತೆ ಸುಪ್ರೀಂ ಕೋರ್ಟ್‌ಗೆ ಸೂಚಿಸಬೇಕು ಎಂದು ಕೋರಿ ಸುಪ್ರೀಂಕೋರ್ಟ್ ವಕೀಲರ ಸಂಘದ (ಎಸ್‌ಸಿಬಿಎ) ಅಧ್ಯಕ್ಷ ಆದಿಶ್ ಸಿ. ಅಗರವಾಲ್, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದಾರೆ.

ವಿವಿಧ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿದ ಕಾರ್ಪೊರೇಟ್ ಸಂಸ್ಥೆಗಳು, ವ್ಯಕ್ತಿಯ ಹೆಸರನ್ನು ಬಹಿರಂಗಪಡಿಸುವುದರಿಂದ ಅವರು ಬಲಿಪಶುಗಳಾಗುವ ಸಾಧ್ಯತೆಯಿದೆ ಎಂದು ಪತ್ರದಲ್ಲಿ ಹೇಳಿದ್ದಾರೆ.

‘ದೇಣಿಗೆ ನೀಡಿದವರ ಹೆಸರು ಮತ್ತು ಅವರು ವಿವಿಧ ರಾಜಕೀಯ ಪಕ್ಷಗಳಿಗೆ ನೀಡಿದ ಮೊತ್ತವನ್ನು ಬಹಿರಂಗಪಡಿಸಿದರೆ, ಅವರಿಂದ ಕಡಿಮೆ ದೇಣಿಗೆ ಪಡೆದ ಪಕ್ಷಗಳು ಕಿರುಕುಳ ನೀಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ದೇಣಿಗೆ ಪಡೆಯುವಾಗ ಹೆಸರು ಬಹಿರಂಗಪಡಿಸುವುದಿಲ್ಲ ಎಂಬ ಮಾತು ಕೊಡಲಾಗಿತ್ತು. ಹೆಸರು ಬಹಿರಂಗಪಡಿಸಿದರೆ ವಚನ ಭಂಗ ಮಾಡಿದಂತೆ ಆಗುತ್ತದೆ’ ಎಂದಿದ್ದಾರೆ.

ಇಡೀ ವಾದ-ಪ್ರತಿವಾದ ಪ್ರಕ್ರಿಯೆಯನ್ನು ಮತ್ತೊಮ್ಮೆ ಆಲಿಸುವಂತೆ ಸುಪ್ರೀಂ ಕೋರ್ಟ್‌ಗೆ ಸೂಚಿಸಬೇಕು. ಹಾಗಾದಲ್ಲಿ ‘ದೇಶದ ಸಂಸತ್ತು, ರಾಜಕೀಯ ಪಕ್ಷಗಳು, ಕಾರ್ಪೊರೇಟ್ ಸಂಸ್ಥೆಗಳು ಮತ್ತು ಸಾಮಾನ್ಯ ಪ್ರಜೆಗಳಿಗೆ’ ಪರಿಪೂರ್ಣ ನ್ಯಾಯ ದೊರೆತಂತೆ ಆಗಲಿದೆ ಎಂದು ತಿಳಿಸಿದ್ದಾರೆ.

ಚುನಾವಣಾ ಬಾಂಡ್: ಆಯೋಗಕ್ಕೆ ವಿವರ ಸಲ್ಲಿಸಿದ ಎಸ್‌ಬಿಐ

ಒಂದನೇ ಪುಟದಿಂದ...

ಏಪ್ರಿಲ್ 12, 2019ರಿಂದ ನಗದೀಕರಣಗೊಂಡಿರುವ ಬಾಂಡ್‌ಗಳ ವಿವರಗಳನ್ನು ಎಸ್‌ಬಿಐ ಆಯೋಗಕ್ಕೆ ಸಲ್ಲಿಸಿದೆ. ಯೋಜನೆ ಆರಂಭದಿಂದ ಇಲ್ಲಿಯವರೆಗೆ ಎಸ್‌ಬಿಐ ₹ 16,518.10 ಕೋಟಿ ಮೊತ್ತದ ಬಾಂಡ್‌ಗಳನ್ನು ವಿತರಿಸಿದೆ ಎಂದು ಮೂಲಗಳು ತಿಳಿಸಿವೆ.

ಸುಪ್ರೀಂ ಕೋರ್ಟ್‌ನ ಆದೇಶದ ಅನುಸಾರ, ಚುನಾವಣಾ ಆಯೋಗವು ಈಗ ಈ ಎಲ್ಲ ವಿವರಗಳನ್ನು ಮಾರ್ಚ್ 15ರ ಸಂಜೆ 5 ಗಂಟೆಯೊಳಗೆ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿದೆ.

ಸುಪ್ರಿಂ ಕೋರ್ಟ್ ಆದೇಶದಂತೆ ಎಸ್‌ಬಿಐ ಬಾಂಡ್‌ಗಳ ಎಲ್ಲ ವಿವರಗಳನ್ನು ಆಯೋಗದ ಕಚೇರಿಗೆ ಸಲ್ಲಿಸಿದೆ ಎಂದು ಆಯೋಗವು ‘ಎಕ್ಸ್’ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದೆ.

ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲು ಬಳಸಲಾಗುತ್ತಿದ್ದ ಚುನಾವಣಾ ಬಾಂಡ್‌ಗಳು ಅಸಾಂವಿಧಾನಿಕ ಎಂದು ಘೋಷಿಸಿ ಸುಪ್ರೀಂ ಕೋರ್ಟ್ ಫೆಬ್ರುವರಿ 15ರಂದು ತೀರ್ಪು ನೀಡಿತ್ತು. ಅಲ್ಲದೆ, ಬಾಂಡ್‌ಗಳ ವಿತರಣೆಯನ್ನು ಕೂಡ ಸುಪ್ರೀಂ ಕೋರ್ಟ್ ರದ್ದುಪಡಿಸಿ ತೀರ್ಪು ನೀಡಿತ್ತು.

ಮುಂಬೈ ಧಾರಣೆ

ಶೇಂಗಾ

12-03-2024

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600


ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1490)
ಒಂದು ವಾರದ ಡೆಲಿವರಿ	1495 (1485)
ಸೋಯಾ ಕಚ್ಚಾ	965 (960)
ಪಾಮ್ ವಾರದ ಡೆಲಿವರಿ	930 (923)
ಸೂರ್ಯಕಾಂತಿ ಎಣ್ಣೆ ಕಚ್ಚಾ	895 (885)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹65,100 (65,300)
ಬೆಳ್ಳಿ ಕೆ.ಜಿ ₹72,500 (72,550)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು 165



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,332
ಇಂದಿನ ಅಂತ್ಯ	22,335
▲	3
ದಿನದ ಗರಿಷ್ಠ	22,452

ವಿನಿಮಯ ದರ

$ ಡಾಲರ್	82.80
£ ಪೌಂಡ್	105.86
€ ಯೂರೊ	90.47
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹465
12 ಕ್ಕೆ	₹65
ಮೈಸೂರು	
100ಕ್ಕೆ	₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1480)
ಸೋಯಾ (ರಿಫೈನ್ಡ್)	₹985 (975)
ಸೂರ್ಯಕಾಂತಿ (ರಿಫೈನ್ಡ್)	₹965 (950)
ಪಾಮೋಲಿನ್	₹932 (925)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹255-445
ದ್ವಿತಳಿ (ಬಿ.ವಿ)	₹280-553

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹171
ಆರ್‌ಎಸ್‌ಎಸ್-5	₹163
ಗುಡ್ ಲಾಟ್	₹153

(ಪ್ರತಿ ಕೆ.ಜಿಗೆ)

ಆಹಾರ ಪದಾರ್ಥಗಳ ದರ ತುಸು ಏರಿಕೆ: ಸಾಂಖ್ಯಿಕ ಕಚೇರಿ ವರದಿ ಬಿಡುಗಡೆ

ಚಿಲ್ಲರೆ ಹಣದುಬ್ಬರ 4 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ಚಿಲ್ಲರೆ ಹಣದುಬ್ಬರವು ಫೆಬ್ರುವರಿಯಲ್ಲಿ ನಾಲ್ಕು ತಿಂಗಳ ಕನಿಷ್ಠ ಮಟ್ಟವಾದ ಶೇ 5.09ಕ್ಕೆ ಇಳಿಕೆಯಾಗಿದೆ.

ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಹಣದುಬ್ಬರವು ಜನವರಿಯಲ್ಲಿ ಶೇ5.1ರಷ್ಟು ದಾಖಲಾಗಿತ್ತು. ಇದಕ್ಕೆ ಹೋಲಿಸಿದರೆ ಹೆಚ್ಚಿನ ಬದಲಾವಣೆಯಾಗಿಲ್ಲ. ಆದರೆ, ಆಹಾರ ಪದಾರ್ಥಗಳ ಬೆಲೆಯಲ್ಲಿ ತುಸು ಏರಿಕೆಯಾಗಿದೆ.

ಜನವರಿಯಲ್ಲಿ ಶೇ8.3ರಷ್ಟಿದ್ದ ಆಹಾರ ಪದಾರ್ಥಗಳ ದರವು ಫೆಬ್ರುವರಿಯಲ್ಲಿ ಶೇ 8.66ರಷ್ಟು ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಮಂಗಳವಾರ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

ತರಕಾರಿಗಳು, ಹಣ್ಣುಗಳು, ಖಾದ್ಯ ತೈಲ ಮತ್ತು ಕೊಬ್ಬು, ಬೇಳೆಕಾಳು ಧಾರಣೆಯು ಗಣನೀಯವಾಗಿ ತಗ್ಗಿದೆ. ಆದರೆ ಧಾನ್ಯಗಳು, ಮಾಂಸ, ಮೀನು, ಹಾಲು ಹಾಗೂ ಅದರ ಉತ್ಪನ್ನಗಳ ಬೆಲೆ ಏರಿಕೆಯಾಗಿದೆ ಎಂದು ಹೇಳಿದೆ.

ಚಿಲ್ಲರೆ ಹಣದುಬ್ಬರವನ್ನು ನಿರ್ಧರಿಸುವಲ್ಲಿ ಆಹಾರ ಪದಾರ್ಥಗಳ ಪಾಲು ಶೇ 50ರಷ್ಟಿದೆ.

ದೇಶದ ಗ್ರಾಮೀಣ ಪ್ರದೇಶದಲ್ಲಿ ಸರಾಸರಿ ಚಿಲ್ಲರೆ ಹಣದುಬ್ಬರವು ಶೇ 5.34ರಷ್ಟಿದೆ. ಇದಕ್ಕೆ ಹೋಲಿಸಿದರೆ ನಗರ ಪ್ರದೇಶದಲ್ಲಿ ಶೇ4.78ರಷ್ಟು ದಾಖಲಾಗಿದೆ.

ಪ್ರಮುಖ ರಾಜ್ಯಗಳಲ್ಲಿ ಚಿಲ್ಲರೆ ಹಣದುಬ್ಬರ (ಫೆಬ್ರುವರಿ) (ಶೇಕಡಾವಾರು)

ರಾಜ್ಯ	ಶೇ
ಒಡಿಶಾ	7.55
ತೆಲಂಗಾಣ	6.71
ಹರಿಯಾಣ	6.28
ಅಸ್ಸಾಂ	6.02
ಜಾರ್ಖಂಡ್	5.85
ಕರ್ನಾಟಕ	5.74
ಆಂಧ್ರಪ್ರದೇಶ	5.66
ಗುಜರಾತ್	5.39
ತಮಿಳುನಾಡು	4.84
ಮಹಾರಾಷ್ಟ್ರ	4.69
ಕೇರಳ	4.64

ರಾಜ್ಯವಾರು ಪಟ್ಟಿಯಲ್ಲಿ ಒಡಿಶಾದಲ್ಲಿ ಶೇ7.55ರಷ್ಟು ದಾಖಲಾಗಿದೆ. ಕೇಂದ್ರಾಡಳಿತ ಪ್ರದೇಶವಾದ ನವದೆಹಲಿಯಲ್ಲಿ ಶೇ 2.42ರಷ್ಟು ಕಡಿಮೆ ದಾಖಲಾಗಿದೆ. ಕರ್ನಾಟಕದಲ್ಲಿ ಶೇ5.74ರಷ್ಟು ದಾಖಲಾಗಿದೆ.

ಹಣದುಬ್ಬರವನ್ನು ಶೇ4ರ ಮಿತಿಯಲ್ಲಿಯೇ ಕಾಯ್ದುಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ ಪ್ರಯತ್ನಿಸುತ್ತಿದೆ.

2023–24ನೇ ಆರ್ಥಿಕ ವರ್ಷದಲ್ಲಿ ದೇಶದ ಚಿಲ್ಲರೆ ಹಣದುಬ್ಬರವು ಶೇ5.4ರಷ್ಟು ದಾಖಲಾಗಲಿದೆ. ಜನವರಿಯಿಂದ ಮಾರ್ಚ್‌ವರೆಗಿನ ತ್ರೈಮಾಸಿಕದ ಅವಧಿಯಲ್ಲಿ ಶೇ5ರಷ್ಟು ದಾಖಲಾಗಲಿದೆ ಎಂದು ಆರ್‌ಬಿಐ ಕಳೆದ ತಿಂಗಳು ಅಂದಾಜಿಸಿತ್ತು.

‘ಫೆಬ್ರುವರಿಯಲ್ಲಿ ಆಹಾರ ಪದಾರ್ಥಗಳನ್ನು ಹೊರತುಪಡಿಸಿದರೆ ಇತರೆ ಸರಕುಗಳ ಬೆಲೆ ಇಳಿಕೆಯಾಗಿದೆ. ಆಹಾರೇತರ ಪದಾರ್ಥಗಳ ದರ ಇಳಿಕೆಯಾಗಿರುವುದು ಸಮಾಧಾನ ತಂದಿದೆ’ ಎಂದು ಐಸಿಎಆರ್‌ನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ತಗ್ಗಿದ ಕೈಗಾರಿಕಾ ಉತ್ಪಾದನೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಜನವರಿಯಲ್ಲಿ ಶೇ 3.8ರಷ್ಟು ಕಡಿಮೆ ದಾಖಲಾಗಿದೆ.

ತಯಾರಿಕೆ, ಗಣಿ ಮತ್ತು ಇಂಧನ ವಲಯದ ಬೆಳವಣಿಗೆಯು ಇಳಿಕೆ ಆಗಿರುವುದು ಕೈಗಾರಿಕಾ ವಲಯದ ಒಟ್ಟಾರೆ ಬೆಳವಣಿಗೆ ಮೇಲೆ ಪರಿಣಾಮ ಬೀರಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ವರದಿ ತಿಳಿಸಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು 2023ರ ಜನವರಿಯಲ್ಲಿ ಶೇ 5.8ರಷ್ಟು ದಾಖಲಾಗಿತ್ತು. ಅದೇ ವರ್ಷದ ನವೆಂಬರ್‌ನಲ್ಲಿ ಶೇ 2.4ರಷ್ಟು ಹಾಗೂ ಡಿಸೆಂಬರ್‌ನಲ್ಲಿ ಶೇ 4.2ರಷ್ಟಿತ್ತು.

2023–24ನೇ ಹಣಕಾಸು ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ ಕೈಗಾರಿಕಾ ಉತ್ಪಾದನೆಯು ಶೇ 5.9ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಶೇ 5.5ರಷ್ಟು ಬೆಳವಣಿಗೆ ಕಂಡಿತ್ತು.

ಕಳೆದ ವರ್ಷದ ಜನವರಿಯಲ್ಲಿ ಶೇ 4.5ರಷ್ಟಿದ್ದ ತಯಾರಿಕಾ ವಲಯದ ಬೆಳವಣಿಗೆಯು ಈ ಜನವರಿಯಲ್ಲಿ ಶೇ 3.2ರಷ್ಟು ಇಳಿಕೆಯಾಗಿದೆ. ಇಂಧನ ಉತ್ಪಾದನೆಯು ಶೇ 12.7ರಿಂದ ಶೇ 5.6ಕ್ಕೆ ಇಳಿಕೆ ಕಂಡಿದೆ.

ಗಣಿ ಉತ್ಪಾದನೆಯು ಶೇ 9ರಿಂದ ಶೇ 5.9ಕ್ಕೆ ತಗ್ಗಿದೆ. ಬಂಡವಾಳ ಸರಕುಗಳ ಉತ್ಪಾದನೆಯು ಶೇ 10.5ರಿಂದ ಶೇ 4.1ಕ್ಕೆ ಇಳಿದಿದೆ. ಆದರೆ, ಗ್ರಾಹಕರ ಬಳಕೆಯ ವಸ್ತುಗಳ ಉತ್ಪಾದನೆಯು ಶೇ 8.2ರಿಂದ ಶೇ 10.9ಕ್ಕೆ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

ಪ್ರಯಾಣಿಕ ವಾಹನಗಳ ಮಾರಾಟ ಶೇ 11ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಫೆಬ್ರುವರಿಯಲ್ಲಿ ಶೇ 11ರಷ್ಟು ಏರಿಕೆಯಾಗಿದೆ. ಒಟ್ಟು 3,70,786 ವಾಹನಗಳು ಮಾರಾಟವಾಗಿವೆ.

ಕಳೆದ ವರ್ಷ ಇದೇ ಅವಧಿಯಲ್ಲಿ 3,34,790 ವಾಹನಗಳು ಮಾರಾಟವಾಗಿದ್ದವು ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್‌ಐಎಎಂ) ತಿಳಿಸಿದೆ.

1.91 ಲಕ್ಷ ಯುಟಿಲಿಟಿ ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 1.38 ಲಕ್ಷ ವಾಹನಗಳು ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಶೇ 38ರಷ್ಟು ಏರಿಕೆ ಆಗಿದೆ.

ಪ್ರಯಾಣಿಕ ಕಾರುಗಳ ಮಾರಾಟದಲ್ಲಿ ಶೇ 18ರಷ್ಟು ಇಳಿಕೆಯಾಗಿದ್ದು, ಒಟ್ಟು 1.15 ಲಕ್ಷ ಮಾರಾಟವಾಗಿವೆ. ವ್ಯಾನ್‌ಗಳ ಮಾರಾಟ 11,489ರಿಂದ 12,147ಕ್ಕೆ ಏರಿಕೆ ಆಗಿದೆ ಎಂದು ಎಸ್‌ಐಎಎಂ ತಿಳಿಸಿದೆ.

ಮತ್ತೆ ಕುಸಿದ ಎಸ್‌ಬಿಐ ಷೇರು

ಮುಂಬೈ (ಪಿಟಿಐ): ಚುನಾವಣಾ ಬಾಂಡ್ ಬಗ್ಗೆ ಮಾಹಿತಿ ಹಂಚಿಕೊಳ್ಳುವಂತೆ ಸುಪ್ರೀಂ ಕೋರ್ಟ್ ತಾಕೀತು ಮಾಡಿದ ಬೆನ್ನಲ್ಲೇ ಸತತ ಎರಡನೇ ದಿನವಾದ ಮಂಗಳವಾರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಷೇರಿನ ಮೌಲ್ಯ ಶೇ 1.90ರಷ್ಟು ಇಳಿಕೆ ಆಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್‌ನಲ್ಲಿ ಶೇ 1.82ರಷ್ಟು ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿಯಲ್ಲಿ ಶೇ 1.90ರಷ್ಟು ಕುಸಿದಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ₹759.40 ಮತ್ತು ₹759ಕ್ಕೆ ಮುಟ್ಟಿದೆ. ಸೋಮವಾರ ಷೇರಿನ ಮೌಲ್ಯ ಶೇ 2ರಷ್ಟು ಕುಸಿದಿತ್ತು.

ಸೂಚ್ಯಂಕಗಳು ಚೇತರಿಕೆ: ಎಚ್‌ಡಿಎಫ್‌ಸಿ ಬ್ಯಾಂಕ್, ಟಿಸಿಎಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿ ಹೆಚ್ಚಿದ್ದರಿಂದ ಷೇರುಪೇಟೆ ಸೂಚ್ಯಂಕಗಳು ಚೇತರಿಕೆ ಕಂಡಿವೆ.

ಸೆನ್ಸೆಕ್ಸ್ 165 ಅಂಶ ಹೆಚ್ಚಳವಾಗಿ 73,667ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 501 ಅಂಶ ಏರಿಕೆಯಾಗಿತ್ತು. ನಿಫ್ಟಿ 3 ಅಂಶ ಏರಿಕೆಯಾಗಿ, 22,335ಕ್ಕೆ ಅಂತ್ಯಗೊಂಡಿತು.

ಸುಳ್ಳು ಮಾಹಿತಿ ತಡೆ: ಇಸಿಐ ಜತೆ ಕೈಜೋಡಿಸಿದ ಗೂಗಲ್

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಸುಳ್ಳು ಮಾಹಿತಿಗಳನ್ನು ಹರಡುವುದಕ್ಕೆ ಕಡಿವಾಣ ಹಾಕಲು ಕೇಂದ್ರ ಚುನಾವಣಾ ಆಯೋಗದ (ಇಸಿಐ) ಜೊತೆಗೆ ಕೈಜೋಡಿಸಲಾಗುವುದು ಎಂದು ಗೂಗಲ್ ಇಂಡಿಯಾ ತಿಳಿಸಿದೆ.



ದೇಶದಲ್ಲಿ ನಡೆದಿರುವ ವಿವಿಧ ಚುನಾವಣೆಗಳಿಗೆ ಸಂಬಂಧಿಸಿದ ಅಧಿಕೃತ ಮಾಹಿತಿ ಹಾಗೂ ಕೃತಕ ಬುದ್ಧಿಮತ್ತೆ ಆಧಾರಿತ ದತ್ತಾಂಶದ ಬಗ್ಗೆ ಬಳಕೆದಾರರಿಗೆ ಸುಲಭವಾಗಿ ಅರ್ಥವಾಗುವಂತೆ ಪ್ರಕಟಿಸಲಾಗುವುದು ಎಂದು ಹೇಳಿದೆ.

‘ಮತದಾರರ ನೋಂದಣಿ, ಮತ ಚಲಾವಣೆ ಸೇರಿದಂತೆ ಇತರೆ ಮಾಹಿತಿ ಬಗ್ಗೆ ಮತದಾರರು ಗೂಗಲ್‌ನಲ್ಲಿ ಹುಡುಕಾಟ ನಡೆಸುತ್ತಾರೆ. ಆಯೋಗದ ಸಹಭಾಗಿತ್ವದಡಿ ಈ ಮಾಹಿತಿಯನ್ನು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಪ್ರಕಟಿಸಲಾಗುವುದು’ ಎಂದು ತಿಳಿಸಿದೆ.

ಬಹಳಷ್ಟು ಜನರು ಕೃತಕ ಬುದ್ಧಿಮತ್ತೆ (ಎ.ಐ) ಬಳಸಿಕೊಂಡು ಮಾಹಿತಿಗಳನ್ನು ಸೃಷ್ಟಿಸುತ್ತಾರೆ. ಈ ಬಗ್ಗೆ ಬಳಕೆದಾರರಿಗೆ ಸ್ಪಷ್ಟವಾದ ತಿಳಿವಳಿಕೆ ನೀಡುವ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ ಎಂದು ಹೇಳಿದೆ.

ಕೆಲವರು ಜಾಹೀರಾತುಗಳ ಸೃಷ್ಟಿಗೂ ಎ.ಐ ತಂತ್ರಜ್ಞಾನ ಬಳಸಿಕೊಳ್ಳುತ್ತಾರೆ. ಗೂಗಲ್ ಬಳಕೆದಾರರಿಗೆ ಅದು ಸುಲಭವಾಗಿ ಅರ್ಥವಾಗುವುದಿಲ್ಲ. ಈ ಬಗ್ಗೆಯೂ ಅರಿವು ಮೂಡಿಸಲಾಗುತ್ತದೆ. ಜನರನ್ನು ದಿಕ್ಕುತಪ್ಪಿಸುವಂತಹ ಜಾಹೀರಾತುಗಳಿಗೆ ಕಂಪನಿಯು ಪ್ರೋತ್ಸಾಹ ನೀಡುವುದಿಲ್ಲ. ಡೀಪ್‌ಫೇಕ್ ವಿಡಿಯೊ ಗಳಿಗೆ ನಿರ್ಬಂಧ ಹೇರಲಾಗಿದೆ ಎಂದು ತಿಳಿಸಿದೆ. ಯೂಟ್ಯೂಬ್‌ನಲ್ಲಿ ವಿಡಿಯೊಗಳ ರಚನೆಗೆ ಕೃತಕ ಬುದ್ಧಿಮತ್ತೆ ಸಾಧನಗಳನ್ನು ಬಳಸಲು ‘ಡ್ರೀಮ್ ಸ್ಕ್ರೀನ್’ ಯೋಜನೆ ರೂಪಿಸಲಾಗಿದೆ. ಈ ವಿಡಿಯೊಗಳು ನೈಜವಾಗಿವೆಯೇ ಅಥವಾ ಕೃತಕವಾಗಿ ತಯಾರಿಸಲಾಗಿದೆಯೇ ಎಂಬ ಬಗ್ಗೆ ಪ್ರದರ್ಶನದ ವೇಳೆ ಮಾಹಿತಿ ಪ್ರಕಟಿಸಲಾಗುತ್ತದೆ. ಇದರಿಂದ ಬಳಕೆದಾರರು ವಿಡಿಯೊಗಳ ಸತ್ಯಾಸತ್ಯತೆಯನ್ನು ಅರಿಯಲು ನೆರವಾಗಲಿದೆ ಎಂದು ಹೇಳಿದೆ.

₹36 ಸಾವಿರ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಜಿಲ್ಲೆಯಲ್ಲಿ ಒಟ್ಟು ₹36 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಲು ಸೌರ ಮತ್ತು ಪವನ ವಿದ್ಯುತ್ ಕ್ಷೇತ್ರದ ಎರಡು ಕಂಪನಿಗಳು ಒಲವು ತೋರಿವೆ.

ಸುಜ್ಲಾನ್ ಸಮೂಹದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜೆ.ಪಿ. ಚಲಸಾನಿ ಹಾಗೂ ರೆನೈಸಾನ್ಸ್ ಸೋಲಾರ್ ಅಂಡ್ ಎಲೆಕ್ಟ್ರಾನಿಕ್ಸ್ ಮೆಟಿರಿಯಲ್ಸ್ ಕಂಪನಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮಿಲಿಂದ್ ಕುಲಕರ್ಣಿ ಅವರ ಜತೆ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಂಗಳವಾರ ಈ ಕುರಿತು ಮಹತ್ವದ ಸಮಾಲೋಚನೆ ನಡೆಸಿದರು.

ಸಭೆ ಬಳಿಕ ಮಾತನಾಡಿದ ಅವರು, ‘ಸುಜ್ಲಾನ್ ಕಂಪನಿಯು ಪವನ ವಿದ್ಯುತ್ ಕ್ಷೇತ್ರಕ್ಕೆ ಅಗತ್ಯವಿರುವ ಎತ್ತರದ ಕಂಬ ಮತ್ತು ಬೃಹತ್ ಬ್ಲೇಡುಗಳ ಉತ್ಪಾದನೆಗೆ ಹೆಸರಾಗಿದೆ. ವಿಜಯಪುರದಲ್ಲಿ ಹಂತ ಹಂತವಾಗಿ ₹30 ಸಾವಿರ ಕೋಟಿ ಹೂಡಿಕೆ ಮಾಡಲು ಮುಂದೆ ಬಂದಿದೆ’ ಎಂದರು.

ರೆನೈಸಾನ್ಸ್‌ನಿಂದ ₹6,000 ಸಾವಿರ ಕೋಟಿ: ಸೌರ ಫಲಕಗಳ (ಸೋಲಾರ್ ಪ್ಯಾನೆಲ್ಸ್) ತಯಾರಿಕೆಗೆ ಬೇಕಾಗುವ ಬಿಡಿಭಾಗಗಳ ಉತ್ಪಾದನೆಗೆ ಹೆಸರಾಗಿರುವ ರೆನೈಸಾನ್ಸ್ ಕಂಪನಿ ವಿಜಯಪುರದಲ್ಲಿ ₹6,000 ಕೋಟಿ ಬಂಡವಾಳ ಹೂಡಿಕೆಯೊಂದಿಗೆ ತನ್ನ ಘಟಕ ಆರಂಭಿಸಲಿದೆ ಎಂದು ಸಚಿವರು ಹೇಳಿದರು.

ಆರಂಭದಲ್ಲಿ ₹2,500 ಕೋಟಿ ಬಂಡವಾಳ ಹೂಡಲಿದೆ ಎಂದರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸಾಹಿತ್ಯಾ, ಕೆಂಗೇರಿ.

• **ಪ್ರಶ್ನೆ: ನಾನು ಮನಃಶಾಸ್ತ್ರದ ಪರಿಣತೆಯಾಗಿದ್ದು, ಕಾರ್ಪೊರೇಟ್ ಕ್ಲಿನಿಕ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ವಾರ್ಷಿಕವಾಗಿ ₹8.11 ಲಕ್ಷ ವೇತನ ಸಂಪಾದಿಸುತ್ತಿದ್ದೇನೆ. ಬ್ಯಾಂಕ್ ಬಡ್ಡಿಯ ರೂಪದಲ್ಲಿ ₹30,000 ಆದಾಯ ಪಡೆಯುತ್ತಿದ್ದೇನೆ. ಒಟ್ಟು ವೇತನದಿಂದ ಮಾಸಿಕವಾಗಿ ₹2,400 ಪಿಟಿ, ₹21,600 ಪಿಎಫ್, ₹45,000 ಪಿಪಿಎಫ್, ₹9,000 ಎಲ್‌ಐಸಿ ಪಾವತಿ ಹಾಗೂ ವೈದ್ಯಕೀಯ ವಿಮಾ ರೂಪದಲ್ಲಿ ₹6,000 ಕಡಿತಗೊಂಡು ಸಂಬಂಧಿಸಿದ ಇಲಾಖೆಗೆ ಪಾವತಿಯಾಗುತ್ತದೆ. ಪ್ರಸ್ತುತ ನನ್ನ ವಯಸ್ಸು 29 ಹಾಗೂ ಅವಿವಾಹಿತೆಯಾಗಿದ್ದೇನೆ. ನನ್ನ ಹಣದ ಉಳಿತಾಯಕ್ಕಾಗಿ ಹಾಗೂ ತೆರಿಗೆ ಉಳಿಸಲು ಏನೇನು ಮಾಡಬಹುದು. ಯಾವ ತೆರಿಗೆ ಪದ್ಧತಿ ನನಗೆ ಸೂಕ್ತ ಎಂಬ ಬಗ್ಗೆ ತಿಳಿಸಿ.**

ಉತ್ತರ: ನೀವು ನಿಮ್ಮ ಆದಾಯದ ಬಗ್ಗೆ ವಿವರವಾದ ಮಾಹಿತಿ ನೀಡಿರುತ್ತೀರಿ. ಈ ಆದಾಯಕ್ಕೆ ಪ್ರತಿಯಾಗಿ ನಿಮ್ಮ ಆರ್ಥಿಕ ಜವಾಬ್ದಾರಿ ಯಾವುವು ಎಂಬ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಪ್ರಶ್ನೆಯಲ್ಲಿ ತಿಳಿಸಿಲ್ಲ. ಹೀಗಾಗಿ, ಶೇ 50ರಷ್ಟು ಆದಾಯ ನಿಮ್ಮ ವೆಚ್ಚಕ್ಕೆ ಬೇಕಾಗಬಹುದೆಂದು ಊಹಿಸಿ, ಉಳಿದ ಶೇ 50ರಷ್ಟು ಮೊತ್ತವನ್ನು ನಿಮ್ಮ ಹೂಡಿಕೆಗೆ ಬಳಸಿಕೊಳ್ಳಬಹುದು ಎಂದು ಅಂದಾಜಿಸಲಾಗಿದೆ.

ಪ್ರಶ್ನೆಯಲ್ಲಿ ತಿಳಿಸಿರುವ ವಿವಿಧ ರೀತಿಯ ಕಡಿತಗಳನ್ನು ಬಿಟ್ಟು ನಿಮ್ಮ ಬಳಿ ಉಳಿಯುವ ಮೊತ್ತ ಹೆಚ್ಚು ಕಡಿಮೆ ₹7.50 ಲಕ್ಷ. ಈ ಮೊತ್ತದಲ್ಲಿ ನೀವು ತಿಂಗಳಿಗೆ ₹25,000ದಿಂದ ₹30,000 ಉಳಿತಾಯ ಮಾಡಿದರೂ, ವಾರ್ಷಿಕವಾಗಿ ₹3 ಲಕ್ಷಕ್ಕೂ ಹೆಚ್ಚು ಉಳಿತಾಯ ಮಾಡಲಿದ್ದೀರಿ. ಇತ್ತೀಚಿನ ಬದಲಾದ ಆದಾಯ ತೆರಿಗೆ ನಿಯಮದಡಿ ತೆರಿಗೆ ಉಳಿತಾಯಕ್ಕಿಂತ ಹೆಚ್ಚಾಗಿ, ಭವಿಷ್ಯಕ್ಕಾಗಿ ಹೂಡಿಕೆ ಮಾಡಿಡುವ ನೈಜ ಸನ್ನಿವೇಶಗಳೇ ಹೆಚ್ಚಿನ ಪ್ರಾಶಸ್ತ್ಯ ಪಡೆಯುತ್ತಿವೆ. ಈ ಹಂತದಲ್ಲಿ ನೀವು ತೆರಿಗೆ ಲಾಭ ನೀಡದ ಆದರೆ ಮುಕ್ತ ಮಾರುಕಟ್ಟೆಗೆ ಸಂಬಂಧಿಸಿದ ಯಾವುದೇ ಹೂಡಿಕೆಯನ್ನು ಮಾಡಬಹುದು.

ಅದರಲ್ಲಿ ಮ್ಯೂಚುವಲ್ ಫಂಡ್‌ಗಳು ಪ್ರಮುಖವಾಗಿವೆ. ದೀರ್ಘಾವಧಿಯಲ್ಲಿ ಈಕ್ವಿಟಿ ಫಂಡ್‌ಗಳ ಎಸ್‌ಐಪಿಗಳು ಉತ್ತಮ ಲಾಭ ನೀಡಬಲ್ಲವು. ನಿವೃತ್ತಿಯ ಉದ್ದೇಶಕ್ಕೋಸ್ಕರ ಎನ್‌ಪಿಎಸ್‌ನಲ್ಲೂ ಹೂಡಿಕೆ ಮಾಡಬಹುದು.

ಹಳೆಯ ತೆರಿಗೆ ಪದ್ಧತಿ ಅನುಸರಿಸಿ ಪ್ರಸ್ತುತ ಆದಾಯಕ್ಕೆ, ನೀವು ಮಾಡುವ ವಿವಿಧ ಹೂಡಿಕೆಗಳನ್ನು ಪರಿಗಣಿಸಿದರೂ ತೆರಿಗೆಗೆ ಅದು ಲಾಭದಾಯಕ ಆಗಲಾರದು. ಇನ್ನೂ ಒಂದಷ್ಟು ಮುಂದುವರಿದು ಹೇಳುವುದಾದರೆ, ಸೆಕ್ಷನ್ 80ಸಿ ಅಡಿ ಸಿಗುವ ಸಂಪೂರ್ಣ ಮೊತ್ತ ಪರಿಗಣಿಸಿ, ಒಟ್ಟಾರೆ ಹೂಡಿಕೆಯನ್ನು ₹1.50 ಲಕ್ಷಕ್ಕೆ ವರ್ಧಿಸಿದರೂ, ಹಳೆಯ ತೆರಿಗೆ ಪದ್ಧತಿ ಯಾವುದೇ ಪ್ರಯೋಜನವಾಗದು. ಕಾರಣ ಇದರಡಿ ನಿಗದಿಯಾದ ತೆರಿಗೆ ದರ ಹೊಸ ಪದ್ಧತಿಗಿಂತ ಅಧಿಕ. ಹೀಗಾಗಿ, ಪ್ರಸ್ತುತ ಆದಾಯಕ್ಕೆ ಹೊಸ ತೆರಿಗೆ ಪದ್ಧತಿ ಒಳಿತು.

ನಾಗಭೂಷಣ್ ಎನ್.ಎಲ್., ಹುಬ್ಬಳ್ಳಿ

• **ಪ್ರಶ್ನೆ: ನಾವು ಅನೇಕ ರೀತಿಯ ಹೂಡಿಕೆ ವಿಧಾನಗಳನ್ನು ಕಂಡಿದ್ದೇವೆ. ಪ್ರತಿದಿನ ಟಿ.ವಿ ಮಾಧ್ಯಮದಲ್ಲಿ ಅಥವಾ ದಿನಪತ್ರಿಕೆಗಳಲ್ಲಿ ಹೂಡಿಕೆಯ ಅನೇಕ ರೀತಿಯ ವಿಧಾನಗಳನ್ನು ಕೇಳುತ್ತಾ ಓದುತ್ತಾ ಇರುತ್ತೇವೆ. ಹೀಗಿರುವಾಗ ಕೆಲವೊಮ್ಮೆ ಬಹಳಷ್ಟು ಗೊಂದಲ ಉಂಟಾಗುತ್ತದೆ. ಯಾವುದು ಯಾವ ಸಂದರ್ಭದಲ್ಲಿ ಸೂಕ್ತ ಎಂಬುದು ತಿಳಿಯುವುದಿಲ್ಲ. ಉದಾಹರಣೆಗೆ 10 ವರ್ಷದ ಹಿಂದೆ ಸ್ನೇಹಿತರು ಖರೀದಿಸಿದ ಭೂಮಿಯನ್ನು ಇಂದಿನ ಮಾರುಕಟ್ಟೆ ದರದಲ್ಲಿ ನೋಡಿದಾಗ ದುಪ್ಪಟ್ಟು ಅಥವಾ ಅದಕ್ಕಿಂತ ಅಧಿಕವೇ ಆಗಿರುತ್ತದೆ. ಒಂದೆರಡು ವರ್ಷ ಹಿಂದೆಯಷ್ಟೇ ಖರೀದಿಸಿದ ಕೆಲವು ಷೇರುಗಳು ನಾಗಾಲೋಟದಿಂದ ಎರಡೋ, ಮೂರೋ ಪಾಲು ಹೂಡಿಕೆದಾರನಿಗೆ ಲಾಭ ಕೊಡುತ್ತವೆ. ನಮ್ಮ ಅದೃಷ್ಟ ಕೆಟ್ಟದಾಗಿದ್ದರೆ, ಅದೇ ಷೇರುಗಳು ನೆಲಕಚ್ಚುತ್ತವೆ. ಹೀಗಿರುವಾಗ ನಿರ್ಧಾರ ಹೇಗೆ ಸಾಧ್ಯ. ಅನೇಕ ವ್ಯವಹಾರಗಳಲ್ಲಿ ಕೈಹಾಕಿ ಯಾವುದೇ ನಿರೀಕ್ಷಿತ ಲಾಭ ಸಿಗದೆ ಬೆಲೆ ಕುಸಿತವಾಗುತ್ತದೆ ಎಂದು ನಿರೀಕ್ಷಿಸಿ ತಟಸ್ಥವಿದ್ದಾಗ ನಾವು ನೋಡುತ್ತಿದ್ದಂತೆ ಹೂಡಿಕೆ ಮೌಲ್ಯ ಮತ್ತೆ ಗಗನಕ್ಕೇರುತ್ತದೆ. ಇಂತಹ ಸಂದರ್ಭದಲ್ಲಿ ಹೂಡಿಕೆ ನಿರ್ಧಾರ ಕೈಗೊಳ್ಳುವುದು ಹೇಗೆ.**

ಉತ್ತರ: ಹೂಡಿಕೆ ಎನ್ನುವುದು ಲಾಭಗಳಿಸುವ ಒಂದು ಸಾಧನ ಮಾತ್ರವಲ್ಲ ಅದೊಂದು ಕಲೆಯೂ ಹೌದು. ಈ ನಿರ್ಧಾರಗಳಲ್ಲಿ ಎಲ್ಲ ರೀತಿಯ ವಿಚಾರಗಳೂ ಪರೋಕ್ಷವಾಗಿ ಗಣನೆಗೆ ಬರುತ್ತವೆ. ಒಬ್ಬ ಮುಂದಿನ ದಿನಗಳಲ್ಲಿ ಏರುಗತಿ ನಿರೀಕ್ಷಿಸಿ ಹೂಡಿಕೆಯ ನಿರ್ಧಾರ ತೆಗೆದುಕೊಂಡರೆ, ಆತನಿಗೆ ಮಾರಾಟ ಮಾಡುವವ ಸಹಜವಾಗಿ ಅದಕ್ಕೆ ತದ್ವಿರುದ್ಧವಾಗಿ ಯೋಚಿಸಿರಬೇಕು. ಇಂತಹ ಯೋಚನೆಯ ಧೋರಣೆಯಿಂದಲೇ ಮಾರುಕಟ್ಟೆ ವಿಸ್ತಾರವಾಗುವುದು. ಇದು ಸ್ಥಿರ-ಚರ ಆಸ್ತಿಗಳಿಗೂ ಅನ್ವಯ. ಇದೆಲ್ಲದರ ಹಿಂದೆ ನಮ್ಮದೇ ಆದ ಗಟ್ಟಿ ನಿರ್ಧಾರಗಳು ಅಥವಾ ಕೆಲವೊಮ್ಮೆ ಮೃದು ಧೋರಣೆಗಳು ವೈಯಕ್ತಿಕವಾಗಿ ಪರಿಗಣನೆಗೆ ಬರುತ್ತವೆ. ಆದರೆ, ಯಾವುದೇ ಗಟ್ಟಿ ನಿರ್ಧಾರ ಕೈಗೊಳ್ಳುವ ಮುನ್ನ ಅದು ಸಕಾರಣ ಹೊಂದಿದ್ದಾಗಿದ್ದರೆ, ನಮ್ಮ ನಿರ್ಧಾರದ ಗುಣಮಟ್ಟದ ತುಲನೆ ಸಾಧ್ಯ. ಇದರಿಂದ ನಮ್ಮ ಸರಿ, ತಪ್ಪುಗಳ ವಿಶ್ಲೇಷಣೆಗೆ ಹೆಚ್ಚು ಅನುಕೂಲ.

ಇನ್ನು ಆರ್ಥಿಕ ವಿಚಾರದ ಏಳುಬೀಳುಗಳು ಒಂದು ಚಕ್ರದ ವಿವಿಧ ಬಿಂದುಗಳಿದ್ದಂತೆ. ಇಲ್ಲಿ ಶಾಶ್ವತವಾದ ಏರುಗತಿಯೂ ಇಲ್ಲ. ಅದೇ ರೀತಿ ಕಾಯಂ ಆದ ಇಳಿಮುಖವೂ ಇಲ್ಲ. ಈ ಆವರ್ತಗಳನ್ನು ಸಮರ್ಪಕವಾಗಿ ಊಹಿಸಬಲ್ಲ ಶಕ್ತಿ ನಮ್ಮದಾಗಬೇಕು. ಇಲ್ಲಿ ನಮ್ಮ ನಿರ್ಧಾರದಂತೆ ಎಲ್ಲವೂ ನಡೆಯುತ್ತದೆ ಎನ್ನುವ ಸ್ವಭಾವಕ್ಕಿಂತ, ನಾವು ಸಮಯೋಚಿತ ನಿರ್ಧಾರ ಹೇಗೆ ಕೈಗೊಳ್ಳಬೇಕು ಎನ್ನುವುದೇ ಮುಖ್ಯ. ಉದಾಹರಣೆಗೆ, ಒಂದು ಕಾಲದಲ್ಲಿ ಎಲ್ಲ ವರ್ಗದ ಜನರಿಗೂ ಪ್ರಿಯವಾಗಿದ್ದ ಕ್ಯಾಮೆರಾ ಇಂದು ಮೂಲೆಗುಂಪಾಗಿದೆ. ಕಾರಣ ತಂತ್ರಜ್ಞಾನದ ನೆರವಿನಿಂದ ಅಂಗೈಯ ಮೊಬೈಲ್ ಮೂಲಕ ‘ಟು ಇನ್ ಒನ್’ ಕೆಲಸ ಸಾಧ್ಯ ಎನ್ನುವುದು ಸಾಬೀತಾಗಿದೆ. ಇದರ ಪರಿಣಾಮ ಮೊಬೈಲ್ ಉದ್ಯಮವು ಕ್ಯಾಮೆರಾ ಉದ್ಯಮಕ್ಕಿಂತ ಮುಂಚೂಣಿ ಪಡೆದಿದೆ. ಹೀಗಾಗಿ ಇಂತಹ ಬದಲಾವಣೆಯ ಸಾಧ್ಯತೆಗಳನ್ನು ಮೊದಲೇ ಯೋಚಿಸಿ, ಸಹನೆಯಿಂದ ಹೂಡಿಕೆ ಮಾಡಿದಾಗಲಷ್ಟೇ ಎಲ್ಲವೂ ಸಾಧ್ಯ.

ಹೂಡಿಕೆ ಪ್ರಪಂಚದ ಬಹಳ ಚಾಲ್ತಿಯಲ್ಲಿರುವ ಮಾತಿನಂತೆ, ಏರುಗತಿಯ ಮಾರುಕಟ್ಟೆಯ ಸಮಯದಲ್ಲಿ ಹೂಡಿಕೆ ಮಾಡುವಾತ ಉತ್ತಮ ಲಾಭ ಗಳಿಸಬಲ್ಲ. ಆದರೆ ಯಾವಾಗ ಎಲ್ಲರೂ ಆಸೆ ಬಿಟ್ಟು ಮಾರುಕಟ್ಟೆ ದೊಡ್ಡ ಕುಸಿತ ಕಾಣುತ್ತಿರುವಾಗ ಹೂಡಿಕೆ ಮಾಡುತ್ತಾರೋ ಅವರಿಗೆ ನಿಜವಾಗಿ ಅದೃಷ್ಟ ಕಾದಿರುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ-ಮೇಲ್: businessdesk@prajavani.co.in

ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ – ಸಕಲೇಶಪುರ

ಕೂಳೆ	950-1000
ನಡುಗೋಲು	1050-1100
ರಾಶಿ	1150-1200
ರಾಶಿ ಉತ್ತಮ	1300-1350
ಹೆರಕಿದ್ದು	1900-2000
ಹಸಿರು ಸಾಧಾರಣ	1200-1300
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	500

ಅಡಿಕೆ (ಬಂಟ್ವಾಳ)

ಕೋಕ	18000-28500
ಹೊಸತು	28500-34500
ಹಳತು	34500-43000
ಚಿತ್ರದುರ್ಗ	
ಅಪಿ	46900-47309
ಬೆಟ್ಟೆ	33629-34099
ಕೆಂಪುಗೋಟು	27619-28059
ರಾಶಿ	46439-46869
ಕಾರ್ಕಳ	
ಹೊಸತು	25000-35000
ಹಳತು	30000-43500
ಪುತ್ತೂರು	
ಹೊಸತು	26500-35000
ಸಾಗರ	
ಬಿಳಿಗೋಟು	23266-24611
ಚಾಲಿ	31809-33479
ಕೋಕ	24355-24355
ಕೆಂಪುಗೋಟು	28999-35899
ರಾಶಿ	32000-47889
ಸಿಪ್ಪೆಗೋಟು	16709-17699
ಶಿವಮೊಗ್ಗ	
ಬೆಟ್ಟೆ	42159-54569
ಗೊರಬಲು	16666-34119
ರಾಶಿ	24009-48699
ಸರಕು	48100-83600
ಸಿದ್ದಾಪುರ	
ಬಿಳಿಗೋಟು	24300-29118
ಚಾಲಿ	34299-37299
ಕೋಕ	24099-28309
ಹೊಸಚಾಲಿ	31099-35439
ಕೆಂಪುಗೋಟು	30469-33899
ರಾಶಿ	43600-46699
ತಟ್ಟಿಬೆಟ್ಟೆ	37699-45969
ಶಿರಸಿ	
ಬೆಟ್ಟೆ	37618-43709
ಬಿಳಿಗೋಟು	24009-30899
ಚಾಲಿ	32298-35611
ಕೆಂಪುಗೋಟು	26399-35301
ರಾಶಿ	42298-46699
ಯಲ್ಲಾಪುರ	
ಅಪಿ	56261-58699
ಬಿಳಿಗೋಟು	22899-31099
ಚಾಲಿ	31869-38009
ಕೋಕ	14299-27699
ಕೆಂಪುಗೋಟು	24899-34575
ರಾಶಿ	43769-52899
ತಟ್ಟಿಬೆಟ್ಟೆ	34706-43040

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ ₹8000-8710
ತಿಪಟೂರು ₹10200-11000
ಅರಸೀಕೆರೆ ₹10800-11200

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13900	14,000	-	183 ಸೇಂಟ್ಸ್
ಎಸಿ	7950	7,800	-	
ಆರ್‌ಪಿ	14000	13,900	-	ಲಂಡನ್
ಆರ್‌ಸಿ	8020	295 on OT	-	3,279 ಡಾಲರ್ಸ್

ಮಾಲ್ದೀವ್ಸ್ ಸಾರ್ವಭೌಮತ್ವ ರಕ್ಷಣೆಗೆ ಬೆಂಬಲ: ಚೀನಾ

ಬೀಜಿಂಗ್ (ಪಿಟಿಐ): ಮಾಲ್ದೀವ್ಸ್‌ಗೆ ತನ್ನ ಸಾರ್ವಭೌಮತ್ವ ರಕ್ಷಿಸಿಕೊಳ್ಳಲು ಬೆಂಬಲ ನೀಡಲಾಗುವುದು ಎಂದು ಚೀನಾ ಮಂಗಳವಾರ ಹೇಳಿದೆ.

ಹೆಲಿಕಾಪ್ಟರ್‌ನ ಕಾರ್ಯಾಚರಣೆಯ ನಿರ್ವಹಣೆಗೆ ಮಾಲ್ದೀವ್ಸ್‌ನಲ್ಲಿ ನೆಲೆ ನಿಂತಿದ್ದ ಭಾರತೀಯ ಸೇನಾ ಸಿಬ್ಬಂದಿ ಹೆಲಿಕಾಪ್ಟರ್‌ನ ಕಾರ್ಯಾಚರಣೆ ಹೊಣೆಯನ್ನು ಭಾರತೀಯ ನಾಗರಿಕ ಅಧಿಕಾರಿಗಳಿಗೆ ಹಸ್ತಾಂತರಿಸಿದ ನಂತರ ದೇಶ ತೊರೆದರು ಎಂದು ಮಾಲ್ದೀವ್ಸ್ ಮಾಧ್ಯಮಗಳು ಸೋಮವಾರ ವರದಿ ಮಾಡಿವೆ. ಮಾಲ್ದೀವ್ಸ್‌ನಿಂದ ಭಾರತೀಯ ಸೇನಾ ಸಿಬ್ಬಂದಿಯ ಮೊದಲ ತಂಡದ ವಾಪಸಾತಿಯ ಕುರಿತು ಕೇಳಲಾದ ಪ್ರತಿಕ್ರಿಯೆಗೆ, ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್ ಅವರು ಈ ಬಗ್ಗೆ ನಿರ್ದಿಷ್ಟ ವಿವರ ತಿಳಿದಿಲ್ಲ ಎಂದರು.

‘ಮಾಲ್ದೀವ್ಸ್‌ಗೆ ತನ್ನ ಸಾರ್ವಭೌಮತ್ವ ರಕ್ಷಿಸಿಕೊಳ್ಳಲು ಚೀನಾ ಬೆಂಬಲ ನೀಡಲಿದೆ. ಇದೇ ರೀತಿಯಾಗಿ ಇತರ ದೇಶಗಳೊಂದಿಗೆ ಕೆಲಸ ಮಾಡಲಿದೆ’ ಎಂದು ಹೇಳಿದರು.

ಭಾರತ ಮೂಲದ ಮಾರಿಷಸ್ ಪ್ರಜೆಗಳಿಗೆ ಒಸಿಐ ಕಾರ್ಡ್

ಪೋರ್ಟ್ ಲೂಯಿಸ್ (ಪಿಟಿಐ): ಮಾರಿಷಸ್‌ನಲ್ಲಿ ನೆಲೆಸಿರುವ ಏಳನೇ ತಲೆಮಾರಿನ ಭಾರತದ ಪ್ರಜೆಗಳಿಗೆ ಸಾಗರೋತ್ತರ ಭಾರತೀಯ ನಾಗರಿಕ (ಒಸಿಐ) ಕಾರ್ಡ್ ನೀಡಲಾಗುವುದು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಘೋಷಿಸಿದ್ದಾರೆ.

ಮಾರಿಷಸ್ ಪ್ರಧಾನಿ ಪ್ರವಿಂದ್ ಕುಮಾರ್ ಜಗನ್ನಾಥ್ ಜತೆ ಸೋಮವಾರ ನಡೆದ ದ್ವಿಪಕ್ಷೀಯ ಮಾತುಕತೆ ವೇಳೆ ಅವರು ಈ ವಿಷಯ ಪ್ರಕಟಿಸಿದರು.

‘ಮಾರಿಷಸ್‌ನಲ್ಲಿ ನೆಲೆಸಿರುವ ಭಾರತ ಮೂಲದವರಿಗೆ ಒಸಿಐ ಕಾರ್ಡ್ ಒದಗಿಸಲು ಭಾರತ ಸರ್ಕಾರ ಅವಕಾಶ ನೀಡಿರುವುದನ್ನು ತಿಳಿಸಲು ತುಂಬಾ ಸಂತಸವಾಗುತ್ತಿದೆ. ಇದು, ಮಾರಿಷಸ್‌ನಲ್ಲಿರುವ ಭಾರತ ಮೂಲದ ಯುವ ಜನರಿಗೆ ಭಾರತದ ಸಾಗರೋತ್ತರ ಪ್ರಜೆಗಳಾಗಲು ಹಾಗೂ ತಮ್ಮ ಪೂರ್ವಜರ ನಾಡಿನ ಜತೆ ಸಂಪರ್ಕ ಸಾಧಿಸಲು ಅನುವು ಮಾಡಿಕೊಡಲಿದೆ’ ಎಂದು ಹೇಳಿದರು.

ಮಾರಿಷಸ್‌ನ ಗಂಗಾ ತಲಾವ್ ಪ್ರದೇಶವನ್ನು ಧಾರ್ಮಿಕ, ಸಾಂಸ್ಕೃತಿಕ ಮತ್ತು ಪ್ರವಾಸಿ ತಾಣವನ್ನಾಗಿ ಮರು ಅಭಿವೃದ್ಧಿಪಡಿಸಲು ಭಾರತ ಸರ್ಕಾರವು, ಮಾರಿಷಸ್‌ಗೆ ಎಲ್ಲ ನೆರವು ನೀಡಲಿದೆ ಎಂದರು.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾರಿಷಸ್ ಪ್ರಧಾನಿ ಪ್ರವಿಂದ್ ಜಗನ್ನಾಥ್ ಅವರಿಗೆ ರುಪೇ ಕಾರ್ಡ್ ನೀಡಿದರು –ಪಿಟಿಐ ಚಿತ್ರ

‘ಪ್ರಧಾನಿ ನರೇಂದ್ರ ಮೋದಿ ಅವರು ಕೆಲ ವಾರಗಳ ಹಿಂದೆ ಮಾರಿಷಸ್‌ಗೆ ಭೇಟಿ ನೀಡಿದ್ದರಲ್ಲದೆ, ಭಾರತದ ಹಣಕಾಸಿನ ನೆರವಿನಿಂದ ನಿರ್ಮಿಸಿರುವ ರನ್ ವೇ ಹಾಗೂ ಜೆಟ್ಟಿಯನ್ನು ಉದ್ಘಾಟಿಸಿದ್ದರು.

ಭಾರತದ ರುಪೇ ಕಾರ್ಡ್ ಸೇವೆಗೂ ಚಾಲನೆ ನೀಡಿದ್ದರು. ಈಚೆಗಿನ ವರ್ಷಗಳಲ್ಲಿ ಉಭಯ ದೇಶಗಳ ನಡುವಣ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಿದೆ’ ಎಂದರು.

ವಿದರ್ಭಕ್ಕೆ ಕಠಿಣ ಗುರಿ ಒಡ್ಡಿದ ಮುಂಬೈ

ರಣಜಿ ಫೈನಲ್: ಮುಷೀರ್ ಖಾನ್ ಶತಕ, ಶ್ರೇಯಸ್ ಅಯ್ಯರ್ ಮಿಂಚಿನಾಟ

ಮುಂಬೈ (ಪಿಟಿಐ): ಮುಂಬೈನ ಯುವ ಕ್ರಿಕೆಟಿಗ ಮುಷೀರ್ ಖಾನ್ ತಾಳ್ಮೆಯ ಶತಕ ಮತ್ತು ಅನುಭವಿ ಶ್ರೇಯಸ್ ಅಯ್ಯರ್ ಮಿಂಚಿನ ಬ್ಯಾಟಿಂಗ್ ಮುಂದೆ ವಿದರ್ಭ ತಂಡವು ಬಸವಳಿಯಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ರಣಜಿ ಟ್ರೋಫಿ ಫೈನಲ್ ಪಂದ್ಯದ ಮೂರನೇ ದಿನದಾಟದಲ್ಲಿ ಮುಂಬೈ ತಂಡವು ವಿದರ್ಭಕ್ಕೆ 538 ರನ್‌ಗಳ ಗೆಲುವಿನ ಗುರಿಯೊಡ್ಡಿತು. ಪಂದ್ಯದಲ್ಲಿ ಇನ್ನೂ ಎರಡು ದಿನಗಳು ಬಾಕಿ ಇವೆ. ಆದರೆ ಅತ್ಯಂತ ತಾಳ್ಮೆ ಮತ್ತು ಕುಶಲತೆಯಿಂದ ಬ್ಯಾಟಿಂಗ್ ಮಾಡಿದರೆ ಮಾತ್ರ ವಿದರ್ಭ ತಂಡವು ಈ ಬೆಟ್ಟದಂತಹ ಸವಾಲು ಮೀರಿ ನಿಲ್ಲಬಹುದು.

ಆದರೆ, 42ನೇ ಬಾರಿ ಚಾಂಪಿಯನ್ ಆಗುವ ತವಕದಲ್ಲಿರುವ ಮುಂಬೈ ಬೌಲಿಂಗ್ ಪಡೆಯು ಮೊದಲ ಇನಿಂಗ್ಸ್‌ನಲ್ಲಿ ವಿದರ್ಭ ತಂಡವನ್ನು 105 ರನ್‌ಗಳಿಗೆ ನಿಯಂತ್ರಿಸಿತ್ತು. ಅದೇ ಲಯವನ್ನು ಎರಡನೇ ಇನಿಂಗ್ಸ್‌ನಲ್ಲಿಯೂ ತೋರಿಸಿದರೆ ವಿದರ್ಭದ ಪ್ರಶಸ್ತಿ ಕನಸು ನುಚ್ಚುನೂರಾಗುವುದು ಖಚಿತ. ಪ್ರಥಮ ಇನಿಂಗ್ಸ್‌ನಲ್ಲಿ 224 ರನ್ ಗಳಿಸಿದ್ದ ಮುಂಬೈ ತಂಡವು 119 ರನ್‌ಗಳ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ 418 ರನ್ ಗಳಿಸಿತು.

ಗುರಿ ಬೆನ್ನಟ್ಟಿರುವ ವಿದರ್ಭ ತಂಡವು ಮೂರನೇ ದಿನದಾಟದ ಮುಕ್ತಾಯಕ್ಕೆ 2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 10 ರನ್ ಗಳಿಸಿದೆ. ಅಥರ್ವ ತೈಡೆ ಮತ್ತು ಧ್ರುವ ಶೋರೆ ಕ್ರೀಸ್‌ನಲ್ಲಿದ್ದಾರೆ.

ಸೋಮವಾರ ಸಂಜೆ ಅರ್ಧಶತಕ ಗಳಿಸಿ ಕ್ರೀಸ್‌ನಲ್ಲಿದ್ದ ಮುಷೀರ್ ಖಾನ್ (136; 326ಎ, 4X10) ಮತ್ತು ಶ್ರೇಯಸ್ (95; 111ಎ, 4X10, 6X3) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 168 ರನ್ ಸೇರಿಸಿದರು. ಮುಷೀರ್ ಬ್ಯಾಟಿಂಗ್ ತಾಳ್ಮೆ ಮತ್ತು ಏಕಾಗ್ರತೆಯಿಂದ ಕೂಡಿತ್ತು. ಮುಷೀರ್ ಶತಕ ಗಳಿಸಿದರು.

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಇದು ಅವರ ಎರಡನೇ ಶತಕ. ಮುಷೀರ್, ಈಚೆಗೆ ಭಾರತ ಟೆಸ್ಟ್ ತಂಡಕ್ಕೆ ಪದಾರ್ಪಣೆ ಮಾಡಿದ ಸರ್ಫರಾಜ್ ಖಾನ್ ಅವರ ತಮ್ಮ. ರಣಜಿ ಫೈನಲ್‌ನಲ್ಲಿ ಶತಕ ಗಳಿಸಿದ ಕಿರಿಯ ವಯಸ್ಸಿನ ಆಟಗಾರನೆಂಬ ಹೆಗ್ಗಳಿಕೆಗೆ 19 ವರ್ಷದ ಖಾನ್ ಪಾತ್ರರಾದರು. ಅವರು, ಸಚಿನ್ ತೆಂಡೂಲ್ಕರ್ 29 ವರ್ಷ ಗಳ ಹಿಂದೆ ಮಾಡಿದ್ದ ದಾಖಲೆ ಮುರಿದರು.

ಇನ್ನೊಂದೆಡೆ ಶ್ರೇಯಸ್ ಭರ್ಜರಿ ಸಿಕ್ಸರ್‌ಗಳನ್ನು ಬಾರಿಸಿದರು. 80 ರನ್ ಗಳಿಸಿದ ನಂತರ ಅವರು ಶ್ರೇಯಸ್ ಸ್ವಲ್ಪ ನಿಧಾನವಾಗಿ ಆಡತೊಡಗಿದರು. ಅವರ ಓಟದ ವೇಗವೂ ಕಡಿಮೆಯಾಗಿತ್ತು. ತಂಡದ ಫಿಸಿಯೊ ಬಂದು ಅವರಿಗೆ ಸ್ನಾಯುಸೆಳೆತ ನಿವಾರಿಸುವ ಕೆಲವು ವ್ಯಾಯಾಮಗಳನ್ನು ಮಾಡಿಸಿ ಮರಳಿದರು.

ನಾಯಕ ಅಜಿಂಕ್ಯ (73; 143ಎ, 4X5, 6X1) ಅವರೊಂದಿಗೆ 130 ರನ್ ಗಳಿಸಿದ್ದರು. ಮುಷೀರ್ ಔಟಾದ ನಂತರ ಕೊನೆಯ ಹಂತದಲ್ಲಿ ಶಮ್ಸ್ ಮುಲಾನಿ (ಔಟಾಗದೆ 50; 85ಎ, 4X6) ಕೂಡ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 64.3 ಓವರ್‌ಗಳಲ್ಲಿ 224. ವಿದರ್ಭ: 45.3 ಓವರ್‌ಗಳಲ್ಲಿ 105. ಎರಡನೇ ಇನಿಂಗ್ಸ್: ಮುಂಬೈ: 130.2 ಓವರ್‌ಗಳಲ್ಲಿ 418 (ಮುಷೀರ್ ಖಾನ್ 136, ಅಜಿಂಕ್ಯ ರಹಾನೆ 73, ಶ್ರೇಯಸ್ ಅಯ್ಯರ್ 95, ಶಮ್ಸ್ ಮುಲಾನಿ ಔಟಾಗದೆ 50, ಯಶ್ ಠಾಕೂರ್ 79ಕ್ಕೆ3, ಹರ್ಷ ದುಬೆ 144ಕ್ಕೆ5) ವಿದರ್ಭ: 2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 10 (ಅಥರ್ವ ತೈಡೆ ಬ್ಯಾಟಿಂಗ್ 3, ಧ್ರುವ ಶೋರೆ ಬ್ಯಾಟಿಂಗ್ 7)


ಮುಂಬೈ ತಂಡದ ಮುಷೀರ್ ಖಾನ್ ಶತಕ ಸಂಭ್ರಮ–ಪಿಟಿಐ ಚಿತ್ರ

ಡ್ರೆಸ್ಸಿಂಗ್ ಕೋಣೆಯಲ್ಲಿ ರೋಹಿತ್ ಶರ್ಮಾ

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಫೈನಲ್ ವೀಕ್ಷಿಸಲು ಪ್ರತಿದಿನವೂ ದಿಗ್ಗಜ ಆಟಗಾರರು ಬರುತ್ತಿದ್ದಾರೆ. ಮಂಗಳವಾರ ದಿನದಾಟವನ್ನು ಕ್ರಿಕೆಟ್ ದಂತಕತೆ ಸಚಿನ್ ತೆಂಡೂಲ್ಕರ್ ಮತ್ತು ಭಾರತ ತಂಡದ ನಾಯಕ ರೋಹಿತ್ ಶರ್ಮಾ ವೀಕ್ಷಿಸಿದರು.

ಆದರೆ ಈ ಸಂದರ್ಭದಲ್ಲಿ ರೋಹಿತ್ ಅವರು ಮುಂಬೈ ತಂಡದ ಡ್ರೆಸ್ಸಿಂಗ್ ಕೋಣೆಗೆ ಭೇಟಿ ನೀಡಿ ಆಟಗಾರರೊಂದಿಗೆ ಮಾತನಾಡಿದರು. ಈ ಸಂದರ್ಭದಲ್ಲಿ ಅವರು ತಮ್ಮ ಫೋನ್‌ನಲ್ಲಿ ಚಾಟಿಂಗ್ ಮಾಡುವುದು ಕಾಣಿಸಿತು. ಮುಂಬೈ ತಂಡದಲ್ಲಿ ಇರದ ರೋಹಿತ್ ಅವರು ಮೊಬೈಲ್ ನೊಂದಿಗೆ ಡ್ರೆಸ್ಸಿಂಗ್ ಕೋಣೆಗೆ ಹೋಗಿದ್ದು ಸರಿಯೇ ಎಂಬ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಸಚಿನ್ ಎಂ.ಸಿ.ಎ ಪ್ರೆಸಿಡೆಂಟ್ ಬಾಕ್ಸ್‌ನಲ್ಲಿ ಕುಳಿತು ಪಂದ್ಯ ವೀಕ್ಷಿಸಿದರು. ಅವರೊಂದಿಗೆ ಮಾಜಿ ಆಟಗಾರರಾದ ದಿಲೀಪ್ ವೆಂಗಸರ್ಕಾರ್, ಸುಬ್ರತೊ ಬ್ಯಾನರ್ಜಿ, ಮಧ್ಯಪ್ರದೇಶ್ ಕ್ರಿಕೆಟ್ ತಂಡ ಹಾಗೂ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಕೋಚ್ ಚಂದ್ರಕಾಂತ್ ಪಂಡಿತ್ ಮತ್ತಿತರರು ಹಾಜರಿದ್ದರು.

ಡಬ್ಲ್ಯುಪಿಎಲ್: ಪ್ಲೇಆಫ್ ಹಂತ ತಲುಪಿದ ರಾಯಲ್ ಚಾಲೆಂಜರ್ಸ್ ತಂಡ

ಎಲಿಸ್ ಪೆರಿಗೆ ದಾಖಲೆಯ ಗರಿ

ನವದೆಹಲಿ (ಪಿಟಿಐ): ಆಸ್ಟ್ರೇಲಿಯನ್ ಆಲ್‌ರೌಂಡರ್ ಎಲಿಸ್ ಪೆರಿ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ದಾಖಲೆ ಮಾಡಿದರು.

ಪೆರಿ (4-0-15-6 ಹಾಗೂ ಔಟಾಗದೆ 40) ಅವರ ಆಲ್‌ರೌಂಡ್ ಆಟದಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಎದುರು 7 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು ಮತ್ತು ಪ್ಲೇ ಆಫ್ ಹಂತ ತಲುಪಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಲೀಗ್ ಸುತ್ತಿನ ಕೊನೆಯ ಪಂದ್ಯದಲ್ಲಿ 113 ರನ್‌ಗಳ ಸಾಧಾರಣ ಗುರಿಯನ್ನು ಆರ್‌ಸಿಬಿಗೆ ನೀಡಿತು. ಡಬ್ಲ್ಯುಪಿಎಲ್‌ನಲ್ಲಿ ಪೆರಿ ಅವರ ಸಾಧನೆಯು ಶ್ರೇಷ್ಠ ಬೌಲಿಂಗ್ ದಾಖಲೆ ಗೌರವ ಗಳಿಸಿತು. ಗುರಿ ಬೆನ್ನಟ್ಟಿದ ಆರ್‌ಸಿಬಿ ತಂಡವನ್ನು ಗೆಲುವಿನ ಗಡಿ ಮುಟ್ಟಿಸಿದ್ದು ಕೂಡ ಎಲಿಸ್ ಪೆರಿ ಅವರೇ.

39 ರನ್‌ಗಳಿಗೇ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಆರ್‌ಸಿಬಿಗೆ ಪೆರಿ (38 ಎಸೆತಗಳಲ್ಲಿ 40 ರನ್) ಆಸರೆಯಾದರು. ಅವರೊಂದಿಗೆ ಜೊತೆಗೂಡಿದ ರಿಚಾ ಘೋಷ್ (ಔಟಾಗದೆ 36) ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 76 ರನ್ ಸೇರಿಸಿದರು.

ಇದರಿಂದಾಗಿ ಇನಿಂಗ್ಸ್‌ನಲ್ಲಿ ಇನ್ನೂ ಐದು ಓವರ್‌ಗಳು ಬಾಕಿಯಿರುವಾಗಲೇ ತಂಡವು ಗೆಲುವಿನ ಗಡಿ ದಾಟಿತು.

ಐತಿಹಾಸಿಕ ಬೌಲಿಂಗ್: ಟಾಸ್ ಗೆದ್ದ ಬೆಂಗಳೂರು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮುಂಬೈ ತಂಡಕ್ಕೆ ಹೆಯಲಿ ಮ್ಯಾಥ್ಯೂಸ್ (26; 23ಎ) ಮತ್ತು ಸಜೀವನ್ ಸಜನಾ (30; 21ಎ) ಜೋಡಿಯು ಪವರ್‌ಪ್ಲೇನಲ್ಲಿ 43 ರನ್ ಸೇರಿಸಿದರು.

ಇದರಿಂದಾಗಿ ತಂಡವು ದೊಡ್ಡ ಮೊತ್ತ ಪೇರಿಸುವ ಭರವಸೆ ಮೂಡಿತ್ತು.

ಆದರೆ, ಆರನೇ ಓವರ್‌ನಲ್ಲಿ ಸೋಫಿ ಡಿವೈನ್ ಬೌಲಿಂಗ್‌ನಲ್ಲಿ ಮ್ಯಾಥ್ಯೂಸ್ ಕ್ಯಾಚ್ ಪಡೆದ ಎಲಿಸ್ ಪೆರಿ ಸಂಭ್ರಮಿಸಿದರು. ನಂತರ ಬೌಲಿಂಗ್‌ನಲ್ಲಿ ಅಬ್ಬರಿಸಿದರು.

ಒಂಬತ್ತನೇ ಓವರ್‌ನಲ್ಲಿ ಸಜನಾ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಡಗ್‌ಔಟ್ ಮಾರ್ಗ ತೋರಿಸಿದರು. 11ನೇ ಓವರ್‌ನಲ್ಲಿ ಅಮೆಲಿಯಾ ಕೆರ್ ಹಾಗೂ ಅಮನ್ಜೋತ್ ಕೌರ್ ಅವರಿಗೂ ಕಾಲೂರಲು ಬಿಡಲಿಲ್ಲ. ಅವರ ನೇರ ಎಸೆತಗಳಿಗೆ ಬ್ಯಾಟರ್‌ಗಳು ಎಲ್‌ಬಿಡಬ್ಲ್ಯು ಮತ್ತು ಕ್ಲೀನ್ ಬೌಲ್ಡ್ ಆದರು. ಪೂಜಾ ವಸ್ತ್ರಕರ್ ಮತ್ತು ನತಾಲಿ ಶಿವರ್ ಬ್ರಂಟ್ (10 ರನ್) ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು.

ಉಳಿದ ಎರಡು ವಿಕೆಟ್‌ಗಳು ಸೋಫಿ ಮಾಲಿನೆ ಮತ್ತು ಬೆಂಗಳೂರಿನ ಆಟಗಾರ್ತಿ ಶ್ರೇಯಾಂಕಾ ಪಾಟೀಲ ಅವರ ಪಾಲಾದವು. ಮುಂಬೈನ ಕೇವಲ ನಾಲ್ಕು ಬ್ಯಾಟರ್‌ಗಳು ಮಾತ್ರ ಎರಡಂಕಿ ಮುಟ್ಟಿದರು. ನಾಯಕಿ ಕೌರ್ ಖಾತೆಯನ್ನೇ ತೆರೆಯಲಿಲ್ಲ.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 19 ಓವರ್‌ಗಳಲ್ಲಿ 113 (ಹೆಯಲಿ ಮ್ಯಾಥ್ಯೂಸ್ 26, ಸಜೀವನ್ ಸಜನಾ 30, ಪ್ರಿಯಾಂಕಾ ಬಾಲಾ ಔಟಾಗದೆ 19, ಎಲಿಸ್ ಪೆರಿ 15ಕ್ಕೆ6) ರಾಯಲ್ ಚಾಲೆಂಜರ್ಸ್ ಬೆಂಗಳೂರು: 15 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 115 (ಎಲಿಸ್ ಪೆರಿ ಔಟಾಗದೆ 40, ರಿಚಾ ಘೋಷ್ ಔಟಾಗದೆ 36, ಶಬ್ನಿಮ್ ಇಸ್ಮಾಯಿಲ್ 19ಕ್ಕೆ1, ಹೆಯಲಿ ಮ್ಯಾಥ್ಯೂಸ್ 11ಕ್ಕೆ1) **ಫಲಿತಾಂಶ:** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 7 ವಿಕೆಟ್‌ಗಳ ಜಯ.

ಪಂದ್ಯದ ಆಟಗಾರ್ತಿ: ಎಲಿಸ್ ಪೆರಿ.


ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎಲಿಸ್ ಪೆರಿ ಬೌಲಿಂಗ್ –ಪಿಟಿಐ ಚಿತ್ರ

ಮಹಿಳಾ ಪ್ರೀಮಿಯರ್ ಲೀಗ್: ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಡೆಲ್ಲಿ ಕ್ಯಾಪಿಟಲ್ಸ್	7	5	2	10
ಮುಂಬೈ ಇಂಡಿಯನ್ಸ್	8	5	3	10
ರಾಯಲ್ ಚಾಲೆಂಜರ್ಸ್ ಬೆಂಗಳೂರು	8	4	4	8
ಯುಪಿ ವಾರಿಯರ್ಸ್	8	3	5	6
ಗುಜರಾತ್ ಜೈಂಟ್ಸ್	7	2	5	4

ಆಲೂರು ಕ್ರೀಡಾಂಗಣದಲ್ಲಿ ಕೌಂಟಿ ತಂಡಗಳ ಅಭ್ಯಾಸ

ಬೆಂಗಳೂರು: ಇಂಗ್ಲಿಷ್ ಕೌಂಟಿ ಕ್ರಿಕೆಟ್ ತಂಡಗಳು ನಗರದ ಹೊರವಲಯದಲ್ಲಿರುವ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಲಿವೆ.

ಕೌಂಟಿ ತಂಡಗಳಾದ ಲಂಕಾಶೈರ್ ಮತ್ತು ಸಸೆಕ್ಸ್ ತಂಡಗಳು ಇಲ್ಲಿ ನಡೆಯಲಿರುವ 10 ದಿನಗಳ ಶಿಬಿರದಲ್ಲಿ ಭಾಗವಹಿಸಲಿವೆ. ಈ ಅವಧಿಯಲ್ಲಿ ಕರ್ನಾಟಕ ಕ್ರಿಕೆಟ್ ತಂಡಗಳ ಎದುರು ಅಭ್ಯಾಸ ಪಂದ್ಯಗಳನ್ನು ಆಡಲಿವೆ.

ಮಾರ್ಚ್ 14ರಿಂದ ಹತ್ತು ದಿನಗಳ ಕಾಲ ತಂಡಗಳು ಇಲ್ಲಿ ಇರಲಿವೆ. ಎರಡು ಮತ್ತು ಮೂರು ದಿನಗಳ ಪಂದ್ಯ ನಡೆಯಲಿವೆ. ಕರ್ನಾಟಕ ಸೀನಿಯರ್ ತಂಡ, 19 ಹಾಗೂ 23 ವರ್ಷದೊಳಗಿನವರ ತಂಡಗಳ ಆಟಗಾರರು ಇರುವ ಬಳಗದ ಎದುರು ಪಂದ್ಯ ನಡೆಯಲಿದೆ.

‘ಐಪಿಎಲ್ ಪಂದ್ಯಕ್ಕೆ ನೀರಿನ ಸಮಸ್ಯೆ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ತಲೆದೋರಿರುವ ನೀರಿನ ಕೊರತೆಯ ಸಮಸ್ಯೆಯು ಇದೇ ತಿಂಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಗಳಿಗೆ ಬಾಧಿಸುವುದಿಲ್ಲ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮೂಲಗಳು ಹೇಳಿವೆ

ಕ್ರೀಡಾಂಗಣದಲ್ಲಿ ಬಹುಕಾಲದಿಂದ ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಮತ್ತು ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ನಿರ್ವಹಣೆ ಮಾಡಲಾಗುತ್ತಿದೆ. ಆದ್ದರಿಂದ ಐಪಿಎಲ್ ಪಂದ್ಯಗಳ ಸಂದರ್ಭದಲ್ಲಿ ನೀರಿನ ಸಮಸ್ಯೆಯ ‘ಬಿಸಿ’ ತಟ್ಟುವ ಸಾಧ್ಯತೆ ತೀರಾ ಕಡಿಮೆ ಎಂದು ಮೂಲಗಳು ತಿಳಿಸಿವೆ.

ಐಪಿಎಲ್ ಟೂರ್ನಿಗಾಗಿ ಪ್ರಕಟಿಸಿರುವ ಮೊದಲ ವೇಳಾಪಟ್ಟಿಯಲ್ಲಿ ಮೂರು ಪಂದ್ಯಗಳು ಇಲ್ಲಿ ನಡೆಯಲಿವೆ. ಮೊದಲ ಪಂದ್ಯವು ಇದೇ 25ರಂದು ನಿಗದಿಯಾಗಿದೆ.

‘ನೀರಿಗೆ ಸಂಬಂಧಿಸಿದಂತೆ ನಮಗೆ ಯಾವುದೇ ಸಮಸ್ಯೆ ಇಲ್ಲ. ರಾಜ್ಯ ಸರ್ಕಾರವು ಹೊರಡಿಸಿರುವ ನೀರು ಬಳಕೆ ಮಾರ್ಗಸೂಚಿಯನ್ನು ನಾವು (ಕೆಎಸ್‌ಸಿಎ ಪದಾಧಿಕಾರಿಗಳು) ಸ್ವೀಕರಿಸಿದ್ದೇವೆ. ಈ ಕುರಿತು ಪದಾಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗುತ್ತಿದೆ’ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಶುಭೇಂದು ಘೋಷ್ ತಿಳಿಸಿದ್ದಾರೆ.


ಚಿನ್ನಸ್ವಾಮಿ ಕ್ರೀಡಾಂಗಣ ಪ್ರಜಾವಾಣಿ ಸಂಗ್ರಹ ಚಿತ್ರ

‘ಪಿಚ್ ಮತ್ತು ಹೊರಾಂಗಣಕ್ಕಾಗಿ ನಾವು ಎಸ್‌ಟಿಪಿ ಘಟಕದ ನೀರು ಬಳಸುತ್ತಿದ್ದೇವೆ. ಕ್ರೀಡಾಂಗಣದಲ್ಲಿ ಇತರ ಕೆಲವು ಕೆಲಸಗಳಿಗಾಗಿ ಬಳಸಲು ಕೂಡ ಇದೇ ಸಂಸ್ಕರಿತ ನೀರು ಬಳಕೆ ಮಾಡುತ್ತಿದ್ದೇವೆ. ಪಂದ್ಯದ ಆಯೋಜನೆಯಾದಾಗ 10 ರಿಂದ 15 ಸಾವಿರ ಲೀಟರ್‌ಗಳಷ್ಟು ನೀರು ಬೇಕಾಗಬಹುದು. ಇದು ಎಸ್‌ಟಿಪಿ ಘಟಕದಿಂದ ಪೂರೈಕೆಯಾಗುವ ಸಾಮರ್ಥ್ಯ ಇದೆ. ಕ್ರೀಡಾಂಗಣಕ್ಕೆ ನೀರುಣಿಸಲು ಅಂತರ್ಜಲ ಬಳಸುತ್ತಿಲ್ಲ. ನೀರು ಬಳಕೆಯ ಬಗ್ಗೆ ಸರ್ಕಾರವು ರೂಪಿಸಿರುವ ಹೊಸ ನಿಯಮಕ್ಕೆ ನಮ್ಮ ಯೋಜನೆಗಳು ಹೊಂದಾಣಿಕೆಯಾಗುತ್ತವೆ’ ಎಂದೂ ಘೋಷ್ ವಿಶ್ವಾಸ ವ್ಯಕ್ತಪಡಿಸಿದರು.

ಒಲಿಂಪಿಕ್ಸ್ ಟಿಕೆಟ್: ಲಕ್ಷ್ಯ ವಿಶ್ವಾಸ

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಲಕ್ಷ್ಯ ಸೇನ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಟಿಕೆಟ್ ಪಡೆಯುವ ಭರವಸೆ ಮೂಡಿಸಿದ್ದಾರೆ. ಕಳೆದ ವಾರ ನಡೆದ ಫ್ರೆಂಚ್ ಓಪನ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಅವರು, ಒಲಿಂಪಿಕ್ಸ್ ಕ್ರೀಡಾಕೂಟದ ಅರ್ಹತಾ ರ‍್ಯಾಂಕಿಂಗ್‌ನಲ್ಲಿ 15ನೇ ಸ್ಥಾನ ಪಡೆದಿದ್ದಾರೆ.

ಭಾರತದ 22 ವರ್ಷದ ಆಟಗಾರ 2022ರ ನವೆಂಬರ್‌ನಲ್ಲಿ ವಿಶ್ವದ ಆರನೇ ರ‍್ಯಾಂಕ್ ತಲುಪಿದ್ದರು. 2023ರ ಏಪ್ರಿಲ್‌ನಲ್ಲಿ 25ನೇ ರ‍್ಯಾಂಕ್‌ಗೆ ಕುಸಿದ ಅವರು, ಆಗಸ್ಟ್ ವೇಳೆಗೆ ಸುಧಾರಿತ ಆಟ ಪ್ರದರ್ಶಿಸಿ 11ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದರು. ಮತ್ತೆ ಲಯ ಕಂಡುಕೊಳ್ಳಲು ವಿಫಲವಾದ ಅವರು ಈ ವರ್ಷದ ಆರಂಭದಲ್ಲಿ 20ನೇ ಸ್ಥಾನಕ್ಕೆ ಜಾರಿದ್ದರು. ಈ ಋತುವಿನಲ್ಲಿ ಮಲೇಷ್ಯಾ ಸೂಪರ್ ಮತ್ತು ಇಂಡಿಯಾ ಸೂಪರ್ ಟೂರ್ನಿಯಲ್ಲಿ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದ ಅವರು ಒಲಿಂಪಿಕ್ ಕೂಟದ ಅರ್ಹತಾ ರ‍್ಯಾಂಕಿಂಗ್‌ನಲ್ಲಿ 19ನೇ ಸ್ಥಾನ ಗಳಿಸಿದ್ದರು. ಫ್ರೆಂಚ್ ಓಪನ್ ಸೂಪರ್ 750 ಟೂರ್ನಿಯಲ್ಲಿ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದ್ದ ಕಾರಣ ಮತ್ತೆ ರ‍್ಯಾಂಕಿಂಗ್ ಸುಧಾರಿಸಿದೆ.


ಲಕ್ಷ್ಯ ಸೇನ್

ಮಂಗಳವಾರ ಬಿಡುಗಡೆಯಾದ ಬಿಡಬ್ಲ್ಯುಎಫ್ ರ‍್ಯಾಂಕಿಂಗ್‌ನಲ್ಲೂ ಅವರು ಒಂದು ಸ್ಥಾನ ಬಡ್ತಿ ಪಡೆದು 18ನೇ ಸ್ಥಾನಕ್ಕೆ ಏರಿದರು.

ಎಚ್.ಎಸ್. ಪ್ರಣಯ್ ಅವರು ಫ್ರೆಂಚ್ ಓಪನ್‌ನಲ್ಲಿ ಆರಂಭಿಕ ಸುತ್ತಿನಲ್ಲಿ ನಿರ್ಗಮಿಸಿದ ಬಳಿಕ ವಿಶ್ವ ರ‍್ಯಾಂಕಿಂಗ್ ಮತ್ತು ಒಲಿಂಪಿಕ್ ಕ್ರೀಡಾಕೂಟದ ಅರ್ಹತೆಯಲ್ಲಿ ಏಳರಿಂದ ಎಂಟನೇ ಸ್ಥಾನಕ್ಕೆ ಜಾರಿದರು. ಏಪ್ರಿಲ್ ಅಂತ್ಯದ ವೇಳೆಗೆ ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೊದಲ 16 ಸ್ಥಾನದಲ್ಲಿರುವ ಆಟಗಾರರು ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುತ್ತಾರೆ.

ಪ್ಯಾರಾ ಶೂಟಿಂಗ್ ವಿಶ್ವಕಪ್: ಭಾರತಕ್ಕೆ ಎರಡನೇ ಚಿನ್ನ

ನವದೆಹಲಿ (ಪಿಟಿಐ): ಭಾರತದ ಮಿಕ್ಸೆಡ್ 10 ಮೀಟರ್ ಏರ್ ಪಿಸ್ತೂಲ್ ಸ್ಟ್ಯಾಂಡರ್ಡ್ (ಎಸ್‌ಎಚ್ 1 ಕೆಟಗರಿ) ತಂಡವು ಇಲ್ಲಿ ನಡೆಯುತ್ತಿರುವ ಪ್ಯಾರಾ ಶೂಟಿಂಗ್ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದೆ.

ಮಂಗಳವಾರ ರುದ್ರಾಂಶ್ ಖಂಡೇಲ್ವಾಲ್ (364), ಆಕಾಶ್ (346) ಮತ್ತು ಸಂದೀಪ್ ಕುಮಾರ್ (340) ತಂಡವು 1050 ಪಾಯಿಂಟ್ ಗಳಿಸಿ ಚಿನ್ನದ ಸಾಧನೆ ಮಾಡಿತು. ಇದೇ ವಿಭಾಗದ ವೈಯಕ್ತಿಕ ಸ್ಪರ್ಧೆಯಲ್ಲಿ ರುದ್ರಾಂಶ್ ಅವರು ಕೊರಿಯಾದ ಕಿಮ್ ಜುಂಗ್ನಮ್ ಅವರೊಂದಿಗೆ 364 ಪಾಯಿಂಟ್ಸ್‌ನೊಂದಿಗೆ ಸಮಬಲ ಸಾಧಿಸಿ, ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟರು.

ಎಫ್‌ಐಎಚ್ ಹಾಕಿ ರ‍್ಯಾಂಕಿಂಗ್

ನಾಲ್ಕನೇ ಸ್ಥಾನಕ್ಕಿಳಿದ ಭಾರತ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡ, ಮಂಗಳವಾರ ಪ್ರಕಟವಾದ ಎಫ್‌ಐಎಚ್ ಪುರುಷರ ವಿಶ್ವ ರ‍್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಇಳಿದಿದೆ. ಎಫ್‌ಐಎಚ್ ಹಾಕಿ ಒಲಿಂಪಿಕ್ಸ್ ಅರ್ಹತಾ ಟೂರ್ನಿಯಲ್ಲಿ ತೋರಿದ ಉತ್ತಮ ಸಾಧನೆಯಿಂದ ಜರ್ಮನಿ ಮೂರನೇ ಸ್ಥಾನಕ್ಕೆ ಬಡ್ತಿ ಪಡೆಯಿತು.

ಕಳೆದ ವರ್ಷ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದ ಆಧಾರದಲ್ಲಿ ಭಾರತ ತಂಡ (2761 ಪಾಯಿಂಟ್ಸ್) ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅರ್ಹತೆ ಸಂಪಾದಿಸಿದೆ. ಹೀಗಾಗಿ ಇತ್ತೀಚೆಗೆ ಮುಕ್ತಾಯಗೊಂಡ ಒಲಿಂಪಿಕ್ ಅರ್ಹತಾ ಟೂರ್ನಿಯಲ್ಲಿ ಆಡುವ ಅಗತ್ಯ ಬಿದ್ದಿರಲಿಲ್ಲ. ಒಮಾನ್‌ನಲ್ಲಿ ನಡೆದ ಈ ಟೂರ್ನಿಯಲ್ಲಿ ಜರ್ಮನಿ ಅಜೇಯ ಸಾಧನೆ ಪ್ರದರ್ಶಿಸಿತ್ತು. ಜೊತೆಗೆ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ತೋರಿದ ಉತ್ತಮ ಸಾಧನೆಯು ಆ ತಂಡಕ್ಕೆ, ಭಾರತ ಹಿಂದೆಹಾಕಲು ನೆರವಾಗಿದೆ.

ನೆದರ್ಲೆಂಡ್ಸ್ (3060) ಕ್ರಮಾಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಬೆಲ್ಜಿಯಂ (2848) ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನವನ್ನು ಉಳಿಸಿಕೊಂಡಿದೆ.

ಮಹಿಳಾ ತಂಡಕ್ಕೆ 9ನೇ ಸ್ಥಾನ: ಭಾರತ ಮಹಿಳಾ ತಂಡ(2215) ಕ್ರಮಾಂಕಪಟ್ಟಿಯಲ್ಲಿ 9ನೇ ಸ್ಥಾನ ಪಡೆದಿದೆ. ಈ ವಿಭಾಗದಲ್ಲಿ ನೆದರ್ಲೆಂಡ್ಸ್ (3422) ಅಗ್ರಸ್ಥಾನದಲ್ಲಿದೆ. ಅರ್ಜೆಂಟೀನಾ (2827) ಮತ್ತು ಜರ್ಮನಿ (2732) ತಂಡಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಕ್ಕೇರಿದ್ದು, ಆಸ್ಟ್ರೇಲಿಯಾವನ್ನು (2678) ಹಿಂದೆಹಾಕಿವೆ. ಒಂದು ಸ್ಥಾನ ಕೆಳಗಿಳಿದ ಬೆಲ್ಜಿಯಂ (2499) ಆರನೇ ಸ್ಥಾನದಲ್ಲಿದೆ. ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಬೆಲ್ಜಿಯಂ ಸತತ ನಾಲ್ಕು ಪಂದ್ಯಗಳನ್ನು ಸೋತಿತ್ತು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪುನರುಚ್ಚಾರ

ಅಧಿಕಾರಕ್ಕೇರಿದರೆ ದೇಶದಾದ್ಯಂತ ಜಾತಿಗಣತಿ

ಮುಂಬೈ (ಪಿಟಿಐ): ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ದೇಶದಾದ್ಯಂತ ಜಾತಿ ಗಣತಿ ಮತ್ತು ಆರ್ಥಿಕ ಸ್ಥಿತಿಗತಿಯ ಸಮೀಕ್ಷೆ ನಡೆಸಲಾಗುವುದು ಎಂದು ರಾಹುಲ್ ಗಾಂಧಿ ಪುನರುಚ್ಚರಿಸಿದರು.

ಮಹಾರಾಷ್ಟ್ರದ ನಂದೂರ್‌ಬಾರ್ ಜಿಲ್ಲೆಯಲ್ಲಿ ಮಂಗಳವಾರ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ದೇಶದ ಜನಸಂಖ್ಯೆಯಲ್ಲಿ ಬುಡಕಟ್ಟು ಸಮುದಾಯದವರು ಶೇ 8ರಷ್ಟು ಇದ್ದಾರೆ. ಅಭಿವೃದ್ಧಿಯ ಪಾಲು ಅವರಿಗೂ ಲಭಿಸುವುದನ್ನು ಕಾಂಗ್ರೆಸ್ ಪಕ್ಷ ಖಾತರಿಪಡಿಸುತ್ತದೆ’ ಎಂದು ಅವರು ತಿಳಿಸಿದರು.

ನ್ಯಾಯ ಯಾತ್ರೆಯು ಬುಡಕಟ್ಟು ಜನರೇ ಹೆಚ್ಚಿನ ಸಂಖ್ಯೆಯಲ್ಲಿರುವ ನಂದೂರ್‌ಬಾರ್ ಮೂಲಕ ಮಹಾರಾಷ್ಟ್ರ ಪ್ರವೇಶಿಸಿತು.

‘ದೇಶದಾದ್ಯಂತ ಜಾತಿಗಣತಿ ನಡೆಸುವ ಕ್ರಾಂತಿಕಾರಿ ಹೆಜ್ಜೆಯನ್ನು ನಮ್ಮ ಪಕ್ಷ ಇಡಲಿದೆ. ಪ್ರತಿ ಜಾತಿಯ ನಿಖರವಾದ ಮಾಹಿತಿ ಮತ್ತು ದೇಶದ ಒಟ್ಟು ಜನಸಂಖ್ಯೆಯಲ್ಲಿ ಆಯಾ ಜಾತಿಯವರ ಪ್ರಾತಿನಿಧ್ಯ ಎಷ್ಟು ಎಂಬುದು ತಿಳಿದುಕೊಳ್ಳಬೇಕಿದೆ’ ಎಂದು ಕಾಂಗ್ರೆಸ್ ನಾಯಕ ಹೇಳಿದರು.

‘ಬಿಜೆಪಿ ಸರ್ಕಾರವು ಅರಣ್ಯ ಹಕ್ಕು ಕಾಯ್ದೆ ಮತ್ತು ಭೂಸ್ವಾಧೀನ ಕಾಯ್ದೆಯನ್ನು ದುರ್ಬಲಗೊಳಿಸಿದೆ. ನಮ್ಮ ಪಕ್ಷ ಅಧಿಕಾರಕ್ಕೇರಿದರೆ ಈ ಕಾಯ್ದೆಗಳನ್ನು ಬಲಗೊಳಿಸುವುದು ಮಾತ್ರವಲ್ಲದೆ, ಬುಡಕಟ್ಟು ಜನರ ನ್ಯಾಯಯುತ ಬೇಡಿಕೆಗಳನ್ನು ಒಂದು ವರ್ಷದ ಒಳಗಾಗಿ ಈಡೇರಿಸುತ್ತೇವೆ’ ಎಂದು ಭರವಸೆ ಕೊಟ್ಟರು.

‘ಗುಜರಾತ್‌ನಲ್ಲಿ ಸರ್ಕಾರ ಸ್ವಾಧೀನಪಡಿಸಿರುವ ಜಮೀನಿನಲ್ಲಿ ಶೇ 25ರಷ್ಟು ದಲಿತರು, ಬುಡಕಟ್ಟು ಮತ್ತು ಒಬಿಸಿ ಸಮುದಾಯದವರಿಗೆ ಸೇರಿದ್ದಾಗಿದೆ. ನಿಮ್ಮ ಜಮೀನು ಕಸಿದುಕೊಂಡು ನಡೆಯುತ್ತಿರುವ ಅಭಿವೃದ್ಧಿಯಾದರೂ ಏನು’ ಎಂದು ಪ್ರಶ್ನಿಸಿದರು.

ಇದು ಕಾಂಗ್ರೆಸ್ ‘ಗ್ಯಾರಂಟಿ’: ‘ಕೇಂದ್ರದಲ್ಲಿ ಅಧಿಕಾರಕ್ಕೇರಿದರೆ ದೇಶದಾದ್ಯಂತ ಜಾತಿಗಣತಿ ಮಾಡುತ್ತೇವೆ. ಇದು ಕಾಂಗ್ರೆಸ್ ನೀಡುವ ಗ್ಯಾರಂಟಿ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದರು.

‘ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ಸಮಾಜ ಒಡೆಯಲು ತಮಗೆ ಲಭಿಸುವ ಯಾವುದೇ ಅವಕಾಶವನ್ನೂ ಬಿಟ್ಟುಕೊಡುವುದಿಲ್ಲ. ಅವರ ಎಲ್ಲ ನೀತಿಗಳೂ ಒಡಕು ಉಂಟುಮಾಡುವಂತಹದ್ದು. ಪ್ರಧಾನಿ ಮೋದಿ ಅವರ ನೀತಿಗಳೂ ಇದೇ ಉದ್ದೇಶವನ್ನು ಹೊಂದಿವೆ’ ಎಂದು ಅವರು ಟೀಕಿಸಿದರು.


ಮಹಾರಾಷ್ಟ್ರದ ನಂದೂರ್‌ಬಾರ್‌ನಲ್ಲಿ ‘ಆದಿವಾಸಿ ನ್ಯಾಯ ಸಮ್ಮೇಳನ’ದಲ್ಲಿ ಪಾಲ್ಗೊಂಡ ರಾಹುಲ್ ಗಾಂಧಿ –ಪಿಟಿಐ ಚಿತ್ರ

‘ಬುಡಕಟ್ಟು ಜನರ ಹಕ್ಕುಗಳ ರಕ್ಷಣೆಗೆ ಬದ್ಧ’

ನವದೆಹಲಿ: ಕಾಂಗ್ರೆಸ್ ಪಕ್ಷದ ‘ಆದಿವಾಸಿ ಸಂಕಲ್ಪ್’ ಪರಿಕಲ್ಪನೆಯು ಬುಡಕಟ್ಟು ಸಮುದಾಯದವರ ಹಕ್ಕುಗಳ ರಕ್ಷಣೆಯನ್ನು ಖಾತರಿಪಡಿಸುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ನವದೆಹಲಿಯ ತಮ್ಮ ನಿವಾಸದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಆದಿವಾಸಿಗಳ ಜಮೀನ್, ಜಂಗಲ್ ಮತ್ತು ಜಲ್ (ಜಮೀನು, ಅರಣ್ಯ ಮತ್ತು ನೀರು) ರಕ್ಷಣೆಗೆ ಪಕ್ಷವು ಬದ್ಧವಾಗಿದೆ’ ಎಂದರು.

‘ಆದಿವಾಸಿಗಳಿಗೆ ಕಿರುಕುಳ ನೀಡಲಾಗುತ್ತಿದ್ದು, ಅವರ ಭೂಮಿಯನ್ನು ಕಸಿದುಕೊಳ್ಳಲಾಗುತ್ತಿದೆ. ಜೀತದಾಳುಗಳಂತೆ ದುಡಿಸಿಕೊಳ್ಳಲಾಗುತ್ತದೆ. ‘ಆದಿವಾಸಿ ಸಂಕಲ್ಪ್’ ಗ್ಯಾರಂಟಿ ಮೂಲಕ ನಾವು ಬುಡಕಟ್ಟು ಸಮುದಾಯದವರನ್ನು ಈ ಎಲ್ಲ ದೌರ್ಜನ್ಯಗಳಿಂದ ಮುಕ್ತಗೊಳಿಸುತ್ತೇವೆ’ ಎಂದು ಭರವಸೆ ನೀಡಿದರು.

ಆರು ಸಾವಿರ ರೈಲ್ವೆ ಯೋಜನೆಗೆ ಶಂಕುಸ್ಥಾಪನೆ

ಅಹಮದಾಬಾದ್‌ನಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಧಾನಿ ಚಾಲನೆ

ಮುಂಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್‌ನ ಅಹಮದಾಬಾದ್‌ನಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ದೇಶದಾದ್ಯಂತ ₹ 85000 ಕೋಟಿ ವೆಚ್ಚದ ಒಟ್ಟು 6000 ರೈಲ್ವೆ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಮರಾಠವಾಡ ರೈಲ್ವೆ ಕೋಚ್ ಕಾರ್ಖಾನೆಯನ್ನು ದೇಶಕ್ಕೆ ಸಮರ್ಪಿಸಿದರು ಮತ್ತು ಮಹಾರಾಷ್ಟ್ರದ ಹಲವೆಡೆ ವಿವಿಧ ರೈಲ್ವೆ ಯೋಜನೆಗಳಿಗೆ ಚಾಲನೆ ನೀಡಿದರು ಎಂದು ಅವರು ಹೇಳಿದ್ದಾರೆ.

ಇದೇ ಸಂದರ್ಭದಲ್ಲಿ ಅವರು ಮಹಾರಾಷ್ಟ್ರದ ವಿವಿಧೆಡೆ ಐದು ಜನೌಷಧ ಕೇಂದ್ರಗಳನ್ನು ಉದ್ಘಾಟಿಸಿದರು.

ಜತೆಗೆ ಅವರು ನಾಸಿಕ್ ರಸ್ತೆ, ಅಕೋಲಾ, ಮುಂಬೈನ ಅಂಧೇರಿ, ಮತ್ತು ಬೋರಿವಲಿ ನಿಲ್ದಾಣಗಳಲ್ಲಿ ರೈಲ್ವೆ ಕೋಚ್ ರೆಸ್ಟೋರೆಂಟ್‌ಗಳನ್ನು ಉದ್ಘಾಟಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮರಾಠವಾಡ ರೈಲ್ವೆ ಕೋಚ್ ಕಾರ್ಖಾನೆಯು ತನ್ನ ತಾಂತ್ರಿಕ ಪಾಲುದಾರರಾದ ಕೇಂದ್ರೀಯ ರೈಲ್ವೆ ಸಹಯೋಗದೊಂದಿಗೆ ವಂದೇ ಭಾರತ್ ರೈಲುಗಳನ್ನು ಪೂರೈಸುತ್ತದೆ. ಇದು 1300 ಮಂದಿಗೆ ನೇರ ಮತ್ತು 10000ಕ್ಕೂ ಹೆಚ್ಚು ಮಂದಿಗೆ ಪರೋಕ್ಷ ಉದ್ಯೋಗ ಕಲ್ಪಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯೋಗಿ ಕೃತಜ್ಞತೆ: ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು 10 ನೂತನ ವಂದೇ ಭಾರತ್ ರೈಲುಗಳಿಗೆ ಚಾಲನೆ ನೀಡಿದ್ದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಲಖನೌ–ಪಾಟ್ನಾ, ಲಖನೌ–ಡೆಹ್ರಾಡೂನ್, ರಾಂಚಿ–ವಾರಣಸಿ ಮಾರ್ಗಗಳು ಸೇರಿದಂತೆ ಪ್ರಧಾನಿ ಮೋದಿ ದೇಶದ ವಿವಿಧ ಮಾರ್ಗಗಳಲ್ಲಿ 10 ವಂದೇ ಭಾರತ್ ರೈಲುಗಳಿಗೆ ಮಂಗಳವಾರ ಚಾಲನೆ ನೀಡಿದರು.


ಗುಜರಾತ್‌ನ ಸುಜುಕಿ ಮೋಟಾರ್ಸ್ ಕಂಪನಿಯ ಪಕ್ಕದಲ್ಲಿ, ಭಾರತದ ಮೊದಲ ‘ಆಟೊಮೊಬೈಲ್–ಇನ್–ಪ್ಲ್ಯಾಂಟ್ ರೈಲ್ವೆ ಸೈಡಿಂಗ್’ ವ್ಯವಸ್ಥೆಯನ್ನ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ವರ್ಚ್ಯುವಲ್ ಆಗಿ ಉದ್ಘಾಟಿಸಿದರು.

ಛತ್ತೀಸಗಢ: 43 ರೈಲ್ವೆ ಯೋಜನೆಗೆ ಚಾಲನೆ

ರಾಯ್‌ಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಛತ್ತೀಸಗಢದಲ್ಲಿ ₹249 ಕೋಟಿ ಮೊತ್ತದ 43 ರೈಲ್ವೆ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅವುಗಳಲ್ಲಿ ಬಿಲಾಸ್‌ಪುರದ ವಂದೇ ಭಾರತ್ ರೈಲು ನಿರ್ವಹಣಾ ಘಟಕ ಸ್ಥಾಪನೆ, ಬಿಲಾಯಿಯ ಮೆಮು ಕಾರ್ ಶೆಡ್ ವಿಸ್ತರಣೆ ಕಾಮಗಾರಿಯೂ ಸೇರಿವೆ. ರಾಯ್‌ಪುರ ರೈಲ್ವೆ ನಿಲ್ದಾಣದಿಂದ ಛತ್ತೀಸ್‌ಗಢದ ರಾಜ್ಯಪಾಲ ವಿಶ್ವಭೂಷಣ್ ಹರಿಚಂದನ್ ಮತ್ತು ಮುಖ್ಯಮಂತ್ರಿ ವಿಷ್ಣು ದೇವ್ ಸಾಯಿ ಅವರು ವರ್ಚುಯಲ್ ಆಗಿ ಪ್ರಧಾನಿ ಜತೆಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರಾಜ್ಯದಲ್ಲಿ 124 ಕೋಟಿ ವೆಚ್ಚದ 40 ಯೋಜನೆಗಳನ್ನು ಉದ್ಘಾಟಿಸಿದ ಪ್ರಧಾನಿ ಮೋದಿ ಅವರು, 125 ಕೋಟಿ ವೆಚ್ಚದ ಮೂರು ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಇದೇ ವೇಳೆ ಪ್ರಧಾನಿ ಮೋದಿ ಅವರು ರಾಜ್ಯದ 18 ರೈಲು ನಿಲ್ದಾಣಗಳಲ್ಲಿ 34 ಮಳಿಗೆಗಳನ್ನು, ಹಲವೆಡೆ ಜನೌಷಧ ಕೇಂದ್ರಗಳನ್ನು ಉದ್ಘಾಟಿಸಿದರು.

ಕಾಂಗ್ರೆಸ್, ಬಿಜೆಪಿಯತ್ತ ಗುಳೆ ಹೊರಟ ನಾಯಕರು

ಅಸ್ತಿತ್ವದ ಬಿಕ್ಕಟ್ಟಿನಲ್ಲಿ ಬಿಆರ್‌ಎಸ್ ಪಕ್ಷ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದಲ್ಲಿನ ಪ್ರಮುಖ ವಿರೋಧ ಪಕ್ಷ ಬಿಆರ್‌ಎಸ್, ಕಳೆದ ವಿಧಾನಸಭಾ ಚುನಾವಣೆಯಲ್ಲಿನ ಸೋಲಿನ ಬಳಿಕ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿರುವಂತೆ ತೋರುತ್ತಿದೆ. ಬಿಆರ್‌ಎಸ್‌ನ ಅನೇಕ ನಾಯಕರು ಲೋಕಸಭೆ ಚುನಾವಣೆಗೆ ಮುನ್ನ ಪಕ್ಷ ತೊರೆದು ಆಡಳಿತಾರೂಢ ಕಾಂಗ್ರೆಸ್ ಅಥವಾ ಬಿಜೆಪಿ ಸೇರಲಾರಂಭಿಸಿದ್ದಾರೆ.

ಬಿಆರ್‌ಎಸ್‌ನ ಸಂಸದರು ಈಗಾಗಲೇ ಪಕ್ಷ ತೊರೆದಿರುವುದರಿಂದ, ಬಿಆರ್‌ಎಸ್‌ನ ಶಾಸಕರು ತಾವು ಸಹ ಕಾಂಗ್ರೆಸ್ ಅಥವಾ ಬಿಜೆಪಿ ಸೇರಬೇಕೆ ಎನ್ನುವ ನಿರ್ಧಾರದ ಆಯ್ಕೆಗೆ ಲೋಕಸಭೆ ಚುನಾವಣೆ ಮುಗಿಯುವುದನ್ನು ಎದುರು ನೋಡುತ್ತಿದ್ದಾರೆ. ಚುನಾವಣಾ ಫಲಿತಾಂಶ ಹಾಗೂ ಸ್ಥಳೀಯ ವಿಷಯಗಳ ಸಮೀಕರಣಗಳನ್ನು ಆಧರಿಸಿ ಮುಂದಿನ ಹೆಜ್ಜೆ ಇರಿಸುವ ಚಿಂತನೆಯಲ್ಲಿದ್ದಾರೆ.

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಆರ್‌ಎಸ್ ಟಿಕೆಟ್‌ನಿಂದ ಸ್ಪರ್ಧಿಸಲು ಹೆಚ್ಚಿನವರು ಉತ್ಸುಕರಾಗಿಲ್ಲ ಎಂಬುದು ಗಮನಾರ್ಹ. ಒಬ್ಬ ಹಾಲಿ ಸಂಸದ ಮತ್ತು ಇನ್ನೊಬ್ಬರು ನಾಯಕರು ಎರಡು ಲೋಕಸಭಾ ಸ್ಥಾನಗಳಲ್ಲಿ ಸ್ಪರ್ಧಿಸುವ ಪಕ್ಷದ ಪ್ರಸ್ತಾಪವನ್ನು ಕೆಲ ದಿನಗಳ ಹಿಂದೆ ತಿರಸ್ಕರಿಸಿದ್ದಾರೆ.

ಪೆದ್ದಪಲ್ಲಿ ಕ್ಷೇತ್ರದ ಬಿಆರ್‌ಎಸ್ ಸಂಸದ ವೆಂಕಟೇಶ್ ನೇತಾ ಪಕ್ಷವನ್ನು ತೊರೆದು ಕಾಂಗ್ರೆಸ್ ಸೇರಿದ ನಂತರ ಈ ಬೆಳವಣಿಗೆ ಪ್ರಾರಂಭವಾಯಿತು. ಜಹೀರಾಬಾದ್ ಮತ್ತು ನಾಗರ್ ಕರ್ನೂಲ್ ಕ್ಷೇತ್ರದ ಬಿಆರ್‌ಎಸ್‌ನ ಇಬ್ಬರು ಹಾಲಿ ಸಂಸದರಾದ ಪಿ. ರಾಮುಲು, ಬಿ.ಬಿ. ಪಾಟೀಲ್ ಬಿಜೆಪಿ ಸೇರಿದರು. ಪಾಟೀಲ್ ಅವರಿಗೆ ಜಹೀರಾಬಾದ್ ಕ್ಷೇತ್ರಕ್ಕೆ ಮತ್ತು ರಾಮುಲು ಬದಲಿಗೆ ಅವರ ಪುತ್ರ ಭರತ್ ಪ್ರಸಾದ್ ಅವರಿಗೆ ನಾಗರ್ ಕರ್ನೂಲ್ ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್ ನೀಡಿದೆ.


ಚಂದ್ರಶೇಖರ್ ರಾವ್

ಲೋಕಸಭಾ ಚುನಾವಣೆಗೆ ಅಭ್ಯರ್ಥಿಯಾಗುವ ನಿರೀಕ್ಷೆಯಲ್ಲಿರುವ ಮಾಜಿ ಸಂಸದರಾದ ಗೋಡೆಂ ನಾಗೇಶ್ ಮತ್ತು ಸೀತಾರಾಮ್ ನಾಯ್ಕ್ ಕೂಡ ಬಿಜೆಪಿ ಸೇರಿದ್ದಾರೆ.

ಎರಡು ದಿನ ಗಳ ಹಿಂದೆ ಪಕ್ಷದ ವರಿಷ್ಠ ಕೆ.ಚಂದ್ರಶೇಖರ ರಾವ್ ಅವರು ಸಂಸದೀಯ ಭಾಗದಲ್ಲಿ ನಡೆಸಿದ ಪರಿಶೀಲನಾ ಸಭೆಗೆ ಬಿಆರ್‌ಎಸ್ ಹಾಲಿ ಸಂಸದ ಜಿ. ರಂಜಿತ್ ರೆಡ್ಡಿ ಗೈರುಹಾಜರಾಗಿದ್ದು ಎದ್ದುಕಾಣಿಸುತ್ತಿದೆ. ರಂಜಿತ್ ರೆಡ್ಡಿ ಇದೇ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂದು ಈಗಾಗಲೇ ಘೋಷಿಸಿದ್ದರು. ಆದಾಗ್ಯೂ ಪರಿಶೀಲನಾ ಸಭೆಯಲ್ಲಿ ಅವರ ಗೈರು ಹಾಜರಿ ಚೇವೆಲ್ಲಾ ಕ್ಷೇತ್ರದಿಂದ ಬಿಆರ್‌ಎಸ್ ಟಿಕೆಟ್‌ನಲ್ಲಿ ಸ್ಪರ್ಧಿಸಲು ಅವರು ಹಿಂದೇಟು ಹಾಕುತ್ತಿರುವ ಸೂಚನೆಯಾಗಿದೆ.

‘ಪ್ರತಿ ವರ್ಷ ಹೈದರಾಬಾದ್ ವಿಮೋಚನಾ ದಿನ’

ನವದೆಹಲಿ(ಪಿಟಿಐ): ಪ್ರತಿ ವರ್ಷ ಸೆಪ್ಟೆಂಬರ್ 17ರಂದು ‘ಹೈದರಾಬಾದ್ ವಿಮೋಚನಾ ದಿನ’ ಆಚರಿಸಲಾಗುವುದು ಎಂದು ಕೇಂದ್ರ ಸರ್ಕಾರ ಮಂಗಳವಾರ ಘೋಷಿಸಿದೆ.

‘ಸೆ.17ರಂದು ಹೈದರಾಬಾದ್ ವಿಮೋಚನಾ ದಿನ ಎಂಬುದಾಗಿ ಆಚರಿಸುವಂತೆ ಆ ಪ್ರದೇಶದ ಜನರ ಬಹುದಿನಗಳ ಬೇಡಿಕೆಯಾಗಿತ್ತು. ಆ ಭಾಗದ ವಿಮೋಚನೆಗೆ ಹೋರಾಡಿ, ಹುತಾತ್ಮರಾದವರ ಸ್ಮರಣಾರ್ಥ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಗೃಹ ಸಚಿವಾಲಯವು ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

‘ದೇಶಕ್ಕೆ 1947ರ ಆಗಸ್ಟ್ 15ರಂದು ಸ್ವಾತಂತ್ರ್ಯ ಲಭಿಸಿದ 13 ತಿಂಗಳ ನಂತರವೂ ಆಗಿನ ಹೈದರಾಬಾದ್ ಪ್ರಾಂತ್ಯ ಸ್ವತಂತ್ರವಾಗಿ ರಲಿಲ್ಲ. ‘ಆಪರೇಷನ್ ಪೋಲೊ’ ಕ್ರಮದ ಬಳಿಕ 1948ರ ಸೆ. 17ರಂದು ಈ ಪ್ರದೇಶವು ನಿಜಾಮನ ಆಳ್ವಿಕೆಯಿಂದ ವಿಮೋಚನೆ ಪಡೆಯಿತು’ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಒಡಿಶಾ: ಮಹಿಳಾ ಸಿಬ್ಬಂದಿಗೆ 25 ದಿನ ಸಿ.ಎಲ್.

ಭುವನೇಶ್ವರ (ಪಿಟಿಐ): ಒಡಿಶಾ ಸರ್ಕಾರದ ವಿವಿಧ ಇಲಾಖೆಗಳ ಮಹಿಳಾ ಸಿಬ್ಬಂದಿಗೆ ವಾರ್ಷಿಕ ಸಾಂದರ್ಭಿಕ ರಜೆಗಳ (ಸಿಎಲ್) ಸಂಖ್ಯೆಯನ್ನು 25ಕ್ಕೆ ಏರಿಸಿರುವುದಾಗಿ ಅಲ್ಲಿಯ ಸರ್ಕಾರ ಮಂಗಳವಾರ ಘೋಷಿಸಿದೆ.

ಮಹಿಳೆಯರಿಗಿರುವ ಕುಟುಂಬ ನಿರ್ವಹಣೆ ಜವಾಬ್ದಾರಿ ಮತ್ತಿತರ ಸಮಸ್ಯೆಗಳನ್ನು ಗಮನದಲ್ಲಿರಿಸಿಕೊಂಡು ಅವರಿಗೆ 10 ದಿನಗಳ ಹೆಚ್ಚುವರಿ ಸಾಂದರ್ಭಿಕ ರಜೆ ನೀಡುವ ನಿರ್ಧಾರವನ್ನು ರಾಜ್ಯದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ತೆಗೆದುಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಹೊರಡಿಸಿರುವ ಪ್ರಕಟಣೆಯಲ್ಲಿ ಹೇಳಲಾಗಿದೆ.

ಈಚೆಗಷ್ಟೇ, ಸರ್ಕಾರೇತರ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ವಾರ್ಷಿಕ 15 ದಿನಗಳು ಸಾಂದರ್ಭಿಕ ರಜೆ ನೀಡುವುದಾಗಿ ಒಡಿಶಾ ಸರ್ಕಾರವು ಘೋಷಿಸಿತ್ತು. ಶಿಕ್ಷಣ ಸಂಸ್ಥೆಗಳ ಮಹಿಳಾ ಸಿಬ್ಬಂದಿ (ಬೋಧಕ ಮತ್ತು ಬೋಧಕೇತರ) 180 ದಿನಗಳ ಮಾತೃತ್ವ ರಜೆ ನೀಡುವುದಾಗಿ ಘೋಷಿಸಿತ್ತು.

ಕೇರಳಕ್ಕೆ ಒಮ್ಮೆಲೇ ನೆರವು ನೀಡುವ ಪ್ರಸ್ತಾವ ಪರಿಗಣಿಸಿ: ‘ಸುಪ್ರೀಂ’

ನವದೆಹಲಿ (ಪಿಟಿಐ): ಆರ್ಥಿಕ ಮುಗ್ಗಟ್ಟು ಅನುಭವಿಸುತ್ತಿರುವ ಕೇರಳಕ್ಕೆ ಮಾರ್ಚ್ 31ರ ಒಳಗೆ ಒಮ್ಮೆಲೇ ಹಣಕಾಸು ನೆರವು ಬಿಡುಗಡೆ ಮಾಡುವ ಪ್ರಸ್ತಾವವನ್ನು ಪರಿಗಣಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಕೇಂದ್ರ ಸರ್ಕಾರವು ಅಗತ್ಯ ನಿಧಿ ಬಿಡುಗಡೆ ಮಾಡುತ್ತಿಲ್ಲ ಎಂದು ಆರೋಪಿಸಿ ಕೇರಳ ಸರ್ಕಾರ ಸಲ್ಲಿಸಿರುವ ಅರ್ಜಿಯು ವಿಚಾರಣೆಗೆ ಬಾಕಿಯಿದೆ. ಅದನ್ನು ತ್ವರಿತ ವಿಚಾರಣೆಗಾಗಿ ಪಟ್ಟಿ ಮಾಡಬೇಕು ಎಂದು ರಾಜ್ಯದ ಪರ ವಕೀಲ ಕಪಿಲ್ ಸಿಬಲ್ ಅವರು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಕೆ.ವಿ. ವಿಶ್ವನಾಥನ್ ಅವರಿದ್ದ ನ್ಯಾಯಪೀಠದೆದುರು ಮನವಿ ಮಾಡಿದರು.

ಇದಕ್ಕೆ ಒಪ್ಪಿದ ಪೀಠವು, ಅರ್ಜಿಯ ವಿಚಾರಣೆಯನ್ನು ಬುಧವಾರ ನಡೆಸುವುದಾಗಿ ಹೇಳಿತು. ಜೊತೆಗೆ, ‘ಈ ವಿಶೇಷ ಪ್ರಕರಣದಲ್ಲಿ ತುಸು ಔದಾರ್ಯ ತೋರಿ ಕೇಂದ್ರ ಸರ್ಕಾರವು ಕೇರಳಕ್ಕೆ ಒಮ್ಮೆಲೇ ನೆರವು ಬಿಡುಗಡೆ ಮಾಡಬಹುದು’ ಎಂದಿತು.

ಕೇಂದ್ರ ಸರ್ಕಾರದ ಪರವಾಗಿ ಕೋರ್ಟ್‌ನಲ್ಲಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ (ಎಎಸ್‌ಜಿ) ಎನ್. ವೆಂಕಟರಮಣ್ ಅವರು, ‘ಕೇರಳದ ಆಯವ್ಯಯದ ಮೇಲೆ ಆಫ್‌ಸೆಟ್ ಬ್ಯಾಲೆನ್ಸ್ (ಸಾಲ ಪಡೆಯುವವರು ಬ್ಯಾಂಕ್ ಖಾತೆಯಲ್ಲಿ ಇರಿಸಿಕೊಂಡಿರಬೇಕಾದ ಕನಿಷ್ಠ ಠೇವಣಿ) ಗುರುತರ ಪರಿಣಾಮ ಬೀರುತ್ತದೆ. ರಾಜ್ಯವು ಈಗಾಗಲೇ ಎರಡು ಬಾರಿ ಹಣಕಾಸು ಕ್ರೋಢೀಕರಣವನ್ನು ಮುಂದೂಡಿದೆ. ಈ ಕಾರಣದಿಂದಾಗಿ ನೆರವು ನೀಡುವ ವಿಚಾರದಲ್ಲಿ ನಮ್ಮ ಕೈ ಕಟ್ಟಿಹಾಕಿದಂತಾಗಿದೆ’ ಎಂದರು.

‘ಅರುಣಾಚಲಪ್ರದೇಶ ಎಂದಿಗೂ ಭಾರತದ ಅವಿಭಾಜ್ಯ ಅಂಗ’

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಚೀನಾ ನೀಡಿರುವ ಹೇಳಿಕೆಯನ್ನು ಸಾರಾಸಗಟಾಗಿ ತಿರಸ್ಕರಿಸಿರುವ ಭಾರತ, ‘ಅರುಣಾಚಲ ಪ್ರದೇಶ ಎಂದಿಗೂ ಭಾರತದ ಅವಿಭಾಜ್ಯ ಅಂಗವಾಗಿದ್ದು, ಹಾಗೆಯೇ ಇರಲಿದೆ’ ಎಂದು ಮಂಗಳವಾರ ತಿರುಗೇಟು ನೀಡಿದೆ. ಚೀನಾಕ್ಕೆ ಹೊಂದಿಕೊಂಡಿರುವ ದೇಶದ ಗಡಿಗೆ ಯೋಧರು ತ್ವರಿತವಾಗಿ ಕರೆದೊಯ್ಯುವುದಕ್ಕಾಗಿ ಸರ್ವ ಋತು ಸುರಂಗಮಾರ್ಗವನ್ನು ನಿರ್ಮಿಸಿರುವ ತನ್ನ ಕ್ರಮವನ್ನು ಪ್ರಶ್ನಿಸಿದ ಚೀನಾ ನಡೆಯನ್ನು ಭಾರತ ಖಂಡಿಸಿದೆ.

‘ಇತರ ರಾಜ್ಯಗಳಿಗೆ ಭೇಟಿ ನೀಡುವಂತೆ, ಪ್ರಧಾನಿ ಸೇರಿದಂತೆ ಭಾರತದ ನಾಯಕರು ಅರುಣಾಚಲ ಪ್ರದೇಶಕ್ಕೂ ಭೇಟಿ ನೀಡುತ್ತಾರೆ. ಇಂತಹ ಭೇಟಿಗಳಿಗೆ ಅಥವಾ ಆ ರಾಜ್ಯದಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ಆಕ್ಷೇಪ ವ್ಯಕ್ತಪಡಿಸುವುದು ತರ್ಕಸಮ್ಮತವಲ್ಲ’ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. 13 ಸಾವಿರ ಅಡಿ ಎತ್ತರದಲ್ಲಿ ಸೆಲಾ ಸುರಂಗಮಾರ್ಗವನ್ನು ₹825 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಸುರಂಗ ಮಾರ್ಗವು ಅಸ್ಸಾಂನ ತೇಜ್‌ಪುರ ಹಾಗೂ ಅರುಣಾಚಲ ಪ್ರದೇಶದ ಪಶ್ಚಿಮ ಕಮೆಂಗ್ ಜಿಲ್ಲೆಗೆ ಸಂಪರ್ಕ ಕಲ್ಪಿಸುತ್ತದೆ.

ಎರಡನೇ ಸುತ್ತಿಗೆ ಸಿಂಧು

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಮೊದಲ ಸುತ್ತಿನಲ್ಲೇ ಹೊರಬಿದ್ದ ಪ್ರಣಯ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಎರಡು ಸಲದ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು, ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತಿಗೆ ಮುನ್ನಡೆದರು.

ಮಂಗಳವಾರ ನಡೆದ ಪಂದ್ಯದಲ್ಲಿ ಅವರ ಎದುರಾಳಿಯಾಗಿದ್ದ ಜರ್ಮನಿಯ ವ್ಯೋನ್ ಲಿ ಮೊದಲ ಗೇಮ್ ಸೋತ ನಂತರ ಹಿಂದೆಸರಿದರು.

ಮಾಜಿ ವಿಶ್ವ ಚಾಂಪಿಯನ್ ಆಗಿರುವ 11ನೇ ಕ್ರಮಾಂಕದ ಸಿಂಧು 21–10 ರಿಂದ ಮೊದಲ ಗೇಮ್ ಜಯಿಸಿದ್ದರು. ಈ ಹಂತದಲ್ಲಿ 26ನೇ ಕ್ರಮಾಂಕದ ಲಿ ಪಂದ್ಯದಿಂದ ನಿವೃತ್ತರಾದರು.

ಹೈದರಾಬಾದಿನ 28 ವರ್ಷದ ಆಟಗಾರ್ತಿ ಮುಂದಿನ ಪಂದ್ಯದಲ್ಲಿ ತಮ್ಮ 'ಕಡು ಎದುರಾಳಿ' ಅಗ್ರ ಶ್ರೇಯಾಂಕದ ಆ್ಯನ್ ಸೆ ಯಂಗ್ (ಕೊರಿಯಾ) ಅವರನ್ನು ಎದುರಿಸಲಿದ್ದಾರೆ.

ಯಂಗ್, ಈ ಹಿಂದಿನ ಎಲ್ಲ ಆರು ಮುಖಾಮುಖಿಗಳಲ್ಲಿ ಸಿಂಧು ವಿರುದ್ಧ ಜಯಗಳಿಸಿದ್ದಾರೆ.

ದುಬೈನಲ್ಲಿ ಕಳೆದ ವರ್ಷ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ ಸಿಂಧು, ಈ ಎದುರಾಳಿಯಿಂದ ಒಂದು ಗೇಮ್ ಪಡೆಯುವಲ್ಲಿ ಯಶಸ್ವಿ ಆಗಿದ್ದರು.

ಮೊಣಕಾಲಿನ ಗಾಯದಿಂದ ಗುಣಮುಖರಾಗಿರುವ ಆ್ಯನ್ ಸೆ ಯಂಗ್, ಕಳೆದ ಭಾನುವಾರವಷ್ಟೇ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್‌ನಲ್ಲಿ ಗೆದ್ದು, ಋತುವಿನ ಎರಡನೇ ಪ್ರಶಸ್ತಿ ಸಂಪಾದಿಸಿದ್ದರು.

ಪ್ರಣಯ್ ನಿರ್ಗಮನ: ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಎಚ್.ಎಸ್.ಪ್ರಣಯ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಅವರು ಚೀನಾ ತೈಪೆಯ ಸು ಲಿ ಯಾಂಗ್ ಅವರೆದುರು 21-14, 13-21, 13-21 ರಲ್ಲಿ ಸೋತರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಇನ್ನೊಬ್ಬ ಆಟಗಾರ್ತಿ ಆಕರ್ಷಿ ಕಶ್ಯಪ್ ಕೂಡ ಬೇಗನೇ ನಿರ್ಗಮಿಸಿದರು. ಚೀನಾ ತೈಪೆಯ ಪಾಯ್ ಯು ತೊ 21-16, 21-11 ರಿಂದ ನೇರ ಗೇಮ್‌ಗಳಿಂದ ಆಕರ್ಷಿ ಅವರನ್ನು ಹಿಮ್ಮೆಟ್ಟಿಸಿದರು.



ಭಾರತದ ಪಿ.ವಿ. ಸಿಂಧು

ಜೈಸ್ವಾಲ್‌ಗೆ 'ತಿಂಗಳ ಐಸಿಸಿ ಆಟಗಾರ ಪ್ರಶಸ್ತಿ'

ದುಬೈ (ಪಿಟಿಐ): ಇಂಗ್ಲೆಂಡ್ ವಿರುದ್ಧ ಐದು ಟೆಸ್ಟ್‌ಗಳ ಸರಣಿಯಲ್ಲಿ ಅಮೋಘ ಯಶಸ್ಸು ಗಳಿಸಿದ ಭಾರತದ ಯುವ ಬ್ಯಾಟಿಂಗ್ ತಾರೆ ಯಶಸ್ವಿ ಜೈಸ್ವಾಲ್ ಅವರು ಫೆಬ್ರುವರಿ ತಿಂಗಳ 'ಐಸಿಸಿ ತಿಂಗಳ ಆಟಗಾರ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

22 ವರ್ಷದ ಜೈಸ್ವಾಲ್ ಆ ಸರಣಿಯಲ್ಲಿ 712 ರನ್ ಕಲೆಹಾಕಿದ್ದರು. ಇತ್ತಂಡಗಳ ಪರ ಅತಿ ಹೆಚ್ಚಿನ ರನ್ ಗಳಿಸಿದ ಶ್ರೇಯಸ್ಸು ಅವರದಾಗಿತ್ತು. ಟೆಸ್ಟ್ ಪಂದ್ಯವೊಂದರಲ್ಲಿ ಅತಿ ಹೆಚ್ಚು ಸಿಕ್ಸರ್ (12) ಬಾರಿಸಿದ ದಾಖಲೆಯನ್ನು ಅವರು ರಾಜಕೋಟ್ ಟೆಸ್ಟ್‌ನಲ್ಲಿ ದ್ವಿಶತಕ ಬಾರಿಸುವ ಹಾದಿಯಲ್ಲಿ ಸರಿಗಟ್ಟಿದ್ದರು. ಸರಣಿಯಲ್ಲಿ ಎರಡು ದ್ವಿಶತಕ ಮತ್ತು ಮೂರು ಅರ್ಧ ಶತಕಗಳನ್ನು ಗಳಿಸಿದ್ದರು.

'ಐಸಿಸಿ ಪ್ರಶಸ್ತಿ ಬಂದಿದ್ದರಿಂದ ಸಂತಸವಾಗಿದೆ. ಭವಿಷ್ಯದಲ್ಲಿ ಇನ್ನಷ್ಟು ಬರಬಹುದೆಂಬ ವಿಶ್ವಾಸವಿದೆ' ಎಂದು ಜೈಸ್ವಾಲ್ ಅವರು ಪ್ರಶಸ್ತಿಗೆ ಆಯ್ಕೆಯಾದ ಸುದ್ದಿಗೆ ಪ್ರತಿಕ್ರಿಯಿಸಿದರು.

ಜೈಸ್ವಾಲ್ ಈ ಪ್ರಶಸ್ತಿ ಹಾದಿಯಲ್ಲಿ ನ್ಯೂಜಿಲೆಂಡ್‌ನ ಅನುಭವಿ ಬ್ಯಾಟರ್ ಕೇನ್ ವಿಲಿಯಮ್ಸನ್ ಮತ್ತು ಶ್ರೀಲಂಕಾದ ಆರಂಭ ಆಟಗಾರ ಪಥುಮ್ ನಿಸ್ಸಾಂಕ ಅವರನ್ನು ಹಿಮ್ಮೆಟ್ಟಿಸಿದರು.

ರಾಜಕೋಟ್‌ನಲ್ಲಿ ಅಜೇಯ 214 ಮತ್ತು ವಿಶಾಖಪಟ್ಟಣ ಟೆಸ್ಟ್‌ನಲ್ಲಿ 219 ರನ್ ಗಳಿಸಿದ್ದ ಅವರು ಬೆನ್ನುಬೆನ್ನಿಗೆ ದ್ವಿಶತಕ ಬಾರಿಸಿದ ಮೂರನೇ ಅತಿ ಕಿರಿಯ (22 ವರ್ಷ, 49 ದಿನ) ಆಟಗಾರ ಎನಿಸಿದ್ದರು. ಸರ್ ಡೊನಾಲ್ಡ್ ಬ್ರಾಡ್ಮನ್ ಮತ್ತು ವಿನೋದ್ ಕಾಂಬ್ಳಿ ಅವರು ಮೊದಲ ಇಬ್ಬರು.



ಯಶಸ್ವಿ ಜೈಸ್ವಾಲ್

ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ: ಅನೀಶ್ ಭರ್ಜರಿ ಶತಕ, ಬೃಹತ್ ಮುನ್ನಡೆ

ಚೊಚ್ಚಲ ಪ್ರಶಸ್ತಿಗೆ ಕರ್ನಾಟಕ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ವಿ. ಅನೀಶ್ (ಔಟಾಗದೆ 171, 221 ಎಸೆತ, 4x18, 6x3) ಅವರ ಭರ್ಜರಿ ಶತಕದ ಬಲದಿಂದ ಕರ್ನಾಟಕ ತಂಡ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಉತ್ತರ ಪ್ರದೇಶದ ವಿರುದ್ಧ ಮಂಗಳವಾರ 663 ರನ್‌ಗಳ ಬೃಹತ್ ಮುನ್ನಡೆ ಪಡೆದಿದೆ. ಚೊಚ್ಚಲ ಪ್ರಶಸ್ತಿ ಮುಡಿಗೇರಿಸಲು ಸಜ್ಜಾಗಿದೆ.

ಮೊದಲ ಇನಿಂಗ್ಸ್‌ನಲ್ಲಿ 219 ರನ್‌ಗಳ ಮುನ್ನಡೆ ಪಡೆದಿದ್ದ ಆತಿಥೇಯ ತಂಡವು ಮೂರನೇ ದಿನದಾಟ ಮುಕ್ತಾಯಗೊಂಡಾಗ ಎರಡನೇ ಇನಿಂಗ್ಸ್‌ನಲ್ಲಿ 121 ಓವರುಗಳಲ್ಲಿ ಐದು ವಿಕೆಟ್ ನಷ್ಟಕ್ಕೆ 444 ರನ್ ಗಳಿಸಿದೆ. ಬುಧವಾರ ಪಂದ್ಯದ ಕೊನೆಯ ದಿನವಾಗಿದ್ದು, ಉತ್ತರ ಪ್ರದೇಶ ತಂಡ 'ಡ್ರಾ' ಮಾಡಿಕೊಳ್ಳಲು ಶಕ್ತವಾಗಲಿದೆಯೇ ಎಂಬ ಕುತೂಹಲವಷ್ಟೇ ಇದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಸೋಮವಾರ ವಿಕೆಟ್ ನಷ್ಟವಿಲ್ಲದೆ 91 ಗಳಿಸಿದ್ದ ಕರ್ನಾಟಕ ತಂಡವು ಆಟ ಮುಂದುವರಿಸಿ, ದಿನವಿಡೀ ಉತ್ತರ ಪ್ರದೇಶದ ಬೌಲರ್‌ಗಳನ್ನು ದಂಡಿಸಿತು.

ಆರಂಭಿಕ ಆಟಗಾರರಾದ ಮೆಕ್ನೀಲ್ ಎಚ್. ನೊರೊನ್ಹಾ (79, 213ಎ; 4x6, 6x4) ಮತ್ತು ಪ್ರಖರ್ ಚತುರ್ವೇದಿ (86, 143ಎ, 4x9, 6x3) ಅರ್ಧಶತಕದೊಂದಿಗೆ ತಂಡಕ್ಕೆ ಉತ್ತಮ ಅಡಿಪಾಯ ಒದಗಿಸಿದರು. ಅವರಿಬ್ಬರು ಮೊದಲ ವಿಕೆಟ್ ಜತೆಯಾಟಕ್ಕೆ 144 ರನ್ ಕಲೆಹಾಕಿದರು. ಶತಕಕ್ಕೆ 14 ರನ್ ದೂರದಲ್ಲಿದ್ದ ಪ್ರಖರ್ ಅವರು ಶುಭಂ ಮಿಶ್ರಾ ಎಸೆತದಲ್ಲಿ ವೈಭವ್ ಚೌಧರಿ (ಬದಲಿ ಆಟಗಾರ) ಅವರಿಗೆ ಕ್ಯಾಚಿತ್ತರು. ನಂತರ ಆಡಲಿಳಿದ ಅನೀಶ್, ಎದುರಾಳಿ ತಂಡದ ಸ್ಪಿನ್ನರ್‌ಗಳನ್ನು ಕಾಡಿದರು. ಚೆಂದದ ಡ್ರೈವ್ ಮತ್ತು ಸ್ವೀಪ್‌ಗಳ ಮೂಲಕ 18 ಬೌಂಡರಿ ಗಳಿಸಿದರು.

ಮೆಕ್ನೀಲ್ ಜತೆ ಎರಡನೇ ವಿಕೆಟ್‌ಗೆ ಅವರು 62 ರನ್ ಸೇರಿಸಿದರು. ಈ ಹಂತದಲ್ಲಿ ದಾಳಿಗಿಳಿದ ರಿತುರಾಜ್ ಶರ್ಮಾ ಅವರು ಮೆಕ್ನೀಲ್ ಅವರನ್ನು ಬೌಲ್ಡ್ ಮಾಡಿದರು. ನಂತರ ನಾಯಕ ಸ್ಮರಣ್ ಆರ್. (40, 66ಎ, 4x3) ಅವರು ಅನೀಶ್ ಜತೆ ಮೂರನೇ ವಿಕೆಟ್‌ಗೆ 120 ರನ್ ಸೇರಿಸಿ ತಂಡದ ಮೊತ್ತವನ್ನು ಮತ್ತಷ್ಟು ಬೆಳೆಸಿದರು.

ಸ್ಮರಣ್ ವಿಕೆಟ್ ಒಪ್ಪಿಸಿದ ಬಳಿಕ, ಅನೀಶ್ವರ್ ಗೌತಮ್, ಯಶೋವರ್ಧನ್ ಪರಂತಾಪ್ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲಿಲ್ಲ. ನಂತರ ಅನೀಶ್ ಅವರನ್ನು ಸೇರಿಕೊಂಡ ವಿಕೆಟ್ ಕೀಪರ್ ಕೃತಿಕ್ ಕೃಷ್ಣ (ಔಟಾಗದೆ 34, 53ಎ, 4x5) ಅವರು ಮುರಿಯದ ಆರನೇ ವಿಕೆಟ್‌ಗೆ 69 ರನ್ ಸೇರಿಸಿದ್ದಾರೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ: 358. ಉತ್ತರ ಪ್ರದೇಶ: 139. ಎರಡನೇ ಇನಿಂಗ್ಸ್: ಕರ್ನಾಟಕ 121 ಓವರುಗಳಲ್ಲಿ 5 ವಿಕೆಟ್‌ಗೆ 444 (ಮೆಕ್ನೀಲ್ ಎಚ್.ಎನ್. 79, ಪ್ರಖರ್ ಚತುರ್ವೇದಿ 86, ಅನೀಶ್ ಕೆ.ವಿ. ಔಟಾಗದೆ 171, ಸ್ಮರಣ್ ಆರ್. 40, ಕೃತಿಕ್ ಕೃಷ್ಣ ಔಟಾಗದೆ 34).



ಕರ್ನಾಟಕ ತಂಡದ ಕೆ.ವಿ. ಅನೀಶ್ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ

ಬಾಕ್ಸಿಂಗ್: ನಿಶಾಂತ್‌ಗೆ ಸೋಲು, ಸಿಗದ ಒಲಿಂಪಿಕ್ಸ್ ಟಿಕೆಟ್

ಬುಸ್ಟೊ ಆರ್ಸಿಝಿಯೊ (ಇಟಲಿ) (ಪಿಟಿಐ); ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ನಿಶಾಂತ ದೇವ್ ಅವರು ಪ್ರಥಮ ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಅರ್ಹತಾ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ 71 ಕೆ.ಜಿ ವಿಭಾಗದಲ್ಲಿ ಸೋತು, ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವಲ್ಲಿ ವಿಫಲವಾಗಿದ್ದಾರೆ. ಇದರೊಂದಿಗೆ ಭಾರತದ ಎಲ್ಲಾ ಬಾಕ್ಸರ್‌ಗಳು ಅರ್ಹತಾ ಟೂರ್ನಿಯಿಂದ ಬರಿಗೈಯಲ್ಲಿ ಮರಳಿದ್ದಾರೆ.

ಸೋಮವಾರ ತಡರಾತ್ರಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ನಿಶಾಂತ ದೇವ್ 2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಅಮೆರಿಕದ ಒಮರಿ ಜೋನ್ಸ್ ವಿರುದ್ಧ 1-4 ಅಂತರದಿಂದ ಸೋತರು.

ಇಲ್ಲಿ ಸ್ಪರ್ಧಿಸುತ್ತಿರುವ ಒಂಬತ್ತು ಬಾಕ್ಸರ್‌ಗಳ ಪೈಕಿ ಯಾರೊಬ್ಬರೂ ಒಲಿಂಪಿಕ್ಸ್ ಅರ್ಹತೆ ಪಡೆಯಲು ಸಾಧ್ಯವಾಗಲಿಲ್ಲ.

ನಿಖತ್ ಝರೀನ್ (50 ಕೆಜಿ), ಪ್ರೀತಿ ಪವಾರ್ (54 ಕೆಜಿ), ಪರ್ವೀನ್ ಹೂಡಾ (57 ಕೆಜಿ) ಮತ್ತು ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ (75 ಕೆಜಿ) ಅವರು ಮಹಿಳಾ ವಿಭಾಗದಲ್ಲಿ ಒಲಿಂಪಿಕ್ಸ್ ಕೋಟಾ ಗಿಟ್ಟಿಸಿದ್ದಾರೆ.

ಮೇ 23 ರಿಂದ ಜೂನ್ 3 ರವರೆಗೆ ಬ್ಯಾಂಕಾಕ್‌ನಲ್ಲಿ ನಡೆಯಲಿರುವ ಎರಡನೇ ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಕ್ವಾಲಿಫೈಯರ್‌ನಲ್ಲಿ ಭಾರತದ ಬಾಕ್ಸರ್‌ಗಳು ಒಲಿಂಪಿಕ್ಸ್‌ಗೆ ಟಿಕೆಟ್ ಕಾಯ್ದಿರಿಸಲು ಅಂತಿಮ ಅವಕಾಶ ಪಡೆಯಲಿದ್ದಾರೆ.

ಸಂಪೂರ್ಣ ಫಿಟ್ ಆಗಿರುವ ಪಂತ್

ಐಪಿಎಲ್: ಡೆಲ್ಲಿಗೆ ರಿಷಭ್ ನಾಯಕ

ನವದೆಹಲಿ (ಪಿಟಿಐ): ಸಂಪೂರ್ಣ ಫಿಟ್ ಆಗಿರುವ ವಿಕೆಟ್‌ಕೀಪರ್ ರಿಷಭ್ ಪಂತ್ ಇದೇ ತಿಂಗಳು ಆರಂಭವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕತ್ವ ವಹಿಸಲಿದ್ದಾರೆ.

ರಿಷಭ್ 14 ತಿಂಗಳು ಹಿಂದೆ ಕಾರು ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದರು. ಅದರಿಂದಾಗಿ ಶಸ್ತ್ರಚಿಕಿತ್ಸೆ, ಪುನಶ್ಚೇತನ ಆರೈಕೆಗಳಲ್ಲಿದ್ದರು.

'ದೀರ್ಘ ಅವಧಿಯಿಂದ ಅವರು ಚಿಕಿತ್ಸೆ ಮತ್ತು ಪುನಶ್ಚೇತನದಲ್ಲಿ ತೊಡಗಿಕೊಂಡಿದ್ದರು. ಕಠಿಣ ಅಭ್ಯಾಸ ಮಾಡಿ ಈಗ ತಮ್ಮ ಫಿಟ್‌ನೆಸ್‌ಗೆ ಮರಳಿದ್ದಾರೆ. 2022ರ ಡಿಸೆಂಬರ್ 30ರಂದು ಅವರು ಉತ್ತರಾಖಂಡದ ರೂಕಿ ಸಮೀಪ ಸಂಭವಿಸಿದ್ದ ಕಾರು ಅಪಘಾತದಲ್ಲಿ ಗಾಯಗೊಂಡಿದ್ದರು. ಈಗ ಅವರು ಐಪಿಎಲ್ ಮೂಲಕ ಮರುಪ್ರವೇಶ ಮಾಡಲಿದ್ದಾರೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪ್ರಕಟಣೆಯಲ್ಲಿ ತಿಳಿಸಿದೆ.

ಐಪಿಎಲ್‌ನಲ್ಲಿ ಆಡುವ ಉತ್ತಮ ಆಟಗಾರರಿಗೆ ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡಕ್ಕೆ ಆಯ್ಕೆಯಾಗುವ ಅವಕಾಶ ಇದೆ.

ರಿಷಭ್ ಅವರೂ ಐಪಿಎಲ್‌ನಲ್ಲಿ ಸಾಮರ್ಥ್ಯ ಮೆರೆದು ರಾಷ್ಟ್ರೀಯ ತಂಡಕ್ಕೆ ಮರಳುವ ಛಲದಲ್ಲಿದ್ದಾರೆ.

'ನಾನು ಫಿಟ್ ಆಗಲು ಎಷ್ಟು ಸಮಯ ಬೇಕಾಗಬಹುದು ಎಂದು ಒಮ್ಮೆ ವೈದ್ಯರನ್ನು ಕೇಳಿದ್ದೆ. ಹಲವರು ಬೇರೆ ಬೇರೆ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

ಆದರೆ ನನ್ನ ಪರಿಸ್ಥಿತಿಯ ಪಕ್ಕಾ ಅರಿವು ಇದ್ದದ್ದು ವೈದ್ಯರಿಗೆ ಮಾತ್ರ. ಅದ್ದರಿಂದ ಅವರಿಗೇ ನಾನು ಕೇಳಿದ್ದೆ. ಆಗ ಅವರು 16 ರಿಂದ 18 ವಾರಗಳು ಬೇಕಾಗಬಹುದು ಎಂದಿದ್ದರು. ತಾವು ಹೇಳಿದ ಸಮಯಕ್ಕಿಂತ ಆರು ತಿಂಗಳು ಮುನ್ನವೇ ಫಿಟ್ ಆಗಿ ಮರಳುವುದಾಗಿ ನಾನು ವೈದ್ಯರಿಗೆ ಹೇಳಿದ್ದೆ' ಎಂದು ಅಧಿಕೃತ ಪ್ರಸಾರಕ ಟಿ.ವಿ. ಸಂದರ್ಶನದಲ್ಲಿ ಪಂತ್ ಹೇಳಿದ್ದರು.



ರಿಷಭ್ ಪಂತ್

ಟಾರ್ಪಿಡೋಸ್‌ಗೆ ಅಮೋಘ ಜಯ

ಚೆನ್ನೈ: ಹಿನ್ನಡೆಯಿಂದ ಅಮೋಘವಾಗಿ ಚೇತರಿಸಿಕೊಂಡ ಬೆಂಗಳೂರು ಟಾರ್ಪಿಡೋಸ್ ತಂಡ, ರುಪೆ ಪ್ರೈಮ್ ವಾಲಿಬಾಲ್ ಲೀಗ್‌ನ ಸೂಪರ್ ಫೈವ್ ಹಂತದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಅಹಮದಾಬಾದ್ ಡಿಫೆಂಡರ್ಸ್ ತಂಡದ ಮೇಲೆ ರೋಚಕ ಜಯಪಡೆಯಿತು.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬೆಂಗಳೂರಿನ ತಂಡ 14–16, 7–15, 16–14, 15–9, 15–13 ರಲ್ಲಿ 3–2 ಸೆಟ್‌ಗಳಿಂದ ಗೆಲುವು ಸಾಧಿಸಿತು. ಸೇತು ಅವರ ಸರ್ವ್ ಮತ್ತು ಸ್ಮ್ಯಾಶ್‌ಗಳು, ಥಾಮಸ್ ಹೆಪ್ಟಿನ್‌ಸ್ಟಾಲ್ ಅವರ ಆಕರ್ಷಕ ಆಟ, ಮುಜೀಬ್ ಅವರ ಬ್ಲಾಕ್‌ಗಳು ಜಯದಲ್ಲಿ ಪ್ರಮುಖ ಪಾತ್ರ ವಹಿಸಿದವು.

'ಲಕ್ಕಿ ಲೂಸರ್'ಗೆ ಮಣಿದ ಜೊಕೊ

ಇಂಡಿಯನ್ ವೆಲ್ಸ್ (ಅಮೆರಿಕ), (ಪಿಟಿಐ): ಅರ್ಹತಾ ಸುತ್ತಿನ 'ಲಕ್ಕಿ ಲೂಸರ್' ಆಗಿ ಪ್ರಧಾನ ಟೂರ್ನಿಗೆ ಅವಕಾಶ ಪಡೆದ ಲೂಕಾ ನಾರ್ಡಿ, ಸೋಮವಾರ ತಮ್ಮ ವೃತ್ತಿಜೀವನದ ಅಲ್ಪಾವಧಿಯಲ್ಲೇ ಅತಿ ದೊಡ್ಡ ಗೆಲುವನ್ನು ಸಂಪಾದಿಸಿದರು. 20 ವರ್ಷದ ಇಟಲಿಯ ಈ ಆಟಗಾರ ಇಂಡಿಯನ್ ವೆಲ್ಸ್ ಮಾಸ್ಟರ್ಸ್ ಟೂರ್ನಿಯ ಸಿಂಗಲ್ಸ್ ಮೂರನೇ ಸುತ್ತಿನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ನೊವಾಕ್ ಜೊಕೊವಿಚ್ ಅವರನ್ನು 6–4, 3–6, 6–3 ರಿಂದ ಸೋಲಿಸಿದರು.

ವಿಶ್ವದ 123ನೇ ಕ್ರಮಾಂಕದ ಆಟಗಾರನಾದ ನಾರ್ಡಿ, ಮಾಸ್ಟರ್ಸ್ ಟೂರ್ನಿಯಲ್ಲಿ ಸರ್ಬಿಯಾ ದೈತ್ಯ ಆಟಗಾರನ 11 ಪಂದ್ಯಗಳ ಗೆಲುವಿನ ಸರಪಳಿಯನ್ನೂ ತುಂಡರಿಸಿದರು. ನಾರ್ಡಿ ಅವರಿಗೆ ಬಾಲ್ಯದಿಂದ ಜೋಕೊ ಆದರ್ಶಪ್ರಾಯ ಆಟಗಾರ. ಅವರ ಮನೆಯ ಬೆಡ್ ಮೇಲೆ ಜೊಕೊ ಪೋಸ್ಟರ್ ಇದೆ.

'ಈ ರಾತ್ರಿಗೆ ಮುನ್ನ ನಾನು ಯಾರಿಗೂ ಗೊತ್ತಿರಲಿಲ್ಲ. ಜನರು ಈ ಪಂದ್ಯ ಆಸ್ವಾದಿಸಿದ್ದಾರೆ ಎಂಬ ವಿಶ್ವಾಸವಿದೆ. ಎಂದು ನಾರ್ಡಿ ಹೇಳಿದರು.